ಸಂವಾದ

ಆಗಸ್ಟ್ ೨೦೧೧ ರೂ. ೨೦.

ದೇಶ ಬಿಟ್ಟು ಹೋಗಬೇಕಾದವರು ಯಾರು?

ಸಂವಾದ

ಮಾಸ ಪತ್ರಿಕೆ

ಸಂಪುಟ ೯ ಸಂಚಿಕೆ ೧೦
ಆಗಸ್ಟ್ ೨೦೧೧

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091

✆ **Editorial: 9448048306**
✆ **Circulation: 9945264687**
080-23480278,
e- mail : **samvaada@hotmail.com**
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ



- ❑ ಪತ್ರಗಳು ೦೩
- ❑ ಸಂಪಾದಕರೊಂದಿಗೆ ಸಂವಾದ:
  - ಒ ರಘೋತ್ತಮ ಹೊ.ಬ ೦೪
  - ಒ ನಾ ದಿವಾಕರ ೦೫
  - ಒ ಶಿವಸುಂದರ್ ೦೬
  - ಒ ಡಾ. ಚಮರಂ ೦೮
  - ಒ ಎನ್. ಸುಬ್ರಮಣ್ಯ, ಮಂಜುನಾಥ್, ಗೌರಿ ೦೯
  - ಒ ವೈ. ಮರಿಸ್ವಾಮಿ ೧೦
- ❑ ದೇಶ ಬಿಟ್ಟು ಯಾರು ತೊಲಗಬೇಕಾದವರು ?
  - ಒ ಸುರೇಶ್ ಭಟ್ ೧೨
- ❑ ಗಂಡು ಹೆಣ್ಣಾದ ಬದುಕಿನ ಕಥನಗಳು
  - ಒ ಚಂಪಾ ೧೬
- ❑ ಅಂತರ್ಜಾತಿ ವಿವಾಹ ಮತ್ತು ಜಾತಿ ವಿನಾಶ
  - ಒ ಡಾ. ಎಚ್.ಎಸ್. ಅನುಪಮಾ ೧೮
- ❑ ಹೊಸ ಪುಸ್ತಕ ೨೧



- ❑ ಪಠ್ಯ ಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ: ಅಸಲಿ ಚಹರೆಗಳು ಪಲ್ಲಟಗೊಳ್ಳುವ ಬಗೆ
  - ಒ ಡಾ. ಮೇಟಿ ಮಲ್ಲಿಕಾರ್ಜುನ ೨೨
- ❑ ಭುಗಿಲೆದ್ದಿರುವ ಭ್ರಷ್ಟಾಚಾರದ ವಿರುದ್ಧ ಕುಬ್ಜವಾಗುತ್ತಿರುವ ಹೋರಾಟ
  - ಒ ಜ. ಹೊ. ನಾರಾಯಣಸ್ವಾಮಿ ೨೪
- ❑ 'ಭಾಷೆಯೇ ದೈವ' ನಿಜ! ಹಾಗಾಗಿಯೇ ಭಾಷೆ ದೆವ್ವವೂ ಹೌದು!! ಒಂದು ಮುಗಿಯಲಾರದ ಚರ್ಚೆ
  - ಒ ಡಿ. ಎಸ್ ನಾಗಭೂಷಣ ೨೬
- ❑ ಸಮಾಜ ಹಾಗೂ ಸಂಸ್ಕೃತಿ ವಿಶ್ಲೇಷಣೆ
  - ಒ ಡಾ. ಮುನಿಯಪ್ಪ ೩೮





- ❑ ಹಾಗೆ ನೋಡಿದರೆ -೯
  - ಒ ಡಾ. ಬಂಜಗೆರೆ ಜಯಪ್ರಕಾಶ ೩೮
- ❑ ದಲಿತ್ ಡೈರಿ
  - ಒ ಚಂದ್ರಭಾನ್ ಪ್ರಸಾದ್/ ಎಸ್. ಮರಿಸ್ವಾಮಿ ೪೬
- ❑ ಬುದ್ಧಾಯಣ
  - ಒ ಸಿ. ಎಚ್ ರಾಜಶೇಖರ್ ೫೦

ಕವನಗಳು : ❑ ಕೆಲವು ಸ್ವ-ಧರ್ಮಿಣಿಯರು ೧೫ ❑ ಗಜಲ್ ೪೫

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಅರ್ಥೈಸಲಾಗದ ಮನಕೆ ಕಾಣುವುದೆಲ್ಲಾ ಅಸಾರ್ಥವೆ!

ಪ್ರಿಯ ಸಂಪಾದಕರೇ,

ಕಳೆದ ಏಪ್ರಿಲ್ ತಿಂಗಳಿನಲ್ಲಿ ನಡೆದ ಅಂಬೇಡ್ಕರ್ ಜಯಂತಿ ಸಂದರ್ಭದ ಭಾಷಣಗಳು ಮತ್ತು ಅದೇ ತಿಂಗಳು 'ಸಂವಾದ' ಹೊರತಂದ ಅಂಬೇಡ್ಕರ್ ವಿಶೇಷಾಂಕದ ಕೆಲವು ಲೇಖನಗಳನ್ನು ಗಮನಿಸಿ, 'ಸಂವಾದ'ದ ಮೇ ಸಂಚಿಕೆಯಲ್ಲಿ ನಾನೊಂದು ಪತ್ರ ಬರೆದೆ. ಅದಕ್ಕೆ ಪ್ರತಿಕ್ರಿಯೆಯಾಗಿ ಡಾ॥ ಕುಂಸಿ ಉಮೇಶ್ ಅವರು ಜುಲೈ ಸಂಚಿಕೆಯಲ್ಲಿ 'ಜಾರು ಹೇಳಿಕೆಗಳ ಹಳವಂಡ' ಎಂಬ ಪತ್ರವೊಂದನ್ನು ಬರೆದಿದ್ದಾರೆ.

ಅವರ ಪತ್ರದಲ್ಲಿನ 'ದಲಿತ ಚಿಂತನೆಯ ಅನುಮಾನಗಳನ್ನು ಬಿಚ್ಚಿಡುವ ಪ್ರಯತ್ನ', 'ಗೋವಿಂದಯ್ಯ ಅಂದೆಂದೋ ಹೇಳಿದ ದಸಂಸದ ಏಕಪಕ್ಷೀಯ ಹೇಳಿಕೆ' ಇತ್ಯಾದಿ ವಾಕ್ಯ ಭಾಗಗಳು ನನಗೆ ಅರ್ಥವಾಗಲಿಲ್ಲ. ಅರ್ಥವಾದ ವಾಕ್ಯ ಭಾಗಗಳ ಬಗ್ಗೆ ಮಾತ್ರ ಹೇಳುವುದಾದರೆ–

1. ನಾನು 'ಸಂವಾದ'ದ ಅಂಬೇಡ್ಕರ್ ಸಂಚಿಕೆಯಲ್ಲಿನ ಲೇಖನವೊಂದರ ನಿರ್ದಿಷ್ಟ ವಾಕ್ಯವೊಂದನ್ನು ಉಲ್ಲೇಖಿಸಿ, ಅದರಲ್ಲಿನ 'ಸಣ್ಣ ದಲಿತ ರಾಜಕಾರಣ'ವನ್ನು ಗುರುತಿಸುವ ಪ್ರಯತ್ನ ಮಾತ್ರ ಮಾಡಿದ್ದರೆ, ಉಮೇಶ್ ಅವರು ಇಡೀ ದಲಿತ ಹೋರಾಟವನ್ನೇ ನಾನು 'ಸಣ್ಣ ದಲಿತ ರಾಜಕಾರಣ'ವೆಂದು ಕರೆದಿದ್ದೇನೆಂದು ಆಪಾದಿಸಿದ್ದಾರೆ. ಇದನ್ನು ಸಮರ್ಥಿಸಿಕೊಳ್ಳಲು ಲೋಹಿಯಾವಾದದ ಗುಂಗು, ಆದರ್ಶವಾದಿ–ಸುಧಾರಣಾವಾದಿ ಚಿಂತನೆಯ ನೆಲೆ ಇತ್ಯಾದಿ ಸಂಬಂಧಪಡದದ್ದನ್ನೆಲ್ಲ ಎಳೆದು ತಂದಿದ್ದಾರೆ. ಇದೆಲ್ಲದರ ಉದ್ದೇಶವಾದರೂ ಏನು, ನನಗೆ ತಿಳಿಯದಾಗಿದೆ. ಉಮೇಶ್ ಇನ್ನೊಮ್ಮೆ ನನ್ನ ಈ ಪತ್ರಭಾಗವನ್ನು ನಿರುದ್ವಿಗ್ನರಾಗಿ ಓದಬೇಕೆಂದು ಕೋರುವೆ.

2. ಇಂದು ದಲಿತರಿಗೆ ಅಂಬೇಡ್ಕರರೊಂದಿಗೆ, ಅಂಬೇಡ್ಕರ್ ವಿರೋಧಿ ಸುತ್ತಿದ್ದ ರೀತಿಯ ದಲಿತ ರಾಜಕಾರಣ ಮಾಡಿದ ಜಗಜೀವನರಾಂ ಅವರೂ ನಾಯಕರಾಗಿದ್ದರೆ, ಅದು ಏಕೆ? ಅದರ ಹಿನ್ನೆಲೆ ಏನು ಎಂಬುದು ಎಲ್ಲರಿಗೂ ಗೊತ್ತು, ಉಮೇಶರಿಗೂ ಗೊತ್ತು. ಆದರೆ ಅದನ್ನು ಒಪ್ಪಿಕೊಳ್ಳಲಾಗದ ತಾತ್ವಿಕ ಬಿಂಕದಲ್ಲಿ, ಅದಕ್ಕೆ ಕಾರಣ ಒಳಗಿಲ್ಲ; ಇದು ಹೊರಗಿನವರದ್ದೇ ಕರಾಮತ್ತು ಎಂದು ಉಮೇಶ್‌ರಂತೆ ಕಷ್ಟಪಟ್ಟು ಕಂಡುಹಿಡಿಯಲು ತೊಡಗುವ ಮನಸ್ಸು ಏನನ್ನೂ ಸ್ಪಷ್ಟವಾಗಿ ನೋಡಲಾರದು ಮತ್ತು ಅರ್ಥ ಮಾಡಿಕೊಳ್ಳಲಾರದು ಎಂದೇ ನನ್ನ ಭಾವನೆ.

ಪತ್ರಗಳು

ಇದನ್ನೇ ಗೋವಿಂದಯ್ಯ ರೂಪಕ ಭಾಷೆಯಲ್ಲಿ ಹೇಳಿದ್ದು, ನಾನು ತಡವಾಗಿಯಾದರೂ ಒಪ್ಪಿದ್ದು. ಬಹುಶಃ ಉಮೇಶರಿಗೆ ಗೊತ್ತಿಲ್ಲ: ಅವರು ದಸಂಸದ ಹೆಸರು ಕೇಳುವ ಮುನ್ನವೇ ನಾನು ಅದರ ನಿಕಟ ಮತ್ತು ಆಪ್ತ ಒಡನಾಟದಲ್ಲಿದ್ದೆ, ಹಾಗೂ ಅದರ ಬಹುಪಾಲು ಎಲ್ಲ ನಾಯಕರೂ ನನ್ನ ಆತ್ಮೀಯ ಗೆಳೆಯರಾಗಿದ್ದರು. ಹಾಗಿರುವಾಗ, ಅದರ ಹೋರಾಟದ ಫಲಗಳನ್ನು ನಾನು ಉಮೇಶ್ ಅವರು ಅನುಮಾನಪಟ್ಟಿರುವಂತೆ ನಿರಾಕರಿಸುವುದೆಂದರೆ, ನನ್ನನ್ನು ನಾನೇ ನಿರಾಕರಿಸಿಕೊಂಡಂತೆ. ಗೋವಿಂದಯ್ಯನವರ ಮಾತುಗಳಲ್ಲಿ ವಿಷಾದವನ್ನು ಕಾಣದೆ, ತಮಗೆ ಬೇಕಾದ ಮತ್ತೇನನ್ನೋ ಕಾಣಹೊರಟವರಿಗೆ ಬಹುಶಃ ಇದೆಲ್ಲ ಅರ್ಥವಾಗದ ಮಾತುಗಳೇ ಆಗಿರಬಹುದು.

3. ಅಂಬೇಡ್ಕರ್‌ರ ಕೆಲವು ರಾಜಕೀಯ ನಡೆಗಳು ಮತ್ತು ಚಿಂತನೆಗಳು ವಿವಾದಾಸ್ಪದವಾದವು ಎಂಬ ನನ್ನ ಮಾತಿನ ಬಗ್ಗೆ ಉಮೇಶ್, ಇದೊಂದು ಜಾರು ಹೇಳಿಕೆ ಎಂದು ಟೀಕೆ ಮಾಡುವಾಗ, ಈ ಮಾತಿನ ಜೊತೆಗೇ ಇರುವ, ಅಂಬೇಡ್ಕರರ ಈ ವಿವಾದಾಸ್ಪದ ನಡೆ–ಚಿಂತನೆಗಳಿಗೆ ಕಾರಣವೂ ಇತ್ತು ಎಂಬ ನನ್ನ ಇನ್ನೊಂದು ಮಾತನ್ನು ಕೈಬಿಟ್ಟಿರುವುದೇಕೆ ಎಂಬುದು ಗೊತ್ತಾಗುತ್ತಿಲ್ಲ! ಇದು ಮತ್ತೊಮ್ಮೆ, ನಾನು ಯಾವುದನ್ನು ಅಂಬೇಡ್ಕರರನ್ನು ವಿಮರ್ಶಾತೀತರನ್ನಾಗಿ ಮಾಡುವ ರಾಜಕಾರಣ ಎಂದು ಕರೆದಿರುವೆನೋ ಅದಕ್ಕೆ ಒಂದು ಉದಾಹರಣೆಯೇ ಆಗಿದೆ. ಹಾಗೇ ಈ ಟೀಕೆ, ಅಂಬೇಡ್ಕರ್ ಬಗ್ಗೆ ಹೀಗೆ ಬರೆದಿರುವುದು ನಾನೊಬ್ಬನೇ ಏನೋ ಮತ್ತು ಮೊದಲ ಬಾರಿಗೆ ಏನೋ ಎಂಬ ಧ್ವನಿಯಲ್ಲಿದೆ. ಆದರೆ ವಸ್ತುಸ್ಥಿತಿ ಹಾಗೇನಿಲ್ಲ.

ಅಂಬೇಡ್ಕರ್‌ರ ಚಿಂತನೆ ಮತ್ತು ರಾಜಕಾರಣ ಐತಿಹಾಸಿಕವಾಗಿ ಎಷ್ಟು ಮಹತ್ವಪೂರ್ಣವಾದವು ಎಂದರೆ, ಅವನ್ನು ಕುರಿತು ವ್ಯಾಪಕ ಚರ್ಚೆ ಮತ್ತು ಅದರ ಭಾಗವಾಗಿ ಅವುಗಳ ವಸ್ತುನಿಷ್ಠ ವಿಮರ್ಶೆ ಜಗತ್ತಿನಾದ್ಯಂತ ನಡೆದಿದೆ, ನಡೆಯುತ್ತಿದೆ, ಮುಂದೆ ನಡೆಯುತ್ತದೆ ಕೂಡಾ. ಒಂದು ಉದಾಹರಣೆಯೆಂದರೆ ಅಂಬೇಡ್ಕರರೊಂದಿಗೆ ಹೊಸ ರಾಜಕಾರಣಕ್ಕಾಗಿ ಸಂವಾದ ಆರಂಭಿಸಿದ್ದ ಲೋಹಿಯಾ, ಅಂಬೇಡ್ಕರ್ ಹಠಾತ್ ನಿಧನರಾದ ಸಂದರ್ಭದಲ್ಲಿ ಅವರ ಬಗ್ಗೆ ಮಧುಲಿಮಯೆ ಅವರಿಗೆ ಬರೆದ ಪತ್ರದಲ್ಲಿ ಇಂತಹ ವಿಮರ್ಶೆ ಇದೆ. ಉಮೇಶ್ ಅವರ ಕುತೂಹಲಕ್ಕಾಗಿ ಹೇಳುವುದಾದರೆ, ಅದರಲ್ಲಿ ಜಗಜೀವನರಾಂ ಅವರ ಜೊತೆಗಿನ ಹೋಲಿಕೆಯ ಮಾತುಗಳೂ ಇವೆ! ಈ ಎಲ್ಲ ಚರ್ಚೆ–ವಿಮರ್ಶೆಯ ಭಾಗವಾಗಿಯೇ, ಅದರ ಮುಂದುವರಿಕೆಯಾಗಿಯೇ ನಾನು ಅಂಬೇಡ್ಕರರ ಕೆಲವು ರಾಜಕೀಯ ನಡೆ ಮತ್ತು ಚಿಂತನೆಗಳು ವಿವಾದಾಸ್ಪದವಾದವು ಎಂದು ಹೇಳಿರುವುದು.

ಅಲ್ಲದೆ, ನಾನು ಕಳೆದ 30 ವರ್ಷಗಳಿಂದ ದಲಿತ ಚಳವಳಿ ಬಗ್ಗೆ ನನ್ನದೇ ಮಿತಿಯಲ್ಲಿ ಬರೆಯುತ್ತಾ ಬಂದಿದ್ದೇನೆ. ಆ ಬರಹಗಳಲ್ಲೆಲ್ಲಾ ಅಂಬೇಡ್ಕರ್‌ರ ಮತ್ತು ಅದರ ಜೊತೆಗೇ ದಸಂಸದ ರಾಜಕಾರಣ, ಚಿಂತನೆಗಳ ಬಗ್ಗೆ ವಿವೇಚನೆ, ವಿಮರ್ಶೆ, ಟೀಕೆ ಮಾಡುತ್ತಲೇ ಬಂದಿದ್ದೇನೆ. ಅದನ್ನು ದಲಿತ ಚಳವಳಿಕಾರರೂ ಸೇರಿದಂತೆ ಅನೇಕರು ಓದಿದ್ದಾರೆ, ಚರ್ಚಿಸಿದ್ದಾರೆ.

4. ಉಮೇಶ್ ತಾವು ಅವಮಾನದ ಮತ್ತು ಅನ್ಯಾಯದ ಜಗತ್ತಿಗೆ ಸೇರಿದವರೆಂದೂ, ನನ್ನಂತಹವರು ಅದರ ಹೊರಗಿರುವವರೆಂದೂ, ಹಾಗಾಗಿ ನಮ್ಮದು ಸುಧಾರಣಾವಾದವೆಂದೂ; ನನ್ನ ಪತ್ರದಲ್ಲಿನ ಎಲ್ಲ ಮಾತುಗಳಿಗೆ ಇದೇ ಕಾರಣವೆಂದೂ, ಅವರು ಸೂಚಿಸಿದ್ದಾರೆ. ಆದರೆ ಸ್ವತಃ ಉಮೇಶರನ್ನೇ ಹೀಗೆ ಹೊರ ಜಗತ್ತಿನವರೆಂದು ಭಾವಿಸಿ ಅನುಮಾನಿಸುವ ಜಗತ್ತೊಂದು ಇರುವ ದುರಂತಮಯ ಸಾಧ್ಯತೆಯನ್ನೂ ಅವರು ಊಹಿಸಬಲ್ಲರೆಂದು ನಾನು ಭಾವಿಸಿದ್ದೇನೆ. ಉಮೇಶ್ ಅವರು ತಾವು ಬಣ್ಣಿಸಿ ಕೊಂಡಿರುವಂತಹ ಅವಮಾನ ಮತ್ತು ಅನ್ಯಾಯಗಳ ಜಗತ್ತಿನ ಶಾಶ್ವತ ಪ್ರಜೆಗಳಾಗಿಯೇ ಇರಬಯಸಿದ್ದರೆ ಮತ್ತು ಅದರಿಂದ ಅವರಿಗೆ ಸಮಾಧಾನ, ಲಾಭ–ಪ್ರಯೋಜನಗಳು ದೊರೆಯುವಂತಿದ್ದರೆ ನನ್ನದೇನೂ ಆಭ್ಯಂತರವಿಲ್ಲ. ಆದರೆ ಐತಿಹಾಸಿಕ ಕಾರಣಗಳಿಂದಾಗಿ ಒಡೆದು ಹೋಗಿರುವ ಜಗತ್ತು ಒಂದುಗೂಡಲಾರದು ಎಂಬ ಸ್ವಾರ್ಥ ರಾಜಕಾರಣ ಮೂಲವಾದ ನಂಬಿಕೆಯನ್ನು ಗಟ್ಟಿಗೊಳಿಸುವಂತಹ; ಮಾನವನನ್ನು ಮಾನವನನ್ನಾಗಿ ಮಾಡಿರುವ, ಎಲ್ಲವನ್ನೂ ಮೀರ ಬಲ್ಲ ಅವನ ಅಂತಃಕರಣ ಶಕ್ತಿಯನ್ನೇ ಅಲ್ಲಗಳೆಯುವಂತಹ ಶೈಲಿಯಲ್ಲಿ ಅವರು ಮಾತನಾಡತೊಡಗಿದರೆ ಗಾಬರಿಯಾಗುತ್ತದೆ.

5. ಅಂಬೇಡ್ಕರ್ ಎಂಬ ಹೆಸರು ಇಂದು ಅವಮಾನ ಮತ್ತು ಅನ್ಯಾಯಗಳನ್ನು ಮೀರಲು ಬೇಕಾಗಿರದೆ, ಅನ್ನು ಬಂಡವಾಳವಾಗಿ ಮಾಡಿಕೊಂಡು ಹೋರಾಟದ ಆಟ ಕಟ್ಟುತ್ತಿರುವವರಿಗೆ ಒಂದು ಮುಖವಾಡ ಮಾತ್ರವಾಗಿ ಹೋಗಿರುವ ದುರಂತವನ್ನು ಇಂದು ಹಲವು ಕಡೆ ಕಾಣುತ್ತಿರುವ ಹಿನ್ನೆಲೆಯಲ್ಲಿ ಈ ಎಲ್ಲ ಮಾತುಗಳನ್ನು ಆಡುವ ಅನಿವಾರ್ಯತೆ ಉಂಟಾಗಿದೆ.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

ಪ್ರಕಟಣೆ: ಅನಿವಾರ್ಯ ಕಾರಣಗಳಿಂದಾಗಿ ಈ ಬಾರಿ ಮುಜಾಫರ್ ಅಸ್ಸಾದಿ ಅವರ ಅಂಕಣ ಪ್ರಕಟವಾಗುತ್ತಿಲ್ಲ. –ಸಂ



ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ

ರೂ.೨೦೦/- ರೂ.೫೦೦/- ರೂ.೮೦೦/-

ಸಂಘ–ಸಂಸ್ಥೆಗಳು/ಉದ್ಯಮಿಗಳಿಗೆ

ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ

ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-

ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ.

ಸಂಪಾದಕರೊಡನೆ ಸಂವಾದ

ದಲಿತರ ಚಿಂತೆ ಪೇಜಾವರರಿಗ್ಯಾಕೆ!?

ರಘೋತ್ತಮ ಹೊ.ಬ

ಪ್ರಿಯ ಸಂಪಾದಕರೇ,

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಪುಸ್ತಕ ಮೇಳದಲ್ಲಿ ಸಂಘಪರಿವಾರದ ಒಂದಷ್ಟು ಮಿತ್ರರು ನನ್ನೊಂದಿಗೆ ಅನೌಪಚಾರಿಕವಾಗಿ ಚರ್ಚೆಗಿಳಿದರು. ನನ್ನ ನೂತನ ಕೃತಿ "ಗಾಂಧಿ ಹೋರಾಟ ಯಾರ ವಿರುದ್ಧ?" ಓದಿಕೊಂಡಿದ್ದ ಅವರಿಗೆ ಹಿಂದೂ ಧರ್ಮದ ವಿರುದ್ಧದ ನನ್ನ ಸಿಟ್ಟು, ಬೌದ್ಧ ಧರ್ಮದ ಪರ ನನ್ನ ಒಲವು, ಕಾಶ್ಮೀರ ಸಮಸ್ಯೆ, ಬಾಬ್ರಿ ಮಸೀದಿ ವಿವಾದಕ್ಕೆ ಸಂಬಂಧಿಸಿದ ನನ್ನ ಆಭಿಪ್ರಾಯ, ಎಲ್ಲವೂ ಒಂದು ರೀತಿಯಲ್ಲಿ "ಉರಿ" ತರಿಸಿತ್ತು. ಅದು ಹೊಟ್ಟೆಯ ಉರಿಯೋ ಇಲ್ಲ ಇನ್ನ್ಯಾವುದಾದರೂ ರೀತಿಯ ಉರಿಯೋ ನನಗೆ ಅರ್ಥವಾಗಲಿಲ್ಲ. ಆದರೆ ಉರಿ ತಾಳಲಾರದೆ ಗರಂ ಆಗಿದ್ದ ಅವರು ನನ್ನೊಂದಿಗೆ ಜಿದ್ದಿಗಿಳಿದು ಅಷ್ಟೇ ಖಾರವಾಗಿ ಚರ್ಚೆಗಿಳಿದ್ದಂತೂ ಸತ್ಯ.

ಚರ್ಚೆ ನಡೆಸಿದ ಮಿತ್ರರು, ದಲಿತರು ಯಾಕೆ ಮತಾಂತರವಾಗಬೇಕು? ಯಾಕೆ ಅವರಿಗೆ ಮೀಸಲಾತಿ ಕೊಡಬೇಕು? ಮೀಸಲಾತಿ ನೀಡುವುದರಿಂದ ಜಾತೀಯತೆ ಹೆಚ್ಚಾಗುವುದಿಲ್ಲವೇ? ಮತಾಂತರದಿಂದ ಅವರ ಸಮಸ್ಯೆ ಬಗೆಹರಿಯುತ್ತದೆಯೇ? ಇತ್ಯಾದಿ ಹಳೆಯ, ಸವಕಲಾದ ಆದರೂ ಅಷ್ಟೆ ಮಹತ್ವದ್ದೂ ಆದ ಪ್ರಶ್ನೆಗಳನ್ನು ಒಟ್ಟೊಟ್ಟಿಗೆ ಕೇಳಿ ಒಮ್ಮೆಲೆ ನನ್ನನ್ನು ಘಾಸಿಗೊಳಿಸಲು ಯತ್ನಿಸಿದರು. ಹೇಗೆ ನಯವಾಗಿ ಹೇಳಿದರೂ ಅವರು ಆ ವಿವರಣೆಗಳಿಗೆ ಬಗ್ಗುವುದಿಲ್ಲ ಎಂಬುದನ್ನು ಅರ್ಥಮಾಡಿಕೊಂಡೆ. ಕಡೆಗೆ ನಾನು ಅನಿವಾರ್ಯವಾಗಿ ಮಹಾತ್ಮ ಗಾಂಧಿಯವರ ಸ್ಟೈಲ್ ಆದ ಮೊಂಡುವಾದಕ್ಕೆ ಜೋತುಬಿದ್ದೆ! ಮಹಾತ್ಮ ಗಾಂಧಿಯವರ ಮೇಲಿನ ಪ್ರೀತಿಯಿಂದಲ್ಲ! ಗಾಂಧಿವಾದಿಗಳಿಗೂ ಕೇಸರಿವಾದಿಗಳಿಗೂ ಅಂತಹ ವ್ಯತ್ಯಾಸವೇನು ಇಲ್ಲದ್ದರಿಂದ ಅವರದೇ ಗಾಂಧಿ ಸ್ಟೈಲ್‌ನ ಮೂಲಕ ಅವರಿಗೆ ಉತ್ತರ ನೀಡಲು ಮುಂದಾದೆ.

"ದಲಿತರು ಯಾಕೆ ಮತಾಂತರವಾಗಬೇಕು?" ಎಂಬ ಅವರ ಮೊದಲ ಪ್ರಶ್ನೆಗೆ "ಆಗ್ಲಿ ಬಿಡಿ, ಅದರಿಂದ ನಿಮಗೇನಾಗುತ್ತೆ? ನಿಮ್ಮನ್ನೇನಾದರೂ ಮತಾಂತರವಾಗಿ ಎಂದು ಕರೆಯುತ್ತಿದ್ದಾರಾ?" ಎಂದೆ!

"ಯಾಕೆ ಅವರಿಗೆ ಮೀಸಲಾತಿ ಕೊಡಬೇಕು?" ಎಂಬ ಅವರ ಎರಡನೇ ಪಶ್ನೆಗೆ "ಅವರೇನು ನಿಮ್ಮನ್ನೇನು ಕೊಡಿ ಎಂದು ಕೇಳುತ್ತಿದ್ದಾರಾ? ಸರ್ಕಾರವನ್ನು ಕೇಳುತ್ತಿದ್ದಾರೆ. ಕೊಡೋದು ತೆಗೆದು ಕೊಳ್ಳೋದು ಸರ್ಕಾರಕ್ಕೂ ಅವರಿಗೂ ಬಿಟ್ಟ ವಿಷಯ. ನಿಮಗೇನು ಕಷ್ಟ?" ಎಂದೆ!

> ಸಂವಿಧಾನದ ಅಡಿಯಲ್ಲಿ ನಮಗಿಷ್ಟ ಬಂದದ್ದನ್ನು ಮಾಡಲು ನಾವು ಬದ್ಧರಾಗಿದ್ದೇವೆ. ನಮ್ಮ ಮಾರ್ಗದರ್ಶಕರಾಗಿ ಅಂಬೇಡ್ಕರರಿದ್ದಾರೆ. ಗೌತಮಬುದ್ಧ, ಫುಲೆ, ಶಾಹು. ಪೆರಿಯಾರ್ ಇದ್ದಾರೆ. ಅಂತಹ ವ್ಯಕ್ತಿಗಳು ಮತ್ತಷ್ಟು ಹುಟ್ಟಿಬರುತ್ತಲೇ ಇದ್ದಾರೆ. ಅಂತಹ ಮಾರ್ಗದರ್ಶಕ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ದಲಿತರು ತಮ್ಮನ್ನು ತಾವು ಉದ್ಧಾರ ಮಾಡಿಕೊಳ್ಳುವಷ್ಟು ಸಶಕ್ತರಾಗಿದ್ದಾರೆ. ಅವರಿಗೆ ನಿಮ್ಮ ಬಿಟ್ಟಿ ಸಲಹೆಯೂ ಬೇಡ. ಕಾಳಜಿ ಕಾತರವಂತೂ ಬೇಡವೇ ಬೇಡ. ಹಾಗೇನಾದರೂ ನಿಮಗೆ ಯಾರಿಗಾದರೂ ಬುದ್ಧಿ ಹೇಳಬೇಕೆನಿಸಿದರೆ ಮತ್ತೆ ಹೇಳುತ್ತೇವೆ ಅದನ್ನು ಸವರ್ಣ ಹಿಂದೂಗಳಿಗೆ ನೀಡಿ.

"ಮೀಸಲಾತಿ ನೀಡುವುದರಿಂದ ಜಾತೀಯತೆ ಹೆಚ್ಚುವುದಿಲ್ಲವೇ? ಎಂಬ ಅವರ ಮೂರನೇ ಪ್ರಶ್ನೆಗೆ "ಆಗ್ಲಿ ಬಿಡಿ, ಯಾಕೆ ಮೀಸಲಾತಿ ಬರೋದಕ್ಕಿಂತ ಮೊದಲೇನು ಜಾತೀಯತೆ ಇರಲಿಲ್ವೆ? ಮಿಸಲಾತಿ ಬಂದ ತಕ್ಷಣ ಏನಾದರೂ ಜಾತೀಯತೆ ಬಂದುಬಿಡ್ತಾ? ಅಥವಾ ಜಾತೀಯತೆ ಜಾಸ್ತಿ ಆಗಿಬಿಡ್ತಾ? NEVER. ಮೀಸಲಾತಿ ನೀಡಿರೋದೇ ಜಾತೀಯತೆ ಇದ್ದಿದ್ದರಿಂದ. ಈಗ ಅದರಿಂದ ಜಾತೀಯತೆ ಜಾಸ್ತಿ ಆಗುತ್ತೆ ಅಂತ ನೀವು ಅಂದುಕೊಂಡರೆ ನಾವೇನ್ ಮಾಡೋಕಾಗುತ್ತೆ? ಮೊದಲಿನಿಂದಲೂ ಜಾತೀಯತೆ ಆಚರಿಸಬಾರದಿತ್ತು ಎಂಬುದು ನಿಮಗೆ ಗೊತ್ತಿರಲಿಲ್ವಾ?" ಎಂದುತ್ತರಿಸಿದೆ!

"ಮೀಸಲಾತಿ ನೀಡುವುದರಿಂದ ಹಿಂದೂ ಧರ್ಮ ಹೋಳಾಗುತ್ತದೆ" "ಎಂಬ ಅವರ ನಾಲ್ಕನೆ ಪ್ರಶ್ನೆಗೆ" ಹೋಳು? ಒಂದಾಗಿದ್ದರೆ ತಾನೆ ಹೋಳಾಗುವುದು? ಅಕಸ್ಮಾತ್ ಈಗ ಮೀಸಲಾತಿ ನೀಡುವುದರಿಂದ ಹೋಳಾಗ್ತಿದೆ ಎಂದರೆ, ಆಗ್ಲಿ ಬಿಡಿ ಮೊದಲಿನಿಂದಲೂ ಹೋಳಾಗೇ ಇತ್ತಲ್ಲ ಅದಕ್ಕೆ ನೀವೇನ್ ಮಾಡಿದ್ರಿ?" ಎಂದೆ!

ಅಂತಿಮವಾಗಿ ಅವರ ಕೊನೆಯ ಪ್ರಶ್ನೆಯಾದ "ಮೀಸಲಾತಿ ನೀಡುವುದರಿಂದ ದಲಿತರ ಸಮಸ್ಯೆ ಬಗೆಹರಿಯುತ್ತದೆಯೇ?" ಎಂಬ ಪ್ರಶ್ನೆಗೆ "ಬಗೆಹರಿಯೋದು? ಬೇಡ, ಅವರು ಇದ್ದ ಹಾಗೇ ಇರಲಿ. ಯಕ್ಕುಟ್ಟಿ ಹೋಗಲಿ. ಅದನ್ನು ಕಟ್ಟಿಕೊಂಡು ನಿಮಗೇನು? ನಿಮ್ ಕೆಲ್ಸ ನೀವ್ ಮಾಡಿರಿ. ಯಕ್ಕುಟ್ಟಿ ಹೋಗೋದು, ಉದ್ಧಾರ ಆಗೋದು ಅವರಿಗೆ ಬಿಟ್ಟದ್ದು. ಒಂದಂತು ನಿಜ. ಅವರು ಏನೇ ಮಾಡಿದರೂ ನಿಮಗೆ ಹೊಟ್ಟೆಕಿಚ್ಚು. jealousy. ಅವರು ಇದ್ದಹಾಗೆ ಇರಬೇಕು. ತಮ್ಮ ಜೀತಗಾರರಾಗಿರಬೇಕು. ಇದೇ ನಿಮ್ಮ ಉದ್ದೇಶ, ಹಾರೈಕೆ!" ಎಂದೆ! ಸಂಘ ಪರಿವಾರದ ಮಿತ್ರರು ಮಾತಾಡಿದ್ದರೆ ಕೇಳಿ. ತುಟಿಪಿಟಕ್ಕೆನ್ನದೆ ಜಾಗ ಖಾಲಿ ಮಾಡಿವರು.

ವಿಷಯವೇನೆಂದರೆ ಸಂಘಪರಿವಾರದ ಆ ಮಿತ್ರರ ಹಾಗೆ, ಅವರ ಗುರುವಾದ ಪೇಜಾವರ ಶ್ರೀಗಳು ದಲಿತರು ಬೌದ್ಧ ಧರ್ಮಕ್ಕೆ ಸೇರುವುದರ ಬಗ್ಗೆ ಕೆಲವು ಆಕ್ಷೇಪಣೆಗಳನ್ನು ವ್ಯಕ್ತಪಡಿಸಿದ್ದಾರೆ. ಉಡುಪಿಯಲ್ಲಿ ಕಳೆದ ಮೇ ತಿಂಗಳಿನಲ್ಲಿ ನಡೆದ ಬೌದ್ಧ ದೀಕ್ಷಾ ಸಮಾರಂಭದ ಸಮಯದಲ್ಲಿ ಪ್ರಾರಂಭವಾದ ಅವರ ಆ ಆಕ್ಷೇಪಣಾ ಸರಣಿ ಇಂದಿಗೂ ಮುಂದುವರಿದಿದೆ. ಈ ಹಿನ್ನೆಲೆಯಲ್ಲಿ ಉಡುಪಿಯಲ್ಲಿ ಅಂದು ನಡೆದ ಬೌದ್ಧ ದೀಕ್ಷೆಗೆ ಶ್ರೀಗಳು ಎತ್ತಿದ್ದ ಆಕ್ಷೇಪಣೆಗಳಿಗೆ ಉತ್ತರಿಸಬಾರದು ಎಂದು ನಮ್ಮಷ್ಟಕ್ಕೆ ನಾವು ಸುಮ್ಮನಿದ್ದೆವು. ಆದರೆ ಪೇಜಾವರ ಶ್ರೀಗಳು ಸುಮ್ಮನೆ ಇರುವ ಜಾಯಮಾನದವರಲ್ಲ! ಈ ನಿಟ್ಟಿನಲ್ಲಿ ಶ್ರೀಗಳು ಅಂದು ಎತ್ತಿದ್ದ ಆಕ್ಷೇಪಣೆಗಳಿಗೆ ತಡವಾಗಿಯಾದರೂ ಉತ್ತರಿಸಬೇಕಿದೆ. ತಪ್ಪಿದ್ದರೆ ಶ್ರೀಗಳು ಕ್ಷಮಿಸಲಿ.

ಅಂದಹಾಗೆ ಶ್ರೀಗಳ ಮೊದಲ ಆಕ್ಷೇಪಣೆ "ಬೌದ್ಧ ಧರ್ಮ ಸ್ವೀಕರಿಸುವುದರಿಂದ ದಲಿತರಿಗೆ ಲಾಭವಿಲ್ಲವಂತೆ "ಎನ್ನುವುದು. "ಲಾಭ? ಬೇಡ, ನಷ್ಟವೇ ಆಗಲಿ ಬಿಡಿ. ಅದನ್ನು ಕಟ್ಟಿಕೊಂಡು ಪೇಜಾವರರಿಗೇನಾಗಬೇಕು? ನಷ್ಟ ಅನುಭವಿಸೋದು ದಲಿತರಾದ ನಾವುಗಳು ತಾನೆ ? ಅನುಭವಿಸ್ತೀವಿ ಬಿಡಿ"

ಹಾಗೆಯೇ ಪೂಜ್ಯ ಪೇಜಾವರ ಶ್ರೀಗಳು ಎತ್ತುವ ಎರಡನೇ ಆಕ್ಷೇಪಣೆ "ವೈದಿಕ ಧರ್ಮದಲ್ಲಿರುವ ಬಹಳಷ್ಟು ಆಚರಣೆಗಳು ಬೌದ್ಧ ಧರ್ಮದಲ್ಲಿವೆ" ಎಂಬುದು. "ವೈದಿಕ ಆಚರಣೆಗಳು? ಇರ್ಲಿ ಬಿಡಿ, ದಲಿತರು ಹೇಗೋ ಅನುಸರಿಸಿಕೊಂಡು ಹೋಗ್ತಾರೆ! ಅದು ಅವರ ಕಷ್ಟ. ಪೇಜಾವರರನ್ನೇನಾದರೂ ಅನುಭವಿಸಿ ಎಂದು ಕರೆದರೆ?"

ಮುಂದುವರಿದು ತನ್ನ ಮೂರನೇ ಆಕ್ಷೇಪಣೆಯಲ್ಲಿ ಪೇಜಾವರರು "ಬೌದ್ಧ ಧರ್ಮ ಹಿಂದೂ ಧರ್ಮದ ಒಂದು ಭಾಗವೇ" ಎಂದಿದ್ದಾರೆ."ಇರ್ಲಿ ಬಿಡಿ, ದಲಿತರಿಗೆ ಅದು ಗೊತ್ತಿದ್ದೂ ಅಂಬೇಡ್ಕರರ ಆಜ್ಞೆಯಂತೆ ಅವರು ಅಂತಹ "ತಪ್ಪು" ಮಾಡುತ್ತಿದ್ದಾರೆ. ಮಾಡ್ಲಿ ಬಿಡಿ. ಅದು ಅವರ ಇಷ್ಟ. ಅಂಬೇಡ್ಕರ್ ಹಳ್ಳಕ್ಕೆ ಬೀಳಿ ಎಂದರೂ ಬೀಳುತ್ತಾರೆ. ಶಿಖರಕ್ಕೆ ಏರಿ ಎಂದರೂ ಏರುತ್ತಾರೆ. ಅದು ಅವರಿಗೂ ಅಂಬೇಡ್ಕರರಿಗೂ ಇರುವ ಬಾಂಧವ್ಯಕ್ಕೆ ಸಂಬಂಧಪಟ್ಟಿದ್ದು. ಅದನ್ನು ಕಟ್ಟಿಕೊಂಡು ಪೇಜಾವರರಿಗೇನಾಗಬೇಕು?"

ಮುಂದುವರಿದು "ಬೌದ್ಧ ಧರ್ಮ ಸ್ವೀಕರಿಸುವುದರಿಂದ ದಲಿತರ ಸಂಸ್ಕೃತಿ ಪೂರ್ತಿಯಾಗಿ ನಾಶವಾಗುವುದಂತೆ" ಎಂಬುದು ಪೇಜಾವರರ ನಾಲ್ಕನೇ ಆಕ್ಷೇಪಣೆ. ಇದಕ್ಕುತ್ತರ "ಆಗ್ಲಿ ಬಿಡಿ, ದಲಿತ ಸಂಸ್ಕೃತಿಯಾದರೂ ನಾಶವಾಗ್ಲಿ, ಹಿಂದೂ ಸಂಸ್ಕೃತಿಯಾದ್ರೂ ನಾಶವಾಗ್ಲಿ. ಅದು ದಲಿತರಿಗೆ ಸಂಬಂಧಿಸಿದ್ದಲ್ಲ. ಅವರಿಗೆ ಬೇಕಿರುವುದು ಅಂಬೇಡ್ಕರ್ ಹಾದಿಯ ನಡೆ. ಹೀಗಿರುವಾಗ ಯಾವುದಾದ್ರೂ ಸಂಸ್ಕೃತಿ ನಾಶವಾದ್ರೆ ದಲಿತರೇನು

(7ನೇ ಪುಟಕ್ಕೆ)

ಹತಾಶೆ ಆತಂಕಗಳ ದ್ಯೋತಕ

ನಾ ದಿವಾಕರ

ಪ್ರಿಯ ಸಂಪಾದಕರೇ,

"ನಾನು ಬ್ರಾಹ್ಮಣ ದ್ವೇಷಿಯಲ್ಲ, ಬ್ರಾಹ್ಮಣರಿಂದಲೂ ಕಲಿಯಬೇಕಾದ್ದು ಬೇಕಾದಷ್ಟಿದೆ," ಖ್ಯಾತ ದಲಿತ ಕವಿ ಸಿದ್ಧಲಿಂಗಯ್ಯನವರ ಈ ಹೇಳಿಕೆ ಕರ್ನಾಟಕದ ದಲಿತ ವಲಯಗಳಲ್ಲಿ ಸಂಚಲನ ಮೂಡಿಸದಿದ್ದರೂ ಒಂದು ಚರ್ಚೆಯನ್ನಂತೂ ಹುಟ್ಟುಹಾಕಿದೆ. ಬಹುಶಃ ಹತ್ತು ವರ್ಷಗಳ ಹಿಂದೆ ಈ ಮಾತುಗಳನ್ನಾಡಿದ್ದರೆ ಒಂದು ರಾಜ್ಯ ಮಟ್ಟದ ವಿಚಾರ ಸಂಕಿರಣವೇ ನಡೆಯುತ್ತಿತ್ತೇನೋ. ಆದರೆ ಈಗ ವ್ಯಕ್ತವಾಗುತ್ತಿರುವ ಪ್ರತಿಕ್ರಿಯೆಗಳು ಎಲ್ಲೋ ಒಂದೆಡೆ ದಲಿತ ವಲಯಗಳಲ್ಲಿನ ನಿಷ್ಕ್ರಿಯತೆ, ನಿರ್ಲಕ್ಷ್ಯ ಮತ್ತು ಹತಾಶ ಮನೋಭಾವವನ್ನು ತೋರಿಸುತ್ತದೆ. ಈ ಅಂಶವೇ ಸಿದ್ಧಲಿಂಗಯ್ಯನವರ ಹತಾಶೆಯ ಮಾತುಗಳಿಗೆ ಕಾರಣವಾಗಿರಲೂಬಹುದು. ಎಪ್ಪತ್ತರ ದಶಕದಲ್ಲಿ ಬೆಂಕಿಯ ಕಿಡಿಯಂತಿದ್ದ ಕವಿ ಈಗ ತನ್ನಲ್ಲಿ ಆ ಆಕ್ರೋಶ ಉಳಿದಿಲ್ಲ ಎಂದು ಹೇಳಿರುವುದನ್ನು ದಲಿತ ಚಳವಳಿಯ ಹಿಮ್ಮುಖ ಚಲನೆಯ ಸಂಕೇತವಾಗಿ ನೋಡಬೇಕೇ ಹೊರತು ಒಂದು ವ್ಯಕ್ತಿಗತ ಅಭಿವ್ಯಕ್ತಿಯಾಗಿ ಕಾಣಬಾರದು.

ದಲಿತ ಚಳವಳಿಯ ಮೂಲ ಸಮಸ್ಯೆ ಎಂದರೆ ಎಪ್ಪತ್ತರ ದಶಕದಲ್ಲಿ ಕಂಡುಬಂದಂತಹ ಸಾಂಸ್ಕೃತಿಕ ನೆಲೆಗಟ್ಟಿನ ಅವಕಾಶಗಳನ್ನು ರಾಜಕೀಯ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿ ಒಂದು ಸೈದ್ಧಾಂತಿಕ ಬುನಾದಿಯನ್ನು ಹಾಕಿಕೊಳ್ಳದೆ ಹೋದದ್ದು. "ಇಕ್ಕರ್ಲಾ ವದೀರ್ಲಾ" ಎಂಬ ಸಿದ್ಧಲಿಂಗಯ್ಯನವರ ಕವನದ ಸಾಲುಗಳು, "ನನ್ನ ಜನ ನನ್ನ ಜನ" ಎಂಬ ಕ್ರಾಂತಿಯ ಕಿಡಿ ಹೊತ್ತಿಸಿದ ಸಾಲುಗಳು ಆ ಕಾಲದ ದಲಿತ ಸಮುದಾಯಗಳಲ್ಲಿನ ನೋವು, ಆಕ್ರಂದನ ಮತ್ತು ಅನಿವಾರ್ಯತೆಗಳ ಸಂಕೇತವಾಗಿ ಹೊರಹೊಮ್ಮಿದ್ದವು. ಈ ಸಾಲುಗಳನ್ನು ಸಿದ್ಧಲಿಂಗಯ್ಯ ಎಂಬ ವ್ಯಕ್ತಿಯೊಬ್ಬರ ಅಭಿವ್ಯಕ್ತಿ ಎಂದು ಭಾವಿಸಿದಲ್ಲಿ, ಮೇಲೆ ಉಲ್ಲೇಖಿಸಿರುವ ಸಾಲುಗಳನ್ನೂ ಹಾಗೆಯೇ ಭಾವಿಸಬೇಕಾಗುತ್ತದೆ. ಆದರೆ ವಾಸ್ತವ ಭಿನ್ನವಾಗಿದೆ. ಸಿದ್ಧಲಿಂಗಯ್ಯನವರ ಹತಾಶೆಯ ಸಾಲುಗಳು ದಲಿತ ಚಳವಳಿಯ ಹತಾಶ ಪರಿಸ್ಥಿತಿಯನ್ನೇ ಪ್ರತಿಬಿಂಬಿಸುತ್ತದೆ. ಇಲ್ಲಿ ಬ್ರಾಹ್ಮಣ ಮತ್ತು ಬ್ರಾಹ್ಮಣ್ಯಗಳ ವಿರುದ್ಧ ದಲಿತ ವರ್ಗಗಳ ಆಕ್ರೋಶಗಳನ್ನು ಮಾತ್ರ ಒರೆ ಹಚ್ಚಿ ನೋಡಿದಾಗ ಬಹುಶಃ ಕ್ರಾಂತಿಯ ಕಿಡಿಹೊತ್ತಿಸಿದ ಕವಿ ಬ್ರಾಹ್ಮಣಿಕೆಗೆ ಬಲಿಯಾಗಿದ್ದಾರೇನೋ ಎನಿಸಬಹುದು. ಆದರೆ ವಸ್ತುನಿಷ್ಠವಾಗಿ ನೋಡಿದಾಗ ಇಡೀ ದಲಿತ ಚಳವಳಿಯೇ ಒಂದು ರೀತಿಯ ಬ್ರಾಹ್ಮಣಿಕೆಗೆ ಬಲಿಯಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಎಪ್ಪತ್ತರ ದಶಕದ ಮತ್ತು ಪ್ರಸ್ತುತ ಸನ್ನಿವೇಶದ ಬ್ರಾಹ್ಮಣ್ಯದ ನಡುವೆ ಗಂಭೀರವಾದ ವ್ಯತ್ಯಾಸಗಳೇನೂ ಕಾಣಲಾಗುವುದಿಲ್ಲವಾದರೂ ನವ ಬ್ರಾಹ್ಮಣ್ಯದ ಸ್ವರೂಪವನ್ನು ಸ್ಪಷ್ಟವಾಗಿ ಕಾಣಬಹುದು. ನವ ಉದಾರವಾದದ ನೆರಳಲ್ಲಿ ನಗರೀಕರಣ ಸಂಸ್ಕೃತಿ ಹೆಚ್ಚಾಗುತ್ತಿರುವಂತೆಲ್ಲಾ ಬ್ರಾಹ್ಮಣ ಸಮುದಾಯ ತನ್ನ ಹಳೆಯ ವಾಸನೆಗಳನ್ನು ಕಳೆದುಕೊಂಡು ನವ ನವೀನ ಮಾದರಿಗಳ ಶೋಷಣಾ ಅಸ್ತ್ರಗಳನ್ನು ಅಳವಡಿಸಿಕೊಳ್ಳುತ್ತಿದೆ. ಸೂಕ್ಷ್ಮ ತಂತುಗಳ ರೂಪದಲ್ಲಿ ಅಗ್ರಹಾರ ಸಂಸ್ಕೃತಿ ಪುನರ್ ಸ್ಥಾಪಿಸಿಕೊಳ್ಳುತ್ತಿದೆ. ಈ ಬೆಳವಣಿಗೆಯ ಅರಿವು ದಲಿತ ಸಮುದಾಯಗಳಿಗೆ ಇಲ್ಲವೆಂದಲ್ಲ. ಇದು ದಲಿತರನ್ನು ಕಾಡುತ್ತಿಲ್ಲವೆಂತಲೂ ಅಲ್ಲ. ಆದರೆ ನಗರೀಕರಣ ಸಂಸ್ಕೃತಿಗೆ ಬ್ರಾಹ್ಮಣರಷ್ಟೇ ಪ್ರಮಾಣದಲ್ಲಿ ಬಲಿಯಾಗಿರುವ ದಲಿತ ಸಮುದಾಯಗಳು ಈ ಹೊಸ ವಿದ್ಯಮಾನವನ್ನು ಗ್ರಹಿಸುತ್ತಿರುವ ರೀತಿ ಮಾತ್ರ ತಪ್ಪಾಗಿದೆ. ಇದು ದಲಿತ ಚಳವಳಿ ಎದುರಿಸುತ್ತಿರುವ ಸಮಸ್ಯೆಯೂ ಹೌದು, ಸವಾಲೂ ಹೌದು.

ರಾಜಕಾರಣ, ಸಾಂಸ್ಕೃತಿಕ ಕ್ಷೇತ್ರ, ಸಾಮಾಜಿಕ ವಲಯಗಳಲ್ಲಿ ದಲಿತ ವರ್ಗಗಳ ಅಸ್ಮಿತೆಯನ್ನು ಸ್ಥಾಪಿಸುವ ನಿಟ್ಟಿನಲ್ಲಿ ದಲಿತ ಸಂಘಟನೆಗಳ ವೈಫಲ್ಯ ಇಲ್ಲಿ ಎದ್ದು ಕಾಣುತ್ತದೆ. ಎಪ್ಪತ್ತರ ದಶಕದ ಬಂಡಾಯದ ದನಿಗಳು ಎಲ್ಲೋ ಕಳೆದುಹೋಗಿವೆ ಎನ್ನುವುದಕ್ಕಿಂತಲೂ ಹಲವು ಮಜಲುಗಳಲ್ಲಿ ಆಳುವ ವರ್ಗಗಳ, ಸಮಾಜದ ಪ್ರಬಲ ವರ್ಗಗಳ, ಆಳ್ವಿಕರು ನಿರ್ಮಿಸಿರುವ ಪ್ರಭಾವಿ ವಲಯಗಳ ಅಂತರ್ಜಾಲದಲ್ಲಿ ಸಿಲುಕಿ ತಮ್ಮ ಅಸ್ಮಿತೆಗಳನ್ನು, ಅಸ್ತಿತ್ವಗಳನ್ನೂ ಮರೆತುಹೋಗಿವೆ ಎನ್ನುವುದು ಸೂಕ್ತ. ದಲಿತ ಚಳವಳಿಗಳನ್ನು ಮೀಸಲಾತಿ, ದೌರ್ಜನ್ಯ ಮತ್ತು ಅಂಬೇಡ್ಕರ್ ಅವರ ವ್ಯಕ್ತಿಗತ ವೈಭವೀಕರಣಕ್ಕೆ ಮಾತ್ರ ಸೀಮಿತಗೊಳಿಸಿರುವ ಪರಿಣಾಮವನ್ನು ಇಲ್ಲಿ ನೇರವಾಗಿ ಕಾಣಬಹುದು. ಈ ಪ್ರತಿಪಾದನೆ ಒಪ್ಪುವಂತಹುದಲ್ಲ ಎನ್ನುವುದಾದರೆ, 40 ವರ್ಷಗಳ ಹೋರಾಟಗಳ ನಂತರವೂ ಕರ್ನಾಟಕದ ದಲಿತ ಚಳವಳಿ ತನ್ನದೇ ಆದ ಒಂದು ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಪ್ರಭಾವಳಿಯನ್ನು ಏಕೆ ನಿರ್ಮಿಸಿಕೊಂಡಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಬೇಕಾಗುತ್ತದೆ.

ಈ ಹಿನ್ನೆಲೆಯಲ್ಲೇ ಬ್ರಾಹ್ಮಣ-ಬ್ರಾಹ್ಮಣ್ಯಗಳ ಪ್ರಶ್ನೆಯನ್ನು ವಿಶ್ಲೇಷಿಸಬೇಕಾಗುತ್ತದೆ. ಅಂಬೇಡ್ಕರ್ ಅವರು 1930–40ರ ದಶಕದಲ್ಲಿ ಹೇಳಿದ "ಸಾವಿರಾರು ಬ್ರಾಹ್ಮಣೇತರರನ್ನು ನಂಬಬಹುದು ಒಬ್ಬ ಬ್ರಾಹ್ಮಣನನ್ನು ನಂಬಲಾಗದು" ಎಂಬ ಮಾತುಗಳನ್ನು ಸಮಕಾಲೀನ ಸಂದರ್ಭದಲ್ಲಿ ಉಲ್ಲೇಖಿಸುವಾಗ ಕಳೆದ ಎಂಟು ದಶಕಗಳಲ್ಲಿನ ಸಾಮಾಜಿಕ, ಸಾಂಸ್ಕೃತಿಕ ಪಲ್ಲಟಗಳನ್ನೂ ಪರಿಗಣಿಸದಿದ್ದರೆ, ಘೋಷಣೆಗಳಲ್ಲಿ ಕಳೆದು ಹೋಗುವ ಸಂಭವವೇ ಹೆಚ್ಚು. ಬಹುಶಃ ದಲಿತ ಚಳವಳಿಯ ನ್ಯೂನತೆಯೂ ಇದೇ ಆಗಿದೆ. ಜಾಗತೀಕರಣ, ನವ ಉದಾರವಾದ ಮತ್ತು ಗ್ರಾಹಕ ಸಂಸ್ಕೃತಿ ಭಾರತೀಯ ಸಮಾಜದಲ್ಲಿ ಹುಟ್ಟುಹಾಕಿರುವ ಹೊಸ ಆಯಾಮಗಳನ್ನು ವ್ಯಾಖ್ಯಾನಿಸುವ ನಿಟ್ಟಿನಲ್ಲಿ ಅಂಬೇಡ್ಕರ್‌ವಾದದ ಪುನರ್‌ವ್ಯಾಖ್ಯಾನವನ್ನೂ ಮಾಡದೆ ಹೋದರೆ ದಲಿತ ಚಳವಳಿ ಸಿದ್ಧಲಿಂಗಯ್ಯನವರಷ್ಟೇ ಹತಾಶ ಸ್ಥಿತಿ ತಲುಪಬೇಕಾಗುತ್ತದೆ.

ಸಾಮಾಜಿಕವಾಗಿ, ಆರ್ಥಿಕವಾಗಿ ಮೇಲ್ ಪಂಕ್ತಿಗೆ ತಲುಪಿ ತಮ್ಮದೇ ಆದ ಅಸ್ಮಿತೆಗಳನ್ನು ರೂಪಿಸಿಕೊಂಡಿರುವ ಮೊದಲ, ಎರಡನೆ ಪೀಳಿಗೆಯ ದಲಿತ ವರ್ಗಗಳು ಸಾಮುದಾಯಿಕ ಅನನ್ಯತೆಗಳಿಂದ ದೂರವಿದ್ದು, "ಅನ್ಯತೆಯ" ಪಾಶವೀ ಸಾಂಸ್ಕೃತಿಕ ವಿದ್ಯಮಾನಕ್ಕೆ ಬಲಿಯಾಗಿರುವುದು ಭಾರತೀಯ ಸಾಮಾಜಿಕ ಚಳವಳಿಯ ದುರಂತ. ಹಾಗಾಗಿಯೇ ಬುದ್ಧ, ಬಸವ, ಅಂಬೇಡ್ಕರಾದಿಗಳ ಸಿದ್ಧಾಂತಗಳು ಪ್ರತಿಮೆಗಳಲ್ಲಿ, ಘೋಷಣೆಗಳಲ್ಲಿ, ಬ್ಯಾನರ್‌ಗಳಲ್ಲಿ ಹುದುಗಿ ಹೋಗುತ್ತಿದೆ. ಆದ್ದರಿಂದಲೇ ದಲಿತ ಸಮುದಾಯಗಳ ಮೂಲಭೂತ ಸಮಸ್ಯೆಗಳನ್ನು ಯಾವುದೇ ರೀತಿಯಲ್ಲೂ ಬಿಂಬಿಸಲಾಗುತ್ತಿಲ್ಲ. ಖೈರ್ಲಾಂಜಿ, ಕಂಬಾಲಪಲ್ಲಿ, ಖಾಪ್ ಪಂಚಾಯತ್, ತಲೆಯ ಮೇಲೆ ಮಲ ಹೊರುವ ವ್ಯವಸ್ಥೆ, ಜಾತಿ ಆಧಾರಿತ ಬಹಿಷ್ಕಾರ ಈ ಎಲ್ಲ ವಿದ್ಯಮಾನಗಳು ಎಷ್ಟರ ಮಟ್ಟಿಗೆ ಸಾಮಾಜಿಕ ತಲ್ಲಣಗಳನ್ನು ಸೃಷ್ಟಿಸಿವೆ ಎಂದು ನೋಡಿದಾಗ ದಲಿತ ಚಳವಳಿಯ ಇತಿ ಮಿತಿಗಳು ಜಗಜ್ಜಾಹೀರಾಗುತ್ತವೆ.

ಒಂದೆಡೆ ಬುದ್ಧನೆಡೆಗೆ ನಡೆಯುತ್ತಿರುವ ದಲಿತ ವರ್ಗಗಳು ಮತ್ತೊಂದೆಡೆ ದಲಿತತ್ವದ ಪ್ರತಿಪಾದನೆ ಮಾಡುತ್ತಿವೆ. ಇವೆರಡೂ ವಿದ್ಯಮಾನಗಳ ನಡುವೆ ವಿದ್ಯಾವಂತ, ಸುಶಿಕ್ಷಿತ ಮಧ್ಯಮ ವರ್ಗಗಳ ದಲಿತರು ಕಂಡೂ ಕಾಣದಂತೆ ಬ್ರಾಹ್ಮಣತ್ವದೆಡೆಗೆ ಸಾಗುತ್ತಿದ್ದಾರೆ. ಆದರೆ ಭೂಮಿಯನ್ನೇ ನಂಬಿ ಬದುಕುವ, ಕಾಯಕವನ್ನೇ ಆಧರಿಸುವ, ಶ್ರಮಜೀವಿಗಳಾಗಿಯೇ ಜೀವನ ಸವೆಸುವ ಶೇ. 80ಕ್ಕೂ ಹೆಚ್ಚು ದಲಿತರು ತಮ್ಮ ಆರ್ಥಿಕ ಸುಭದ್ರತೆಯನ್ನು ದೃಢಪಡಿಸಬಹುದಾದ ಸಾಧ್ಯತೆಗಳನ್ನು ಕುರಿತು ಯೋಚಿಸುತ್ತಲೇ ಇಲ್ಲ. ಈ ನಿಟ್ಟಿನಲ್ಲಿ ಯೋಚಿಸುವುದಕ್ಕೆ ಸೈದ್ಧಾಂತಿಕ ಮಡಿವಂತಿಕೆ, ಪೂರ್ವಾಗ್ರಹಗಳು ಅಡ್ಡಿಯಾಗುತ್ತಿರುವುದೂ ಅಷ್ಟೇ ಸತ್ಯ. ಸಮಾಜವಾದ, ಕಮ್ಯುನಿಸಂ, ಕ್ರಾಂತಿ ಇವುಗಳನ್ನು ಕುರಿತ ಪೂರ್ವಾಗ್ರಹಗಳು ದಲಿತ ಚಳವಳಿಯನ್ನು ಇಂದಿಗೂ ಕಾಡುತ್ತಿರುವುದು ದುರದೃಷ್ಟಕರ.

ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನೋಡಿದಾಗ ಬೆಂಕಿಯ ಕಿಡಿ ಹೊತ್ತಿಸಿದ ಸಿದ್ಧಲಿಂಗಯ್ಯನವರ ಹತಾಶೆಯ ಮಾತುಗಳು ಅಚ್ಚರಿಯನ್ನೇನೂ ಉಂಟುಮಾಡುವುದಿಲ್ಲ. ಮೊದಲೇ ಹೇಳಿದಂತೆ ಈ ಅಭಿಪ್ರಾಯ ದಲಿತ ಚಳವಳಿಯ ಹತಾಶೆಯ ದ್ಯೋತಕವಾಗಿ ಕಾಣುವುದೇ ಹೊರತು, ವ್ಯಕ್ತಿಗತ ಚಿಂತನೆಯಾಗಿ ಕಾಣವುದಿಲ್ಲ. ಇದೇ ಅಭಿಪ್ರಾಯವನ್ನು ಮನದಾಳದಲ್ಲೇ ಹುದುಗಿಸಿಕೊಂಡು ತಮ್ಮ "ಕಾಯಕ"ಗಳನ್ನು ಮುಂದುವರೆಸುತ್ತಿರುವ ಅನೇಕ ದಲಿತ ಕ್ರಾಂತಿ ಕವಿಗಳು ಇದ್ದಾರೆ. ಸಿದ್ಧಲಿಂಗಯ್ಯ ತಮ್ಮ ನೇರನುಡಿಗಳನ್ನು ಜನತೆಯ ಮುಂದಿಟ್ಟಿದ್ದಾರೆ. ನವ ಉದಾರವಾದ, ಜಾಗತೀಕರಣ ಮತ್ತು ಬ್ರಾಹ್ಮಣ್ಯಗಳ ನಡುವಿನ ಸೂಕ್ಷ್ಮ ಸಂಬಂಧಗಳನ್ನು ಒರೆ ಹಚ್ಚಿ ನೋಡದೆ ಹೋದಲ್ಲಿ ಶುಷ್ಕವಾದ, ಸಂವಾದ, ವಿವಾದಗಳಲ್ಲೇ ಕೊನೆಗೊಳ್ಳಬೇಕಾಗುತ್ತದೆ. ವಸ್ತುನಿಷ್ಠ ಚರ್ಚೆ ನಡೆಯುವುದೇ ಆದರೆ ದಲಿತ ಚಳವಳಿ ಮತ್ತು ಸಾಮುದಾಯಿಕ ಅಸ್ಮಿತೆಗಳ ಸುತ್ತ ನಡೆಯಬೇಕೇ ಹೊರತು, ವ್ಯಕ್ತಿಯ ಸುತ್ತ ಅಲ್ಲ. ಇದು ಸಿದ್ಧಲಿಂಗಯ್ಯನವರ ಆಶಯವೂ ಆಗಿರಬಹುದು. □

ಕಪ್ಪು ಹಣ-ಬಿಳಿ ಸುಳ್ಳು!!

ಸಂಪಾದಕರೊಡನೆ ಸಂವಾದ

ಶಿವಸುಂದರ್

ಪ್ರಿಯ ಸಂಪಾದಕರೇ,

ಭಾರತಕ್ಕೆ ಸೇರಬೇಕಾದ ಲಕ್ಷಾಂತರ ಕೋಟಿ ಕಪ್ಪುಹಣವನ್ನು ಭಾರತಕ್ಕೆ ವಾಪಸ್ ತರಲು ಬೇಕಾದ ಕ್ರಮವನ್ನು ಕೇಂದ್ರ ಸರ್ಕಾರ ಕೈಗೊಳ್ಳಬೇಕೆಂದು ಆಗ್ರಹಿಸಿ ರಾಮ್‌ದೇವ್‌ನಂತ ಬೂಸಿ ಬಾಬಾಗಳು ಮತ್ತು ಅರೆಸ್ಸೆಸ್, ಬಿಜೆಪಿಯಂಥ ಆಷಾಢಭೂತಿ ಪಕ್ಷಗಳು ನಡೆಸಿದ ಹೋರಾಟ ಪ್ರಾರಂಭವಾದಷ್ಟೇ ತೀವ್ರವಾಗಿ ಕುಸಿದು ಬಿದ್ದಿವೆ. ಬೂಸಿ ರಾಮ್‌ದೇವ್ ಸ್ವತಃ ಎಂತಹ ಭ್ರಷ್ಟಾಚಾರಿ ಎಂಬುದು ಈಗ ಸಾಕ್ಷಿ ಸಮೇತ ಹೊರಗೆ ಬಂದಿದೆ. ಈ ಸನ್ಯಾಸಿಗೆ ಸ್ಕಾಟ್‌ಲ್ಯಾಂಡ್‌ನಲ್ಲಿ 700 ಎಕರೆಗೂ ದೊಡ್ಡದಾದ ದ್ವೀಪ, ಕೆನಡಾದಲ್ಲಿ 300 ಎಕರೆಗೂ ದೊಡ್ಡದಾದ ರೆಸಾರ್ಟ್, ಹರಿದ್ವಾರದಲ್ಲಿ ವರ್ಷಕ್ಕೆ 500 ಕೋಟಿಗೂ ಹೆಚ್ಚು ವ್ಯವಹಾರ ಮಾಡುವ ಒಂದು ಔಷಧ ಕಂಪನಿ, ಎಲ್ಲವೂ ಇರುವ 1110 ಕೋಟಿಗೂ ಹೆಚ್ಚಿನ ಆಸ್ತಿಯ ಒಡೆಯನಾಗಿರುವ ಈ ಸ್ವಾಮಿ ತೆರಿಗೆ ವಂಚನೆ ಮಾಡಿರುವ ಬಗ್ಗೆ ತೆರಿಗೆ ಇಲಾಖೆ ಮತ್ತು ವಿಚಕ್ಷಣಾ ಇಲಾಖೆಗಳು ಬಹಳ ವರ್ಷದಿಂದ ಹಿಂದೆ ಬಿದ್ದಿವೆ.

ಆದ್ದರಿಂದಲೇ ಈ ರಾಮ್‌ದೇವ್ ಕಪ್ಪು ಹಣದ ಬಗ್ಗೆ ದೇಶಾದ್ಯಂತ ಧರಣಿ ಮಾಡಲು ಹೊರಟಾಗ ಆತನ ಜುಟ್ಟು ತಮ್ಮ ಕೈಯಲ್ಲಿರುವುದರಿಂದ ಆತನನ್ನು ಸುಲಭವಾಗಿ ಹಣಿಯಬಹುದೆಂದು ಕಾಂಗ್ರೆಸ್ ಸರ್ಕಾರ ಭಾವಿಸಿತ್ತು. ಆದರೆ ತನಗೆ ಬಿಜೆಪಿಯವರು ರೂಢಿಸಿಕೊಟ್ಟ ಮತ್ತು ಆತನ ಯೋಗ ಪಾಂಡಿತ್ಯದಿಂದ ಮರುಳಾಗಿ ಇತರ ವಿಷಯಗಳ ಬಗ್ಗೆ ಕುರುಡರಾಗಿದ್ದ ಭಕ್ತ ಸಮುದಾಯದ ಬೆಂಬಲವನ್ನು ಕಂಡು ರಾಮ್‌ದೇವ್ ಸೋನಿಯಾ ರೇಖೆಯನ್ನು ದಾಟಿ ಆಟವಾಡಲು ಹೋಗಿ ನಂತರ ಬಟಾ ಬಯಲಾಗಿದ್ದು ಈಗ ಇತಿಹಾಸ. ರಾಮದೇವ್ ಮತ್ತು ಬಿಜೆಪಿಯ "ಕಪ್ಪು ಹಣ ಕ್ಯಾಂಪೇನ್" ಹಿಂದೆ ಕಾಂಗ್ರೆಸ್ ಅನ್ನು ಬದ್‌ನಾಮ್ ಮಾಡುವ ಅಜೆಂಡಾದೊಂದಿಗೆ ಕಾಂಗ್ರೆಸ್ ಸರ್ಕಾರದ ನೇತೃತ್ವದಲ್ಲೇ ನಡೆಯುತ್ತಿರುವ ಕಪ್ಪುಹಣ ಸೃಷ್ಟಿ ಮಾಡುವ ಆರ್ಥಿಕ ಪ್ರಕ್ರಿಯೆಯನ್ನು ಬೆಂಬಲಿಸುವ ಮತ್ತು ಜನರಿಂದ ಮರೆಮಾಚುವ ಅಜೆಂಡಾವೂ ಸೇರಿಕೊಂಡಿತ್ತು ಎಂದರೆ ತಪ್ಪಲ್ಲ.

ಈ ಇಡೀ ಕಪ್ಪುಹಣ ವಾಪಸ್ ತರುವ ಪ್ರಚಾರದಲ್ಲಿ ಅದರ ಗಾತ್ರ ಮತ್ತು ಅದನ್ನು ತಂದರೆ ಜನರಿಗೆ

> ಸ್ವಿಸ್ ಬ್ಯಾಂಕಿನಲ್ಲಿರುವುದೆಲ್ಲಾ ಕಪ್ಪು ಹಣವೇ ಎಂದಿಟ್ಟುಕೊಂಡರೂ ಅದನ್ನು ಭಾರತಕ್ಕೆ ತರುವುದು ಹೇಗೆ? ಭಾರತ ಸರ್ಕಾರ ಆ ಇಡೀ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಕಾನೂನನ್ನೇ ಮಾಡಿತೆಂದು ಇಟ್ಟುಕೊಳ್ಳೋಣ. ಸ್ವಿಸ್ ಬ್ಯಾಂಕ್ ಆ ಕಾನೂನನ್ನು ಮಾನ್ಯ ಮಾಡಬೇಕಾದದ್ದೇನೂ ಕಡ್ಡಾಯವಲ್ಲ. ಏಕೆಂದರೆ ಅದು ಮತ್ತೊಂದು ಸರ್ವತಂತ್ರ ಸ್ವತಂತ್ರ ಸಾರ್ವಭೌಮಿ ದೇಶ. ಭಾರತವು ಹೆಚ್ಚೆಂದರೆ ಮನವಿ ಮಾಡಿಕೊಳ್ಳಬಹುದಷ್ಟೆ. ಅದೂ ಕೂಡಾ ಇಡೀ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಆರ್ಥಿಕ ಕಾರಣಗಳಿಂದ ಸಾಧ್ಯವೇ ಇಲ್ಲ.

ಆಗುವ ಉಪಯೋಗದ ಬಗ್ಗೆ ರೋಮ್ಯಾಂಟಿಕ್ ಆದ ತರ್ಕ-ವಿತರ್ಕಗಳು ನಡೆಯಿತೇ ಹೊರತು ವಿದೇಶದಲ್ಲಿರುವ ಕಪ್ಪು ಹಣ ಎಷ್ಟು? ಅದನ್ನು ನಿಜಕ್ಕೂ ಸರಿಯಾಗಿ ಲೆಕ್ಕಾಚಾರವನ್ನು ಮಾಡಲು ಸಾಧ್ಯವೇ? ಭಾರತದಲ್ಲಿ ಏನೇ ಕಾನೂನು ಮಾಡಿದರೂ ವಿದೇಶಿ ಸರ್ಕಾರಗಳು ಅದನ್ನು ಮನ್ನಿಸಿ ಎಲ್ಲಾ ಹಣವನ್ನು ಕಳಿಸಿಕೊಟ್ಟುಬಿಡುತ್ತವೆಯೇ? ಎಲ್ಲಕಿಂತ ಹೆಚ್ಚಾಗಿ ಕಪ್ಪು ಹಣ ಸೃಷ್ಟಿಯಾಗುವುದು ಹೇಗೆ ಮತ್ತು ಅದು ವಿದೇಶ ತಲುಪುವುದು ಹೇಗೆ? ತೆರಿಗೆ ನೀಡದ ಹಣ ಕಪ್ಪು ಹಣ ಎನ್ನುವುದಾದರೆ ಪ್ರತಿವರ್ಷ ಸರ್ಕಾರ ಕಾರ್ಪೊರೇಟ್ ಕಂಪನಿಗಳಿಗೆ ನೀಡುತ್ತಿರುವ ಲಕ್ಷಾಂತರ ಕೋಟಿ ರೂಪಾಯಿ ತೆರಿಗೆ ರಿಯಾಯತಿ ಕಪ್ಪು ಹಣವನ್ನು ಅಧಿಕೃತವಾಗಿ ಬಿಳಿ ಹಣ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲವೇ? ಇವೇ ಇನ್ನಿತ್ಯಾದಿ ಪ್ರಶ್ನೆಗಳನ್ನು ಮಾಧ್ಯಮಗಳಾಗಲೀ, ಪಕ್ಷಗಳಾಗಲೀ ಎತ್ತಲೇ ಇಲ್ಲ. ಎಲ್ಲರಿಗೂ ಕಪ್ಪುಹಣದ ಬಗೆಗಿನ ರೋಚಕ ಕಲ್ಪನೆಗಳೇ ಹೆಚ್ಚು ಅಪ್ಯಾಯವೆನಿಸಿ ವಾಸ್ತವ ಸಂಗತಿಗಳನ್ನು ನೋಡಲೂ ಸಿದ್ಧರಿರಲಿಲ್ಲ.

ಸ್ವಿಸ್ ಬ್ಯಾಂಕಿನಲ್ಲಿ ಇರುವ ಭಾರತೀಯ ಸಂಜಾತರ ಹಣವೆಷ್ಟು? 2006ರಲ್ಲಿ ಸ್ವಿಸ್ ದೇಶದ ಖಾಸಗಿ ಬ್ಯಾಂಕರ್‌ಗಳು ಕೊಡಮಾಡಿದ ಮಾಹಿತಿ ಪ್ರಕಾರ 1500 ಬಿಲಿಯನ್ ಡಾಲರ್ ಅಂದರೆ ಡಾಲರ್‌ಗೆ 50 ರೂ ವಿನಿಮಯ ಮೌಲ್ಯ ಎಂದಿಟ್ಟುಕೊಂಡರೂ 75, ಲಕ್ಷ ಕೋಟಿ ರೂಪಾಯಿಗಳು. ವಿದೇಶದಲ್ಲಿರುವ ಕಪ್ಪುಹಣವೆಷ್ಟು ಎಂದು ಯಾರನ್ನೂ ಕೇಳಿದರೂ ಅದರ ಮೂಲವನ್ನೇನೂ ಬಹಿರಂಗಗೊಳಿಸುವುದಿಲ್ಲ. ಮೂಲ ಅಂತ ಒಂದೇನಾದರೂ ಇದ್ದರೆ ಈ ಸ್ವಿಸ್ ಬ್ಯಾಂಕರ್‌ಗಳ ಹೇಳಿಕೆಯೇ. ಆದರೂ ರಾಮ್‌ದೇವ್ ಮತ್ತು ಬಿಜೆಪಿ ವಿದೇಶದಲ್ಲಿರುವ ಕಪ್ಪು ಹಣ 400 ಲಕ್ಷ ಕೋಟಿ ಎಂದು ಲಂಗುಲಗಾಮಿಲ್ಲದ ಹೇಳಿಕೆ ನೀಡುತ್ತಿದ್ದಾರೆ. ಎರಡನೆಯದಾಗಿ ಸ್ವಿಸ್ ಬ್ಯಾಂಕಿನಲ್ಲಿರುವುದೆಲವೂ ಕಪ್ಪು ಹಣವೇ ಆಗಿರಬೇಕಿಲ್ಲ. ಅವರು ಹೇಳಿರುವುದು ಭಾರತೀಯ ಸಂಜಾತರ ಹಣವೆಂದೇ ಹೊರತು ಎಲ್ಲವೂ ಕಪ್ಪು ಹಣವೆಂದೇನಲ್ಲ. ಕಪ್ಪು ಹಣದ ಬಗ್ಗೆ ಮಾತನಾಡುವಾಗ ಈ ಕೆಲವು ಮೂಲಭೂತ ಅಂಶಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು.

ಇನ್ನು ಸ್ವಿಸ್ ಬ್ಯಾಂಕಿನಲ್ಲಿರುವುದೆಲ್ಲಾ ಕಪ್ಪು ಹಣವೇ ಎಂದಿಟ್ಟುಕೊಂಡರೂ ಅದನ್ನು ಭಾರತಕ್ಕೆ ತರುವುದು ಹೇಗೆ? ಭಾರತ ಸರ್ಕಾರ ಆ ಇಡೀ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಕಾನೂನನ್ನೇ ಮಾಡಿತೆಂದು ಇಟ್ಟುಕೊಳ್ಳೋಣ. ಸ್ವಿಸ್ ಬ್ಯಾಂಕ್ ಆ ಕಾನೂನನ್ನು ಮಾನ್ಯ ಮಾಡಬೇಕಾದದ್ದೇನೂ ಕಡ್ಡಾಯವಲ್ಲ. ಏಕೆಂದರೆ ಅದು ಮತ್ತೊಂದು ಸರ್ವತಂತ್ರ ಸ್ವತಂತ್ರ ಸಾರ್ವಭೌಮಿ ದೇಶ. ಭಾರತವು ಹೆಚ್ಚೆಂದರೆ ಮನವಿ ಮಾಡಿಕೊಳ್ಳಬಹುದಷ್ಟೆ. ಅದೂ ಕೂಡಾ ಇಡೀ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಆರ್ಥಿಕ ಕಾರಣಗಳಿಂದ ಸಾಧ್ಯವೇ ಇಲ್ಲ. ಇಂದು ಇರುವ ಅಂತರರಾಷ್ಟ್ರೀಯ ಕಾನೂನಿನ ಪ್ರಕಾರ ಭಯೋತ್ಪಾದಕ ಕೆಲಸಕ್ಕೆ ಉಪಯುಕ್ತವಾಗುತ್ತಿದೆ ಎಂದು ಕಂಡು ಬಂದರೆ ಮಾತ್ರ ಯಾವುದೇ ಅಕೌಂಟನ್ನು ಮತ್ತದರಲ್ಲಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದೇ ವಿನಃ ಇಡೀ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲು ಬರುವುದಿಲ್ಲ.

ಅದನ್ನು ಹೊರತು ಪಡಿಸಿ ಇತ್ತೀಚೆಗೆ ಸ್ವಿಸ್ ದೇಶವು ಅಮೆರಿಕದ ಒತ್ತಡಕ್ಕೆ ಮಣಿದು ಮೂರನೇ ಪ್ರಪಂಚದ ಬಡದೇಶಗಳ ಸರ್ವಾಧಿಕಾರಿಗಳ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಆ ದೇಶಕ್ಕೆ ಮರಳಿಸುವ ಬಗ್ಗೆ ಒಂದು ಶಾಸನವನ್ನು ಮಾಡಿದೆ. ಆದರೆ ಅದು ಅಮೆರಿಕ ವಿರೋಧಿ ಇರುವ ದೇಶದ ಆಳುವವರ್ಗವನ್ನು ಆರ್ಥಿಕವಾಗಿ ಮಣಿಸಲೆಂದೇ ವಿನಃ ಆರ್ಥಿಕ ವಹಿವಾಟಿನಲ್ಲಿ ಕದ್ದು ಮಾಡಿದ ಹಣವನ್ನು ಮುಟ್ಟುಗೋಲು ಹಾಕೊಳ್ಳಲಲ್ಲ. ಏಕೆಂದರೆ ಅಮೆರಿಕ ಹಾಗೂ ಯೂರೋಪ್ ದೇಶಗಳ ಆಳುವವರ ಹಿಂದೆ ಇರುವವರು ಈ ಬಗೆಯಲ್ಲಿ ಕಪ್ಪು ಹಣ ಮಾಡಿ ಇಂಥಾ ಬ್ಯಾಂಕ್‌ಗಳಲ್ಲಿ ಇಟ್ಟಿರುವ ತಿಮಿಂಗಲಗಳೇ.

ಹೀಗೆ ಭಾರತದಲ್ಲಿ ಕಾನೂನು ಮಾಡಿದ ತಕ್ಷಣ ಸ್ವಿಸ್ ಬ್ಯಾಂಕ್‌ನಲ್ಲಿರುವ ಕಪ್ಪುಹಣ ಭಾರತಕ್ಕೆ ಬರುವುದಿಲ್ಲ. ಅದರ ಬದಲಿಗೆ ಹೆಚ್ಚಾನು ಹೆಚ್ಚು ದೇಶಗಳು ಅಲ್ಲಿರುವ ತಮ್ಮ ದೇಶದವರ ಹಣವು ತೆರಿಗೆ ಕಟ್ಟಿಲ್ಲವಾದರೆ ಅದಕ್ಕೆ ತೆರಿಗೆ ವಿಧಿಸುವ ಪ್ರಸ್ತಾಪ ಮುಂದಿಟ್ಟಿವೆ. ಸ್ವಿಸ್ ದೇಶವನ್ನು ಒಳಗೊಂಡಂತೆ ಸುಮಾರು ದೇಶಗಳು ಅದಕ್ಕೆ ಒಪ್ಪಿಗೆ ನೀಡಿವೆ. ಯುಪಿಎ ಸರ್ಕಾರ ಮುಂದಿಟ್ಟಿರುವ Direct Tax Code ಮಸೂದೆಯಲ್ಲಿ ಭಾರತೀಯರ ವಿದೇಶಿ ಆಸ್ತಿಗಳ ಮೇಲೆ ಶೇ.1ರಷ್ಟು ತೆರಿಗೆ ವಿಧಿಸುವ ಪ್ರಸ್ತಾಪ ಇದೆ. ಇದು ಕಾಂಗ್ರೆಸ್ ಸರ್ಕಾರ ಎಷ್ಟು ಶ್ರೀಮಂತರ ಮತ್ತು ಕಳ್ಳ ಕಾರ್ಪೊರೇಟ್ ಕಂಪನಿಗಳ ಪರವಾಗಿದೆ ಎಂಬುದನ್ನೇನೋ ತೋರಿಸುತ್ತದೆ. ಆದರೆ ಅದೇ ವೇಳೆ

ಯಲ್ಲಿ ಈ ತೆರಿಗೆ ಪ್ರಸ್ತಾಪಕ್ಕೂ ಶ್ರೀಮಾನ್ ರಾಮ್‌ದೇವ್ ಅವರು ವಿರೋಧವಿದ್ದರು ಎಂಬುದು ಅವರ ಸಾಚಾತನವನ್ನು ಎತ್ತಿತೋರಿಸುತ್ತದೆ. ಹೀಗೆ ಒಂದು ವೇಳೆ ಸ್ವಿಸ್ ಬ್ಯಾಂಕಿನಲ್ಲಿರುವ 75 ಲಕ್ಷ ಕೋಟಿ ಕಪ್ಪು ಹಣದಲ್ಲಿ ಅಬ್ಬಬ್ಬಾ ಎಂದರೆ 75,000 ಕೋಟಿ ರೂಪಾಯಿಗಳು ಭಾರತದ ಬೊಕ್ಕಸಕ್ಕೆ ಬರಬಹುದು. ಆದರೆ ಈಗ ಹಣ ಕಾಸು ವಹಿವಾಟು ಎಷ್ಟು ತೀವ್ರಗತಿಯಲ್ಲಿ ನಡೆಯಬಹುದು ಎಂದರೆ ಒಂದೊಮ್ಮೆ ಸ್ವಿಸ್ ಬ್ಯಾಂಕ್ ತಮ್ಮ ಹಣದ ಮೇಲೆ ತೆರಿಗೆ ಹಾಕಲು ಒಪ್ಪುತ್ತಿದೆ ಎಂದು ತಿಳಿದು ಬಂದರೆ ಆ ಹಣಕಾಸಿನ ಒಡೆಯರು ತಮ್ಮ ಹಣವನು ಕ್ಷಣಾರ್ಧದಲ್ಲಿ ಬಹಾಮಾಸ್, ಬರ್ಮುಡಾ, ಸಿಷೆಲಿಸ್ ಇನ್ನಿತರ 70ಕ್ಕೂ ಹೆಚ್ಚು ಸ್ಥಳಗಳಲ್ಲಿನ ತೆರಿಗೆ ಮುಕ್ತ ವಹಿವಾಟಿನ ಪ್ರದೇಶಗಳಿಗೆ ಅದನ್ನು ವರ್ಗಾಯಿಸಬಿಡಬಹುದು.

ಕಪ್ಪುಹಣದ ಬಗೆಗಿನ ಈ ಬಿಳಿ ಸತ್ಯವನ್ನು ಅರ್ಥ ಮಾಡಿಕೊಳ್ಳದೇ ದೇಶಾದ್ಯಂತ ದೇಶದ ಬಡತನದ ಅಸಲೀ ಕಾರಣವನ್ನು ಮರೆಮಾಚಿಸುವಷ್ಟರ ಮಟ್ಟಿಗೆ ಅದರ ಬಗ್ಗೆ ಪ್ರಚಾರಾಂದೋಲನಗಳು ನಡೆಯುತ್ತಿವೆ.

ಈಗಾಗಲೇ ಹೇಳಿದಂತೆ ಈ ಎಲ್ಲಾ ಕಸರತ್ತಿನಿಂದ ಹೆಚ್ಚೆಂದರೆ, ಸ್ವಿಸ್ ದೇಶ ಒಪ್ಪಿದರೆ ನಮ್ಮ ಬೊಕ್ಕಸಕ್ಕೆ 75,000 ಕೋಟಿ ರೂಪಾಯಿಗಳು ತೆರಿಗೆಯ ಮೂಲಕ ಬರಬಹುದು. ಆದರೆ ನಮ ಸರ್ಕಾರವೇ ಪ್ರತಿ ವರ್ಷ ಈ ದೇಶದ ಕಾರ್ಪೊರೇಟ್ ಕಂಪನಿಗಳಿಗೆ ಐದಾರು ಲಕ್ಷ ಕೋಟಿ ಹಣವನ್ನು ತೆರಿಗೆ ರಿಯಾಯತಿ ಹೆಸರಲ್ಲಿ ಕೊಟ್ಟು ತೆರಿಗೆ ವಂಚನೆಯನ್ನು ಶಾಸನಬದ್ಧಗೊಳಿಸುತ್ತಿದೆ. 2009ರ ಬಜೆಟ್ಟಿನಲ್ಲಿ ಕೇವಲ 20 ಕಂಪನಿಗಳಿಗೆ ಮೂರು ಬಗೆಯ ತೆರಿಗೆ ವಿನಾಯತಿ ಮೂಲಕ 5,50,00 ಕೋಟಿ ರೂಗಳ ತೆರಿಗೆ ವಂಚನೆ ಮಾಡಲು ಅವಕಾಶ ಮಾಡಿಕೊಟ್ಟಿತ್ತು ಇದು ವಿದೇಶದಲ್ಲಿರುವ ಆ ಕಪ್ಪು ಹಣಕ್ಕೆ ತೆರಿಗೆ ಹಾಕಿದರೆ ನಮಗೆ ಬರಬಹುದಾದ 75,000 ಕೋಟಿರೂಗಳ 8 ಪಟ್ಟು ಜಾಸ್ತಿ. ಆದರೆ ವಿದೇಶೀ ಕಪ್ಪುಹಣ ತರಲು ನಡೆಸುತ್ತಿರುವ ಹೋರಾಟದ 1/8 ಭಾಗದಷ್ಟು ಹೋರಾಟವೂ ಈ ಶಾಸನಬದ್ಧ ಕಪ್ಪುಹಣ ಸೃಷ್ಟಿಯ ವಿರುದ್ಧ ನಡೆಯುತ್ತಿಲ್ಲ. ಏಕೆಂದರೆ ಈ ನೀತಿಯ ಹಿಂದೆ ಎಲ್ಲಾ ಪಕ್ಷಗಳೂ ಇವೆ. ಇದು ಕಪ್ಪು ಹಣದ ಬಗೆಗಿನ ನಿಜವಾದ ಬಿಳಿಬಿಳಿ ಸತ್ಯ..

ವಿದೇಶದಲ್ಲಿರುವ ಅಮೂರ್ತ ಕಪ್ಪುಹಣದ ಬಗ್ಗೆ ರೋಮಾಂಚಕ ಭ್ರಮೆಗಳನ್ನು ಸೃಷ್ಟಿಸುತ್ತಿರುವ ರಾಮದೇವ್ ಹೋರಾಟ ಈ ರೀತಿ ಪರೋಕ್ಷವಾಗಿ ಕಪ್ಪುಹಣ ಸೃಷ್ಟಿಯಾಗಲು ಅವಕಾಶ ಮಾಡಿಕೊಡುವ ನೀತಿಯ ಬಗ್ಗೆ ಮಾತ್ರ ಮೌನವಾಗಿರುವುದು ಇದಕ್ಕೆ. ಆದ್ದರಿಂದಲೇ ಜನರು ಈ ಅಮೂರ್ತ ಹೋರಾಟಗಳ ಬದಲಿಗೆ ಪ್ರತಿ ವರ್ಷ ಜನರಿಗೆ ಸೇರಬೇಕಾದ ಲಕ್ಷಾಂತರ ಕೋಟಿ ರೂಪಾಯಿ ಹಣವನ್ನು ಹಾಡುಹಗಲೇ ಬಿಳಿ ಮಾಡಿಕೊಳ್ಳುತ್ತಿರುವ ಕಾರ್ಪೊರೇಟ್ ಕಂಪನಿಗಳ ವಿರುದ್ಧ ಮತ್ತು ಅದನ್ನು ಆಗಗೊಳಿಸಲು ಅವಕಾಶ ಮಾಡಿರುವ ಆರ್ಥಿಕ ನೀತಿಗಳ ವಿರುದ್ಧ ಆ ನೀತಿಯ ಬೆನ್ನ ಹಿಂದೆ ನಿಂತಿರುವ ಎಲ್ಲಾ ಪಕ್ಷಗಳ ವಿರುದ್ಧ ಹೋರಾಟವನ್ನು ಮಾಡುವುದೇ ಕಪ್ಪುಹಣವನ್ನು ತಡೆಗಟ್ಟುವ ನಿಜವಾದ ಹೋರಾಟವಾಗುತ್ತದೆ. ಅಲ್ಲವೇ? □

ದಲಿತರ ಚಿಂತೆ ಪೇಜಾವರರಿಗ್ಯಾಕೆ!?

(4ನೇ ಪುಟದಿಂದ)

ಮಾಡೋಕಾಗುತ್ತೆ? ಅಂದಹಾಗೆ ತಮ್ಮನ್ನು ಕೀಳಾಗಿ ಕಾಣುವ ಇಂತಹ ಹೀನಸಂಸ್ಕೃತಿ ನಾಶವಾದರೇನು? ಬಿಟ್ಟರೇನು? ದಲಿತರಿಗಂತು ಅದರ ಉಸಾಬರಿ ಖಂಡಿತ ಬೇಕಿಲ್ಲ."

ಕಡೆಯದಾಗಿ ಪೇಜಾವರರು ಹೇಳಿರುವುದು"ಇದರ ಬದಲು ಅಂದರೆ ಬೌದ್ಧ ದೀಕ್ಷೆಯ ಬದಲು ತಾವು ಎಲ್ಲಾ ದಲಿತರಿಗೆ ಭಕ್ತಿ ದೀಕ್ಷೆ ಅಥವಾ ವೈಷ್ಣವ ದೀಕ್ಷೆಯನ್ನು ಕೊಡಲು ಸಿದ್ಧ. ದೀಕ್ಷೆಯನ್ನು ಪಡೆಯುವವರು ತಮ್ಮನ್ನು ಸಂಪರ್ಕಿಸಬಹುದು" ಎಂದು ಸಂಪರ್ಕಿಸಲು ವಿಳಾಸ ವೊಂದನ್ನು ನೀಡಿದ್ದಾರೆ.

"ಕ್ಷಮಿಸಿ ಶ್ರೀಗಳೇ, ಅಂತಹ ವಿಳಾಸವೊಂದನ್ನು ದಲಿತರು ಇದುವರೆಗೂ ಕೇಳಿಲ್ಲ. ಅಕಸ್ಮಾತ್ ಕೇಳಿದ್ದರೂ ಸಂಪರ್ಕಿಸುವ ಗೋಜಿಗಂತು ಖಂಡಿತ ಬರುವುದಿಲ್ಲ. ಯಾಕೆಂದರೆ ನಮ್ಮನ್ನು ಸಂಪರ್ಕಿಸದಯೇ ಶತಶತಮಾನಗಳ ಹಿಂದೆ ಮಧ್ಯ ಏಷ್ಯಾದಿಂದ ನೀವೇ ನಮ್ಮನ್ನು ಹುಡುಕಿಕೊಂಡು ಬಂದಿದ್ದೀರಿ. ನಮ್ಮನ್ನು ಮೋಸದ ಬಲೆಗೆ ಕೆಡವಿ, ಇಲ್ಲದ ಕಾನೂನುಗಳ ನಮ್ಮ ಮೇಲೆ ಹೇರಿ ಊರ ಹೊರಗೆ ಹಾಕಿದ್ದೀರಿ. ಅಸ್ಪೃಶ್ಯರೆಂದಿದ್ದೀರಿ. ನಾವು "ಅಸ್ಪೃಶ್ಯ"ರಾಗಿಯೇ ಉಳಿಯಲು ಇಚ್ಛಿಸುತ್ತೇವೆ. ಅಂತಹ ಸ್ವತಂತ್ರ identity ಮೂಲಕ ಭಾರತದ ಸಂವಿಧಾನದ ಅಡಿಯಲ್ಲಿ ನಮಗಿಷ್ಟ ಬಂದದ್ದನ್ನು ಮಾಡಲು ನಾವು ಬದ್ಧರಾಗಿದ್ದೇವೆ. ನಮ್ಮ ಮಾರ್ಗದರ್ಶಕರಾಗಿ ಅಂಬೇಡ್ಕರರಿದ್ದಾರೆ. ಗೌತಮಬುದ್ಧ, ಫುಲೆ, ಶಾಹು. ಪೆರಿಯಾರ್ ಇದ್ದಾರೆ. ಅಂತಹ ವ್ಯಕ್ತಿಗಳು ಮತ್ತಷ್ಟು ಹುಟ್ಟಿಬರುತ್ತಲೇ ಇದ್ದಾರೆ. ಅಂತಹ ಮಾರ್ಗದರ್ಶಕ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ದಲಿತರು ತಮ್ಮನ್ನು ತಾವು ಉದ್ಧಾರ ಮಾಡಿಕೊಳ್ಳುವಷ್ಟು ಸಶಕ್ತರಾಗಿದ್ದಾರೆ. ಅವರಿಗೆ ನಿಮ್ಮ ಬಿಟ್ಟಿ ಸಲಹೆಯೂ ಬೇಡ. ಕಾಳಜಿ ಕಾತರವಂತೂ ಬೇಡವೇ ಬೇಡ. ಹಾಗೇನಾದರೂ ನಿಮಗೆ ಯಾರಿಗಾದರೂ ಬುದ್ಧಿ ಹೇಳಬೇಕೆನಿಸಿದರೆ ಮತ್ತೆ ಮತ್ತೆ ಹೇಳುತ್ತೇವೆ ಅದನ್ನು ಸವರ್ಣ ಹಿಂದೂಗಳಿಗೆ ನೀಡಿ. ಅವರನ್ನು ಬದಲಾಯಿಸಿ. ಅವರ ಆಚಾರ ವಿಚಾರ ಸಂಸ್ಕೃತಿ ವೈಖರಿಗಳನ್ನು ತಿದ್ದಿತೀಡಿ. ನಿಮ್ಮ ಅಗತ್ಯ ಅಲ್ಲಿ ತುಂಬಾ ಇದೆ. ಯಾಕೆಂದರೆ ನಿಮ್ಮಂತಹವರು ಕೋಟಿ ಜನ ಬಂದರೂ ಅಲ್ಲಿರುವ ತಪ್ಪುಗಳನ್ನು ನೆಪ್ಪುಗಳನ್ನು ಸರಿಪಡಿಸಲು ಸಾಧ್ಯವಿಲ್ಲ. ಆದ್ದರಿಂದ ನಿಮಗೆ ಅಗಾಧವಾದ ಕೆಲಸ ಇದೆ! ಸವರ್ಣ ಹಿಂದೂಗಳನ್ನು ಸರಿಪಡಿಸುವ ಬೃಹತ್ ಜವಾಬ್ದಾರಿ ನಿಮ್ಮ ಮೇಲಿದೆ! ನಿಮ್ಮ ಸಮಯವನ್ನು ಅಲ್ಲಿ ವಿನಿಯೋಗಿಸಿ. ಏನೋ ಪಾಪ ಅಸ್ಪೃಶ್ಯರು ಗೊತ್ತಿದ್ದೋ ಗೊತ್ತಿಲ್ಲದೆಯೋ ಬೌದ್ಧ ಧರ್ಮ ಸ್ವೀಕಾರ, ರಾಜಕೀಯವಾಗಿ ಜಾಗೃತರಾಗುವುದು, ಸಂಘಟಿತರಾಗುವುದು ಇತ್ಯಾದಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಅವರ ಬಗ್ಗೆ ತಲೆ ಕೆಡಿಸಿಕೊಂಡು ಸವರ್ಣೀಯರನ್ನು ಸರಿಪಡಿಸುವ ನಿಮ್ಮ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಿಕೊಳ್ಳಬೇಡಿ."

"ಪ್ಲೀಸ್, ಶ್ರೀಗಳೇ ದಲಿತರನ್ನು ಅವರ ಪಾಡಿಗೆ ಅವರು ಇರಲು ಬಿಟ್ಟುಬಿಡಿ. ಅವರ ಚಿಂತೆ ನಿಮಗ್ಯಾಕೆ?" □

ಸಂವಾದ



ಲೇಖಕರಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು – ೫೬೦ ೦೯೧

ಸಂಪಾದಕರೊಡನೆ ಸಂವಾದ

ಡಾ. ಚಮರಂ

ಬಾಬಾಸಾಹೇಬರನ್ನು ಶೋಷಿತರು ಅರ್ಥಮಾಡಿಕೊಂಡಿಲ್ಲ..

ಇತರರು ಅಪಾರ್ಥ ಮಾಡಿಕೊಂಡಿದ್ದಾರೆ

ಪ್ರಿಯ ಸಂಪಾದಕರೇ,

ಏನೇ ಆದರೂ ಭಾರತೀಯ ಜಾತಿವ್ಯವಸ್ಥೆ ಸತ್ಯ. ಈ ಜಾತಿಯಾಧಾರಿತ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಸುಮಾರು 20% SC/STಗಳನ್ನು ಹೊರತುಪಡಿಸಿ ಉಳಿದ 80% ಜನರು ಸವರ್ಣಿಯರು. ಅವರಲ್ಲಿ ಬಹುತೇಕರು ಬಾಬಾಸಾಹೇಬರನ್ನು ಇಂದಿಗೂ ಕೇವಲ ಓರ್ವ SC/ST ಜನಾಂಗದ ನಾಯಕರಾಗಿಯೇ ನೋಡುತ್ತಾರೆ. ಬಾಬಾಸಾಹೇಬರೆಂದರೆ SC/STಗಳಿಗೆ ಮೀಸಲಾತಿ ನೀಡಿದ, ಆ ಮೂಲಕ ಇತರ ಜನಾಂಗಗಳಿಗೆ ಅನ್ಯಾಯ ಮಾಡಿದ ವ್ಯಕ್ತಿಯಾಗಿಯೇ ಇತರರಿಗೆ ಗೋಚರಿಸುವುದು ತೀರಾ ವಿಷಾದದ ಸಂಗತಿ.

ಇನ್ನೂ ವಿಷಾದದ ಸಂಗತಿ ಎಂದರೆ SC/STಗಳಲ್ಲಿಯೂ ಅನೇಕರು ಹಾಗೆಯೇ ಭಾವಿಸಿಕೊಂಡಿದ್ದಾರೆ.! ಹಾಗಾಗಿಯೇ ಅಂತಹವರಿಗೂ ಡಾ. ಅಂಬೇಡ್ಕರ್‌ರವರ ಹೆಸರು ಹೇಳುವುದಕ್ಕೆ... ಮನೆಗಳಲ್ಲಿ ಅವರ ಭಾವಚಿತ್ರ ಇಟ್ಟುಕೊಳ್ಳುವುದಕ್ಕೆ ತುಂಬಾ ಹಿಂಜರಿಕೆ. ಈ ತಲೆಮಾರಿನ ಅನೇಕ ಯುವಜನತೆಗೆ ಬಾಬಾಸಾಹೇಬರ ವಿಷಯವೇ ಗೊತ್ತಿಲ್ಲ ಎಂಬುದು SC/STಜನಾಂಗದ ಹಿರಿಯ ತಲೆಮಾರಿನವರು ತಲೆತಗ್ಗಿಸುವ ಸಂಗತಿ.

ಬಾಬಾಸಾಹೇಬರು ಜೀವನ ಪರ್ಯಂತ ಶ್ರಮಿಸಿದ್ದು ಇಡೀ ಭಾರತ ದೇಶದ ಏಕತೆಗಾಗಿ ಮತ್ತು ಅನನ್ಯತೆಗಾಗಿ. ಅವರೊಬ್ಬ ಅಪ್ಪಟ ದೇಶ ಪ್ರೇಮಿ. ಅವರ ಬರಹಗಳು ಸುಮಾರು 20 ಸಂಪುಟಗಳಲ್ಲಿ ಲಭ್ಯವಿವೆ. ಆ ಯಾವ ಬರಹಗಳಲ್ಲೂ ಅಪ್ಪಿ ತಪ್ಪಿಯೂ ಅವರು ದೇಶದ ಐಕ್ಯತೆಗೆ ಧಕ್ಕೆ ತರುವ ಒಂದಕ್ಷರವನ್ನೂ ಬರೆದಿಲ್ಲ. ಜೀವಿತದ ಉದ್ದಕ್ಕೂ ಮಾನವ ಹಕ್ಕುಗಳಿಗಾಗಿ ಅಹಿಂಸಾ ಮಾರ್ಗದಲ್ಲಿ ಚಳವಳಿ ನಡೆಸಿದವರು. ವಿಶ್ವವೇ ಹೆಮ್ಮೆಪಡುವಂತಹ ಘನತೆ ಮತ್ತು ಧೀಮಂತಿಕೆಯಿಂದ ರಾಷ್ಟ್ರ ನಿರ್ಮಾಣದ ಕೆಲಸ ಮಾಡಿದವರು. ನನ್ನ ದೇಶದ ಪ್ರತಿಯೊಬ್ಬರೂ ಸಮಾನತೆ, ಸ್ವಾತಂತ್ರ್ಯ ಹಾಗೂ ಸಹೋದರತೆಯಿಂದ ಬಾಳಬೇಕು ಎಂದು ಬಯಸಿದವರು ಬಾಬಾಸಾಹೇಬರು. ಸ್ವಾವಲಂಬನೆ, ಸ್ವಾಭಿಮಾನದ ಪ್ರಬುದ್ಧ ಭಾರತದ ನಿರ್ಮಾಣಕ್ಕಾಗಿ ವಿಶ್ವವೇ ಮೆಚ್ಚುವ ಅತ್ಯುತ್ತಮ ಸಂವಿಧಾನ ಬರೆದವರು ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್‌ರವರು. ಸಂವಿಧಾನದ ಪ್ರತೀ ಕಲಂಗಳು, ಪ್ರತೀ ಪರಿಚ್ಛೇದಗಳು ಈ ರಾಷ್ಟ್ರದ ಪ್ರತಿಯೊಬ್ಬ ನಾಗರೀಕನ ಹಿತವನ್ನೇ ಎತ್ತಿ ಹಿಡಿಯುತ್ತವೆ.

ಜಾತಿವಾದಿಗಳಿಂದ ದೈಹಿಕ ಹಲ್ಲೆ, ಮಾನಸಿಕ ಹಿಂಸೆ, ಸಾಮಾಜಿಕ ಬಹಿಷ್ಕಾರಗಳು ನಡೆದಾಗ್ಯೂ ಪ್ರತಿಯಾಗಿ ಹಿಂಸೆಗೆ ಇಳಿಯದೆ ಹಿಂಸೆಯನ್ನು ಪ್ರಚೋದಿಸದೆ ಶಾಂತಿ ಮತ್ತು ಸೌಹಾರ್ದತೆಯ ಮಾರ್ಗದಲ್ಲೇ ಪರಿಹಾರ ಹುಡುಕಿದವರು ಅಂಬೇಡ್ಕರವರು. ಅಂದು ಅವರು ಮತಾಂತರದ ಮಾತಾಡಿದಾಗ ಇಸ್ಲಾಂ ಧರ್ಮಿಯರು ಹಾಗೂ ಕ್ರಿಶ್ಚಿಯನ್ ಧರ್ಮಿಯರು ಕೋಟ್ಯಾಂತ ರುಪಾಯಿಗಳ ಧನ ಸಹಾಯ, ಅಸ್ಪೃಶ್ಯರ ಸಾರ್ವಕಾಲಿಕ ಅಭಿವೃದ್ಧಿಯ ಯೋಜನೆ ಹಾಗೂ ಜಾತಿವಾದಿ ಹಿಂದೂಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ತಾಂತ್ರಿಕ ಸಹಾಯ... ಇತ್ಯಾದಿಯಾಗಿ ವಿವಿಧ ರೀತಿಯ ಸಹಕಾರಗಳನ್ನು ಮುಂದಿಡುತ್ತಾರೆ.

ಜಾತಿವಾದಿಗಳಿಂದ ದೈಹಿಕ ಹಲ್ಲೆ, ಮಾನಸಿಕ ಹಿಂಸೆ, ಸಾಮಾಜಿಕ ಬಹಿಷ್ಕಾರಗಳು ನಡೆದಾಗ್ಯೂ ಪ್ರತಿಯಾಗಿ ಹಿಂಸೆಗೆ ಇಳಿಯದೆ ಹಿಂಸೆಯನ್ನು ಪ್ರಚೋದಿಸದೆ ಶಾಂತಿ ಮತ್ತು ಸೌಹಾರ್ದತೆಯ ಮಾರ್ಗದಲ್ಲೇ ಪರಿಹಾರ ಹುಡುಕಿದವರು ಅಂಬೇಡ್ಕರ್‌ರವರು. ಅಂದು ಅವರು ಮತಾಂತರದ ಮಾತಾಡಿದಾಗ ಇಸ್ಲಾಂ ಧರ್ಮಿಯರು ಹಾಗೂ ಕ್ರಿಶ್ಚಿಯನ್ ಧರ್ಮಿಯರು ಕೋಟ್ಯಾಂತರ ರುಪಾಯಿಗಳ ಧನಸಹಾಯ, ಅಸ್ಪೃಶ್ಯರ ಸಾರ್ವಕಾಲಿಕ ಅಭಿವೃದ್ಧಿಯ ಯೋಜನೆ ಹಾಗೂ ಜಾತಿ ವಾದಿ ಹಿಂದೂಗಳ ವಿರುದ್ಧ ಸೇಡು ತೀರಿಸಿಕೊಳ್ಳಲು ತಾಂತ್ರಿಕ ಸಹಾಯ... ಇತ್ಯಾದಿಯಾಗಿ ವಿವಿಧ ರೀತಿಯ ಸಹಕಾರಗಳನ್ನು ಮುಂದಿಡುತ್ತಾರೆ. ಅಂತಹ ಸಂದರ್ಭದಲ್ಲಿ ಬಾಬಾಸಾಹೇಬರು ರಾಷ್ಟ್ರದ ಹಿತವನ್ನು ಕಡೆಗಣಿಸಿ ತನ್ನ ಜನರ ಹಿತಕ್ಕೆ ಮನಸ್ಸು ಮಾಡಿದ್ದರೆ, ಜಾತಿವಾದಿ ಹಿಂದೂಗಳ ವಿರುದ್ಧ ಅಂದೇ ಅಸ್ಪೃಶ್ಯರು ಇತರ ಧರ್ಮಿಯರ ಸಹಾಯ ಪಡೆದು ದೊಡ್ಡದೊಂದು ಪ್ರತಿಕಾರದ ದಾಳಿ ಮಾಡಿ, ದೇಶದಲ್ಲಿ ರಕ್ತಕ್ರಾಂತಿ ಮಾಡುವ ಮೂಲಕ ಜಾತಿ ವಾದಕ್ಕೆ ಒಂದೇ ಕ್ಷಣದಲ್ಲಿ ಮಂಗಳ ಹಾಡಿರುತ್ತಿದ್ದರು. ಆದರೆ ಬಾಬಾಸಾಹೇಬರು ಆ ಮಾರ್ಗಕ್ಕೆ ತನ್ನ ಜನರನ್ನು ಪ್ರಚೋದಿಸಲಿಲ್ಲ, ಅನ್ಯ ಧರ್ಮಿಯರ ಸಹಕಾರಗಳನ್ನು ಒಪ್ಪಿಕೊಳ್ಳಲೂ ಇಲ್ಲ. ಬದಲಿಗೆ ಶಾಂತಿಧೂತ ವಿಶ್ವ ಗುರು ಬುದ್ಧನ ಅನುಯಾಯಿಯಾಗಿ ಈ ದೇಶವನ್ನು ಹಿಂಸೆಯಿಂದ ಕಾಪಾಡಿದರು. ಈ ಕಾರಣಕ್ಕೆ ಮೇಲು ಜಾತಿ ಹಿಂದೂಗಳು ಬಾಬಾಸಾಹೇಬರಿಗೆ ಹೆಚ್ಚು ಚಿರ ಋಣಿಯಾಗಿರಬೇಕು.

ಕೇವಲ ಪದವೀಧರರಿಗೆ ತೆರಿಗೆದಾರರಿಗೆ, ಹಾಗೂ ದೊಡ್ಡ ಹಿಡುವಳಿದಾರರಿಗೆ ಮಾತ್ರ ಇದ್ದ ಓಟಿನ ಹಕ್ಕಿನ ವಿರುದ್ಧ ಬ್ರಿಟೀಷರೊಡನೆ ಹೊರಾಡಿ ಸರ್ವರಿಗೂ ವಯಸ್ಕಮತದಾನದ ಹಕ್ಕು ಗಳಿಸಿಕೊಟ್ಟರು. ಪರಿಣಾಮವಾಗಿ ಎಲ್ಲಾ ಜಾತಿಯಿಂದಲೂ ಎಂಎಲ್‌ಎ, ಎಂಪಿ, ಮಂತ್ರಿಗಳು ಸೃಷ್ಟಿಯಾದರು. ಹಿಂದುಳಿದ ವರ್ಗಗಳಿಗಾಗಿ ಪರಿಚ್ಛೇದ 340ರಲ್ಲಿ ಮೀಸಲಾತಿ ಕಲ್ಪಿಸುವಂತೆ ಸಂವಿಧಾನದಲ್ಲಿ ಅಳವಡಿಸಿದ್ದರ ಪ್ರತಿಫಲವಾಗಿ ಇತರ ಹಿಂದುಳಿದ ಜನರು ವಿವಿಧ ಸರ್ಕಾರಿ ಹುದ್ದೆ ಅಲಂಕರಿಸುವುದಕ್ಕೆ ಸಾಧ್ಯವಾಯಿತು.

ಕಾರ್ಮಿಕರಿಗಾಗಿ... ಮಹಿಳೆಯರಿಗಾಗಿ ವಿಶೇಷ ಸವಲತ್ತುಗಳನ್ನು ಬ್ರಿಟೀಷ್ ಸರ್ಕಾರದಲ್ಲೇ ಕಾನೂನಾಗಿಸಿದ ಮಹಾಮಾನವತವಾದಿ ಡಾ. ಅಂಬೇಡ್ಕರ್. ಅದರ ಪರಿಣಾಮವಾಗಿ ಕಾರ್ಮಿಕರು ಇಂದಿನ ಉತ್ತಮ ಜೀವನ ನಡೆಸಲು ಸಾಧ್ಯವಾಗಿದೆ. ಮಹಿಳೆಯರೂ ಸಹ ಎಲ್ಲ ಕ್ಷೇತ್ರಗಳಲ್ಲೂ ಪುರುಷರಿಗೆ ಸರಿಸಮನಾಗಿ ಭಾಗವಹಿಸಲು ಸಾಧ್ಯವಾಗಿದೆ.

ಇದೆಲ್ಲವೂ ಬಾಬಾಸಾಹೇಬರ ಸಮಗ್ರರಾಷ್ಟ್ರ ನಿರ್ಮಾಣದ ಚಿಂತನೆಗಳಲ್ಲವೇನು? ಈ ಯಾವುದೇ ಚಿಂತನೆಯಲ್ಲೂ ಅವರು ಒಂದು ಜಾತಿ ಪರವಾಗಿಯೂ ಮತ್ತೊಂದರ ವಿರೋಧವಾಗಿಯೂ ಇಲ್ಲ. ಜಾತಿವಾದವು ರಾಷ್ಟ್ರದ ಹಿತಕ್ಕೆ ಧಕ್ಕೆ ತರುತ್ತದೆ ಮತ್ತು ದೇಶದ ಅಖಂಡತೆಯನ್ನು ದುರ್ಬಲಗೊಳಿಸುತ್ತದೆ. ಎಂಬುದು ಅವರ ವಾದವಾಗಿತ್ತು. ಹೀಗೆ ದುರ್ಬಲವಾದರೆ ಭಾರತಮಾತೆ ಪರಕೀಯರ ಪಾಲಾಗುವ ಆತಂಕದಿಂದ ಎಲ್ಲರಲ್ಲೂ ಜಾತಿಭೇದ ತೊಲಗಬೇಕೆಂದು ಬಯಸಿದರು. ಎಂತಹ ರಾಷ್ಟ್ರಪ್ರೇಮಿ ನೋಡಿ ಬಾಬಾಸಾಹೇಬರು. ಅವರ ಪ್ರತೀ ಚಿಂತನೆಯೂ ಹೀಗೆಯೇ ರಾಷ್ಟ್ರದ ಹಿತವನ್ನೇ ಬಯಸುತ್ತದೆ. ಸರ್ವರ ಏಳಿಗೆಗಾಗಿಯೇ ಅವರ ಮನವು ಸದಾ ಮಿಡಿಯುತ್ತಿತ್ತು ಎಂಬುದಕ್ಕೆ ಅವರೇ ಸ್ವತಃ ಬರೆದಿರುವ ಅನೇಕ ಸಂಪುಟಗಳಲ್ಲಿ ಕಾಣಬಹುದು. ದೇಶದ ಪ್ರಜ್ಞಾವಂತರು ಇವುಗಳನ್ನು ಅಧ್ಯಯನ ಮಾಡಬೇಕು ಮತ್ತು ಓರ್ವ ಅಪೂರ್ವ ದೇಶಪ್ರೇಮಿಯನ್ನು ಗುರ್ತಿಸಿ ಗೌರವಿಸಬೇಕು.

ವಿಶೇಷವಾಗಿ SC/ST ವಿದ್ಯಾವಂತರು, ಬುದ್ಧಿಜೀವಿಗಳು, ಪದವೀಧರರು, ಯುವಕರು ಅವರ ಜನ್ಮದಿನಕ್ಕೊಂದು, ಪರಿನಿಬ್ಬಾಣಕ್ಕೊಂದು ಅದ್ದೂರಿ ಕಾರ್ಯಕ್ರಮ ಏರ್ಪಡಿಸಿ ಒಂದಷ್ಟು ಜನರಿಂದ ಭಾಷಣ ಮಾಡಿಸಿ ರಸಸಂಜೆ ಮಾಡಿಸಿ ಬಿಟ್ಟರೆ ಸಾಕಾಗದು. ಅದು ಅವರಿಗೆ

(11ನೇ ಪುಟಕ್ಕೆ)

ಅಸಂಘಟಿತ ಕಾರ್ಮಿಕರಿಂದ ಪ್ರಜಾತಂತ್ರವಾದಿಗಳಲ್ಲಿ ಒಂದು ಮನವಿ

ಪ್ರಿಯ ಸಂಪಾದಕರೇ,

'ನಾವು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮೂಟೆ ಹೊರುವ, ಬೀದಿ ಕಸ ಗುಡಿಸುವ, ಗಾರೆ ಕೆಲಸ ಮಾಡುವ ಕೂಲಿ ಕಾರ್ಮಿಕರು ಈ ದೇಶದಲ್ಲಿ ದುಡಿಯುವ ಜನರೇ ಸಂಪತ್ತನ್ನು ಸೃಷ್ಟಿಸುತ್ತಾರೆ, ಅವರೇ ಒಂದು ನಾಡಿನ ಚಾಲಕ ಶಕ್ತಿ ಎಂದೆಲ್ಲಾ ಹೇಳುವುದನ್ನು ನಾವು ಕೇಳಿದ್ದೇವೆ. ನಮ್ಮ ಪರವಾಗಿ ಕಾನೂನುಗಳಿವೆ, ಸಂವಿಧಾನದಲ್ಲಿ ಕಾರ್ಮಿಕರಿಗೆ ಕೆಲವು ಹಕ್ಕುಗಳನ್ನು ನೀಡಲಾಗಿದೆ ಎಂದೂ ಹೇಳಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಸರ್ಕಾರಿ ಅಧಿಕಾರಿಗಳು ಮತ್ತು ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ನಡೆಯುವ ಕಾರ್ಯಕ್ರಮಗಳಲ್ಲಿ ಸ್ವತಃ ನ್ಯಾಯಾಧೀಶರುಗಳೇ ನಮ್ಮ ಪರವಾಗಿ ಹಲವು ಕಾನೂನುಗಳಿವೆ ಎಂದು ತಿಳಿಸಿಕೊಟ್ಟಿದ್ದಾರೆ. ಆದರೆ ಕೆಲವೇ ಕೆಲವು ಕನಿಷ್ಠ ಹಕ್ಕುಗಳನ್ನು ನೀಡಬೇಕೆಂದು ನಾವು ಕೇಳಿದಾಗ, ನಮ್ಮ ಪರವಾಗಿ ಇದೆ ಎಂದು ಹೇಳಲಾದ ಯಾವ ಕಾನೂನುಗಳೂ ಸಹಾಯಕ್ಕೆ ಬರಲಿಲ್ಲ. ಆ ಕಾನೂನುಗಳನ್ನು ಜಾರಿ ಮಾಡಿಸಿ ಎಂದು ಕೇಳಲು ನಾವು ಅಧಿಕಾರಿಯಿಂದ ಅಧಿಕಾರಿಯ ಬಾಗಿಲಿಗೆ ಹತ್ತಾರು ಬಾರಿ ಸುತ್ತಿದೆವು, ಕಾರ್ಮಿಕ ಇಲಾಖೆಯ ಸಹಾಯ ಕೇಳಿದೆವು. ಅದೆಲ್ಲದರ ಪರಿಣಾಮವಾಗಿ ನಮ್ಮ ಕೆಲಸ ಕಳೆದುಕೊಂಡೆವು.

'ಈಗ ನಮಗೆ ಅನ್ನಿಸುತ್ತದೆ; ನಾವು ಸುಮ್ಮನೇ ಬಾಯಿ ಮುಚ್ಚಿಕೊಂಡು ನಮಗೆ ಎಷ್ಟು ಕೂಲಿ ಸಿಗುತ್ತದೋ ಅಷ್ಟನ್ನು ಪಡೆದುಕೊಂಡಿದ್ದರೆ ಒಳ್ಳೆಯದಿತ್ತು. ಮೇಲಿನ ಅಧಿಕಾರಿಗಳು, ಮಾಲೀಕರು ನಮ್ಮನ್ನು ಅವಹೇಳನ ಮಾಡಿ ಬಯ್ದರೆ, ಹೀನಾಯವಾಗಿ ನಡೆಸಿಕೊಂಡರೆ ಏನೂ ಆಗಿಲ್ಲವೆಂಬಂತೆ ಸುಮ್ಮನಿರಬೇಕಿತ್ತು. ಅಧಿಕಾರಿಗಳು, ನ್ಯಾಯಾಧೀಶರು, ಸಂಘಟನೆಯ ಮುಖಂಡರು ಹೇಳಿದ್ದನ್ನು ಕೇಳಿಕೊಂಡು 'ಕನಿಷ್ಠ ವೇತನ ಕೊಡಿ, ಕಾರ್ಮಿಕ ಕಾನೂನುಗಳನ್ನು ಜಾರಿ ಮಾಡಿ' ಎಂದೆಲ್ಲಾ ಕೇಳಿದ್ದೇ ತಪ್ಪು ಅನಿಸುತ್ತದೆ. ನಮ್ಮ ಕಣ್ಣೆದುರಿಗೇ ನಮ್ಮ ಮೇಲಿರುವ ಅಧಿಕಾರಿಗಳ ಸಂಬಳ 2–3 ಪಟ್ಟು ಹೆಚ್ಚಾದರೂ, ಪ್ರತೀ 2–3 ವರ್ಷಕ್ಕೊಮ್ಮೆ ಸರ್ಕಾರಿ ನೌಕರರ ಸಂಬಳ ಸಾವಿರ ಸಾವಿರಗಳಲ್ಲಿ ಏರಿದರೂ, ಕೆಲವು ರೀತಿಯ ಕೆಲಸ ಮಾಡುತ್ತಿರುವವರ ಸಂಬಳವು ಹತ್ತಿರ ಹತ್ತಿರ 1 ಲಕ್ಷ ರೂ. ಇದ್ದರೂ ಅದನ್ನು ನೋಡಿ ನಾವು ನಮಗೂ ಸಂಬಳ ಹೆಚ್ಚಾಗಲಿ ಎಂದು ಬಯಸಬಾರದು. ಇದೆಲ್ಲಾ ನಮ್ಮ ವಿಧಿ ಎಂದು ತಿಳಿದು ನಮ್ಮ ಪಾಡಿಗೆ ನಾವು ಇರಬೇಕಿತ್ತು. 7–8 ವರ್ಷ ಆದರೂ ನಮ್ಮ ಕೂಲಿಯಲ್ಲಿ ಏರಿಕೆಯಾಗಿಲ್ಲ ಎಂಬ ತಕರಾರು ತೆಗೆಯಲು ನಮಗೆ ಹಕ್ಕಿಲ್ಲ. ನಮ್ಮ ಮ್ಯಾನೇಜರ್‌ಗಳು, ಟೆಂಡರ್‌ದಾರರು, ಮೇಸ್ತ್ರಿಗಳು, ಮಾಲೀಕರ ಮುಂದೆ ನಿಂತು ಮಾತನಾಡುವುದು ತಪ್ಪು. ಅವರು ಹೀನಾಮಾನಾ ಬಯ್ದರೆ, ಅಮಾನವೀಯವಾಗಿ ನಡೆಸಿಕೊಂಡರೆ ಅದೇ ಸರಿ.'

ಈ ಮಾತುಗಳಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಇಂದು ಈ ನಾಡಿನ ಅಸಂಘಟಿತ ಕಾರ್ಮಿಕರ ಸಂಕಷ್ಟವು ಮೇಲೆ ಹೇಳಲಾಗಿರುವುದಕ್ಕಿಂತ ಭೀಕರವಾಗಿದೆ. ಉದಾಹರಣೆಗೆ ಇಂದು ಸರ್ಕಾರಿ ಆದೇಶದ ಪ್ರಕಾರ ಬೆಂಗಳೂರು ಮಹಾನಗರಪಾಲಿಕೆಯ ಗುತ್ತಿಗೆ ಪೌರಕಾರ್ಮಿಕರಿಗೆ ನೀಡಬೇಕಾದ ಸಂಬಳ ತಿಂಗಳಿಗೆ 6,000 ರೂ. ಬಹುಪಾಲು ಎಲ್ಲರಿಗೂ ನೀಡುತ್ತಿರುವುದು 2,000 ರೂ. ಅಷ್ಟೆ. ಹೋರಾಟಮಾಡಿ ಗಟ್ಟಿಯಾಗಿ ನಿಂತಿರುವ ಕೆಲವರಿಗೆ 2,5000 ರೂ. ಇದ ರಾಚೆಗೆ ಚಳವಳಿ ಎಂದೆಲ್ಲಾ ಮಾಡಲು ಹೊರಟರೆ ಕೆಲಸ ಹೋಗುತ್ತದೆ ಅಷ್ಟೇ.

ಹೀಗೊಂದು ಪತ್ರ

ಉದಾಹರಣೆಗೆ ಪಾಂಡವಪುರದ ಲೋಡಿಂಗ್ ಕಾರ್ಮಿಕರ (ಹಮಾಲರು) ವಿಚಾರ ನಿಮಗೆ ತಿಳಿಸುತ್ತೇವೆ. ಅಲ್ಲಿನ ಟಿಎಪಿಸಿಎಂಎಸ್ (ಇದು ತಾಲೂಕು ಮಟ್ಟದ ಒಂದು ಸಹಕಾರಿ ಸಂಸ್ಥೆ) ಸಂಸ್ಥೆಯ ಕಡೆಯಿಂದಲೇ ಸರ್ಕಾರಿ ಅಕ್ಕಿಯು ಪಡಿತರ ವಿತರಣಾ ಮಳಿಗೆಗಳಿಗೆ ಸರಬರಾಜು ಆಗುತ್ತದೆ. ಅಲ್ಲಿ ಲೋಡಿಂಗ್, ಅನ್‌ಲೋಡಿಂಗ್ ಮತ್ತು ಸಾಗಾಣಿಕ ಟೆಂಡರ್ ಹೊಂದಿರುವವರೂ ಅವರೇ ಆಗಿದ್ದಾರೆ. ಅಲ್ಲಿ 20 ಜನ ಹಮಾಲರು ಕೆಲಸ ಮಾಡುತ್ತಾರೆ. ಕೆಲವರಂತೂ ಸುಮಾರು 25 ವರ್ಷಗಳಿಂದ ಕೆಲಸ ಮಾಡುತ್ತಾ ಇದ್ದಾರೆ. ಅವರಿಗೆ ಇಎಸ್‌ಐ, ಪಿಎಫ್ ಇತ್ಯಾದಿ ಯಾವ ಸೌಲಭ್ಯಗಳೂ ಇಲ್ಲ. ಜಿಲ್ಲೆಯ ಇತರ ಎಲ್ಲಾ ಕಡೆ ಒಂದು ಟನ್ ಅಕ್ಕಿ ಅನ್‌ಲೋಡ್ ಮಾಡಲು 30 ರೂ. ಇದ್ದರೆ, ಇಲ್ಲಿ 15 ರೂ. ಇತ್ತು. ಈಗ ರಾಜ್ಯದ ಎಲ್ಲೆಡೆ ಲೋಡಿಂಗ್–ಅನ್‌ಲೋಡಿಂಗ್‌ಗೆ (ಗೋಡೌನ್‌ನ ಲಾಟ್‌ನಿಂದ ಲಾರಿಗೆ ಹಾಕಿಕೊಂಡು, ಅಲ್ಲಿಂದ ಹಳ್ಳಿಯ ಪಡಿತರ ವಿತರಣಾ ಮಳಿಗೆಗೆ ಹೋಗಿ ಅನ್‌ಲೋಡಿ ಮಾಡಿಬರಲು) ಕ್ವಿಂಟಾಲ್ ಒಂದಕ್ಕೆ 6 ರೂ. ಎಂದು ಸರ್ಕಾರವೇ ನಿಗದಿ ಮಾಡಿದೆ. ಇದು ಬಹಳ ಕಡಿಮೆ ಎಂದು ಚರ್ಚೆ ನಡೆದು, 7 ರೂ. 8 ರೂ. ನಿಗದಿಯಾಗಿರುವ ಹಲವಾರು ಉದಾಹರಣೆಗಳಿವೆ.

ಕಾರ್ಮಿಕರು, ತಮ್ಮ ಕಾರ್ಮಿಕ ರೊಡನೆ ಸೇರಿ ಪ್ರತಿಭಟನೆ ಮಾಡಿದರು. ಅದರ ಫಲ ಏನೆಂದರೆ ಅವರ ಕೆಲಸ ಹೋಯಿತು. ಅದಕ್ಕೆ ನೆಪವಾಗಿ ಬಳಸಿಕೊಂಡಿದ್ದು, ಪ್ರತಿಭಟನೆ ಸಂದರ್ಭದಲ್ಲಿ ಧಿಕ್ಕಾರ ಕೂಗಿದಿರಿ, ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ತೊಂದರೆ ಕೊಟ್ಟಿರಿ ಇತ್ಯಾದಿ ಕಾರಣಗಳು.

ಆದರೆ ಪಾಂಡವಪುರ ಟಿಎಪಿಸಿಎಂಎಸ್ ಅಲ್ಲಿನ ಹಮಾಲರಿಗೆ ಸರ್ಕಾರ ನಿಗದಿ ಪಡಿಸಿದ 6 ರೂ. ಅನ್ನೂ ಸಹಾ ಕೊಡಲು ನಿರಾಕರಿಸಿತು. ಕನಿಷ್ಠ 6 ರೂ. ಕೊಡಲೇಬೇಕೆಂಬುದು ಮಂಡ್ಯ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಭೆಯ ನಿರ್ಣಯವಾದುದರಿಂದ, ಕಾರ್ಮಿಕರು ಆಹಾರ ಇಲಾಖೆ ಉಪನಿರ್ದೇಶಕರನ್ನು, ತಹಸೀಲ್ದಾರ್‌ರನ್ನು ಸಂಪರ್ಕಿಸಿದರು. ಅವರು 6 ರೂ. ಕೊಡಿಸುವ ಆಶ್ವಾಸನೆ ನೀಡಿದರು. ಆದರೆ ಅದು ಜಾರಿಯಾಗಲಿಲ್ಲ, ಬದಲಿಗೆ ಕಾರ್ಮಿಕರಿಗೆ ಧಮಕಿ ಹಾಕಲಾಯಿತು.

ಅನಿವಾರ್ಯವಾಗಿ ಕಾರ್ಮಿಕರು, ತಮ್ಮ ಕಾರ್ಮಿಕರೊಡನೆ ಸೇರಿ ಪ್ರತಿಭಟನೆ ಮಾಡಿದರು. ಅದರ ಫಲ ಏನೆಂದರೆ ಅವರ ಕೆಲಸ ಹೋಯಿತು. ಅದಕ್ಕೆ ನೆಪವಾಗಿ ಬಳಸಿಕೊಂಡಿದ್ದು, ಪ್ರತಿಭಟನೆ ಸಂದರ್ಭದಲ್ಲಿ ಧಿಕ್ಕಾರ ಕೂಗಿದಿರಿ, ಕೆಲಸ ಮಾಡುತ್ತಿದ್ದ ಕಾರ್ಮಿಕರಿಗೆ ತೊಂದರೆ ಕೊಟ್ಟಿರಿ ಇತ್ಯಾದಿ ಕಾರಣಗಳು. ಜಿಲ್ಲಾಧಿಕಾರಿಯವರು ಕೇಳಿದರೆ, ನಮ್ಮಲ್ಲಿ ಕೆಲಸ ಮಾಡುವವರಿಗೆ ನಾವು 6 ರೂ. ಕೊಡುತ್ತಿದ್ದೇವೆ ಎಂದು ಟಿಎಪಿಸಿಎಂಎಸ್‌ನವರು ಹೇಳುತ್ತಿದ್ದಾರೆ. ಇಂತಹುದೇ ಉದಾಹರಣೆಗಳು ನೂರಾರಲ್ಲ, ಸಾವಿರಾರು ನಡೆಯುತ್ತವೆ. ಸರ್ಕಾರಿ ವ್ಯವಸ್ಥೆಯ ಆಹಾರ ಸರಬರಾಜು ಎಲ್ಲಿಯವರೆಗೆ ಕನಿಷ್ಠ ವೇತನ ಕೇಳುವುದಿಲ್ಲ, ಕನಿಷ್ಠ ಸೌಲಭ್ಯ ಕೇಳುವುದಿಲ್ಲ, ಕಾನೂನನ್ನು ಜಾರಿ ಮಾಡಿ–ಗೌರವದಿಂದ ನಡೆಸಿಕೊಳ್ಳಿ ಎಂದು ಕೇಳುವುದಿಲ್ಲ ಅಲ್ಲಿಯವರೆಗೆ ಕಾರ್ಮಿಕರು ಕೆಲಸ ಮಾಡಬಹುದು. ಯಾವಾಗ ಅದನ್ನು ಕೇಳುತ್ತಾರೋ ಆಗ ಕೆಲಸದಿಂದ ಕಿತ್ತು ಹಾಕುತ್ತಾರೆ. ಕಾನೂನು ಜಾರಿ ಮಾಡಬೇಕಾದ ಅಧಿಕಾರಿಗಳ ಮುಖಾಂತರ ಹೋದರೆ ಆಗ 'ಇವರು ದಾಂಧಲೆ ಮಾಡಿದರು, ಹಾಗಾಗಿ ಇವರನ್ನು ತೆಗೆದುಹಾಕಿದ್ದೇವೆ, ಈಗ ಹಾಲಿ ಎಲ್ಲವನ್ನೂ ಕಾನೂನಿನ ಪ್ರಕಾರವೇ ಮಾಡುತ್ತಿದ್ದೇವೆ' ಎನ್ನುತ್ತಾರೆ. ಅಲ್ಲಿಗೆ ಮುಗಿಯುತ್ತದೆ.

ಇನ್ನೊಂದು ಉದಾಹರಣೆ ಹೇಳಬೇಕೆಂದರೆ, ವಾರ್ಷಿಕ ಹತ್ತಾರು ಸಾವಿರ ಕೋಟಿ ವ್ಯವಹಾರ ನಡೆಯುವ ಕರ್ನಾಟಕ ರಾಜ್ಯ ಪಾನೀಯ ನಿಗಮದ್ದು (ಕೆಎಸ್‌ಬಿಸಿಎಲ್). ಈ ನಿಗಮಕ್ಕೆ ಸೇರಿದ 53 ಡಿಪೋಗಳಲ್ಲಿ 1.500 ಸಾವಿರದಷ್ಟು ಹಮಾಲರು ದುಡಿಯುತ್ತಾರೆ. ಈ ಹಮಾಲರು, ಯಾರ ನೌಕರರು ಎಂಬುದರ ಕುರಿತು ಯಾರಿಗೂ ಗೊತ್ತಿಲ್ಲ. ಅವರಿಗೆ ಕಳೆದ 8 ವರ್ಷಗಳಿಂದಲೂ ಲೋಡಿಂಗ್ ಅನ್‌ಲೋಡಿಂಗ್ ಕೆಲಸಮಾಡಲು ಕೇಸ್ ವೊಂದಕ್ಕೆ 1 ರೂ. ನೀಡಲಾಗುತ್ತಿತ್ತು. ಕಳೆದವರ್ಷ ಹೋರಾಟಮಾಡಿ ಅದನ್ನು 1.25ರಿಂದ 1.50 ರೂ.ವರೆಗೆ ಹೆಚ್ಚಿಸಿಕೊಂಡರು.

ಈಗ ಕೂಲಿ ನೀಡುವ ಡಿಸ್ಟಿಲರಿಗಳು ಮತ್ತು ಬಾರ್–ವೈನ್‌ಸ್ಟೋರ್ ಮಾಲೀಕರು ರಾಜ್ಯ ಮಟ್ಟದಲ್ಲಿ ಸಭೆ ಸೇರಿ ಇದನ್ನು 1 ರೂ.ಗೆ ಇಳಿಸಬೇಕೆಂದು ತೀರ್ಮಾನಿಸಿದ್ದಾರೆ. ಇದನ್ನು ಪ್ರಶ್ನಿಸಿದರೆ ಕೆಲಸ ಹೋಗುತ್ತದೆ. ಈ ಲೋಡಿಂಗ್ ಕಾರ್ಮಿಕರನ್ನು ದುಡಿಸಿಕೊಳ್ಳುವ ಕೆಎಸ್‌ಬಿಸಿಎಲ್ ಈ ವಿಚಾರದಲ್ಲಿ ತಲೆಯನ್ನೇ ಹಾಕುತ್ತಿಲ್ಲ. ಒಂದು

ವೇಳೆ ಹಾಕಿದರೂ ಅದು ಕಾರ್ಮಿಕರ ಪರವಾಗಿರುವುದಿಲ್ಲ. ಕೂಲಿ ಹೆಚ್ಚಾದ ಮೇಲೆ ಈ ಕಾರ್ಮಿಕರು ತಿಂಗಳಿಗೆ ಹತ್ತಿರ ಹತ್ತಿರ 10 ಸಾವಿರ ಪಡೆಯುತ್ತಿದ್ದರು ಎಂಬುದು, ದಿನಕ್ಕೆ 10 ಸಾವಿರ ಸಂಪಾದಿಸುವ ವೈನ್‌ಸ್ಟೋರ್ ಮಾಲೀಕರಿಗೆ ಮತ್ತು ದಿನಕ್ಕೆ ಲಕ್ಷಾಂತರ ರೂ. ಸಂಪಾದಿಸುವ ಡಿಸ್ಟಿಲರಿ ಮಾಲೀಕರಿಗೆ ಕಣ್ಣು ಕೆಂಪಾಗಿಸಿದೆ. ಈ 10 ಸಾವಿರ ದುಡಿಯಲು ಅವರುಗಳು ಬೆಳಿಗ್ಗೆ 9ರಿಂದ ಸಂಜೆ 6ರವರೆಗೆ-ಕೆಲವೊಮ್ಮೆ ರಾತ್ರಿ 9ರವರೆಗೆ-ಸತತ ದುಡಿಯಬೇಕು. ಇವರಾರೂ 10 ವರ್ಷಕ್ಕಿಂತ ಹೆಚ್ಚುಕಾಲ ದುಡಿಮೆ ಮಾಡಲು ಸಾಧ್ಯವಾಗದ ರೀತಿ ನರನಾಡಿಗಳು ಸವೆದು ಹೋಗುತ್ತವೆ ಎಂಬುದು ಅವರಲ್ಲಿ ಕರುಣೆ ಉಕ್ಕಿಸಿಲ್ಲ.

ಅದು ಅವರ ಕಥೆ ಬಿಡಿ. ಆದರೆ ಈ ರಾಜ್ಯದಲ್ಲಿನ ಪ್ರಜಾತಂತ್ರವಾದಿಗಳಿಗೂ ಕಾಣುತ್ತಿಲ್ಲವಲ್ಲಾ? ಯಾರೂ ನಮ್ಮ ಬಗ್ಗೆ ಮಾತಾಡುವುದಿಲ್ಲವಲ್ಲಾ ಎಂಬ ಅಳಲು ಈ ಕಾರ್ಮಿಕರದ್ದು.

ಲೋಡಿಂಗ್ ಕಾರ್ಮಿಕರು ಈ ರಾಜ್ಯದಲ್ಲಿ ಸುಮಾರು 2.50 ಲಕ್ಷ ಇದ್ದಾರೆ. ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಪೌರಕಾರ್ಮಿಕರು ಸುಮಾರು 1.25 ಲಕ್ಷ ಇದ್ದಾರೆ. ಕಟ್ಟಡ ನಿರ್ಮಾಣ ಕಾಮಗಾರಿಯಲ್ಲಿ ತೊಡಗಿಕೊಂಡಿರುವವರು ಸುಮಾರು 10 ಲಕ್ಷಕ್ಕೂ ಹೆಚ್ಚು ಜನ ಕಾರ್ಮಿಕರಿದ್ದಾರೆ. ಇಂತಹ ಇನ್ನೂ ಹಲವು ಕ್ಷೇತ್ರಗಳ ಕಾರ್ಮಿಕರೆಲ್ಲರ ಪಾಡೂ ಅದೇ ಆಗಿದೆ. ಕಟ್ಟಡ ನಿರ್ಮಾಣದಲ್ಲಿ ತೊಡಗಿರುವ ಕಾರ್ಮಿಕರಿಗೆ ಅದ್ಭುತವಾದ ಕಲ್ಯಾಣ ಮಂಡಳಿ ರಚನೆಯಾಗಿದೆ, ಕಲ್ಯಾಣ ಮಂಡಳಿಯಲ್ಲಿ ಸುಮಾರು 800 ಕೋಟಿ ಇದೆ ಎಂದು ಸರ್ಕಾರ ಹೇಳುತ್ತದೆ. ಅದರಲ್ಲಿ ಕಾರ್ಮಿಕರಿಗೆ ಇದುವರೆಗೆ ತಲುಪಿರುವುದು 8 ಕೋಟಿಯನ್ನೂ ದಾಟುವುದಿಲ್ಲ. ಏಕೆಂದರೆ ಇದರ ಸದಸ್ಯರಾಗಬೇಕೆಂದರೆ ನೂರೆಂಟು ತಕರಾರುಗಳನ್ನು ಇದೇ ಮಂಡಳಿ ಒಡ್ಡುತ್ತದೆ. ಹೊಸದಾಗಿ, ಬ್ಯಾಂಕ್ ಅಕೌಂಟ್ ಇದ್ದವರು ಮಾತ್ರ ಸದಸ್ಯರಾಗಬಹುದು ಎಂದು ಮಂಡಳಿ ಹೇಳುತ್ತಿದೆ. ಗುಲ್ಬರ್ಗದಿಂದ ಬೆಂಗಳೂರಿಗೆ ವಲಸೆ ಬಂದಿರುವ ಕಟ್ಟಡ ಕಾರ್ಮಿಕ ಬ್ಯಾಂಕ್ ಅಕೌಂಟ್ ಮಾಡಿಸಲು ಹೋದರೆ, ಸ್ಥಳೀಯ ಅಡ್ರೆಸ್ ಪ್ರೂಫ್ ಕೇಳುತ್ತಾರೆ. ಅದು ಅವರಿಗೆ ಸಿಗಲು ಸಾಧ್ಯವೇ ಇಲ್ಲ. ಸಿಕ್ಕಿ, ಅಕೌಂಟ್ ಮಾಡಿಸುವಷ್ಟರಲ್ಲಿ ಯಾವುದೇ ಕಟ್ಟಡದ ಮೇಲಿಂದ ಬಿದ್ದು ಹೆಣವಾಗಿಬಿಡುತ್ತಾರೆ, ಇಲ್ಲವೇ ಕುಂಟರಾಗಿರುತ್ತಾರೆ. ಇದು ಅಧಿಕಾರಿಗಳಿಗೆ ಅರ್ಥವಾಗುವುದಿಲ್ಲ.

ಅಧಿಕಾರಿಗಳಿಗೆ ಅರ್ಥವಾಗುವುದಿಲ್ಲ. ಆದರೆ ಈ ಪ್ರಜಾಪ್ರಭುತ್ವ ದೇಶದ ಪ್ರಜ್ಞಾವಂತ ನಾಗರಿಕರೂ, ಮಾಧ್ಯಮಗಳೂ ನಮ್ಮತ್ತ ನೋಡುವುದಿಲ್ಲ. ನಾವು ಪ್ರತಿಭಟನೆ ಮಾಡಿದರೆ, ಅದೊಂದು ಗೋಳು ಎಂದು ಅವರು ತಿಳಿಯುತ್ತಾರೆ. ನಾವು ಇಂತಹ ವ್ಯವಸ್ಥೆಯ ವಿರುದ್ಧ ಹೋರಾಡಬೇಕೆಂದು ತೀರ್ಮಾನಿಸಿದ್ದೇವೆ. ನಮ್ಮಂತಹ ಕಾರ್ಮಿಕರನ್ನು ಒಟ್ಟುಗೂಡಿಸುವುದು ಬಹಳ ಕಷ್ಟಸಾಧ್ಯ ಕೆಲಸ. ಬೇರೆ ದಾರಿ ಇಲ್ಲ. ಆದರೆ ಈ ಹೋರಾಟದಲ್ಲಿ ನಿಮ್ಮಂತಹವರ ಬೆಂಬಲ ನಮಗೆ ಅತ್ಯಗತ್ಯವಾಗಿ ಬೇಕಿದೆ. ಇದು ಈ ದೇಶದ ಪ್ರಜಾತಂತ್ರಕ್ಕೆ ಸಂಬಂಧಿಸಿದ ವಿಷಯ ಎಂದು ನಾವು ಭಾವಿಸುತ್ತೇವೆ. ಎಲ್ಲಾ ಪ್ರಜಾತಂತ್ರವಾದಿಗಳೂ ನಮ್ಮ ಹೋರಾಟದಲ್ಲಿ ಸಕ್ರಿಯವಾಗಿ ಭಾಗಿಯಾಗಬೇಕೆಂದು ಈ ಮೂಲಕ ಕೋರುತ್ತೇವೆ. □

-ಎನ್. ಸುಬ್ರಮಣ್ಯ, ಮಂಜುನಾಥ್, ಗೌರಿ, ಮಂಡ್ಯ

ಸಂಪಾದಕರೊಡನೆ ಸಂವಾದ

ಜಾತ್ಯಾತೀತ ತತ್ವಕ್ಕೆ ಕುಂದು ತರುತ್ತಿರುವ ಸರ್ಕಾರಿ ಭಗವದ್ಗೀತಾ ಅಭಿಯಾನ

ವೈ. ಮರಿಸ್ವಾಮಿ

ಪ್ರಿಯ ಸಂಪಾದಕರೇ,

ಭಾರತ ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ರಾಷ್ಟ್ರ ಇಲ್ಲಿ ಸುಮಾರು 6000 ಕ್ಕೂ ಹೆಚ್ಚು ಸಮುದಾಯಗಳಿವೆ, ಪ್ರತಿಯೊಂದು ಸಮುದಾಯವೂ ತನ್ನದೇ ಆದ ಚರಿತ್ರೆ, ಸಂಸ್ಕೃತಿ, ಪರಂಪರೆ ಮತ್ತು ವಾರಸುದಾರರನ್ನು ಹೊಂದಿದೆ. ಅದೇ ರೀತಿಯಲ್ಲಿ ಹಿಂದು, ಮುಸ್ಲಿಮ್, ಕ್ರೈಸ್ತ, ಜೈನ, ಸಿಖ್, ಪಾರ್ಸಿ ಮುಂತಾದ ಸಂಘಟಿತ ಧರ್ಮಗಳಿವೆ. ಈ ಯಾವುದೇ ಸಂಘಟಿತ ಧರ್ಮಕ್ಕೆ ಸೇರದ ನೂರಾರು ಆದಿಮ ಮತ್ತು ಬುಡಕಟ್ಟು ಜನಾಂಗಗಳಿವೆ. ಆದುದರಿಂದಲೇ ಭಾರತವನ್ನು ಒಂದು ಜಾತ್ಯಾತೀತ ರಾಷ್ಟ್ರವೆಂದು ಪರಿಗಣಿಸಲಾಗಿದೆ.

ಡಾ .ಬಾಬಾಸಾಹೇಬ್ ಅಂಬೇಡ್ಕರರು ರಚಿಸಿದ ಭಾರತದ ಸಂವಿಧಾನವೂ ಸಹ ಈ ಜಾತ್ಯಾತೀತ (ಧರ್ಮನಿರಪೇಕ್ಷ) ತತ್ವದಡಿಯಲ್ಲಿ ನಿಂತಿದೆ ಹಾಗೂ ಧಾರ್ಮಿಕ ಸ್ವಾತಂತ್ರ್ಯವನ್ನು, ಈ ದೇಶದ ಪ್ರತಿಯೊಬ್ಬ ಪ್ರಜೆಗೆ ನೀಡಿರುವುದರ ಜೊತೆಗೆ ನಾಸ್ತಿಕರನ್ನೂ (ದೇವರಲ್ಲಿ ನಂಬಿಕೆಯಿಲ್ಲದವರನ್ನು) ಸಮಾನ ದೃಷ್ಟಿಯಿಂದ ಪರಿಗಣಿಸಿದೆ. ಚುನಾವಣೆಯ ಮೂಲಕ ಆರಿಸಿ ಬರುವ ಜನಪ್ರತಿನಿಧಿಗಳು/ಸರ್ಕಾರ, ಸಂವಿಧಾನದ ಈ ಆಶಯಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವುದರ ಜೊತೆಗೆ ನಡೆದುಕೊಳ್ಳಬೇಕಾಗುತ್ತದೆ.

ಆದರೆ, ಇಂದು ಕರ್ನಾಟಕದಲ್ಲಿರುವ ರಾಜ್ಯ ಸರ್ಕಾರ ಸಂವಿಧಾನದ ಬದಲು ಮನುಧರ್ಮಶಾಸ್ತ್ರದ ಅಣತಿಯಂತೆ ನಡೆಯುತ್ತಿದೆ. ಸಂಘ ಪರಿವಾರದ ಹಿಂದುತ್ವದ ಅಜೆಂಡವನ್ನು ಸರ್ಕಾರಿ ಯಂತ್ರವನ್ನು ಜಾರಿಗೊಳಿಸಲು ಸರ್ಕಾರಿ ಯಂತ್ರವನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಅದರ ಒಂದು ಭಾಗವಾಗಿ, ಶಿರಸಿ ಮೂಲದ ಶ್ರೀ ಸರ್ವಜ್ಞೇಂದ್ರ ಸ್ವರಸ್ವತಿ ಪ್ರತಿಷ್ಠಾನ ಎನ್ನುವ ಸಂಘ ಪರಿವಾರದ ಸಂಸ್ಥೆಯೊಂದಿಗೆ ಕಳೆದ 2 ವರ್ಷಗಳಿಂದ ಸದ್ದಿಲ್ಲದೆ ಶ್ರೀ ಭಗವದ್ಗೀತಾ ಅಭಿಯಾನವನ್ನು ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಂಡಿದೆ. ಇದರ ಮುಂದುವರಿದ ಭಾಗವಾಗಿ ಜೂನ್ 7 ರಿಂದ ಜುಲೈ 14 ರವರೆಗೆ ಕೋಲಾರ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶ್ರೀ ಭಗವದ್ಗೀತಾ ಅಭಿಯಾನವನ್ನು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಂಡಿದ್ದು ತೀವ್ರ ವಿವಾದಕ್ಕೆಡೆಮಾಡಿಕೊಟ್ಟಿದೆ .ಶಿಕ್ಷಣ ಮತ್ತು ವಿದ್ಯಾರ್ಥಿಗಳ ಹಕ್ಕುಗಳಿಗಾಗಿ ಹೋರಾಡುತ್ತಿರುವ ಜನಪರ ಸಂಘಟನೆಗಳ ಒಕ್ಕೂಟದಡಿಯಲ್ಲಿ ಈಗಾಗಲೇ ಜೂನ್ 29ರಂದು ಸಾಂಕೇತಿಕವಾಗಿ ಕೋಲಾರ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ನಡೆಸಿರುವ ದಲಿತ ಮತ್ತು ಜಾತ್ಯಾತೀತ ಸಂಘಟನೆಗಳು ಜಿಲ್ಲೆಯಲ್ಲಿ ಈ ಅಭಿಯಾನಕ್ಕೆ ಅವಕಾಶ ಮಾಡಿಕೊಡಬಾರದೆಂದು ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿವೆ. ರಾಜ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮೂಲತಹ ಆರ್.ಎಸ್.ಎಸ್. ಹಿನ್ನಲೆಯಿಂದ ಬಂದವರಾಗಿರುವುದರಿಂದ, ಶಿಕ್ಷಣದ ಕೇಸರೀಕರಣದ ಈ ಅಭಿಯಾನದ ರೂವಾರಿ ಅವರೇ ಎನ್ನುವುದರಲ್ಲಿ ಸಂಶಯವಿಲ್ಲ.

ಶ್ರೀಭಗವದ್ಗೀತಾ ಅಭಿಯಾನ ಏಕೆ ಬೇಡ?

ಭಾರತದ ಸಂವಿಧಾನದ ಬುನಾದಿಯ ಅಡಿಪಾಯಗಳಾಗಿರುವ ಸಮಾನತೆ, ಸಹೋದರತೆ ಮತ್ತು ಭ್ರಾತೃತ್ವಕ್ಕೆ ವಿರುದ್ಧವಾಗಿರುವ ಭಗವದ್ಗೀತೆಯು, ಶ್ರೇಣೀಕೃತ ಜಾತಿಪದ್ಧತಿಯನ್ನು ಅಧಿಕವಾಗಿ ಸಮರ್ಥಿಸುತ್ತದೆ. ಕರ್ಮ ಸಿದ್ಧಾಂತವನ್ನು ಪ್ರತಿಪಾದಿಸುವ ಮೂಲಕ ಅವೈಜ್ಞಾನಿಕ ಚಿಂತನೆಗೆ, ಮೂಢನಂಬಿಕೆ ಮತ್ತು ಕಂದಾಚಾರಗಳಿಗೆ ಉತ್ತೇಜನ ನೀಡುತ್ತದೆ. ತಾರತಮ್ಯವನ್ನೇ ಉಸಿರಾಗಿಸಿಕೊಂಡಿದ್ದು, ಮಹಿಳೆಯರನ್ನು (ಉದಾಹರಣೆ: ಕುಂತಿ) ಕೇವಲವಾಗಿ ಕಾಣುತ್ತದೆ, ಹೆಣ್ಣು, ಹೊನ್ನು, ಮಣ್ಣನ್ನು ಭೋಗದ ವಸ್ತುಗಳೆಂದು ವ್ಯಾಖ್ಯಾನಿಸಿ, ಇವುಗಳನ್ನು ಪಡೆಯಲು ರಕ್ತ ಸಂಬಂಧಿಗಳನ್ನೂ ಕುತಂತ್ರದಿಂದ ನಿರ್ಭಯವಾಗಿ ಕೊಂದು ಹಾಕಲು ಪ್ರೇರೇಪಿಸುತ್ತದೆ. ಹಿಂಸೆಗೆ ಪ್ರಚೋದಿಸಿ-ಸೌಹಾರ್ಧತೆಗೆ ಧಕ್ಕೆ ತರುತ್ತದೆ. ಧರ್ಮಯುದ್ಧದ ಹೆಸರಿನಲ್ಲಿ ಮಾನವೀಯತೆಯನ್ನೇ ನಾಶಪಡಿಸುವ ಅಂಶಗಳನ್ನೊಳಗೊಂಡಿದೆ.

ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ತನ್ನ ದಾಯಾದಿಗಳೊಂದಿಗೆ ಕಾದಾಡಿ ರಕ್ತಪಾತವನ್ನು ಕಣ್ಣಾರೆ ನೋಡಲು ಹಿಂಜರಿದ ಅರ್ಜುನ, ಮಾನಸಿಕವಾಗಿ ಕುಗ್ಗಿಹೋಗಿರುತ್ತಾನೆ. ಆಗ ಅವನಲ್ಲಿ ಯುದ್ಧದ ಉನ್ಮಾದವನ್ನು ತುಂಬಲು ಕೃಷ್ಣ ಬೋಧಿಸುವ ಶ್ಲೋಕಗಳನ್ನೊಳಗೊಂಡ ಗ್ರಂಥವನ್ನೇ ಭಗವದ್ಗೀತೆ ಎನ್ನಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಭಗವದ್ಗೀತೆಯನ್ನು ಒಂದು ಧಾರ್ಮಿಕ ಗ್ರಂಥವೆಂದು ಪರಿಗಣಿಸುವುದು ಕೂಡ ಅಸಮಂಜಸ. ಕೆಲವರು ಇದನ್ನು ಅಪರಾಧಗಳ ಗ್ರಂಥ'(Text of Crimes) ಎನ್ನುತ್ತಾರೆ. ಇಂತಹ ಗ್ರಂಥದ ಸಾರಾಂಶದಿಂದ ಮಕ್ಕಳು ಯಾವ ರೀತಿಯ ಭಾವನೆಗಳನ್ನು ಬೆಳೆಸಿಕೊಳ್ಳಬಹುದು? ಸರ್ಕಾರ ಭಗವದ್ಗೀತೆಗೆ ಕೊಡುವ ಮನ್ನಣೆಯನ್ನು ಖುರಾನ್, ಬೈಬಲ್, ಗ್ರಂಥಸಾಹೇಬ್ ಮುಂತಾದ ಧಾರ್ಮಿಕ ಗ್ರಂಥಗಳಿಗೆ ನೀಡುತ್ತಿಲ್ಲ? ಧರ್ಮಪ್ರಚಾರ ಮಾಡಲೆಂದೇ ನೂರಾರು ಮಠಾಧಿಪತಿಗಳು, ಸ್ವಾಮೀಜಿಗಳು ಮತ್ತು ಸಂಸ್ಥೆಗಳಿರುವಾಗ, ಸರ್ಕಾರವೇಕೆ ಬೇಡದ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿದೆ? ಸರ್ಕಾರಿ ಕಛೇರಿ

ಗಳಲ್ಲಿ ಪೂಜೆ ನಡೆಯಲು ಅವಕಾಶ ನೀಡುತ್ತಿದೆ? ಕೇವಲ ಒಂದು ವರ್ಗಕ್ಕೆ ಸೀಮಿತವಾದ ಧರ್ಮ ಮತ್ತು ಧಾರ್ಮಿಕ ಗ್ರಂಥಕ್ಕೆ ಆದ್ಯತೆ ಕೊಡಲು ಹೊರಟಿದೆ?

ಆದುದರಿಂದ ಈ ಅಭಿಯಾನವು ಸಂವಿಧಾನಕ್ಕೆ ವಿರುದ್ಧವಾಗಿದ್ದು, ಮತಾಂತರ– ಭಯೋತ್ಪಾದನೆ ಮತ್ತು ಹಿಂದು ಧರ್ಮದ ರಕ್ಷಣೆಯ ಹೆಸರಿನಲ್ಲಿ ಮಕ್ಕಳನ್ನು ದಿಕ್ಕು ತಪ್ಪಿಸಿ, ಅವರ ಭವಿಷ್ಯವನ್ನೇ ಮುಂಕಾಗಿಸಲು ಹೊರಟಿದೆ.

ಇಡೀ ದಕ್ಷಿಣ ಭಾರತದಲ್ಲೇ ಅತಿ ಹೆಚ್ಚು ಶಿಕ್ಷಣ ವಂಚಿತ ಮಕ್ಕಳಿರುವ ರಾಜ್ಯ ಕರ್ನಾಟಕ!

ರಾಷ್ಟ್ರೀಯ ಯೋಜನಾ ಆಯೋಗ ಇತ್ತೀಚೆಗೆ ಪ್ರಕಟಿಸಿರುವ ವಾರ್ಷಿಕ ಶೈಕ್ಷಣಿಕ ಸ್ಥಿತಿಗತಿಗಳ ವರದಿ 'ಆಸರೆ 2010'ರ ಪ್ರಕಾರ ನೆರೆಯ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ವಂಚಿತ ಮಕ್ಕಳು ಹೆಚ್ಚಿದ್ದಾರೆ. ರಾಯಚೂರು ಜಿಲ್ಲೆಯೊಂದರಲ್ಲೇ 6ರಿಂದ 14 ವರ್ಷದೊಳಗಿನ ಶೇ.11ರಷ್ಟು ಮಕ್ಕಳು ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ. ರಾಜ್ಯ ಸರ್ಕಾರದ ಅಸಮರ್ಪಕ ಶಿಕ್ಷಣ ನೀತಿಯಿಂದ ತಳ ಸಮುದಾಯಗಳ 6ರಿಂದ 14 ವರ್ಷದೊಳಗಿನ 4.5 ಲಕ್ಷ ಮಕ್ಕಳು ಶಾಲೆಯ ಮೆಟ್ಟಿಲನ್ನೇ ತುಳಿಯಲು ಸಾಧ್ಯವಾಗಿಲ್ಲವೆಂದು ಕರ್ನಾಟಕ ಸರ್ಕಾರದ ಅಂಕಿ–ಅಂಶಗಳೇ ಸಾರಿ ಹೇಳುತ್ತಿವೆ. ಆರ್ಥಿಕವಾಗಿ ಕಡುಬಡತನದಲ್ಲಿರುವ ಕುಟುಂಬಗಳಿಗೆ ಸೇರಿದ ಶೇ.43ರಷ್ಟು ಮಕ್ಕಳು 7ನೇ ತರಗತಿ ತಲುಪುವುದರೊಳಗೆ ಶಾಲೆ ಬಿಡುತ್ತಾರೆ ಹಾಗೂ ಶೇ.65ರಷ್ಟು ಹೆಣ್ಣು ಮಕ್ಕಳು 10ನೇ ತರಗತಿ ಮುಗಿಯುವುದರೊಳಗೆ ವಿದ್ಯಾಭ್ಯಾಸ ನಿಲ್ಲಿಸಿಬಿಡುತ್ತಾರೆ. ರಾಜ್ಯದ ಶೇ.50ರಷ್ಟು ಶಾಲೆಗಳಲ್ಲಿ ಇಂದಿಗೂ ಶೌಚಾಲಯ ಕುಡಿಯುವ ನೀರಿನ ವ್ಯವಸ್ಥೆ, ಆಟದ ಮೈದಾನ, ಗ್ರಂಥಾಲಯ, ಕ್ರೀಡಾಸಾಮಗ್ರಿ ಮುಂತಾದ ಮೂಲಭೂತ ಸೌಲಭ್ಯಗಳಿಲ್ಲ.

1995ರ ವಿಕಲಚೇತನರ ಕಾಯಿದೆಯ ಪ್ರಕಾರ ಸರ್ಕಾರ ವಿಕಲ ಚೇತನ ಮಕ್ಕಳಿಗೂ ಸಾಮಾನ್ಯ ಮಕ್ಕಳೊಂದಿಗೆ ಸಮನ್ವಯ ಶಿಕ್ಷಣವನ್ನು (Inclusive Education) ಒದಗಿಸಬೇಕು. ಅದಕ್ಕೆ ಪೂರಕವಾಗಿ ವಿಕಲಚೇತನ ಮಕ್ಕಳು ನಡೆದಾಡಲು ರ್‍ಯಾಂಪ್ ವ್ಯವಸ್ಥೆಯನ್ನು, ಅಂಧ ಮಕ್ಕಳಿಗೆ ಬ್ರೈಲ್ ಲಿಪಿಯನ್ನು, ಕಿವುಡ ಮತ್ತು ಮೂಗ ಮಕ್ಕಳಿಗೆ ಸಂವಹನ ಭಾಷೆಯ ಮುಖಾಂತರ ಕಲಿಸುವ ವಿಶೇಷ ತರಬೇತಿ ಪಡೆದ ಶಿಕ್ಷಕರನ್ನು ಸರ್ಕಾರ ನೇಮಿಸಬೇಕು. ಆದರೆ, ರಾಜ್ಯದ ಶೇ.77ರಷ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ವಿಕಲಚೇತನ ಮಕ್ಕಳು ನಡೆದಾಡಲು ಬೇಕಾದ ಮುಕ್ತ ವಾತಾವರಣ (ರ್‍ಯಾಂಪ್‌ವ್ಯವಸ್ಥೆ)ಯೇ ಇಲ್ಲವೆಂಬ ನಗ್ನಸತ್ಯ ಕಣ್ಣ ಮುಂದಿರುವಾಗ, ಈ ಸರ್ಕಾರದಿಂದ ವಿಕಲಚೇತನ ಮಕ್ಕಳಿಗೆ ಸಮನ್ವಯ ಶಿಕ್ಷಣ ನಿರೀಕ್ಷಿಸಲು ಸಾಧ್ಯವೇ? ಗ್ರಾಮೀಣ ಭಾಗದ ರೈತಾಪಿ ಮಕ್ಕಳಿಗೆ ಇಂದಿಗೂ ಕಬ್ಬಿಣದ ಕಡಲೆಯಾಗಿರುವ ಇಂಗ್ಲೀಷ್ ಭಾಷೆಯನ್ನು ಒಂದು ವಿಷಯವಾಗಿ ಒಂದನೇ ತರಗತಿಯಿಂದಲೇ ಕಲಿಸಿಕೊಡುವಂತೆ ಪ್ರಬಲ ಒತ್ತಾಯ ವಿದ್ದರೂ ಕೂಡ ಈ ಒತ್ತಾಯಕ್ಕೆ ಸ್ಪಂದಿಸದಿರುವ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈಗ ಹೋಬಳಿಗೊಂದು ಸರ್ಕಾರಿ ಇಂಗ್ಲೀಷ್ ಮಾಧ್ಯಮದ ಶಾಲೆ ತೆಗೆಯುವುದಾಗಿ ಹೇಳಿಕೆ ನೀಡಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಬಗ್ಗೆ ದೂರ ಗಾಮಿ ಆಲೋಚನೆ ಮತ್ತು ವಿಶಾಲ ಮನೋಭಾವನೆ ಯಿಲ್ಲದ

> **ದಕ್ಷಿಣ ಭಾರತದಲ್ಲೇ ಅತಿ ಹೆಚ್ಚು ಶಿಕ್ಷಣ ವಂಚಿತ ಮಕ್ಕಳಿರುವ ರಾಜ್ಯ ಕರ್ನಾಟಕ! ರಾಷ್ಟ್ರೀಯ ಯೋಜನಾ ಆಯೋಗ ಇತ್ತೀಚೆಗೆ ಪ್ರಕಟಿಸಿರುವ ವಾರ್ಷಿಕ ಶೈಕ್ಷಣಿಕ ಸ್ಥಿತಿಗತಿಗಳ ವರದಿ 'ಆಸರೆ 2010'ರ ಪ್ರಕಾರ ನೆರೆಯ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ವಂಚಿತ ಮಕ್ಕಳು ಹೆಚ್ಚಿದ್ದಾರೆ. ರಾಯಚೂರು ಜಿಲ್ಲೆಯೊಂದರಲ್ಲೇ 6ರಿಂದ 14 ವರ್ಷದೊಳಗಿನ ಶೇ.11ರಷ್ಟು ಮಕ್ಕಳು ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ.**

ವಿಶ್ವೇಶ್ವರಹೆಗಡೆ ಕಾಗೇರಿಯವರು ಅತ್ಯಂತ ನಿಷ್ಕ್ರಿಯ ಸಚಿವರಾಗಿದ್ದು; ಕೇವಲ ಸಂಘಪರಿವಾರದ ಸಚಿವರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಆದುದರಿಂದಲೇ ಭಗವದ್ಗೀತಾ ಅಭಿಯಾನದಂತಹ ಕೀಳುಮಟ್ಟದ ಕಾರ್ಯಕ್ರಮಗಳಿಗೆ ಮೊರೆ ಹೋಗಿದ್ದಾರೆ.

ಬಿಜೆಪಿ ಆಡಳಿತವಿರುವ ಮಧ್ಯಪ್ರದೇಶದಲ್ಲಿ ಈಗಾಗಲೇ ಜನಪರ ಸಂಘಟನೆಗಳ ಪ್ರತಿರೋಧದ ನಡುವೆಯೂ ಭಗವದ್ಗೀತಾ ಅಭಿಯಾನಕ್ಕೆ ರಾಜ್ಯಾದ್ಯಂತ ಅಲ್ಲಿನ ಸರ್ಕಾರ ಚಾಲನೆ ಕೊಟ್ಟಿರುವುದನ್ನು ನೋಡುತ್ತಿದ್ದೇವೆ. ಅದೇ ಮನೆ ಮುರುಕ ಕಸುಬಿಗೆ ಕರ್ನಾಟಕ ಸರ್ಕಾರ ಗಂಟುಬಿದ್ದಿದೆ. ಭಗವದ್ಗೀತಾ ಅಭಿಯಾನ ಸಮಿತಿಯಲ್ಲಿ ಬಿಜೆಪಿ ಮತ್ತು ಸಂಘಪರಿವಾರದ ಮುಖಂಡರು ಹಾಗೂ ಸ್ವಾಮೀಜೀಗಳು ಮುಕರಿ ಕೊಂಡಿದ್ದಾರೆ!

ಸಂವಿಧಾನ ಅಭಿಯಾನ ಇಂದಿನ ತುರ್ತಾಗಿದೆಯೇ ಹೊರತು ಪ್ರತಿಗಾಮಿ ವಿಚಾರಗಳನ್ನೊಳಗೊಂಡ ಭಗವದ್ಗೀತೆಯ ಅಭಿಯಾನವಲ್ಲ!

ಸರ್ಕಾರಕ್ಕೆ ಮಕ್ಕಳ ಭವಿಷ್ಯದ ಕುರಿತು ನೈಜ ಕಳಕಳಿ ಇದ್ದರೆ, ಈ ಕೂಡಲೇ ಶಿಕ್ಷಣ ಹಕ್ಕಿನ ಕಾಯಿದೆಯನ್ನು ಜಾರಿಗೊಳಿಸಿ, ಶಿಕ್ಷಣದ ಖಾಸಗೀಕರಣವನ್ನು ನಿಲ್ಲಿಸಿ, ಸರ್ಕಾರಿ ಶಾಲೆಗಳಿಗೆ ಅಗತ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಕಳೆದ ಒಂದು ದಶಕದಲ್ಲಿ ಸುಮಾರು 10,500 ಸರ್ಕಾರಿ ಶಾಲೆಗಳು ಮುಚ್ಚಿರುವುದರಿಂದ ಭವಿಷ್ಯದಲ್ಲಿಯಾದರೂ ಈ ಪ್ರಕ್ರಿಯೆ ನಿಲ್ಲುವಂತಾಗಲು ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಗುಣಮಟ್ಟದ ಶಿಕ್ಷಣ ತಳಸಮುದಾಯದ ಮಕ್ಕಳಿಗೆ ಎಟುಕುವಂತಾಗಬೇಕು.

ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮಕ್ಕಳಿಗೆ ಯಾವುದೇ ಧಾರ್ಮಿಕ ಗ್ರಂಥವನ್ನು ಬೋಧಿಸುವುದರ ಬದಲು, ಭಾರತದ ಸಂವಿಧಾನದಲ್ಲಿರುವ ಪ್ರಮುಖ ಅಧ್ಯಾಯಗಳನ್ನು ಕಲಿಸಿಕೊಡುವದರ ಮೂಲಕ ಸಮತೆ ಮಮತೆಯ ಸೌಹಾರ್ಧಯುತ ಸಮಾಜವನ್ನು ಕಟ್ಟುವ ಪ್ರಕ್ರಿಯೆಗೆ ಚಾಲನೆ ನೀಡಬೇಕು. ☐

ಬಾಬಾಸಾಹೇಬರನ್ನು ಶೋಷಿತರು ಅರ್ಥಮಾಡಿಕೊಂಡಿಲ್ಲ..

(8ನೇ ಪುಟದಿಂದ)

ನೀಡುವ ಗೌರವವಲ್ಲ. ಅವರನ್ನು ಚನ್ನಾಗಿ ಅರಿತು ಅದರಂತೆ ಬದುಕನ್ನು ನಡೆಸುವುದನ್ನು ಕಲಿಯುವುದು ನಿಜವಾಗಿ ಅವರಿಗೆ ಸಲ್ಲಿಸುವ ಗೌರವ. ಇತರರಿಗೆ ಘನತೆಯಿಂದ ಬಾಬಾಸಾಹೇಬರ ವಿಚಾರ ಧಾರೆಗಳನ್ನು ಮುಟ್ಟಿಸಿ ಅವರಿಗೂ ಬಾಬಾಸಾಹೇಬರ ಮೇಲೆ ಹಾಗೂ ದೇಶದ ಮೇಲೆ ಗೌರವ ಮೂಡಿಸುವುದು ನಿಜವಾದ ರಾಷ್ಟ್ರ ನಿರ್ಮಾಣದ ಕೆಲಸ.

ಬಾಬಾಸಾಹೇಬರ ಹೋರಾಟದ ಪ್ರತಿಫಲವಾಗಿ SC/STಗಳು ನಿಜವಾಗಿಯೂ ಸ್ವಾವಲಂಬನೆ ಮತ್ತು ಘನತೆಯ ಬದುಕನ್ನು ಕಂಡುಕೊಂಡಿದ್ದಾರೆ. ಇಂದು ಎಲ್ಲಾ ಕ್ಷೇತ್ರದಲ್ಲಿಯೂ SC/STಗಳು ತಲೆಯೆತ್ತಿ ಬಾಳುತ್ತಿದ್ದಾರೆ ಎಂದರೆ, ಹಕ್ಕು ಅಧಿಕಾರಗಳ ಚೌಕಾಶಿ ಮಾಡುವುದನ್ನು ಕಲಿತಿದ್ದಾರೆ ಎಂದರೆ, ಸ್ವಾಭಿಮಾನದಿಂದ ಬೀಗುತ್ತಿದ್ದಾರೆ ಎಂದರೆ, ಅದಕ್ಕೆಲ್ಲವೂ ಕಾರಣ ಡಾ. ಬಿ. ಆರ್. ಅಂಬೇಡ್ಕರ್ ಎಂಬುದನ್ನು ಎಂದಿಗೂ ಮರೆಯಬಾರದು. ಯಾವ ದೈವಶಕ್ತಿಯೋ, ಪೂಜಾಫಲವೂ, ಪೂರ್ವಜನ್ಮದ ಪುಣ್ಯವೊ, ದೇವಮಾನವ ಮಠಾಧೀಶರ ಕೃಪೆಯೊ SC/STಗಳಿಗೆ ವಿದ್ಯೆ, ಹಕ್ಕು, ಅಧಿಕಾರ, ಸ್ವಾಭಿಮಾನದ ಬದುಕನ್ನು ದಯಪಾಸಿದೆ ಎಂದು ಭಾವಿಸುವುದು ಮೂರ್ಖತನವಾಗುತ್ತದೆ.

ಹಿಂದೂ ಸಮಾಜದಲ್ಲಿ ಗುಲಾಮರಂತೆ ಬಾಳುತ್ತಿದ್ದ ಕೋಟ್ಯಾಂತರ ಅಸ್ಪೃಶ್ಯರಿಗೆ ರಾಜಮಾರ್ಗ ತೋರಿ ಘನತೆಯಿಂದ ಬಾಳುವುದನ್ನು ಕಲಿಸಿದ ಬಾಬಾಸಾಹೇಬರನ್ನು ಹೊರತುಪಡಿಸಿ ಅನ್ಯದೇವರುಗಳ ಭಜನೆಯಲ್ಲಿ ತೊಡಗುವುದು ಮಹಾದ್ರೋಹ. ತಮ್ಮ ಮಕ್ಕಳಿಗೆ ನಿಜವಾಗಿಯೂ ಈ ಸಮಾಜದಲ್ಲಿ ಮನುಷ್ಯರಾಗಿ ಸ್ವಾಭಿಮಾನಿಗಳಾಗಿ ದಿಟ್ಟತನದಿಂದ ಬದುಕುವುದನ್ನು ಕಲಿಸಬೇಕೆಂದರೆ, ಅವರಿಗೆ ಬಾಬಾಸಾಹೇಬರ ವ್ಯಕ್ತಿತ್ವ, ತ್ಯಾಗ, ಹೋರಾಟ ಮತ್ತು ಧೀಮಂತಿಕೆಯ ವಿಚಾರಧಾರೆಯನ್ನು ಕಲಿಸಿಕೊಡಲೇಬೇಕು. ಅದನ್ನು ಬಿಟ್ಟು ಮಕ್ಕಳಿಗಾಗಿ ಆಸ್ತಿ ಅಂತಸ್ತು ಸಂಪಾದಿಸುವುದರಲ್ಲೇ ನಿರತರಾದರೆ ಅದನ್ನು ಬಳಸುವ ಮನೋಬಲವೇ ಇಲ್ಲದೆ ನಮ್ಮ ಮಕ್ಕಳು ನಾಶವಾಗುತ್ತಾರೆ. ಡಾ. ಅಂಬೇಡ್ಕರರವರನ್ನು ಮರೆತ ಸಮುದಾಯ ಮತ್ತೊಮ್ಮೆ ಹಿಂದೂ ಸಮಾಜಿಕ ವ್ಯವಸ್ಥೆಯಲ್ಲಿ ಖಂಡಿತವಾಗಿಯೂ ಗುಲಾಮರಾಗಿ ಬದುಕಬೇಕಾದ ಸ್ಥಿತಿ ನಿರ್ಮಾಣವಾಗುತ್ತದೆ.

ಈ ದೇಶವನ್ನು ಕಟ್ಟಿದವರು ಶೂದ್ರತಿಶೂದ್ರರು. ಇದು ನಮ್ಮ ದೇಶ. ಈ ದೇಶವನ್ನು ಸಾವಿರಾರು ವರ್ಷಗಳ ಹಿಂದೆ ಸಮೃದ್ಧವಾಗಿ ಆಳಿ ಬಾಳಿದ ಸಾಮ್ರಾಟರು ನಾವು. ಮನುವಾದಿಗಳ ಕುತಂತ್ರದಿಂದಾಗಿ ಹಾಗೂ ನಮ್ಮ ಪೂರ್ವಿಕರ ಧ್ಯೇಯ ಆದರ್ಶಗಳನ್ನು ಕಡೆಗಣಿಸಿದ ಪರಿಣಾಮವಾಗಿ ಗುಲಾಮರಾದೆವು. ಆದರೆ, ಬಾಬಾಸಾಹೇಬರಿಂದಾಗಿ ಹೊಸ ಬದುಕನ್ನು ಪಡೆದುಕೊಂಡಿದ್ದೇವೆ... ಮತ್ತೆ ಸಾಮ್ರಾಟರಾಗುವ ನಮ್ಮ ದೇಶವನ್ನೂ ನಾವೇ ಆಳುವ ದಿನಗಳು ಬರಲಿವೆ. ಹಾಗಾಗಿ ಬಾಬಾಸಾಹೇಬರನ್ನು ಅರಿಯೋಣ. ಅವರ ರಾಜಮಾರ್ಗದಲ್ಲಿ ನಡೆಯೋಣ. ☐

ದೇಶ ಬಿಟ್ಟು ಯಾರು ತೊಲಗಬೇಕು ?

ಸುರೇಶ್ ಭಟ್

"ಪುಂಡರು ಕೊನೆಯದಾಗಿ ದೇಶಭಕ್ತಿಯ ಆಸರೆ ಪಡೆದುಕೊಳ್ಳುತ್ತಾರೆ"

– ಸ್ಯಾಮುವೆಲ್ ಜಾನ್ಸನ್.

"ಪ್ರಜೆಗಳಲ್ಲಿ ತೀವ್ರ ಮಟ್ಟದ ದೇಶಭಕ್ತಿಯ ಭಾವನೆಯನ್ನು ಉದ್ದೀಪಿಸುವುದಕ್ಕಾಗಿ ರಣಕಹಳೆಯೂದುವ ನಾಯಕನ ಬಗ್ಗೆ ಎಚ್ಚರಿಕೆ ವಹಿಸಿ. ದೇಶಭಕ್ತಿ ಎನ್ನುವುದು ಎರಡಲಗಿನ ಖಡ್ಗವಿದ್ದಂತೆ; ಒಂದೆಡೆ ಅದು ಧಮನಿಗಳಲ್ಲಿ ಕೆಚ್ಚು ತುಂಬಿದರೆ ಇನ್ನೊಂದೆಡೆ ಮನಸ್ಸನ್ನು ಸಂಕುಚಿತಗೊಳಿಸುತ್ತದೆ. ರಣಕಹಳೆಯ ಸದ್ದು ಅತ್ಯುಚ್ಚ ಮಟ್ಟಕ್ಕೇರುತ್ತಿದ್ದಂತೆ ದ್ವೇಷದಿಂದ ನೆತ್ತರು ಕುದಿಯತೊಡಗುವಾಗ ಮನಸ್ಸು ಮುಚ್ಚಿಕೊಳ್ಳುತ್ತದೆ. ಅಂತಹ ಪರಿಸ್ಥಿತಿಯಲ್ಲಿ ನಾಯಕನಿಗೆ ಪ್ರಜೆಗಳ ಹಕ್ಕುಗಳನ್ನು ಕಸಿದುಕೊಳ್ಳುವ ಪ್ರಮೇಯವೇ ಇರುವುದಿಲ್ಲ ಏಕೆಂದರೆ ಭೀತಿಗೊಳಗಾಗಿರುವ, ದೇಶಭಕ್ತಿಯಿಂದ ಕುರುಡಾಗಿರುವ ಜನರೇ ಖುದ್ದಾಗಿ ತಮ್ಮೆಲ್ಲ ಹಕ್ಕುಗಳನ್ನು ಸಂತೋಷದಿಂದ ಬಿಟ್ಟುಕೊಡುತ್ತಾರೆ....."

– ದೇಶಭಕ್ತಿ ಕುರಿತಂತೆ ಜೂಲಿಯಸ್ ಸೀಸರ್, ಷೇಕ್ಸ್‌ಪಿಯರ್‌ನ ನಾಟಕದಲ್ಲಿ.

ಶಾಲೆಗಳಲ್ಲಿ ಖುರಾನ್, ಬೈಬಲ್ ಸೇರಿದಂತೆ ಯಾವುದೇ ಗ್ರಂಥ ಪಠಣಕ್ಕೂ ಸಹಕಾರ ನೀಡಲು ಸಿದ್ಧ.. ಭಗವದ್ಗೀತೆ ಅಭಿಯಾನ ವಿರೋಧಿಸುವವರು ದೇಶದ ಧರ್ಮ, ಸಂಸ್ಕೃತಿ, ರಾಷ್ಟ್ರೀಯತೆಗೆ ವಿರುದ್ಧವಾಗಿರುವವರು. ಇಂಥವರು ದೇಶ ಬಿಟ್ಟು ಹೋಗಲಿ' ಎಂದು ಮತ್ತೊಮ್ಮೆ ಗುಡುಗಿದ್ದಾರೆ ಕರ್ನಾಟಕದ ಸನ್ಮಾನ್ಯ ಶಿಕ್ಷಣ ಸಚಿವ ಕಾಗೇರಿಯವರು.

ಇಲ್ಲಿ ಸಹಕಾರ ಅಂದರೆ ಯಾರ ಸಹಕಾರ? ಸಚಿವರ ವೈಯಕ್ತಿಕ ಸಹಕಾರವೋ ಅಥವಾ ಸರಕಾರದ ಶಿಕ್ಷಣ ಇಲಾಖೆಯ ಸಹಕಾರವೋ? ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮ ಬೋಧನೆಗೆ ಯಾರೇ ಸಹಕಾರ ನೀಡಿದರೂ ಅದು ಅಕ್ಷಮ್ಯ ಅಪರಾಧ ಎನ್ನುವುದು ಮಾನ್ಯ ಸಚಿವರಿಗೆ ತಿಳಿದಿಲ್ಲವೇ? ಶಿಕ್ಷಣ ಇಲಾಖೆಯ ಆಯುಕ್ತರೇ ಖುದ್ದಾಗಿ ಹೊರಡಿಸಿರುವ ಸುತ್ತೋಲೆ ಇರುವಾಗ ಗೀತಾ ಪಠಣ ಸರಕಾರದ ಕಾರ್ಯಕ್ರಮವಲ್ಲವೆಂದು ಹೇಗೆ ವಾದಿಸುತ್ತಿದ್ದಾರೆ?

ಪರಮಾರಿಯಾದ ಸಣ್ಣ ಮಾಣಿಯಂತೆ ಸಂವಿಧಾನದ ಕಲಮು 28(1)ರ ಸ್ಪಷ್ಟ ಉಲ್ಲಂಘನೆಯನ್ನು ಮತ್ತೂ ಮತ್ತೂ ಸಮರ್ಥಿಸಲು ಹೊರಟಿರುವ ಮಾನ್ಯ ಸಚಿವರ ಮಾತುಗಳನ್ನು ಕೇಳಿ ನಗು, ಅಳು ಎರಡೂ ಉಕ್ಕುತ್ತಿವೆ. ಧರ್ಮದ ಅಮಲು ನೆತ್ತಿಗೆ ಅಡರಿ ಯುಕ್ತಾಯುಕ್ತತೆಯ ವಿವೇಚನೆಯನ್ನೇ ಕಳೆದುಕೊಂಡಿರುವುದಕ್ಕೆ ನಗು ಬರುತ್ತಿದೆ. ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿರುವ ಮಂತ್ರಿವರೇಣ್ಯರು ಸಂವಿಧಾನಕ್ಕೆ ಬಗೆಯುತ್ತಿರುವ ಘೋರ ಅಪಚಾರವನ್ನು ಕಂಡಾಗ ಅಳು ಬರುತ್ತಿದೆ.

ಪ್ರಗತಿಪರರು ದೇಶ ಬಿಟ್ಟು ತೊಲಗಬೇಕೆಂದು ಆದೇಶ ಹೊರಡಿಸುತ್ತಿರುವಂಥವರೂ ರಾಷ್ಟ್ರೀಯ ಸ್ವಯಂಸೇವಕ ಸಂಘ(ಆರೆಸ್ಸೆಸ್) ದ ನಿಷ್ಠಾವಂತ ಕಾರ್ಯಕರ್ತರೂ ಆಗಿರುವ ಶ್ರೀಮಾನ್ ಕಾಗೇರಿಯವರು ಹಿಂದೂತ್ವವಾದಿಗಳ ದೇಶಭಕ್ತಿ ಕುರಿತಂತೆ ಕೆಲವು ಮೂಲ ಪಾಠಗಳನ್ನು ಕಲಿತುಕೊಳ್ಳುವ ಜರೂರಿ ಇದೆ.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ

ಮುಘಲರ ನಂತರದಲ್ಲಿ ದೇಶವನ್ನಾಳಿದ ಬ್ರಿಟಿಷರು ರಾಜ್ಯಾಡಳಿತದಿಂದ ಧರ್ಮವನ್ನು ದೂರವಿಡುವ ನೀತಿಯನ್ನು ಅನುಸರಿಸಿದರಾದರೂ ಭಾರತೀಯ ಸಮಾಜವನ್ನು ಧರ್ಮದ ಆಧಾರದಲ್ಲಿ ಒಡೆಯಲೆತ್ನಿಸಿದರು. ಬ್ರಿಟಿಷರ ಒಡೆದಾಳುವ ನೀತಿಗೆ ಪೂರಕವಾಗಿ ಅವರ ವಸಾಹತುಶಾಹಿ ಇತಿಹಾಸಕಾರರು ಪ್ರಪ್ರಥಮವಾಗಿ ಭಾರತದ ನಾಗರಿಕತೆಯನ್ನು 'ಹಿಂದೂ' ಮತ್ತು 'ಮುಸ್ಲಿಂ' ಕಾಲಘಟ್ಟಗಳು ಎಂಬುದಾಗಿ ವಿಭಜಿಸಿದರು. ಅದನ್ನೇ ಪಾಕಿಸ್ತಾನ ಮತ್ತು ಹಿಂದೂ ರಾಷ್ಟ್ರೀಯವಾದಿ ಬಣಗಳು ಯಥಾವತ್ತಾಗಿ ಅನುಸರಿಸಿದವು. ಬ್ರಿಟಿಷರ ಕಾಲದಲ್ಲಿ ಆಡಳಿತದ ಪ್ರಮುಖ ಸ್ಥಾನಗಳನ್ನು ಬ್ರಾಹ್ಮಣರೇ ಆಕ್ರಮಿಸಿಕೊಂಡರಾದರೂ ರಾಜಕೀಯದಲ್ಲಿ ಧರ್ಮದ ಹಸ್ತಕ್ಷೇಪಕ್ಕೆ ಅವಕಾಶವಿರಲಿಲ್ಲ. ಹೀಗಾಗಿ ಹಿಂದಿನ ಬ್ರಾಹ್ಮಣ ಪ್ರಾಬಲ್ಯವನ್ನು ಮರುಸ್ಥಾಪಿಸಲೋಸುಗ ಹಿಂದೂ ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘ ದಂತಹ ಸಂಸ್ಥೆಗಳು ಹುಟ್ಟಿಕೊಂಡವು. ವೈದಿಕಶಾಹಿ ಅಂದಿನಿಂದ ಇಂದಿನ ತನಕವೂ ಈ ದೇಶವನ್ನು ತನ್ನ ಸಂಪೂರ್ಣ ಹತೋಟಿಗೊಳಪಡಿಸಲು ಅತ್ಯಂತ ಸುವ್ಯವಸ್ಥಿತವಾಗಿ ಹಾಗೂ ಅವಿರತವಾಗಿ ಶ್ರಮಿಸುತ್ತಾ ಬಂದಿದೆ.

1942ರ ಕ್ವಿಟ್ ಇಂಡಿಯ ಚಳವಳಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದು ಅತ್ಯಂತ ಮಹತ್ವದ ಮಜಲು. ಅಂದಿನ ಆ ರಾಷ್ಟ್ರವ್ಯಾಪಿ ಚಳವಳಿಯಲ್ಲಿ ಕೇವಲ ಕಾಂಗ್ರೆಸ್ ಮುಖಂಡರಷ್ಟೆ ಅಲ್ಲ, ಜನಸಾಮಾನ್ಯರಾದಿ ಲಕ್ಷಾಂತರ ಭಾರತೀಯರು ಪಾಲ್ಗೊಂಡಿದ್ದರು. ಆದರೆ ಆ ಸಂದರ್ಭದಲ್ಲಿ ಹಿಂದೂತ್ವವಾದಿಗಳೇನು ಮಾಡಿದರು? ಎಲ್ಲರೂ ಬ್ರಿಟಿಷರ ಬೆಂಬಲಕ್ಕೆ ನಿಂತರು! ".......ಸರಕಾರದ ಯಾವುದೇ ಮುಖ್ಯ ಸ್ಥಾನ ಅಥವಾ ಹುದ್ದೆಯಲ್ಲಿರುವವರು ಅದಕ್ಕೆ ಅಂಟಿಕೊಂಡು ತಮ್ಮ ನಿಯಮಿತ ಕರ್ತವ್ಯಗಳನ್ನು ಮಾಡುತ್ತಿರಬೇಕು" ಎನ್ನುತ್ತದೆ ಹಿಂದೂ ಮಹಾ ಸಭಾ ಅಧ್ಯಕ್ಷ ಸಾವರ್ಕರ್ ಅಂದು ಹೊರಡಿಸಿದ್ದ ಕಟ್ಟಾಜ್ಞೆ. ಇದು ಯಾವ ತೆರನಾದ ದೇಶಭಕ್ತಿ?



ವಿಶ್ವೇಶ್ವರ ಹೆಗಡೆ ಕಾಗೇರಿ

ಬ್ರಿಟಿಷರ ಕಾಲದಲ್ಲಿ ಆಡಳಿತದ ಪ್ರಮುಖ ಸ್ಥಾನಗಳನ್ನು ಬ್ರಾಹ್ಮಣರೇ ಆಕ್ರಮಿಸಿಕೊಂಡರಾದರೂ ರಾಜಕೀಯದಲ್ಲಿ ಧರ್ಮದ ಹಸ್ತಕ್ಷೇಪಕ್ಕೆ ಅವಕಾಶವಿರಲಿಲ್ಲ. ಹೀಗಾಗಿ ಹಿಂದಿನ ಬ್ರಾಹ್ಮಣ ಪ್ರಾಬಲ್ಯವನ್ನು ಮರುಸ್ಥಾಪಿಸಲೋಸುಗ ಹಿಂದೂ ಮಹಾಸಭಾ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದಂತಹ ಸಂಸ್ಥೆಗಳು ಹುಟ್ಟಿಕೊಂಡವು. ವೈದಿಕಶಾಹಿ ಅಂದಿನಿಂದ ಇಂದಿನ ತನಕವೂ ಈ ದೇಶವನ್ನು ತನ್ನ ಸಂಪೂರ್ಣ ಹತೋಟಿಗೊಳಪಡಿಸಲು ಅತ್ಯಂತ ಸುವ್ಯವಸ್ಥಿತವಾಗಿ ಹಾಗೂ ಅವಿರತವಾಗಿ ಶ್ರಮಿಸುತ್ತಾ ಬಂದಿದೆ.

ಸುಮಾರು ಮೂರು ವರ್ಷಗಳ ಹಿಂದೆ, 1939ರಲ್ಲಿ ಮಹಮ ದಾಲಿ ಜಿನ್ನಾ ಪಾಕಿಸ್ತಾನದ ರಚನೆಗಾಗಿ ಒತ್ತಾಯಿಸಿದ ಸಂದರ್ಭದಲ್ಲಿ, ಇದ್ದೇ ಹಿಂದೂ ಮಹಾಸಭಾವು ಮುಸ್ಲಿಂ ಲೀಗ್‌ನೊಂದಿಗೆ ಕೈಜೋಡಿಸಿ ಸಿಂಧ್ ಪ್ರಾಂತ್ಯದಲ್ಲಿ ಸಮ್ಮಿಶ್ರ ಸರಕಾರವನ್ನು ನಡೆಸುತ್ತಿತ್ತು! ಪಾಕಿಸ್ತಾನ ರಚನೆಯನ್ನು ಬೆಂಬಲಿಸುವ ನಿರ್ಣಯವೊಂದನ್ನು ಸಿಂಧ್ ಅಸೆಂಬ್ಲಿ ಅನುಮೋದಿಸಿದಾಗ ಹಿಂದೂ ಮಹಾಸಭಾ ಮಂತ್ರಿಗಳಲ್ಲಿ ಒಬ್ಬನಾದರೂ ರಾಜೀನಾಮೆ ನೀಡಲಿಲ್ಲ! ಬದಲಿಗೆ ಕೇವಲ ದಾಖಲೆಗೋಸ್ಕರ ಒಂದು ಖಂಡನೆ ವ್ಯಕ್ತಪಡಿಸಿ ಅಷ್ಟಕ್ಕೇ ಸಂತೃಪ್ತರಾದರು! ಸಾವರ್ಕರ್ ಮತ್ತು ಆರೆಸ್ಸೆಸ್ ಸಂಸ್ಥಾಪಕ ಡಾ। ಮೂಂಜೆ ಸೇರಿಕೊಂಡು ಪಂಜಾ ಬಿನಲ್ಲೂ ಇದೇ ತೆರನಾದ ಸಮ್ಮಿಶ್ರ ಸರಕಾರವೊಂದನ್ನು ರಚಿಸಲು ಮುಂದಾಗಿದ್ದರು. 1942ರಲ್ಲಿ ಬಂಗಾಳದಲ್ಲಿಯೂ ಹಿಂದೂ ಮಹಾ ಸಭಾ, ಮುಸ್ಲಿಂ ಲೀಗ್‌ಗಳ ಸಮ್ಮಿಶ್ರ ಸರಕಾರವಿತ್ತು. ಮುಸ್ಲಿಂ ಲೀಗ್‌ನ ಫಜ಼್ಲುಲ್ ಹಕ್ ನೇತೃತ್ವದಲ್ಲಿದ್ದ ಅಂದಿನ ಬಂಗಾಳ ಸರಕಾರದಲ್ಲಿ ಹಣಕಾಸು ಸಚಿವರಾಗಿದ್ದವರು ಹಿಂದೂ ಮಹಾಸಭಾ ಮುಖಂಡ ಡಾ। ಶ್ಯಾಮಾ ಪ್ರಸಾದ್ ಮುಖರ್ಜಿ. ಆತ ಬಂಗಾಳದ ಬ್ರಿಟಿಷ್ ರಾಜ್ಯಪಾಲ ಸರ್ ಜಾನ್ ಹರ್ಬರ್ಟ್‌ಗೆ ಬರೆದ ಪತ್ರವೊಂದನ್ನು ಹಿಂದೂತ್ವವಾದಿ "ದೇಶಭಕ್ತಿ"ಯ ಉತ್ತಮ ನಿದರ್ಶನವೆನ್ನಬಹುದು. ಜುಲೈ 26, 1942ರ ಆ ಪತ್ರದಲ್ಲಿ ಬ್ರಿಟಿಷರೊಂದಿಗೆ ಅಧಿಕಾರ ಹಂಚಿಕೆಯ ಒಪ್ಪಂದ ವೊಂದರ ನಿರ್ದಿಷ್ಟ ಪ್ರಸ್ತಾಪವಿತ್ತು:

ಪ್ರಶ್ನೆ ಏನೆಂದರೆ ಬಂಗಾಳದಲ್ಲಿ ಈ ಚಳವಳಿ [ಕ್ವಿಟ್ ಇಂಡಿಯಾ]ಯನ್ನು ಎದುರಿಸುವುದು ಹೇಗೆ? ಕಾಂಗ್ರೆಸ್ ತನ್ನ ಶಕ್ತಿ ಮೀರಿ ಪ್ರಯತ್ನಿಸಿದರೂ ಈ ಚಳವಳಿಯನ್ನು ಬಂಗಾಳದಲ್ಲಿ ನೆಲೆ ಗೊಳಿಸಲು ಸಾಧ್ಯವಾಗದ ರೀತಿಯಲ್ಲಿ ಪ್ರಾಂತ್ಯದ ಆಡಳಿತವನ್ನು ನಡೆಸಬೇಕು. ಯಾವ ಸ್ವಾತಂತ್ರ್ಯಕ್ಕೋಸ್ಕರ ಕಾಂಗ್ರೆಸ್ ಈ ಚಳವಳಿಯನ್ನು ಆರಂಭಿಸಿದೆಯೋ ಈಗಾಗಲೆ ಆ ಸ್ವಾತಂತ್ರ್ಯವನ್ನು ಜನಪ್ರತಿ ನಿಧಿಗಳು ಪಡೆದುಕೊಂಡಿದ್ದಾರೆಂದು ಜನತೆಗೆ ಹೇಳಲು ನಮ್ಮಿಂದ, ಅದರಲ್ಲೂ ವಿಶೇಷವಾಗಿ ಹೊಣೆಯರಿತ ಮಂತ್ರಿಗಳಿಂದ, ಸಾಧ್ಯವಾಗಬೇಕು. ತುರ್ತು ಪರಿಸ್ಥಿತಿಯ ವೇಳೆ ಕೆಲವು ರಂಗಗಳಲ್ಲಿ ಸ್ವಾತಂತ್ರ್ಯ ಸೀಮಿತವಿರಬಹುದು. ಭಾರತೀಯರು ಬ್ರಿಟಿಷರಲ್ಲಿ ವಿಶ್ವಾಸವಿಡಬೇಕು. ಅದು ಬ್ರಿಟನ್‌ನ ಸಲುವಾಗಿಯೂ ಅಲ್ಲ, ಬ್ರಿಟಿಷರು ಪಡೆದುಕೊಳ್ಳಬಹುದಾದ ಯಾವುದೇ ಮೇಲುಗೈಯ ಸಲುವಾಗಿಯೂ ಅಲ್ಲ. ಇದೇ ಪ್ರಾಂತ್ಯದ ರಕ್ಷಣಾ ವ್ಯವಸ್ಥೆ ಹಾಗೂ ಸ್ವಾತಂತ್ರ್ಯವನ್ನು ಸುಸ್ಥಿತಿಯಲ್ಲಿ ಇರಿಸುವುದಕ್ಕೋಸ್ಕರ ಭಾರತೀಯರು ಬ್ರಿಟಿಷರಲ್ಲಿ ವಿಶ್ವಾಸ ವಿಡಬೇಕಿದೆ. ನೀವು ರಾಜ್ಯಪಾಲರಾಗಿ ಪ್ರಾಂತ್ಯದ ಸಾಂವಿಧಾನಿಕ ಮುಖ್ಯಸ್ಥನಂತೆ ಕಾರ್ಯಾಚರಿಸಲಿರುವಿರಿ. ನಿಮ್ಮ ಸಂಪೂರ್ಣ ವ್ಯವಹಾರಗಳನ್ನು ನಿಮ್ಮ ಮಂತ್ರಿಗಳ (ಅಂದರೆ ನಮ್ಮ) ಸಲಹೆ ಪ್ರಕಾರ ನಿರ್ವಹಿಸಲಿರುವಿರಿ.

ಆಗಸ್ಟ್ 9, 1942ರಂದು ಕ್ವಿಟ್ ಇಂಡಿಯ ಚಳವಳಿ ಆರಂಭವಾದಾಗ ರಾಜ್ಯಪಾಲರು ಹಕ್ ಸಚಿವ ಸಂಪುಟವನ್ನು ಕರೆಸಿ ಅವರೆಲ್ಲರೂ ಒಂದೋ ಬ್ರಿಟಿಷ್ ಸರಕಾರದ ದಮನಕಾರಿ ನೀತಿಯನ್ನು ಬೆಂಬಲಿಸಬೇಕು ಇಲ್ಲಾ ರಾಜೀನಾಮೆ ನೀಡಬೇಕೆಂದು ತಿಳಿಸಿದರು. ಆದರೆ ಮುಖರ್ಜಿಯಾದಿಯಾಗಿ ಯಾರೂ ರಾಜೀನಾಮೆಗೆ ಮುಂದಾಗಲಿಲ್ಲ! ಹೇಗಿದೆ "ದೇಶಭಕ್ತಿ"ಯ ವರಸೆ?

ವಿದೇಶೀ ಫ್ಯಾಶಿಸ್ಟ್ ಮತ್ತು ನಾಜ಼ಿ ಸಿದ್ಧಾಂತಗಳ ಪ್ರಭಾವ

ವೈದಿಕ ಧರ್ಮದಲ್ಲಿನ ಜಾತಿ ಪದ್ಧತಿ ಮನುಷ್ಯರನ್ನು ಐದು ವರ್ಣ ಅಥವಾ ಗುಂಪು ಅಥವಾ ಜಾತಿಗಳಾಗಿ ವಿಂಗಡಿಸುತ್ತದೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಸ್ಪೃಶ್ಯ ಮತ್ತು ಮ್ಲೇಚ್ಛರೆಂದು ಹೀಗಳೆಯಲಾಗುವ ಹಿಂದೂಯೇತರರೇ ಆ ಐದು ಜಾತಿಗಳು. ನಾಜ಼ಿಗಳೂ ಇದೇ ಮಾದರಿಯಲ್ಲಿ ಮಾನವರನ್ನು ಐದು ಶ್ರೇಣೀಕೃತ ಜನಾಂಗೀಯ ವರ್ಗಗಳಾಗಿ ವಿಂಗಡಿಸಿದರು. ತುತ್ತತುದಿಯಲ್ಲಿ ಬಿಳಿ ಚರ್ಮದ, ನೀಲಿಕಂಗಳ ಪರಿಶುದ್ಧ ಜರ್ಮನ್ ಆರ್ಯನರಿದ್ದರೆ ಅವರ ನಂತರ ಅನುಕ್ರಮವಾಗಿ ಇತರ ಐರೋಪ್ಯರು, ಸ್ಲಾವ್ ಜನ, ಏಷ್ಯನರು ಮತ್ತು ಆಫ್ರಿಕನರು ಬರುತ್ತಾರೆ. ನಿಜ ಹೇಳಬೇಕೆಂದರೆ ಆಫ್ರಿಕ ಖಂಡದ ನಿವಾಸಿಗಳು ಮಾನವರೇ ಅಲ್ಲವೆಂದು ಪ್ರತಿಪಾದಿಸಲಾಗುತ್ತಿತ್ತು!

ಹೀಗಾಗಿ ಮಹಾರಾಷ್ಟ್ರದ ಬ್ರಾಹ್ಮಣವಾದಿಗಳ ನೇತೃತ್ವದ ಹಿಂದೂ ರಾಷ್ಟ್ರೀಯವಾದಿಗಳ ಮೇಲೆ ಫ್ಯಾಶಿಸಂ ಮತ್ತು ನಾಜ಼ಿಸಂ ಸಿದ್ಧಾಂತಗಳು ಗಾಢ ಪ್ರಭಾವ ಬೀರಿದ್ದವು. ಅವರ ಮಟ್ಟಿಗೆ ಫ್ಯಾಶಿಸಂ ಒಂದು ಸಂಪ್ರದಾಯವಾದಿ ಕ್ರಾಂತಿಯ ನಿದರ್ಶನವಾಗಿತ್ತು. ಅವರ ಪಾಲಿಗೆ ಇಟಲಿ ಮತ್ತು ಜರ್ಮನಿಗಳು ಸ್ಫೂರ್ತಿಯ ಸೆಲೆಗಳಂತಿದ್ದವು. ಫ್ಯಾಶಿಸಂನ ಪ್ರಭಾವದ ಪರಿಣಾಮವಾಗಿ ಆಗಲೇ ಅಸ್ತಿತ್ವದಲ್ಲಿದ್ದ ರಾಜಕೀಯ ಹಿಂದೂ ಸಂಘಟನೆಗಳು ಇನ್ನಷ್ಟು ಕಾರ್ಯಸಮರ್ಥವಾದವು ಮತ್ತು ಅವುಗಳ ರಾಜಕೀಯ ಗುಣಗಳೂ ಇನ್ನಷ್ಟು ಗಟ್ಟಿಗೊಂಡವು. ಜನರಲ್ಲಿ ಸೈನಿಕ ಮನೋಪ್ರವೃತ್ತಿ ಬೆಳೆಸಿ ಹಿಂದೂ ಸಮಾಜವನ್ನು ಸೈನ್ಯೀಕರಣಗೊಳಿಸುವ ಚಿಂತನೆಗಳು ಫ್ಯಾಶಿಸಂ ಮತ್ತು ನಾಜ಼ಿಸಂಗಳಿಂದಲೆ ಹರಿದುಬಂದಿವೆ. ಇದನ್ನೆಲ್ಲ ದೃಢಪಡಿಸುವಂತಿವೆ ಲೆ। ಕ। ಶ್ರೀಕಾಂತ್ ಪುರೋಹಿತ್, ಪ್ರಮೋದ್ ಮುತಾಲಿಕ್‌ರಂತಹವರು ಸಶಸ್ತ್ರ ಪಡೆಗಳನ್ನು ಸಜ್ಜುಗೊಳಿಸುತ್ತಿರುವ ಬಗೆಗಿನ ಇತ್ತೀಚಿನ ಮಾಧ್ಯಮ ವರದಿಗಳು.

ಸಾವರ್ಕರ್ ಮತ್ತು ವಿದೇಶೀ ತತ್ವಗಳಿಗೆ ಒಲವು

ಮೂಲತಃ ಹಿಮಾಲಯ ಪರ್ವತಗಳಿಂದ ಕೆಳಗಿಳಿದು ಬಂದ ಹಿಂದೂಗಳೆಲ್ಲರೂ ಒಂದೇ ರಕ್ತ ಸಂಬಂಧಿಗಳು, ಹಿಂದೂ ಜನಾಂಗ ಇತರ ಜನಾಂಗಗಳಿಗಿಂತಲೂ ಶ್ರೇಷ್ಠವೆಂಬ ಜನಾಂಗೀಯ ಶ್ರೇಷ್ಠತೆಯ ಕಲ್ಪನೆ ಸಾವರ್ಕರ್‌ರನ್ನು ಸ್ವಾಭಾವಿಕವಾಗಿ ಇಟಲಿ, ಜರ್ಮನಿಗಳತ್ತ ಆಕರ್ಷಿತರಾಗುವಂತೆ ಮಾಡಿತು. ಮಹಾರಾಷ್ಟ್ರೀಯ ಬ್ರಾಹ್ಮಣನೂ, ನಾಸ್ತಿಕವಾದಿಯೂ ಆಗಿದ್ದ ಸಾವರ್ಕರ್ ಫ್ಯಾಶಿಸ್ಟ್ ಮತ್ತು ನಾಜ಼ಿ ಸಿದ್ಧಾಂತಗಳನ್ನು ತುಂಬಾ ಮೆಚ್ಚಿಕೊಂಡಿದ್ದರು. ಆತ ಹಿಟ್ಲರ್ ಮತ್ತು ಮುಸೋಲಿನಿಯನ್ನು ಅಪಾರವಾಗಿ ಗೌರವಿಸುತ್ತಿದ್ದರು. 1930ರ ದಶಕದ ಅಂತ್ಯಕ್ಕಾಗುವಾಗ ಜರ್ಮನಿ ಬಗ್ಗೆ ಆತನ ಒಲವು ಹೆಚ್ಚತೊಡಗಿತ್ತು.

1940ರ ಹಿಂದೂ ಮಹಾಸಭಾದ ಮದುರೆಯ ಅಧಿವೇಶನದ ವೇಳೆ "ಜರ್ಮನಿ ಅಂದು ಯಾವ ಸನ್ನಿವೇಶಗಳಲ್ಲಿ ಸಿಲುಕಿಕೊಂಡಿತ್ತೆಂಬುದನ್ನು ಪರಿಗಣಿಸಿದರೆ ಅದನ್ನು ಉಳಿಸಿದ್ದೇ ನಾಜ಼ಿ ಸಿದ್ಧಾಂತ ಎನ್ನುವುದರಲ್ಲಿ ಎರಡು ಮಾತಿಲ್ಲ. ಆ ಪರಿಸ್ಥಿತಿಯಲ್ಲಿ ಹಿಟ್ಲರ್ ಜರ್ಮನಿಯ ಆಪದ್ರಕ್ಷಕನಾಗಿದ್ದರೆನ್ನುವುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ......" ಎಂದು ಹೇಳಿದ್ದರು. ನೆಹರೂ ಫ್ಯಾಶಿಸಂ, ನಾಜ಼ಿಸಂಗಳನ್ನು ವಿರೋಧಿಸಿದಾಗ, ಅದನ್ನು ಸಹಿಸದ ಸಾವರ್ಕರ್ "ನಾವು ಮೆಚ್ಚುವ ಪ್ರಭುತ್ವದ ರೂಪವನ್ನೆ ಜರ್ಮನಿ, ಜಪಾನ್, ರಷ್ಯಾ ಅಥವಾ ಇಟಲಿ ಕೂಡ ಆಯ್ಕೆ ಮಾಡಿಕೊಳ್ಳಬೇಕೆಂದು ಅವರಿಗೆ ಆದೇಶಿಸಲು ನಾವು ಯಾರು? ಜರ್ಮನಿಗೆ ಯಾವುದು ಹಿತಕರವೆನ್ನುವುದನ್ನು ನೆಹರೂಗಿಂತ ಚೆನ್ನಾಗಿ ಹಿಟ್ಲರ್ ಬಲ್ಲ. ನಾಜ಼ಿಸಂ ಅಥವಾ ಫ್ಯಾಶಿಸಂನ ಮಂತ್ರದಂಡದಿಂದ ಅವೆರಡು ದೇಶಗಳು ಕಂಡಿರುವ ಅದ್ಭುತ ಪ್ರಗತಿಯೇ ಆ ತತ್ವಗಳು ಅವುಗಳ ಆರೋಗ್ಯಕ್ಕೆ ಅಗತ್ಯವಿದ್ದ ಟಾನಿಕ್ ಎಂಬುದನ್ನು ಖಚಿತಪಡಿಸುತ್ತದೆ" ಎಂದು ನೆಹರೂ ವಿರುದ್ಧ ವಾಗ್ದಾಳಿ ನಡೆಸಿದರು.

ಅಂದು ಮಹಾರಾಷ್ಟ್ರದ ಕೆಲವು ಪತ್ರಿಕೆಗಳು ಫ್ಯಾಶಿಸ್ಟ್ ಚಿಂತನೆಗಳಿದ್ದ ಬರಹಗಳನ್ನು ನಿಯಮಿತವಾಗಿ ಪ್ರಕಟಿಸುತ್ತಿದ್ದವು. ಅದೇ ರೀತಿ ಜರ್ಮನ್ ಪತ್ರಿಕೆಯೊಂದು ಸಾವರ್ಕರ್‌ರ ಭಾಷಣವನ್ನು ಪ್ರಕಟಿಸಿತ್ತು. ಒಂದು ನಿರ್ದಿಷ್ಟ ಮಟ್ಟದವರೆಗೆ ಇಟಲಿಯ ಸರಕಾರದೊಂದಿಗೆ ನೇರ ಸಂಪರ್ಕವನ್ನೂ ಇರಿಸಿಕೊಳ್ಳಲಾಗಿತ್ತು. ಆರೆಸ್ಸೆಸ್ ಸಂಸ್ಥಾಪಕ ಡಾ। ಬಿ.ಎಸ್. ಮೂಂಜೆ ಇಟಲಿಗೆ ತೆರಳಿ ಅಲ್ಲಿನ ಸೇನಾ ತರಬೇತಿ ಶಾಲೆಗಳನ್ನೂ, ಯುವಜನ ಸಂಘಟನೆಗಳನ್ನೂ ಅಭ್ಯಸಿಸಿದ್ದರಲ್ಲದೆ ಮುಸೊಲಿನಿಯನ್ನೂ ಭೇಟಿಯಾಗಿದ್ದರು.

ಸಾವರ್ಕರ್ ತನ್ನ 'ಹಿಂದೂತ್ವ' ಪ್ರಬಂಧದಲ್ಲಿ ಪ್ರತಿಪಾದಿಸಿದ, ಸೈದ್ಧಾಂತಿಕ ಮಟ್ಟದಲ್ಲಿ ಅನ್ಯ ಸಮುದಾಯಗಳನ್ನು ಶತ್ರುಗಳನ್ನಾಗಿಸುವ ಆಂತರಿಕ ವೈರಿಯ ಕಲ್ಪನೆಗೆ ಪ್ರೇರಣೆಯೇ ಫ್ಯಾಶಿಸಂ ಮತ್ತು ನಾಜ಼ಿಸಂ. ಆತ ಜರ್ಮನಿಯ ಜನಾಂಗ ನೀತಿಯನ್ನು ಹಾಗೂ ಅಲ್ಲಿನ ಯಹೂದ್ಯ ಸಮಸ್ಯೆಯನ್ನು ಭಾರತದ ಮುಸ್ಲಿಂ ಪ್ರಶ್ನೆಗೆ ಎಡೆಬಿಡದೆ ಹೋಲಿಸಿರುವುದೇ ಇದಕ್ಕೆ ಸಾಕ್ಷಿ. ಸಾವರ್ಕರ್‌ರ ಹಿಂದೂತ್ವ ಸಿದ್ಧಾಂತದಲ್ಲಿ ಒಟ್ಟು ನಾಲ್ಕು ಮಹತ್ವದ ಅಂಶಗಳಿವೆ. ಮೊದಲನೆಯದಾಗಿ, ಹಿಂದೂ ರಾಷ್ಟ್ರ ಒಂದು ಅತ್ಯುಚ್ಚ ಜನಾಂಗದಿಂದ ಹುಟ್ಟಿದೆ. ಎರಡನೆಯದಾಗಿ, ಅಲ್ಪಸಂಖ್ಯಾತರೆಲ್ಲರೂ ನೀಚ ಜನಾಂಗಗಳಷ್ಟೇ ಅಲ್ಲದೆ ಪರಧರ್ಮಗಳ ಅನುಯಾಯಿಗಳೂ ಆಗಿರುವುದರಿಂದ ಅವರನ್ನು ದ್ವೇಷಿಸಬೇಕು. ಮೂರನೆಯದಾಗಿ, ಹಿಂದೂ ಧರ್ಮ ಬದುಕುಳಿದಿರುವುದು ವರ್ಣಾಶ್ರಮ ಧರ್ಮದಿಂದಾಗಿ. ನಾಲ್ಕನೆಯದಾಗಿ, ಹಿಂದೂ ಜನಾಂಗ ಇಡೀ ಪ್ರಪಂಚವನ್ನು ಆಳುವುದಕ್ಕೆ ಸಿದ್ಧವಾಗಿದೆ.

'ಗುರು' ಗೋಲ್ವಲ್ಕರ್‌ರ ಆದರ್ಶ

ಆರೆಸ್ಸೆಸ್‌ನ ಮತ್ತೊಬ್ಬ ಸರಸಂಘಚಾಲಕ ಗೋಲ್ವಲ್ಕರ್ ಕೂಡ ಸಾವರ್ಕರ್‌ರ ಚಿಂತನೆಗಳನ್ನೇ ಮುಂದುವರಿಸಿದರು. ಜರ್ಮನರ ರಾಷ್ಟ್ರಾಭಿಮಾನವನ್ನು ತುಂಬಾ ಮೆಚ್ಚಿದ್ದ ಗೋಲ್ವಲ್ಕರ್‌ರ ರಾಷ್ಟ್ರ ಮತ್ತು ರಾಷ್ಟ್ರೀಯತೆಗಳ ಕಲ್ಪನೆಗಳಿಗೆ ಜರ್ಮನಿಯ ವಕೀಲ ಜೊಹಾನ್ ಕಾಸ್ಪರ್ ಬ್ಲಂಟ್‌ಸ್ಕ್ಲಿಯ ಸಾಹಿತ್ಯದಿಂದಲೂ ಸ್ಫೂರ್ತಿ ದೊರೆತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ವಿರೋಧಿಸಿದ ಗೋಲ್ವಲ್ಕರ್‌ರ ಆದರ್ಶವಾಗಿದ್ದುದು ನಾಜ಼ಿಗಳ ರಾಷ್ಟ್ರೀಯ ಸಮಾಜವಾದ. ಗೋಲ್ವಲ್ಕರ್‌ರ ಮಾದರಿ ಹಿಂದೂ ರಾಷ್ಟ್ರದ ಕಲ್ಪನೆ ಮತ್ತು ಹಿಟ್ಲರ್‌ನ ಸರ್ವಾಧಿಕಾರಿ, ನಿರಂಕುಶ ಪ್ರಭುತ್ವದ ಕಲ್ಪನೆ ಇವೆರಡೂ, ಒಂದೇ ಅಚ್ಚಿನಲ್ಲಿ ಎರಕ ಹೊಯ್ದಂತಿವೆ.

ಬಿಜೆಪಿಗೆ ಎರವಲು ನೀಡಲಾಗುವ ಆರೆಸ್ಸೆಸ್ ಕಾರ್ಯಕರ್ತರ ಕುರಿತಂತೆ ಗೋಲ್ವಲ್ಕರ್‌ರ ಉವಾಚಗಳು ಸ್ವಾರಸ್ಯಕರವಾಗಿವೆ. ಅವರೆಲ್ಲರೂ ಅದರ ರಾಜಕೀಯ ತಾಳಕ್ಕೆ ತಕ್ಕಂತೆ ಕುಣಿಯಬೇಕಾಗಿರುವ 'ನಟ'ರೆಂದು

ಗೋಲ್ವಾಲ್ಕರ್ ಹೇಳಿದ್ದಾರೆ. ರಾಜಕೀಯದಲ್ಲಿ ಕೈಚಳಕ ನಡೆಸುವುದಕ್ಕಾಗಿ ಯಾವ ರೀತಿಯ ಸಿಬ್ಬಂದಿಗಳನ್ನು ಬಿಜೆಪಿಗೆ ನಿಯೋಜಿಸಲಾಗುತ್ತದೆ ಮತ್ತು ಆರೆಸ್ಸೆಸ್ ಅವರಿಂದ ಏನನ್ನು ನಿರೀಕ್ಷಿಸುತ್ತದೆ ಎಂಬುದನ್ನು ಮೊದಲನೆ ಹೇಳಿಕೆ ತಿಳಿಸುತ್ತದೆ. ಮಾರ್ಚ್ 16, 1954ರಂದು ವಾರ್ಧಾದ ಸಿಂಡಿಯಲ್ಲಿ ಮಾಡಿದ ಭಾಷಣದ ವೇಳೆ ಗೋಲ್ವಾಲ್ಕರ್ ಹೇಳಿದರು: "ನಾವು ಸಂಘಟನೆಯೊಂದರ ಭಾಗವೆಂದು ಹೇಳಿ ಅದರ ಶಿಸ್ತನ್ನು ಒಪ್ಪಿದ ಮೇಲೆ ಜೀವನದಲ್ಲಿ ಆಯ್ಕೆಗಳ ಪ್ರಶ್ನೆ ಇರುವುದಿಲ್ಲ. ಹೇಳಿದಂತೆ ಮಾಡಿ. ಕಬಡ್ಡಿ ಆಡಲು ಹೇಳಿದರೆ ಕಬಡ್ಡಿ ಆಡಿ. ಸಭೆ ನಡೆಸಬೇಕೆಂದು ಹೇಳಿದರೆ ಸಭೆ ನಡೆಸಿ. ಉದಾಹರಣೆಗೆ ನಮ್ಮ ಕೆಲವು ಸ್ನೇಹಿತರಿಗೆ ರಾಜಕೀಯದಲ್ಲಿ ಕೆಲಸ ಮಾಡುವಂತೆ ಹೇಳಲಾಯಿತು. ಇದರರ್ಥ ಅವರಿಗೆ ರಾಜಕೀಯದಲ್ಲಿ ಭಾರೀ ಆಸಕ್ತಿ ಇದೆ ಅಥವಾ ಪ್ರೇರೇಪಣೆ ಇದೆ ಎಂದಲ್ಲ. ಅವರು ರಾಜಕೀಯಕ್ಕಾಗಿ ನೀರಿಲ್ಲದ ಮೀನಿನಂತೆ ಪ್ರಾಣತ್ಯಾಗ ಮಾಡುವುದಿಲ್ಲ. ರಾಜಕೀಯದಿಂದ ಹೊರಬರುವಂತೆ ಹೇಳಿದರೆ ಅದಕ್ಕೂ ಅವರ ಆಕ್ಷೇಪವಿಲ್ಲ. ಅವರ ಸ್ವಂತ ವಿವೇಚನೆ ಬೇಕಾಗಿಯೇ ಇಲ್ಲ."

ಎರಡನೆ ಹೇಳಿಕೆ ಹೀಗಿದೆ: "ನಮ್ಮ ಕೆಲವು ಸ್ವಯಂಸೇವಕರು ರಾಜಕೀಯದಲ್ಲಿ ದುಡಿಯುತ್ತಿದ್ದಾರೆಂಬ ವಿಷಯವೂ ನಮಗೆ ಗೊತ್ತಿದೆ. ಅಲ್ಲಿ ಅವರು ಅಗತ್ಯ ಬಿದ್ದಂತೆ ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ಸಂಘಟಿಸುವ ಕೆಲಸವನ್ನೂ ಘೋಷಣೆ ಕೂಗುವುದನ್ನೂ ಮಾಡಬೇಕು. ಇವೆಲ್ಲವೂ ನಮ್ಮ ಕೆಲಸದ ಭಾಗವಲ್ಲ, ಆದಾಗ್ಯೂ ನಟನಿಗೆ ಯಾವ ಪಾತ್ರವನ್ನು ವಹಿಸಲಾಗುತ್ತದೊ ಅದನ್ನಾತ ತನ್ನ ಪೂರ್ತಿ ಸಾಮರ್ಥ್ಯವನ್ನು ಬಳಸಿಕೊಂಡು ನಿರ್ವಹಿಸಬೇಕು. ಆದರೆ ಸ್ವಯಂಸೇವಕರು ಕೆಲವೊಮ್ಮೆ ಎಷ್ಟೊಂದು ಅತಿಶಯ ಉತ್ಸಾಹದಿಂದ ತಮ್ಮ ಪಾತ್ರ ಮೀರಿ ನಡೆಯುತ್ತಾರೆಂದರೆ ಈ ಕೆಲಸಕ್ಕೆ ನಿರುಪಯುಕ್ತರಾಗುತ್ತಾರೆ. ಇದು ಒಳ್ಳೆಯದಲ್ಲ."

ಹಿಂದೂತ್ವದ ರಾಜಕೀಯ ಉದ್ದೇಶಗಳು ಮತ್ತು ಧರ್ಮ

ರಾಜಕೀಯ ಉದ್ದೇಶಗಳನ್ನು ಮೇಲ್ನೋಟಕ್ಕೆ ಧಾರ್ಮಿಕವಾಗಿರುವ ಆಡಂಬರದ ಶಬ್ದಗಳಿಂದ ಸಿಂಗರಿಸಿ ಆ ಮೂಲಕ ಅದನ್ನು ಮರೆಮಾಚುವುದೇ ಹಿಂದೂತ್ವ ಸಿದ್ಧಾಂತದ ಪ್ರಧಾನ ಅಂಶ ಹೀಗಾಗಿ ಬಿಜೆಪಿಗರ ಧಾರ್ಮಿಕ, ಸಾಂಸ್ಕೃತಿಕ, ದೇಶಭಕ್ತಿಯ ಅಲಂಕಾರಿಕ ಮಾತುಗಳ ಹಿಂದೆ ಯಾವತ್ತೂ ಒಂದು ಕ್ರೂರ ರಾಜಕೀಯ ಲೆಕ್ಕಾಚಾರ ಇದ್ದೇ ಇದೆ. 'ಬಿಜೆಪಿ ಮಟ್ಟಿಗೆ ಹಿಂದೂತ್ವ ಕೇವಲ ಒಂದು ಅವಕಾಶವಾದಿ ತಂತ್ರವಲ್ಲದೆ ಇನ್ನೇನೂ ಅಲ್ಲ' ಎಂದು ಹಿರಿಯ ಬಿಜೆಪಿ ನಾಯಕ ಅರುಣ್ ಜೇಟ್ಲಿಯವರು ಅಮೆರಿಕಾದ ರಾಜತಾಂತ್ರಿಕರೆದುರು ಮನಬಿಚ್ಚಿರುವುದು ವಿಕಿಲೀಕ್ಸ್ ಮೂಲಕ ಬಯಲಾಗಿದೆ. ರಾಮ ಜನ್ಮಭೂಮಿ ಚಳವಳಿ ಕೇವಲ ರಾಜಕೀಯ ಚಳವಳಿಯಾಗಿತ್ತೆಂದು ಇನ್ನೋರ್ವ ನಾಯಕಿ ಸುಷ್ಮಾ ಸ್ವರಾಜ್ ಕೂಡಾ ಒಪ್ಪಿಕೊಂಡಿದ್ದಾರೆ.

ಹಿಂದೂತ್ವ ಮತ್ತು ಭಯೋತ್ಪಾದನೆ

ಚೇಂಬರ್ಸ್ ಶಬ್ದಕೋಶದ ಪ್ರಕಾರ:

ಭಯೋತ್ಪಾದನೆ ಅಂದರೆ 'ರಾಜಕೀಯ ಗುರಿ ಸಾಧಿಸುವುದಕ್ಕಾಗಿ ಹಿಂಸಾಮಾರ್ಗದ ಬಳಕೆ.'

ಉಗ್ರಗಾಮಿತ್ವ ಅಂದರೆ 'ಮತಾಂಧ ಅಥವಾ ತೀವ್ರ ಮಟ್ಟದ ನಿಲುವುಗಳಿಗೆ ಬದ್ಧತೆ.'

ಇದನ್ನು ಗಣನೆಗೆ ತೆಗೆದುಕೊಂಡಾಗ ಹಿಂದೂತ್ವ ಸಿದ್ಧಾಂತದ ಗರ್ಭದಲ್ಲೇ ಉಗ್ರಗಾಮಿತ್ವ ಮತ್ತು ಭಯೋತ್ಪಾದನೆ ಅಡಗಿದೆಯೆಂಬ ಸತ್ಯ ನಿಚ್ಚಳವಾಗುತ್ತದೆ. ಹಿಂದೂತ್ವವಾದಿಗಳ ಪ್ರೇರಕ ಶಕ್ತಿಯಾಗಿರುವುದೇ ಮುಸೊಲಿನಿ ಮತ್ತು ಹಿಟ್ಲರ್ ನಡೆಸಿದ ನಾಗರಿಕ ಮತ್ತು ಮಾನವ ಹಕ್ಕುಗಳ ದಮನ, ಸ್ವಘೋಷಿತ ವೈರಿಗಳ ವಿರುದ್ಧ ನಡೆಸಿದ ವ್ಯವಸ್ಥಿತ ಅಪಪ್ರಚಾರ ಮತ್ತು ಭಯೋತ್ಪಾದಕ ಕೃತ್ಯಗಳು. ಹಿಂದೂತ್ವವಾದಿಗಳ ಓಲೈಕೆಗೆ ನಿಂತಿರುವ ಸ್ವಾಮಿ, ಸಾಧ್ವಿಗಳ ಸಂಖ್ಯೆಯೂ ಬಹಳ ದೊಡ್ಡದಿದೆ. ಇವರ ಪೈಕಿ ಸ್ವಾಮಿ ಅಸೀಮಾನಂದ, ಶಾರದಾ ಸರ್ವಜ್ಞ ಪೀಠದ ಶಂಕರಾಚಾರ್ಯ ಸ್ವಾಮಿ ಅಮೃತಾನಂದ, ಮಹರ್ಷಿ ದಯಾನಂದನ ಶಿಷ್ಯ ಆನಂದ ಮಿತ್ರಾನಂದ ಸ್ವಾಮಿ, ಸಾಧ್ವಿ ಪ್ರಜ್ಞಾಸಿಂಗ್‌ರಂತಹ ಬಾಂಬ್‌ಪ್ರಿಯರೂ ಇದ್ದಾರೆ. ಮತಾಂತರ, ಭಯೋತ್ಪಾದನೆ, ಗೋಮಾಂಸ, 'ಲವ್ ಜಿಹಾದ್' ಮುಂತಾದ ಭಾವನಾತ್ಮಕ ವಿಷಯಗಳಿಗೆ ಧರ್ಮದ ಲೇಪವನ್ನು ಕೊಟ್ಟು ಆ ಮೂಲಕ ಧರ್ಮಭೀರು ಹಿಂದೂಗಳನ್ನು, ಅದರಲ್ಲೂ ಮುಖ್ಯವಾಗಿ ಸವರ್ಣೀಯ ಹಿಂದೂಗಳನ್ನು, ಮರುಳಾಗಿಸಿ ಭಾರತದ ಜಾತ್ಯತೀತ, ಪ್ರಜಾತಾಂತ್ರಿಕ ಬುನಾದಿಯನ್ನು ಕಿತ್ತೊಗೆದು ಸರ್ವಾಧಿಕಾರಿ ಶೈಲಿಯ ಹಿಂದೂ ರಾಷ್ಟ್ರವನ್ನು ಸ್ಥಾಪಿಸುವುದೇ ಹಿಂದೂತ್ವವಾದಿಗಳ ಏಕೈಕ ಗುರಿಯಾಗಿದೆ. ಮಾನ್ಯ ಕಾಗೇರಿಯವರು ಪ್ರದರ್ಶಿಸಿರುವುದೂ ಇದೇ ಸರ್ವಾಧಿಕಾರಿ ಶೈಲಿಯನ್ನು.

'ಅಭಿನವ್ ಭಾರತ್'

ಹಿಂದೂತ್ವವಾದಿಗಳು 2007ರಲ್ಲಿ 'ಅಭಿನವ್ ಭಾರತ್' ಎಂಬ ನೂತನ ಸಂಘಟನೆಯೊಂದನ್ನು ಹುಟ್ಟುಹಾಕಿದರು. ಇದಕ್ಕೆ ತನ್ನದೇ ಆದ ಸಂವಿಧಾನವಿದೆ. "ಭಾರತ್ ಸ್ವರಾಜ್ಯ, ಸುರಾಜ್ಯ ಹಾಗೂ ಸುರಕ್ಷಾ" ಎಂಬ ಗುರಿ ಹಾಗೂ ಉದ್ದೇಶಗಳನ್ನು ಹೊಂದಿರುವ ಪ್ರತ್ಯೇಕ ಹಿಂದೂ ರಾಷ್ಟ್ರದ ಸ್ಥಾಪನೆಯೇ ಇದರ ಮುಖ್ಯ ಉದ್ದೇಶ. ಇಂದು ಭಯೋತ್ಪಾದನೆಯ ಆರೋಪ ಎದುರಿಸುತ್ತಿರುವ ಈ 'ಅಭಿನವ್ ಭಾರತ್' ಸಂಘಟನೆಯ ಪ್ರಸಕ್ತ ರಾಷ್ಟ್ರಾಧ್ಯಕ್ಷೆ ಯಾರು? ಸಾವರ್ಕರ್‌ರ ಸೋದರನ ಸೊಸೆ ಹಿಮಾನಿ ಸಾವರ್ಕರ್! ಭೂಸೇನೆಯ ಲೆ। ಕ। ಪ್ರಸಾದ್ ಪುರೋಹಿತ್ ಇದರ ಸಹಸಂಸ್ಥಾಪಕ. ಕಾರ್ಯನಿರ್ವಾಹಕ ಅಧ್ಯಕ್ಷನಾಗಿರುವ ಭೂಸೇನೆಯ ನಿವೃತ್ತ ಮೇ। ರಮೇಶ್ ಉಪಾಧ್ಯಾಯ ಹಿಂದೊಮ್ಮೆ ಆರೆಸ್ಸೆಸ್‌ನ 'ಮಾಜಿ ಸೇನಾಸಿಬ್ಬಂದಿ ವಿಭಾಗ'ದ ಮುಖ್ಯಸ್ಥನಾಗಿದ್ದರು.

ಭಾರತದ ಪ್ರಜಾತಾಂತ್ರಿಕ ಸರಕಾರವನ್ನು ಬುಡಮೇಲುಗೊಳಿಸುವ ಉದ್ದಿಶ್ಯವನ್ನು ಸಾಧಿಸುವುದಕ್ಕೋಸ್ಕರ ನೇಪಾಳ ಮತ್ತು ಇಸ್ರೇಲ್‌ನಂತಹ ವಿದೇಶಗಳ ಸಹಾಯ ಯಾಚಿಸಲೂ ಹಿಂದೆಮುಂದೆ ನೋಡದ ಸಂಘಟನೆ ಇದು. 'ಅಭಿನವ್ ಭಾರತ್'ನ ಸ್ಥಾಪನೆ ಮತ್ತು ನಿಧಿ ಸಂಗ್ರಹಣೆಗಳಲ್ಲಿ ವಿಶ್ವ ಹಿಂದೂ ಪರಿಷತ್ ನಾಯಕ ಪ್ರವೀಣ್ ತೊಗಾಡಿಯಾ ಕೂಡ ಪಾಲ್ಗೊಂಡಿದ್ದರೆಂದು ಪುರೋಹಿತ್ ಸಿಬಿಐಗೆ ತಿಳಿಸಿದ್ದಾರೆ. ಈ ಸಂಘಟನೆ ನಿಧಿ ಸಂಗ್ರಹಿಸಿ, ಶಸ್ತ್ರಾಸ್ತ್ರ, ಸ್ಫೋಟಕಗಳನ್ನು ಖರೀದಿಸಿ ಅದನ್ನೆಲ್ಲ ದುಷ್ಟ ಹಾಗೂ ರಾಷ್ಟ್ರವಿರೋಧಿ ಚಟುವಟಿಕೆಗಳಿಗಾಗಿ ಬಳಸಿಕೊಂಡಿರುವುದಕ್ಕೆ ಸಾಕಷ್ಟು ಪುರಾವೆಗಳು ಲಭ್ಯವಿವೆ. ಬಾಂಬು ಸ್ಫೋಟ ಇತ್ಯಾದಿ ದುಷ್ಕೃತ್ಯಗಳ ಮೂಲಕ ದೇಶಾದ್ಯಂತ ಕೋಮು ಗಲಭೆಗಳನ್ನು ಸೃಜಿಸಿ ಸಾಂವಿಧಾನಿಕವಾಗಿ ಸ್ಥಾಪಿತವಾಗಿರುವ ಸರಕಾರವನ್ನು ಅಸ್ಥಿರಗೊಳಿಸುವ ಯೋಜನೆಗಳನ್ನು ರೂಪಿಸುವುದಕ್ಕಾಗಿ ಭೋಪಾಲ, ಇಂದೋರ್, ನಾಸಿಕ್, ದೇವಲಾಲಿ, ಪುಣೆ, ಜಮ್ಮು ಮುಂತಾದ ಜಾಗಗಳಲ್ಲಿ ಸಂಘಟನೆಯ ಸಭೆ ನಡೆಸಿರುವುದಕ್ಕೂ ಸಾಕ್ಷ್ಯಾಧಾರಗಳಿವೆ. ದಯಾನಂದ್ ಪಾಂಡೆ ಉರುಫ್ ಸ್ವಾಮಿ ಅಮೃತಾನಂದ್ ಎಂಬಾತನ ಲ್ಯಾಪ್‌ಟಾಪ್‌ನಲ್ಲಿ ಆತ, ಸಾಧ್ವಿ ಪ್ರಜ್ಞಾಸಿಂಗ್ ಮತ್ತು ಪುರೋಹಿತ್ ವಿವಿಧ ಸಭೆಗಳಲ್ಲಿ ಆರ್‌ಡಿಎಕ್ಸ್, ರಾಸಾಯನಿಕ ಬಾಂಬ್ ಮತ್ತು ಹಾಗೂ ಅವುಗಳನ್ನು ಬಳಸುವ ಬಗ್ಗೆ ಮಾತಾಡುತ್ತಿದ್ದ ವಿವರಗಳಿವೆ. ಮಾಲೇಗಾಂವ್, ಹೈದರಾಬಾದ್, ಅಜ್ಮೀರ ಮತ್ತು ಸಂಝೋತಾ ಎಕ್ಸ್‌ಪ್ರೆಸ್ ಸ್ಫೋಟ ಪ್ರಕರಣಗಳ ಬಹುತೇಕ ಆರೋಪಿಗಳು 'ಅಭಿನವ್ ಭಾರತ್'ನ ಸದಸ್ಯರು.

ಜನವರಿ 23, 2004ರಲ್ಲಿ ವಿಶ್ವ ಹಿಂದೂ ಮಹಾಸಂಘ ಕಾಠ್ಮಂಡುವಿನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವೊಂದರಲ್ಲಿ ನೇಪಾಳದ ಅರಸು ಗ್ಯಾನೇಂದ್ರನನ್ನು ವಿಶ್ವಾದ್ಯಂತದ ಹಿಂದೂಗಳ ಸಾಮ್ರಾಟನೆಂದು ಕೊಂಡಾಡಲಾಯಿತು. ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಅಶೋಕ್ ಸಿಂಘಾಲ್ ಮಾತನಾಡಿ "ಧರ್ಮದ ರಕ್ಷಣೆಗಾಗಿ ಭಗವಂತನಿಂದ ಸೃಷ್ಟಿಸಲ್ಪಟ್ಟಿರುವ ಈ ಹಿಂದೂ ಸಾಮ್ರಾಟನನ್ನು ರಕ್ಷಿಸುವುದು ಜಗತ್ತಿನ 900 ಮಿಲಿಯ ಹಿಂದೂಗಳ ಕರ್ತವ್ಯ" ವೆಂದಿದ್ದರು.

ಇಂದಿನ 'ಅಭಿನವ್ ಭಾರತ್'ನ ನೇತಾರರೂ ನೇಪಾಳದ ದೊರೆಯೊಂದಿಗೆ ನಿಕಟ ಸಂಪರ್ಕಗಳನ್ನು ಇಟ್ಟುಕೊಂಡಿದ್ದರು. ಅದೇ ರೀತಿ ಇಸ್ರೇಲ್ ಜೊತೆಗೂ ಸಂಪರ್ಕ ಮಾಡಿದ್ದರು. 2008ರ ಮಾಲೇಗಾಂವ್ ಮತ್ತಿತರ ಸ್ಫೋಟ ಪ್ರಕರಣಗಳ 14 ಮಂದಿ ಆರೋಪಿಗಳ ಪೈಕಿ ಪುರೋಹಿತ್ ಮತ್ತು ದಯಾನಂದ್ ಪಾಂಡೆ ಇವರುಗಳ ಸಂಭಾಷಣೆಯೊಂದರ ಸ್ಯಾಂಪಲ್ ಇಲ್ಲಿದೆ:

"ನಾವು ಜೂನ್ 24, 2006ರಂದು ಮತ್ತು 2007ರಲ್ಲಿ ದೊರೆ ಗ್ಯಾನೇಂದ್ರನನ್ನು ಭೇಟಿಯಾಗಿದ್ದೆವು.... ಪ್ರಸ್ತಾಪವನ್ನು ರಾಜ ಅಂಗೀಕರಿಸಿದ್ದ.... ಅಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ನನ್ನ ಕಡೆಯಿಂದ 20 ಅಧಿಕಾರಿಗಳನ್ನೂ 200 ಸೈನಿಕರನ್ನೂ ತರಬೇತುಗೊಳಿಸಲಾಗುವುದು. ನನಗೆ ಪ್ರತಿ ವರ್ಷ 40 ಅಧಿಕಾರಿಗಳು ಹಾಗೂ 400 ಸೈನಿಕರು ದೊರೆಯಲಿದ್ದಾರೆ. ಆತನದ್ದು ಒಂದು ಸ್ವತಂತ್ರ ರಾಷ್ಟ್ರವಾಗಿರುವುದರಿಂದ ಆತ ಝೆಕೊಸ್ಲೊವಾಕಿಯದಿಂದ ಎಕೆ–47 ಗಳನ್ನು ಪಡೆದುಕೊಳ್ಳಬಹುದು, ದುಡ್ಡು ನಾನು ಕೊಡುವೆ, ಗುಂಡುಗಳ ವ್ಯವಸ್ಥೆ ನಾನು ಮಾಡುವೆನೆಂದು ದೊರೆಯಲ್ಲಿ ಕೋರಿಕೊಂಡಾಗ ದೊರೆ ಇದಕ್ಕೆ ಸಮ್ಮತಿಸಿದ್ದಾರೆ...."

"(ಇಸ್ರೇಲಿಗಳೊಂದಿಗೆ) ನಾವು ನಾಲ್ಕು ಅಂಶಗಳಿಗಾಗಿ ಕೇಳಿಕೊಂಡಿದ್ದೇವೆ. ಒಂದು, ಉಪಕರಣಗಳ ನಿರಂತರ, ತಡೆರಹಿತ ಪೂರೈಕೆ ಹಾಗೂ ತರಬೇತು. ಎರಡು, ಟೆಲ್ ಅವೀವ್‌ನಲ್ಲಿ ನಮ್ಮ ಕೇಸರಿ ಧ್ವಜದೊಂದಿಗೆ ನಮ್ಮ ಕಚೇರಿ ತೆರೆಯಲು ಅನುಮತಿ. ಮೂರು, ರಾಜಕೀಯ ಆಶ್ರಯ. ನಾಲ್ಕು, ಹಿಂದೂ ರಾಷ್ಟ್ರದ ಜನನವನ್ನು ವಿಶ್ವ ಸಂಸ್ಥೆಯಲ್ಲಿ ಘೋಷಿಸುವ ನಮ್ಮ ಧ್ಯೇಯಕ್ಕೆ ಬೆಂಬಲ."

ಈಗ ನೀವೇ ಹೇಳಿ ದೇಶ ಬಿಟ್ಟು ತೊಲಗಬೇಕಾದವರು ಯಾರು? □

ಕೆಲವು ಸ್ವ-ಧರ್ಮಿಣಿಯರು



ಒಲ್ಲದ ತಾಳಿ ಗಂಡನ
ತೊರೆದು
ನೆಚ್ಚಿನ ಚೆನ್ನಮಲ್ಲನ ಅರಸಿ
ಹುಟ್ಟುಡುಗೆಯಲ್ಲೆ ಹೊರಟ
ಉಡು ತಡಿಯ ಕೇಶಾಂಬರಿ!

ಕೋಟೆಯ ಚೆಲುವನಿಗೆ
ದುಂಬಾಲು ಬಿದ್ದ
ಡೆಲ್ಲಿಯ ಬೀಬಿ!
ಬಿಜಾಪುರದ ಇಜಾರದವನ
ತೇಜ ಮಹಲಿನ ಹಜಾರದಲ್ಲಿ
ರಂಭಾಳ ಗುಲಾಬಿ!

* * *

ಧರ್ಮ ಕರ್ಮಗಳ
ಪುಣ್ಯ ಕಥಾ ರಾಶಿಯಲ್ಲಿ
ದೇವ ಗುರು ಸತಿ, ತಾರೆ
ಪತಿ ಶಿಷ್ಯ ಶಶಿಯನೀರೆ!

ಅಂಗದ ಮಾತೆ ವಾಲಿಯ ವಿಧವೆ
ಸುಗ್ರೀವನ ಹೃದಯದೊಡವೆ!

ಬೃಂದಾವನದಲ್ಲಿ
ಮುರುಳಿ ಮೋಹನನ ಜತೆ
ಪತಿಯ ಮರೆತ ರಾಧೆ!

ಐದರಾಚೆಗೂ ತುಡಿದು
ಪಂಚ ಸತಿ ಸಾಲಿನಲಿ
ಮಿಂಚಿದ ದ್ರುಪದೆ!

ಗಾನಲೋಲ ಆನೆಯಾಳು
ಅಷ್ಟಾವಕ್ರನ ಕೊಟ್ಟಿಗೆಯಲ್ಲಿ
ಹಿಟ್ಟಿನ ಹುಂಜದವನ ರಾಣಿ!

* * *

ಹದಿ ಬದೆಯ ಧರ್ಮವ
ಬರೆದು, ಹೆಸರಾದ
ಅರಮನೆ ಸಂಚಿಯಮ್ಮ!

ಎದೆ ಕುದಿಗಳ ಒರೆದು
ತಲೆ ಮರೆಸಿಕೊಂಡ
ನಸರಿ ತಸ್ಲೀಮಾ!
'ಸುರಯ್ಯ'ಾದ ಕಮಲಾ...!

❍ ಬಿ. ರಾಜಣ್ಣ

ಗಂಡು-ಹೆಣ್ಣಾದ ಬದುಕಿನ ಕಥನಗಳು

ಚಂಪಾ

ನೀವು ಟ್ರ್ಯಾಫಿಕ್ ಸಿಗಲ್‌ನಲ್ಲಿ ಆಟೋದಲ್ಲಿ ಕೂತಿರುತ್ತೀರಿ, ರಸ್ತೆಯಲ್ಲಿ ನಡೆಯುತ್ತಿರುತ್ತೀರಿ ಅಥವಾ ಕಾರೊಳಗೆ ಬೆಚ್ಚಗೆ ಡ್ರೈವ್ ಮಾಡುತ್ತಿರುತ್ತೀರಿ. ತಟ್ಟನೆ ಚಪ್ಪಾಳೆ ತಟ್ಟಿ ನಿಮ್ಮ ಗಮನ ಸೆಳೆಯುವ ಈ ಮಂದಿ ನಿಮ್ಮ ಮುಖದಲ್ಲಿ ಕಂಡೂ-ಕಾಣದ ವ್ಯಂಗ್ಯ ಹುಟ್ಟಿಸುತ್ತಾರೆ, ಮುಖದಲ್ಲಿ ತಿಳಿನಗೆ ತರಿಸುತ್ತಾರೆ, ಕಂಡೂ ಕಾಣದ ಹಾಗೆ ಮುಖ ತಿರುಗಿಸುತ್ತೀರಿ. ಮನಸ್ಸಿದ್ದರೆ ಒಂದೋ ಎರಡೋ ರೂ ಎಸೆದು ನಿಮ್ಮ ಪಾಡಿಗೆ ನೀವು ನಿಮ್ಮ ಪ್ರಪಂಚದ ಆಗು-ಹೋಗುಗಳೊಳಗೆ ಮುಳುಗಿಬಿಡುತ್ತೀರಿ. ಪಡ್ಡೆ ಹುಡುಗರ ಮನಸ್ಸಿನಲ್ಲಿ ಇವರ ದೇಹದ ಒಳಗೆ ಲೈಂಗಿಕ ಚಿಹ್ನೆ ಏನಿರಬಹುದೆಂಬ ಕುತೂಹಲ ಹುಟ್ಟಿಲಿಕ್ಕೂ ಸಾಕು. ಸಾಧಾರಣವಾಗಿ ನಿಮ್ಮ ಮನಸ್ಸಿನಲ್ಲಿ ನಂ 9 ಎಂದೋ, ಚಕ್ಕ ಎಂದೋ ಒಂದು ಭಾವ ಸುಳಿಯುತ್ತದೆ. ಈ ಭಾಷೆ ನಮ್ಮೆಲ್ಲರ ಮನದಲ್ಲಿ ಇಳಿದುಬಿಟ್ಟಿದೆ. ಇದಿಷ್ಟು ಮುಖ್ಯವಾಹಿನಿಯ ಜನರು ಹಿಜ್ರಾಗಳೊಂದಿಗೆ ಮುಖಾಮುಖಿಯಾಗುವ ಸನ್ನಿವೇಶಗಳು. ಹೀಗೆ ಕಾಣಿಸಿಕೊಂಡು ಹಾಗೆ ಹೋಗಿಬಿಡುವ ಈ ಹಿಜ್ರಾಗಳು ನಮ್ಮ 'ನಾರ್ಮಲ್' ಎನ್ನುವ ಬದುಕಿನ ಕಲ್ಪನೆಯನ್ನೇ ಬುಡಮೇಲು ಮಾಡಬಲ್ಲರು ಎಂಬುದು ನಮಗೆ ಅರ್ಥವಾಗುವುದು ರೇವತಿ ಹಾಗೂ ವಿದ್ಯಾರಂತಹವರ ಆತ್ಮಕಥನಗಳಿಂದ ಮಾತ್ರ.

ಆಯ್ಕೆ ಸಾಧ್ಯವಾಗದೇ ಇರುವ ಅಥವಾ ಪ್ರಸ್ತುತ ಸಮಾಜದ ಮೌಲ್ಯಗಳಲ್ಲಿ ಸಾಧ್ಯವಾಗದೇ ಇರುವ ಅಥವಾ ಪ್ರಸ್ತುತ ಸಮಾಜದ ಮೌಲ್ಯಗಳಲ್ಲಿ ಸಾಧ್ಯವಾಗದಂತಿರುವ ಹಿಜ್ರಾಗಳ ಬದುಕಿನ ಚಿತ್ರಣಗಳು ನಮ್ಮಲ್ಲಿ ಒಂದು ದುಗುಡವನ್ನು ಹುಟ್ಟಿಸಬಹುದು. ಗಂಡು-ಹೆಣ್ಣು ಎಂಬ ಎರಡು ಸ್ಪಷ್ಟ ವಿಭಾಗಗಳನ್ನು ನೋಡಿರುವ ನಮಗೆ ಹಿಜ್ರಾ ಜನರ ಗಂಡಿನ ವೇಷದೊಳಗೆ ಬಂಧಿತವಾಗಿರುವ ಹೆಣ್ಣಿನ ಮನಸ್ಸಿನ ದುಗುಡ, ಆತಂಕಗಳು ಈ ಆತ್ಮಕಥನಗಳಲ್ಲಿ ಕಂಡುಬರುತ್ತವೆ. ನಮ್ಮ ಗ್ರಹಿಕೆಯ ಪೂರ್ವಾಗ್ರಹಪೀಡಿತ ನಿಲುವುಗಳನ್ನೂ ಸಹ ಈ ಕಥನಗಳು ಪ್ರಶ್ನಿಸುತ್ತಿವೆ.

ರೇವತಿ

ಲಿವಿಂಗ್ ಸ್ಮೈಲ್ ವಿದ್ಯಾ ಹಾಗೂ ರೇವತಿ ಇಬ್ಬರೂ ತಮಿಳುನಾಡಿನ ಮೂಲದವರೇ. ರೇವತಿಯವರ 'ಏ ಹಿಜ್ರಾ ಲೈಫ್ ಹಿಸ್ಟರಿ' ಓದಿದಾಗ ಲಂಕೇಶರು ಅನುವಾದಿಸಿದ ಬೋದಿಲೇರನ 'ಪಾಪದ ಹೂಗಳು' ಕವನ ಸಂಕಲನ ಜ್ಞಾಪಕಕ್ಕೆ ಬರುತ್ತದೆ. ಆಯ್ಕೆ ಸಾಧ್ಯವಾಗದ ಹಂತದಲ್ಲಿ ಪಾಪದ ಕೂಪದಲ್ಲಿಯೇ ಎಡವುತ್ತಾ, ತಡವುತ್ತಾ ಬದುಕಿದ ರೇವತಿಯವರು ನಾಮಕ್ಕಲ್ ಎಂಬ ಹಳ್ಳಿಯಲ್ಲಿನ ತಮ್ಮ ಬಾಲ್ಯದ ದಿನಗಳನ್ನು ಜ್ಞಾಪಿಸಿಕೊಳ್ಳುತ್ತಾರೆ. ಹೆಣ್ತನದ ಅಭಿವ್ಯಕ್ತಿಯ ಬಯಕೆ ತನ್ನಲ್ಲಿ ಎಷ್ಟು ಇತ್ತೆಂದರೆ ತಾಯಿ ಸತ್ತಾಗ ಚಿಕ್ಕವನಾಗಿದ್ದ ತಾನು ಯಾರಿಗೂ ಗೊತ್ತಾಗದ ಹಾಗೆ ಲಂಗ ಹಾಕಿ ಕೊಂಡು ಕುಣಿದದ್ದನ್ನು ವಿದ್ಯಾ ನೆನಪಿಸಿಕೊಳ್ಳುತ್ತಾರೆ. ಇಬ್ಬರೂ ಹೆಣ್ತ ನದ ಅಭಿವ್ಯಕ್ತಿಗಾಗಿ ಅಕ್ಕ-ತಂಗಿಯರ ಸ್ಕರ್ಟ್, ಬ್ಲೌಸ್ ಕದ್ದದ್ದನ್ನು ಜ್ಞಾಪಿಸಿಕೊಳ್ಳುತ್ತಾರೆ. ರೇವತಿ ದೇವಸ್ಥಾನದಲ್ಲಿ ಹೆಣ್ಣು ವೇಷ ತೊಟ್ಟು ಕೊಂಡು ಮಾಡುವ ನೃತ್ಯ ಅವರ ಆತ್ಮಸಂತೃಪ್ತಿಗೆ ಕಾರಣವಾಗುತ್ತದೆ. ಹರಿಶ್ಚಂದ್ರ ಕಥೆಯ ಚಂದ್ರಮತಿಯ ಪಾತ್ರ ಮಾಡುವಾಗ ಕೂಡಾ ಈಕೆ ಹೆಣ್ತನದ ಸುಖವನ್ನು ಕಾಣುತ್ತಾಳೆ. ವಿದ್ಯಾ ಬದುಕಿನುದ್ದಕ್ಕೂ ರಂಗಭೂಮಿಯ ಸಂಬಂಧವನ್ನು ಒಂದು ಗೀಳಾಗಿಯೇ ಅಂಟಿಸಿ ಕೊಂಡು ಬಿಡುತ್ತಾರೆ. ಕಂಪ್ಯೂಟರ್ ಸೈನ್ಸ್‌ನಲ್ಲಿ ಪದವಿ ಪಡೆಯುವ ತನಕ ವಿದ್ಯಾ ತಮ್ಮೊಳಗೀನ ಗಂಡು-ಹೆಣ್ಣಿನ ದ್ವಂದ್ವವನ್ನು ಹಾಗೋ ಹೀಗೋ ಬಚ್ಚಿಟ್ಟುಕೊಂಡೇ ಬರುತ್ತಾರೆ. ಹೆಣ್ಣಾಗಲೇಬೇಕೆಂಬ ಭಾವ ರೌದ್ರ ಸ್ವರೂಪ ತಾಳಿದಾಗ ವಿದ್ಯಾ ತಮ್ಮ ಅಂತರಂಗದ ಅಳಲನ್ನು, ತಾನೊಬ್ಬ ಹಿಜ್ರಾ ಎಂಬುದನ್ನು, ಗಂಡಿನ ವೇಷದಲ್ಲಿರುವ ಹೆಣ್ಣು ಎಂಬುದನ್ನು ಸಾಹಿತ್ಯ, ರಂಗಭೂಮಿಯ ಗೆಳೆಯರೊಂದಿಗೆ ಹಂಚಿ ಕೊಳ್ಳುತ್ತಾರೆ. ಈ ಗೆಳೆಯರು ತಮ್ಮ ಬದುಕಿಗೆ ಬೆನ್ನೆಲುಬಾಗಿ ನಿಂತು ಆಶ್ವಾಸನೆ ಇತ್ತುದನ್ನೂ ಕೂಡಾ ವಿದ್ಯಾ ಪ್ರೀತಿಯಿಂದ ನೆನೆಯುತ್ತಾರೆ. ಪದವೀಧರೆಯಾದ ವಿದ್ಯಾರಲ್ಲಿ ಭಿಕ್ಷೆ ಬೇಡಿದ್ರೂ ಸರಿ, ತಾನು ಹೆಣ್ಣಾಗಿಯೇ ಬದುಕುತ್ತೇನೆಂಬ ಹಟ ಹುಟ್ಟಿದಾಗ 'ನಿರ್ವಾಣ'ಕ್ಕಾಗಿ ಈಕೆ 'ತನ್ನ ಸಮುದಾಯ'ದವರೊಡನೆ ಒಡನಾಟ ಬೆಳೆಸುತ್ತಾರೆ.

ನಿರ್ವಾಣ'ಕ್ಕಾಗಿ ಅಂದರೆ ಆಪರೇಷನ್ ಮಾಡಿಸಿಕೊಳ್ಳುವ ಹಾಗೂ ಆನಂತರದ ಆರೈಕೆಗೆ ತಮ್ಮ ಸಮುದಾಯದವರೇ ಆಗುವುದು ಎಂಬುದು ಸದ್ಯದ ವಾಸ್ತವದಲ್ಲಿ ಹಿಜ್ರಾಗಳಿಗೆ ಅನುಭವ ವೇದ್ಯವಾದ ಮಾತಾಗಿದೆ. ಯಾಕೆಂದರೆ ಭಾರತದಲ್ಲಿ ಯಾವ ಕುಟುಂಬಗಳೂ ಹಿಜ್ರಾಗಳನ್ನು ತಮ್ಮ ಮಕ್ಕಳು ಎಂದು ಒಪ್ಪಿಕೊಳ್ಳುವ ಸ್ಥಿತಿಯಲ್ಲಿಯೇ ಇಲ್ಲ. ಆಪರೇಷನ್ ನ್ಯಾಯ ಬದ್ಧವಾಗಿಲ್ಲ. ಕುಟುಂಬದವರು ಅವರ ಹೆಣ್ಣಿನ ಅಭಿವ್ಯಕ್ತಿಗೆ ಪ್ರಾಮುಖ್ಯತೆ ಕೊಟ್ಟು ಆಪರೇಷನ್ ಮಾಡಿಸುವ ಜವಾಬ್ದಾರಿ ಹೊರುವುದಂತೂ ಇನ್ನೂ ಕನಸಿನ ಮಾತಾಗಿದೆ. ಹಾಗಾಗಿ ಓದಿದವರೋ ಅಥವಾ ಓದದಿರುವವರೋ-ಹಿಜ್ರಾಗಳು ತಮ್ಮ ಸಮುದಾಯದ ನೆರವಿನಿಂದಲೇ ಈ 'ನಿರ್ಮಾಣ' ಹೊಂದುತ್ತಿರುವುದನ್ನು ಕಾಣಬಹುದಾಗಿದೆ. ರೇವತಿಯವರ ಸಂಪರ್ಕಕ್ಕೆ ಬರುವ ಇಂಗ್ಲೀಷ್ ಮಾತನಾಡಬಲ್ಲ ಫಮಿಲಾ ಹಾಗೂ ಇತರ ಹಿಜ್ರಾಗಳೂ ಸಹ 'ನಿರ್ವಾಣ'ಕ್ಕಾಗಿ ತಮ್ಮ ಸಮುದಾಯದ ಸಹಾಯ ಹಸ್ತಕ್ಕೆ ಕೈ ಚಾಚುವುದನ್ನು ನಾವು ಕಾಣಬಹುದು.

'ಹಿಜರಾ' ಆಗಿರುವ ಮಕ್ಕಳು ತಮಗೆ ಅವಮಾನಕಾರಿ ಎಂದೇ ಕುಟುಂಬದವರು ಭಾವಿಸುತ್ತಾರೆ. ಹಾಗಾಗಿ ಬಾಲ್ಯದ ಅವಮಾನಗಳಿಂದ ನೊಂದ-ಬೆಂದ ಮಕ್ಕಳು ಸಮುದಾಯದ ನೆರವನ್ನು ಹುಡುಕಿಕೊಂಡು ಹೋಗುವುದನ್ನು ನಾವು ಕಾಣಬಹುದಾಗಿದೆ. 10ನೇಯ ತರಗತಿಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಫೇಲಾಗುವ ರೇವತಿ ಕೂಡಾ ತಮ್ಮ ಸಮು

'ಏ ಹಿಜ್ರಾ ಲೈಫ್ ಹಿಸ್ಟರಿ' ಓದಿದಾಗ ಲಂಕೇಶರು ಅನುವಾದಿಸಿದ ಬೋದಿಲೇರನ 'ಪಾಪದ ಹೂಗಳು' ಕವನ ಸಂಕಲನ ಜ್ಞಾಪಕಕ್ಕೆ ಬರುತ್ತದೆ. ಆಯ್ಕೆ ಸಾಧ್ಯವಾಗದ ಹಂತದಲ್ಲಿ ಪಾಪದ ಕೂಪದಲ್ಲಿಯೇ ಎಡವುತ್ತಾ, ತಡವುತ್ತಾ ಬದುಕಿದ ರೇವತಿಯವರು ನಾಮಕ್ಕಲ್ ಎಂಬ ಹಳ್ಳಿಯಲ್ಲಿನ ತಮ್ಮ ಬಾಲ್ಯದ ದಿನಗಳನ್ನು ಜ್ಞಾಪಿಸಿಕೊಳ್ಳುತ್ತಾರೆ. ಹೆಣ್ತನದ ಅಭಿವ್ಯಕ್ತಿಯ ಬಯಕೆ ತನ್ನಲ್ಲಿ ಎಷ್ಟು ಇತ್ತೆಂದರೆ ತಾಯಿ ಸತ್ತಾಗ ಚಿಕ್ಕವನಾಗಿದ್ದ ತಾನು ಯಾರಿಗೂ ಗೊತ್ತಾಗದ ಹಾಗೆ ಲಂಗ ಹಾಕಿ ಕೊಂಡು ಕುಣಿದದ್ದನ್ನು ವಿದ್ಯಾ ನೆನಪಿಸಿಕೊಳ್ಳುತ್ತಾರೆ. ಇಬ್ಬರೂ ಹೆಣ್ತ ನದ ಅಭಿವ್ಯಕ್ತಿಗಾಗಿ ಅಕ್ಕ-ತಂಗಿಯರ ಸ್ಕರ್ಟ್, ಬ್ಲೌಸ್ ಕದ್ದದ್ದನ್ನು ಜ್ಞಾಪಿಸಿಕೊಳ್ಳುತ್ತಾರೆ.

ದಾಯವರೊಡನೆ ಸಂಪರ್ಕ ಬೆಳಸಿ ಹೆಣ್ಣಾಗಿ ಬದುಕುವು ದಕ್ಕಾಗಿ ಓಡಿ ಹೋಗುವುದನ್ನು ನಾವು ಕಾಣಬಹುದು. ಹಿಜ್ರಾಗಳ ಬದುಕಿನಲ್ಲಿ ಬಾಲ್ಯದ ಬವಣೆಗಳು ಹೆಚ್ಚು. ಕುಟುಂಬದಲ್ಲಿ ಹೇಳಲಿಕ್ಕೆ ಆಗದೇ ಒದ್ದಾಡುವುದರ ಜೊತೆಗೆ ಸಹಪಾಠಿಗಳಿಂದ, ಸುತ್ತ-ಮುತ್ತಲಿನವರಿಂದ ಅಪಮಾನಗಳು. ನಂ 9 ಎಂದು ಕರೆದು ಅವಮಾನ ಮಾಡುವವರು, ಕಿಚಾಯಿಸುವವರು, ಹೆಣ್ಣೇನೋ ಎಂದು ಅವಹೇಳನ ಮಾಡುವವರು-ಇಂತಹ ಬಾಲ್ಯದ ಜೀವ ನದಲ್ಲಿ ಓದನ್ನು ಮುಂದುವರಿಸುವವರೇ ಕಡಿಮೆ. ವಿದ್ಯಾ ಇದಕ್ಕೊಂದು ಅಪವಾದ. ಈಕೆಯ ಓದು, ದೃಷ್ಟಿ ಕೋನ. ಈಕೆ ವಿದ್ಯಾವಂತೆ, ಕಲಾವಿದೆ, ಹೀಗೇ ತನ್ನ ಬದುಕು ಇರಬೇಕೆಂಬ ದಿಟ್ಟ ನಿಲುವು ಹೊಂದಿದವಳೂ ಕೂಡಾ.

ಆಯ್ಕೆ ಸಾಧ್ಯಾವಾಗದ ಹಂತದಲ್ಲಿ ಪಾಪಕೂಪದ ಜೀವನದಲ್ಲಿ ಮಿಂದು ಎದ್ದ ರೇವತಿ, ಮೌಲ್ಯಾಧಾರಿತ ಬದುಕನ್ನೇ ಆರಿಸಿಕೊಳ್ಳಬೇಕೆಂಬ ಹಟದಿಂದಲೇ ಆಯ್ಕೆ ಮಾಡಿಕೊಂಡು ಬದುಕಿದ ವಿದ್ಯಾ ಇಬ್ಬರೂ ಹಿಜ್ರಾ ಬದುಕಿನ ಜೀವನಕ್ಕೆ ಕನ್ನಡಿ ಹಿಡಿಯುತ್ತಾರೆ. ಕನ್ನಡಿಯ ಬಗ್ಗೆ ಇಬ್ಬರೂ ವಿಶೇಷವಾಗಿಯೇ ಪ್ರಸ್ತಾಪ ಮಾಡುತ್ತಾರೆ. ನಾರ್ಮಲ್ ಎನ್ನಿಸಿಕೊಂಡವರಿಗೆ ಈ ಸಮಾಜದಲ್ಲಿ ಕನ್ನಡಿ ನಮ್ಮ ಬಾಹ್ಯ ರೂಪದ ಪ್ರತಿಬಿಂಬ ಮಾತ್ರ. ಆದರೆ ರೇವತಿ, ವಿದ್ಯಾ ಈರ್ವರಿಗೂ ಕನ್ನಡಿ ಪುರುಷ ದೇಹದೊಳಗಿನ ಹೆಣ್ತನವನ್ನು ಅಭಿವ್ಯಕ್ತಿಗೊಳಿಸಲಿಕ್ಕೆ ಇರುವ ಮುಖ್ಯವಾದ ಅಂಶ. ಹಾಗಾಗಿ ಕನ್ನಡಿಯ ಬಗ್ಗೆ ವಿದ್ಯಾ ಬರೆಯುತ್ತಾರೆ:

ವಿದ್ಯಾ 'ನಿರ್ವಾಣ'ಕ್ಕಾಗಿ ಓಡಿಹೋದ ಹಂತದಲ್ಲಿ ನಿಂತು ಬಾಲ್ಯದ ಅನುಭವಗಳಿಗೆ ಮರಳಿದರೆ ರೇವತಿ ತಮ್ಮ ಹುಟ್ಟೂರಿನಿಂದಲೇ ತಮ್ಮ ಜೀವನದ ಕಥೆಯನ್ನು ಪ್ರಾರಂಭಿಸುತ್ತಾರೆ. "ನಾನು ಯಾರು? ತತ್ವಗಳ ಆರಂಭವೂ ಅಂತ್ಯವೂ ಅಡಗಿರುವುದು ಈ ಪ್ರಶ್ನೆಯಲ್ಲಿಯೇ"-ಎಂಬ ಸಾಲು 'ನಾನು ಅವನಲ್ಲ...' ಪುಸ್ತಕದ ಆರಂಭದಲ್ಲಿ ಇದೆ. ಬಾಲ್ಯದಲ್ಲಿ ರೇವತಿ, ವಿದ್ಯಾರಿಗೆ ಕಾಡುವ ಪ್ರಶ್ನೆಯೂ ಇದೇಯೇ. ಗಂಡೋ-ಹೆಣ್ಣೋ, ಗಂಡಿನ ವೇಷದಲ್ಲಿ ಬಂಧಿತಳಾದ ತಾನು ಹೆಣ್ಣಾಗುವುದು ಹೇಗೆ? ಈ ತಹ ತಹ, ತವಕಗಳು ಇಬ್ಬರ ಆತ್ಮಕಥನದಲ್ಲಿಯೂ ಕಂಡುಬರುತ್ತವೆ. ಯಾರೂ ಇಲ್ಲಾದಾಗ ಸೊಂಟ ಬಳುಕಿಸಿ ಓಡಾಡುವುದು, ನೃತ್ಯ ಮಾಡುವುದು, ಕನ್ನಡಿಯ ಮುಂದೆ ನಿಂತು ಹೆಣ್ಣಂತೆ ನಟಿಸುವುದು-ಹೆಣ್ತನದ ಅಭಿವ್ಯಕ್ತಿ ಕೊಡುವ ಆನಂದದ ಭಾವವನ್ನು ಇಬ್ಬರೂ ಉತ್ಕಟವಾದ ಭಾಷೆಯಲ್ಲಿ ಬರೆಯುತ್ತಾರೆ. ವಿದ್ಯಾ ನಾಲ್ಕನೇ ದರ್ಜೆಯ ಕಸ ಗುಡಿಸುವ ನೌಕರನ ಒಬ್ಬನೇ ಮಗ-ಶರವಣನಾಗಿ ಹುಟ್ಟಿ-ಬಾಹ್ಯ ಜೀವನದಲ್ಲಿ ಗಂಡಸಿನಂತೆ, ಅಂತರಂಗದಲ್ಲಿ ಹೆಣ್ಣಿನಂತೆ ಬದುಕಲು ಇಷ್ಟಪಡದವಳು. ರೇವತಿ ನಾಲ್ಕು ಗಂಡು ಮಕ್ಕಳಲ್ಲಿ-ಒಬ್ಬರು, ದೊರೆಸ್ವಾಮಿ. ವಿದ್ಯಾರ ಕುಟುಂಬ ಜಾತಿಯ ಹೆಸರಿನಲ್ಲಿ ಸಮಾಜ ತಮ್ಮನ್ನು ದೂರವಿಟ್ಟ ನೋವಿನಿಂದ ನೊಂದವರು.

ವಿದ್ಯಾ ಪದವೀಧರೆಯಾದರೂ, ರೇವತಿ 10ನೇಯ ತರಗತಿಯಲ್ಲಿ ಇಂಗ್ಲಿಷ್ ಫೇಲಾಗಿ ವಿದ್ಯಾಭ್ಯಾಸ ನಿಲ್ಲಿಸಿದ್ದರೂ-ಈ ಓದು ಎನ್ನುವುದು ಅಂತಹ ಪರಿಣಾಮಕಾರಿ ಬದಲಾವಣೆಯನ್ನೇನೂ ತರದು ಎನ್ನುವುದು ಇವರ ಸಮುದಾಯದವರ ಅಳಲು. 'ಓದಿದ್ರೂ, ಓದದಿದ್ರೂ ಕೋಲೆಗಳು ಕೋಲೆಗಳೇ ಆಯ್ತಾ' ಎನ್ನುವುದು ಹಿಜ್ರಾ

ಲೀವಿಂಗ್ ಸ್ಮೈಲ್ ವಿದ್ಯಾ

ಸಮುದಾಯದ ನಿಲುವು. 'ನಿರ್ವಾಣ'ವಾದ ಮೇಲೆ ಹೆಣ್ಣಾಗುವ ಪ್ರಕ್ರಿಯೆಯ ಒಂದು ಸಾಂಸ್ಕೃತಿಕ ಆಚರಣೆಯ ಹೊಣೆಯನ್ನು ಈ ಸಮುದಾಯವೇ ಹೊರುತ್ತದೆ. ನಿರ್ಮಾಣ'ವಾದ ನಲವತ್ತು ದಿನಗಳಕಾಲ ಇವರನ್ನು ನೋಡಿಕೊಳ್ಳುವ ಹೊಣೆಯನ್ನು ಕೂಡಾ ಸಮುದಾಯದವರೇ ಹೊತ್ತುಕೊಳ್ಳುತ್ತಾರೆ. ವಿದ್ಯಾರವರು ಬದುಕಿಗೆ ಬೇರೆ ರೀತಿಯಲ್ಲಿ ತೆರೆದುಕೊಂಡಿರುವುದರಿಂದ 'ನಿರ್ವಾಣ'ಕ್ಕಾಗಿ ಮಾತ್ರ ಸಮುದಾಯದ ಒಳಗೆ ಬೆರೆಯುತ್ತಾರೆ. ಆದರೆ ಸಮುದಾಯದಲ್ಲಿ ರೂಢಿಗತವಾಗಿರುವ ಭಿಕ್ಷೆ ಬೇಡುವ/ಲೈಂಗಿಕ ವೃತ್ತಿಯ ಬಗ್ಗೆ ಈಕೆಗೆ ಪ್ರಾರಂಭದಿಂದಲೂ ವಿರೋಧ. 'ನಿರ್ವಾಣ'ಕ್ಕಾಗಿ ಭಿಕ್ಷೆ ಬೇಡಲೇಬೇಕಾದ ಪರಿಸ್ಥಿತಿ ಬಂದಾಗ ಈಕೆಗೆ ತಮ್ಮ ಪದವಿ, ಸರ್ಟಿಫಿಕೇಟ್ಸ್ ಎಲ್ಲವೂ ಜ್ಞಾಪಕಕ್ಕೆ ಬರುತ್ತವೆ.

ರೇವತಿ ಬದುಕಿನುದ್ದಕ್ಕೂ ಸಮುದಾಯದ ಒಳಗೇ ತಮ್ಮನ್ನು ಗುರುತಿಸಿಕೊಳ್ಳುತ್ತಾ ಹೋಗುತ್ತಾರೆ. ಸಮುದಾಯದಲ್ಲಿ ಅನೇಕ ಗುರುಗಳಿಗೆ ಚೇಲಾ ಆಗುತ್ತಾರೆ. ಲೈಂಗಿಕ ಅಭಿಲಾಷೆಗಾಗಿ ಎಂದು ಲೈಂಗಿಕ ವೃತ್ತಿಗೆ ಇಳಿಯುವ ರೇವತಿ ಇದನ್ನು ಉದ್ಯೋಗವಾಗಿ ಸ್ವೀಕರಿಸಲೇ ಬೇಕಾದಾಗ ಅಲ್ಲಿ ಅನುಭವಿಸುವ ಹಿಂಸೆಯನ್ನು ಬಿಚ್ಚಿ ಇಡುತ್ತಾರೆ. ಈ ಬದುಕಿನ ರುದ್ರ ಮುಖದ ಭಾಗವನ್ನು ನಾವು ರೇವತಿಯವರ ಆತ್ಮಕಥನದಲ್ಲಿ ನೋಡಬಹುದಾಗಿದದೆ. ರೌಡಿಗಳು ಹೆದರಿಸಿ ಅವರಿಗೆ ಬೇಕಾದ ಹಾಗೆ ಈಕೆಯಿಂದ ಲೈಂಗಿಕ ತೃಷೆ ತೀರಿಸಿಕೊಳ್ಳುವುದು. ಈಕೆಯಿಂದಲೇ ಹಣ ಕಸಿದುಕೊಂಡು ಹೋಗುವುದು, ಹಣಕ್ಕಾಗಿ ಮತ್ತೆ ಮತ್ತೆ ಬ್ಲಾಕ್ ಮೇಲ್ ಮಾಡುವುದು, ಗಿರಾಕಿಗಳನ್ನು ಕರೆಯುವಾಗ ಸಮುದಾಯದ ಭಿನ್ನ ಭಿನ್ನ ಬಣದ ನಡುವೆ ನಡೆಯುವ ತಿಕ್ಕಾಟಗಳು, ಹೆಣ್ಣೆಂದೇ ತೋರುವಂತೆ ಹುನ್ನಾರಗಳ ಮಾಡಿ ಗಿರಾಕಿಗಳನ್ನು ತಮ್ಮೆಡೆಗೆ ಸೆಳೆಯುವ ಪ್ರಯತ್ನಗಳು, ಈ ವೈಶ್ಯಾವೃತ್ತಿ ಮಾಡುವ ಸ್ಥಳಗಳೇ ಅಂದರೆ-ಮೇಲೆ, ಕೆಳಗಿನ ಮಂಚಗಳೇ ವ್ಯವಹಾರದ ನಂತರ ವಾಸಸ್ಥಾನಗಳಾಗುವುದು, ಲೈಂಗಿಕ ವೃತ್ತಿ ನಡೆಸುವ ಸ್ಥಳಕ್ಕೆ 'ಬಾಸ್'ಗಳಾದ ಮಹಿಳೆಯರ ದರ್ಪ, ಅಧಿಕಾರ ಇವೆಲ್ಲದರ ವಿವರಗಳನ್ನು ರೇವತಿಯವರ ಆತ್ಮ ಕಥನ ಪ್ರಾಮಾಣಿಕವಾಗಿ ಬಿಚ್ಚಿಡುತ್ತದೆ. ಹಾಗಾಗಿ ಇವರ ಬದುಕು ಪಾಪದ ಕೂಪದಲ್ಲಿ ಬಿದ್ದು ಎದ್ದು ಬಂದ ಫೀನಿಕ್ಸ್ ಹಕ್ಕಿಯ ಬದುಕು ಎನಿಸುವುದು. ಈ ಮಧ್ಯದಲ್ಲಿ ಕುಡಿಯುವುದನ್ನು ಕಲಿಯುವುದು, ಕುಡಿದಾಗ ಆಗುವ ಗಲಾಟೆಗಳಿಂದ ಭಿನ್ನ ಭಿನ್ನ ಪಂಗಡಗಳ ನಡುವೆ ವಿರಸ, ಜಗಳ-ಹೀಗೆ ಲೈಂಗಿಕ ಉದ್ಯೋಗದ ಒಳಗಿನ ರೌಡಿಯಿಸಂ, ಗಿರಾಕಿಗಳ ಒರಟುತನ, ಸಹವರ್ತಿಗಳ ಅಸಡ್ಡೆ-ಇಂತಹ ಅಡ್ಡೆಯ ಬದುಕಿನ ರೌದ್ರ ಮುಖಗಳನ್ನು ರೇವತಿ ನಮ್ಮ ಮುಂದೆ ಬಿಚ್ಚಿ ಇಡುತ್ತಾರೆ.

ಹಿಜ್ರಾ ಬದುಕಿನ ಇನ್ನೊಂದು ಸಂಗತಿಯೆಂದರೆ ಕುಟುಂಬದ ಒಳಗಿನ ತಲ್ಲಣಗಳು. ಬಾಲ್ಯದ ಸಂಕಷ್ಟಗಳು ಒಂದು ರೀತಿಯಂದರೆ, ನಿರ್ವಾಣಕ್ಕಾಗಿ ಹೆಣ್ಣಾಗಿ ಪರಿವರ್ತಿತವಾದ ದೇಹದೊಂದಿಗೆ ಕುಟುಂಬದ ಜೊತೆ ನಂಟು ಬೆಳೆಸುವುದು ಇನ್ನೊಂದು ರೀತಿಯ ತಲ್ಲಣ. ಕುಟುಂಬದ ಪಾತ್ರ ಎಷ್ಟು ಮುಖ್ಯ ಎಂಬುದರ ಬಗ್ಗೆ ವಿದ್ಯಾ, ರೇವತಿ ಇಬ್ಬರೂ ಬರೆಯುತ್ತಾರೆ. ಅಷ್ಟು ದೊಡ್ಡ ಆಪರೇಷನ್‌ಗಾಗಲೀ, ಆರೈಕೆಗಾಗಲೀ ಮನೆಯವರು ಪಕ್ಕದಲ್ಲಿ ಇಲ್ಲದಿರುವುದು ಒಂದು ಸಂಕಟವಾದರ, ಹೆಣ್ಣಾಗಿ ಪರಿವರ್ತಿತವಾದ ಗಂಡು ಮಕ್ಕಳನ್ನು 'ಆಕೆ' ಎಂದು ಕುಟುಂಬದವರು ಒಪ್ಪಿಕೊಳ್ಳಲು ಸಾಧ್ಯವಾಗದಿರುವುದು ಇನ್ನೊಂದು ಸಂಕಟ. ಸೀರೆ ಉಟ್ಟ ವಿದ್ಯಾರನ್ನು ನೋಡುವುದೇ ಇಲ್ಲ ಎಂದು ಆಕೆಯ ಅಪ್ಪ ಹಟ ಹಿಡಿಯುತ್ತಾರೆ. ಸೀರೆ ಬಿಚ್ಚಿಹಾಕಿ ಗಂಡಸರಂತೆ ಉಡುಗೆ ತೊಡು ಎಂದು ಹಿಗ್ಗಾ ಮುಗ್ಗ ಹೊಡೆಯುವ ರೇವತಿಯ ಅಣ್ಣಂದಿರು. ತನಗೆ ಆಪರೇಷನ್ ಆಗಿದೆ, ತಾನು ಹೆಣ್ಣು, ಬೇಕಿದ್ದರೆ ನೋಡು ಎಂದು ರೇವತಿ ಉಟ್ಟ ಬಟ್ಟೆಯನ್ನು ಮೇಲೆ ಎತ್ತಿ ಅಣ್ಣನಿಗೆ ತೋರಿಸುವುದು- ಹೀಗೆ ತಮ್ಮ ಬದಲಾದ ಅಸ್ತಿತ್ವದ ಬಗ್ಗೆ ಅಸ್ತಿತ್ವದ ಅಸ್ಮಿತೆಯ ಬಗ್ಗೆ ಹೇಗೆ ಪರದಾಡಬೇಕಾಗುತ್ತದೆ ಎಂಬುದನ್ನು ರೇವತಿ ಹಾಗೂ ವಿದ್ಯಾ ಇಬ್ಬರೂ ಬಿಚ್ಚಿ ಇಡುತ್ತಾರೆ.

ಕುಟುಂಬದವರು ಈ ಬಗ್ಗೆ ತಿಳಿವಳಿಕೆ ಉಳ್ಳವರಾದರೆ, ಹಿಜ್ರಾಗಳಿಗೆ ಅವರದೇ ಬದುಕಿಗೆ ಎನ್ನುವಷ್ಟು ಪ್ರಜಾವಂತರಾದರೆ ಬಹುಶಃ ಹಿಜ್ರಾಗಳ ಬದುಕು ವಿದ್ಯಾ, ರೇವತಿಯವರಷ್ಟು ಹೀನಾಯವಾಗಬೇಕಿಲ್ಲ. ಅಥವಾ ಅಷ್ಟೊಂದು ಅಸಹಾಯತೆಯೂ ಇರುವುದಿಲ್ಲ. ವಿದ್ಯಾರ ಕುಟುಂಬದಲ್ಲಿ ತಂದೆ-ಭಾವ ಮುಜುಗರ ವ್ಯಕ್ತಪಡಿಸಿದರೂ ಹಿಂಸಾತ್ಮಕ ಪ್ರವೃತ್ತಿಗಳು ಕಂಡುಬರುವುದಿಲ್ಲ. ಆದರೆ ರೇವತಿಯ ವಿಚಾರದಲ್ಲಿ ಕುಟುಂಬದವರು ದೈಹಿಕವಾಗಿ ದಂಡಿಸುವಂತಹ ಹಿಂಸಾತ್ಮಕ ಕೃತ್ಯಕ್ಕೆ ಇಳಿಯುತ್ತಾರೆ. ಹಳ್ಳಿಯಲ್ಲಿ ಬದುಕುವಾಗ ಬಾಬು ಎನ್ನುವ ಹುಡುಗನೊಂದಿಗೆ ರೇವತಿ ಆತ್ಮೀಯತೆ ಬೆಳೆಸಿಕೊಂಡ ಸಂದರ್ಭದಲ್ಲಿಯಂತೂ ಹಿಜ್ರಾಗಳ ಲೈಂಗಿಕತೆಯ ಬಗ್ಗೆ ಆಕೆಯ ಅಣ್ಣಂದಿರು ಬಳಸುವ ಭಾಷೆ, ಭಾವಗಳು ಈ ಸಮಾಜದ ಕ್ರೂರತೆಯನ್ನು ಬಿಂಬಿಸುತ್ತವೆ. ಅವರು ಮನುಷ್ಯರೇ ಅಲ್ಲ ಎನ್ನುವಂತಹ ಅಮಾನವೀಯ ಧೋರಣೆಗಳು ಎಲ್ಲೆಲ್ಲೂ ಸಾಮಾನ್ಯವಾಗಿ ಬಿಟ್ಟಿವೆ.

ಸಮುದಾಯದಲ್ಲಿ ಉಂಟಾಗುವ, ಲೈಂಗಿಕ ಉದ್ಯೋಗದಲ್ಲಿ ಉಂಟಾಗುವ ಹತಾಶೆ/ನಿರಾಸೆಯಿಂದ ಕುಟುಂಬಕ್ಕೆ ಹಿಂತಿರುಗುವ, ಕುಟುಂಬದ ಹುನ್ನಾರಗಳಿಂದ ಬೇಸತ್ತು ಸಮುದಾಯಕ್ಕೆ ಹಿಂತಿರುಗುವ ಪ್ರಕ್ರಿಯೆ ರೇವತಿಯವರ ಬದುಕಿನಲ್ಲಿ ಕಂಡುಬರುತ್ತದೆ.

ಆದರೆ ಸಮುದಾಯದಲ್ಲಿಯೇ ಬದುಕುವುದೆಂದರೆ ಭಿಕ್ಷಾಟನೆ, ಲೈಂಗಿಕ ಉದ್ಯೋಗ ಅನಿವಾರ್ಯವಾಗುತ್ತದೆಯೆಂಬ ಕಾರಣಕ್ಕಾಗಿಯೇ ವಿದ್ಯಾ ಭಿನ್ನವಾದ ಉದ್ಯೋಗ ಹುಡುಕಿದರು. "NGOನಲ್ಲಿ ಕೆಲಸ ಬೇಡಪ್ಪ ಬೇಡ' ಎಂದು ಸ್ಪಷ್ಟತೆ ಹೊಂದಿದ್ದವರು. ವಾಪಸ್ಸು ಬಂದ ಮೇಲೆ

(20ನೇ ಪುಟಕ್ಕೆ)

ಅಂತರ್ಜಾತಿ ವಿವಾಹ ಮತ್ತು ಜಾತಿ ವಿನಾಶ

ಜಾತಿ ವಿರೋಧಿ ಸಮ್ಮೇಳನ–ಸ್ಪಂದನ

ಡಾ. ಎಚ್. ಎಸ್. ಅನುಪಮಾ

ಆಧುನೀಕರಣಕ್ಕೆ ಸಮಾಜದ ಹಲವು ಸಂಸ್ಥೆಗಳು ಬದಲಾಗುತ್ತಿವೆ. ವಿವಾಹವೆಂಬ ವ್ಯವಸ್ಥೆಯೂ ಕೂಡಾ. ಕಾನೂನು, ಸಂಬಂಧಗಳ ಹೊಸ ಸ್ವರೂಪ, ಮಹಿಳಾ ಶಿಕ್ಷಣ ಇವು ಕುಟುಂಬ–ದಾಂಪತ್ಯದ ವ್ಯಾಖ್ಯೆ, ಮದುವೆಯ ಆಚರಣೆಗಳನ್ನು ಬದಲಿಸಿವೆ. ಆದರೆ ಹತ್ತಿರದಿಂದ ಗಮನಿಸಿ ನೋಡಿದರೆ ಕಟ್ಟುತ್ತಿರುವ ಹೊಸ ಕಟ್ಟಡಕ್ಕೆ ಅದೇ ಹಳೆಯ ನೆಲೆಗಟ್ಟು, ವಿನ್ಯಾಸವನ್ನು ಬಳಸಲಾಗುತ್ತಿದೆ. ಇವೆಲ್ಲ ಮನಸ್ಸಿನಲ್ಲಿರುವಾಗಲೇ ಮೊನ್ನೆ ಜೂನ್ 19ರಂದು ಶಿವಮೊಗ್ಗದಲ್ಲಿ ಜಾತಿ ವಿನಾಶ ಮತ್ತು ಅಂತರ್ಜಾತಿ ವಿವಾಹಿತರ ಸಮಾವೇಶ ನಡೆಯಿತು. ಅದರ ಕುರಿತು ಗೆಳೆಯರ ಬಳಗದಿಂದ ಮೆಚ್ಚುಗೆ ಮತ್ತು ವಿಮರ್ಶೆ ಎರಡೂ ಕೇಳಿಬಂತು. ಸಮಾನ ಮನಸ್ಕರು ಜೊತೆ ಸೇರಿದಾಗಲೆಲ್ಲ ಅಂತರ್ಜಾತಿ ವಿವಾಹ, ಜಾತೀಯತೆ ಕುರಿತ ಇತ್ತೀಚಿನ ಬೆಳವಣಿಗೆಗಳ ಬಗೆಗೆ ಮಾತನಾಡಿಕೊಳ್ಳುತ್ತಿದ್ದೆವು. ಅದರಲ್ಲೂ ಅಂತರ್ಜಾತಿ ವಿವಾಹಗಳ ಮಾತು ಬಂದರೆ ಎದ್ದು ಕಾಣುವಂತಿರುವ ಎರಡು ಟ್ರೆಂಡ್‌ಗಳ ಕುರಿತು ಚರ್ಚಿಸುತ್ತೇವೆ. ಅಂತರ್ಜಾತಿ ವಿವಾಹದ ಪರ ವಿರೋಧಿ ವಾದಕ್ಕಿಂತ ಅವುಗಳ ಬಗೆಗೆ ಗಮನ ಸೆಳೆಯುವುದು ಈ ಬರಹದ ಉದ್ದೇಶ.

ಎರಡು ಟ್ರೆಂಡ್‌ಗಳು ಇವು:

1. ಇತ್ತೀಚೆಗೆ ಕಡಿಮೆಯಾಗಿರುವ ಅಂತರ್ಜಾತಿ ವಿವಾಹಗಳ ಸಂಖ್ಯೆ ಮತ್ತು ಅದರಿಂದ ಜಾತಿವಿನಾಶ ಆಗುವುದೇ ಎಂಬ ಸಂದೇಹ.
2. ಕೆಳಜಾತಿಗಳ ಹುಡುಗರು ಮೇಲ್ಜಾತಿ ಹುಡುಗಿಯರನ್ನು ಮದುವೆಯಾಗುತ್ತಿರುವಷ್ಟು ಮೇಲ್ಜಾತಿ ಹುಡುಗರು ಕೆಳಜಾತಿ ಹುಡುಗಿಯರನ್ನು ಮದುವೆಯಾಗದೇ ಇರುವುದು.

ಪರಸ್ಪರ ಹೊಂದಾಣಿಕೆ, ಗೌರವ, ಸ್ವಾತಂತ್ರ್ಯ, ಬದ್ಧತೆ ಇಟ್ಟುಕೊಂಡ ಒಂದು ದ್ವಿವ್ಯಕ್ತಿ ಸಮೂಹವೇ ದಾಂಪತ್ಯ. ಅದು ಯಾವಾಗಲೂ ನಾಶದ ಭಯದಲ್ಲಿರುತ್ತದೆ. ಇಬ್ಬರಲ್ಲಿ ಒಬ್ಬರು ವಿಮುಖರಾದರೂ, ನಿಷ್ಠೆ ಕಡಿಮೆಯಾದರೂ ಅದು ಛಿದ್ರ. ಇಂತಹ ಸೂಕ್ಷ್ಮ ಸಂಬಂಧವನ್ನು ಗಟ್ಟಿಗೊಳಿಸಲು ಹಲವು ಅಂಶಗಳು ಸಹಾಯ ಮಾಡುತ್ತವೆ. ಲೈಂಗಿಕ ಆಕರ್ಷಣೆ, ಭಾವನಾತ್ಮಕ ಅವಲಂಬನೆ, ಪ್ರೀತಿ ಇವು ಆರಂಭಿಕ ಹಂತದಲ್ಲಿ ಕೆಲಸ ಮಾಡುತ್ತವಾದರೆ; ಮಕ್ಕಳು, ಸಾಮಾಜಿಕ ನಿರೀಕ್ಷೆ, ಕುಟುಂಬ, ಕಟ್ಟುಪಾಡುಗಳು ದಾಂಪತ್ಯದ ಮುಂದುವರಿಕೆಗೆ ಕಾರಣವಾಗುತ್ತದೆ. ಜಾತಿ ಈ ಬಂಧವನ್ನು ಬಿಗಿಗೊಳಿಸುವ ಒಂದು ನಿಯೋಗಿ ಎಂದೇ ನಂಬಲಾಗಿದೆ. ಒಳವಿವಾಹ ಜಾತಿಯ ಮುಖ್ಯ ಲಕ್ಷಣವೂ ಅನಿವಾರ್ಯವೂ ಆಗಿ ಬಿಂಬಿಸಲ್ಪಟ್ಟಿದೆ. ಜಾತಿಯ ಬೆಂಬಲ ಬಿಟ್ಟು ಮದುವೆಯಾಗಲು ಪ್ರೀತಿ, ಲೈಂಗಿಕ ಆಕರ್ಷಣೆ, ಆದರ್ಶ ಎಲ್ಲವೂ ಒತ್ತಡ ಸೃಷ್ಟಿಸುತ್ತವೆ. ಆದರೆ ಯಾವ ಲೆಕ್ಕಾಚಾರವಿಲ್ಲದೇ ಸಂಭವಿಸುವ ಅಮಾಯಕ ನಿರ್ವ್ಯಾಜ ಪ್ರೇಮ ತುಂಬ ಕಡಿಮೆ. ಪ್ರೀತಿಸುವ ವ್ಯಕ್ತಿಯ ಕುರಿತು ಏನೋ ಒಂದಷ್ಟು ಗುಪ್ತ ಮಾಹಿತಿ ಇದ್ದೇ ಇರುತ್ತದೆ. ಗುಪ್ತವಾಗಿ ಕೆಲ ಅಂಶಗಳು ಕೆಲಸ ಮಾಡಿರುತ್ತವೆ. ಅದರಲ್ಲಿ ಜಾತಿಯೂ ಒಂದಾಗಿರಬಹುದು.

ಜಾತೀಯತೆ ಮತ್ತು ಜಾತ್ಯತೀತತೆ ಎರಡೂ ಸಾಪೇಕ್ಷ ಸ್ಥಿತಿಗಳು. ನಮ್ಮ ದೇಶದ ಮಟ್ಟಿಗೆ ಸದ್ಯಕ್ಕೆ ಜಾತಿಯನ್ನು ಮರೆಯಲು ಎಷ್ಟು ಪ್ರಯತ್ನಪಟ್ಟರೂ ಕಷ್ಟ. ಬಹುಶಃ ಹುಟ್ಟಿನೊಂದಿಗೇ ಬರುವ, ಸತ್ತರೂ ಹೋಗಲಾರದ ಗುರುತು ಎಂದರೆ ಜಾತಿಯೇ ಇರಬೇಕು. ಜಾತಿಪದ್ಧತಿ ಮುರಿಯಲು ಇರುವ ಏಕೈಕ ವಿಧಾನ ಅಂತರ್ಜಾತಿ ವಿವಾಹ ಎಂದು ಅಂಬೇಡ್ಕರ್ ಸಹಿತ ಹಲವರು ಭಾವಿಸಿದ್ದರು. ಜಾತಿವಿನಾಶದ ಬಗ್ಗೆ ಲೋಹಿಯಾ ಆಳವಾಗಿ ಚಿಂತಿಸಿದ್ದರು. 70–80ರ ದಶಕಗಳಲ್ಲಿ ಅಂತರ್ಜಾತಿ ವಿವಾಹವು ಜನಪ್ರಿಯವಾಗತೊಡಗಿತ್ತು. ಸರಳ ಮದುವೆಗಳನ್ನು ಯಾವ ಧಾರ್ಮಿಕ ವಿಧಿ, ವಿಧಾನಗಳ ಹಂಗಿಲ್ಲದೇ ನಡೆಸುವ ಹಲವು ಸಂಘಟನೆಗಳಿದ್ದವು. ಕುವೆಂಪು ಸರಳ ವಿವಾಹ ವಿಧಾನವಾಗಿ ಮಂತ್ರಮಾಂಗಲ್ಯವನ್ನು ರಚಿಸಿದ್ದರು. ಆದರೆ ಅಂತರ್ಜಾತಿ ವಿವಾಹ ಒಂದು ಬದಲಾವಣೆಯಾಗಿ ಮುಂದುವರಿಯದೇ ಇರಲು ಕಾರಣವೇನು? ಸರಳ ಸಾಮೂಹಿಕ ವಿವಾಹಗಳನ್ನು ಏರ್ಪಡಿಸುವವರು ಅಂತರ್ಜಾತಿ ವಿವಾಹ ಏರ್ಪಡಿಸಲು ಆಸಕ್ತರಾಗಿಲ್ಲ ಏಕೆ? ಜಾತಿ–ಧರ್ಮಗಳು ಮಾನವೀಯ ಬದುಕಿಗೆ ತೊಡಕು ಎಂದಾಗಿದ್ದರೆ ಯಾಕಾದರೂ ಜನ ಇಷ್ಟು ಪ್ರೀತಿಯಿಂದ ಅದನ್ನು ಅಪ್ಪಿಕೊಳ್ಳುತ್ತಿದ್ದಾರೆ? ತಾವು ಸೃಷ್ಟಿಸಿಕೊಂಡ ಜಾತಿ ಬಿಲಗಳ ಒಳಗೆ ಎಲ್ಲರೂ ಬೆಚ್ಚನೆಯ ಸುಖವನ್ನು ಅನುಭವಿಸುತ್ತ, ಉಸಿರುಗಟ್ಟು ವಿಕೆಯನ್ನು ಮರೆತು ಇರುವುದಾದರೂ ಏತಕ್ಕೆ? ವಿಧಿಸಲಾಗುವ ಕಟ್ಟುಪಾಡುಗಳಿಗೆ ಖುಷಿಯಿಂದಲೇ ತೆತ್ತುಕೊಳ್ಳುತ್ತ ಸುರಕ್ಷಿತ ಮನೋಭಾವ ಅನುಭವಿಸುತ್ತಿದ್ದಾರೆಯೇ? ಇವೆಲ್ಲದರ ಕುರಿತು ವಸ್ತುನಿಷ್ಠ ಚಿಂತನೆಯ ಅವಶ್ಯಕತೆಯಿದೆ.

ಜಾತಿಯ ಉಗಮ, ಬೆಳವಣಿಗೆ, ವ್ಯವಸ್ಥೆಯ ಆಳಗಲಗಳ ಬಗೆಗೆ ಹಲವರು ಆದ್ಯಂತವಾಗಿ ವಿಶ್ಲೇಷಿಸಿದ್ದಾರೆ. ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲೂ ಅದು ಹೇಗೆ ಮುಂದುವರೆಯುತ್ತಿದೆ? ಏಕೆ ಅವಶ್ಯವಾಗುತ್ತದೆ ಎಂದು ನೋಡಬೇಕಾಗಿದೆ. ಮೊದಲೆಲ್ಲ ನಗರೀಕರಣ, ಆಧುನೀಕರಣ ಜಾತಿ ಸಮಸ್ಯೆಗೆ ಮದ್ದು ಎಂದು ಭಾವಿಸಲಾಗಿತ್ತು. ಆದರೆ ಹಾಗೇನೂ ಆದಂತೆ ತೋರುತ್ತಿಲ್ಲ. ನಗರಗಳ ಆಧುನಿಕ ಜನರು ಹೆಚ್ಚೆಚ್ಚು ಮತಶ್ರದ್ಧೆ ತೋರತೊಡಗಿದ್ದಾರೆ, ಆಧುನಿಕ ಪೂರ್ವ ರೀತಿ ರಿವಾಜುಗಳಿಗೆ ಮತ್ತೆ ಬೆಲೆ ಬರುತ್ತಿದೆ. ವಿವಾಹವಷ್ಟೇ ಅಲ್ಲ, ಹಲವು ಸಾಮಾಜಿಕ ಸಂಗತಿಗಳಲ್ಲಿ ಇದೇ ಮನೋಭಾವ ಕಾಣಬಹುದು. ಸ್ವಾಮಿಗಳು–ಸಾಧು ಸಂತರು ರಾಜಕಾರಣದಲ್ಲಿ ಮೂಗು ತೂರಿಸುವುದು, ದೇವರುಗಳು ರಾಜಿ ಪಂಚಾಯ್ತಿ ನಡೆಸಿ ನ್ಯಾಯ ಹೇಳುವುದು, ಸಾಂವಿಧಾನಿಕ ನ್ಯಾಯಕ್ಕಿಂತ ಧಾರ್ಮಿಕ ಉಲ್ಲೇಖಗಳಿಗೆ ಹೆಚ್ಚು ಮಹತ್ವ ಬಂದಿರುವುದು ಇವೆಲ್ಲ ಮಧ್ಯಯುಗೀನ ಸಮಾಜದ ಆಧುನಿಕ ಅವತಾರಗಳು. ಇದೇ ಮನೋಭಾವ ವಿವಾಹ ಎಂಬ 'ಇರ್ರಿವರ್ಸಿಬಲ್' ಹಾಗೂ 'ನಾನ್ ಎಕ್ಸ್‌ಪರಿಮೆಂಟಲ್' ಸಂಸ್ಥೆಯಲ್ಲಿ ಜಾತಿ ತನ್ನ ಬಿಗಿಪಟ್ಟು ಸಡಿಲಿಸದೇ ಕುಳಿತಿರುವಂತೆ ಮಾಡಿದೆ. ಜಾತಿಯ ಮುಖ್ಯ ಲಕ್ಷಣವೇ ಒಳವಿವಾಹ. ಜಾತಿ ನಿಷ್ಠೆ ಎಂದರೆ ಜಾತಿಯೊಳಗೇ ಮದುವೆಯಾಗುವುದು. ಶಿಕ್ಷಿತರಲ್ಲಿ ಅಂತರ್ಜಾತಿ ವಿವಾಹ ಕಡಿಮೆ ಇರುವುದಕ್ಕೂ, ಅಂತರ್ಜಾತಿ ವಿವಾಹವಾದವರು ನಂತರ ಜಾತಿ ಬಿಡದೇ ಇರುವುದಕ್ಕೂ ಇವೆಲ್ಲ ಕಾರಣವಾಗಿವೆ. ಅಲ್ಲದೇ ಜಾತಿ ನೋಡದೇ ಪ್ರೇಮ ಸಂಭವಿಸಿದ್ದರೂ ಜಾತಿವಿನಾಶಕ್ಕೆಂದು ಪ್ರೇಮಿಗಳು ಅಂತರ್ಜಾತಿ ವಿವಾಹವಾಗಿರುವುದಿಲ್ಲ. ಈ ಕಾರಣಕ್ಕೇ ಮದುವೆಯಾದ ನಂತರ ಯಾರಾದರೊಬ್ಬರ, ಅದರಲ್ಲೂ ಹೆಚ್ಚಾಗಿ ಗಂಡನ ಜಾತಿಯನ್ನೇ ಅಪ್ಪಿಕೊಳ್ಳುತ್ತಾರೆ. ಹಾಗಿರುವಾಗ ಜಾತಿನಾಶ ಹೇಗಾದೀತು?

ಉಮಾ ಚಕ್ರವರ್ತಿ ಅವರ 'ಜೆಂಡರಿಂಗ್ ಕ್ಯಾಸ್ಟ್' ಎಂಬ ಪುಸ್ತಕವು ಮಂಡಲ್ ವಿರೋಧೀ ಪ್ರತಿಭಟನೆಯ ಕಾಲದಲ್ಲಿ ಗಮನಿಸಲಾದ ಒಂದು ವಿಷಯದ ಬಗ್ಗೆ ಗಮನ ಸೆಳೆಯುತ್ತದೆ. ಮಂಡಲ್ ವಿರೋಧಿ ಮೆರವಣಿಗೆಯೊಂದರಲ್ಲಿ ದೆಹಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಗುಂಪೊಂದು 'ನಮಗೆ ನಿರುದ್ಯೋಗಿ ಗಂಡಂದಿರು ಬೇಡ' ಎಂಬ

ಜಾತಿಯ ಬೆಂಬಲ ಬಿಟ್ಟು ಮದುವೆಯಾಗಲು ಪ್ರೀತಿ, ಲೈಂಗಿಕ ಆಕರ್ಷಣೆ, ಆದರ್ಶ ಎಲ್ಲವೂ ಒತ್ತಡ ಸೃಷ್ಟಿಸುತ್ತವೆ. ಆದರೆ ಯಾವ ಲೆಕ್ಕಾಚಾರವಿಲ್ಲದೇ ಸಂಭವಿಸುವ ಅಮಾಯಕ ನಿರ್ವ್ಯಾಜ ಪ್ರೇಮ ತುಂಬ ಕಡಿಮೆ. ಪ್ರೀತಿಸುವ ವ್ಯಕ್ತಿಯ ಕುರಿತು ಏನೋ ಒಂದಷ್ಟು ಗುಪ್ತ ಮಾಹಿತಿ ಇದ್ದೇ ಇರುತ್ತದೆ. ಗುಪ್ತವಾಗಿ ಕೆಲ ಅಂಶಗಳು ಕೆಲಸ ಮಾಡಿರುತ್ತವೆ. ಅದರಲ್ಲಿ ಜಾತಿಯೂ ಒಂದಾಗಿರಬಹುದು. ಜಾತೀಯತೆ ಮತ್ತು ಜಾತ್ಯತೀತತೆ ಎರಡೂ ಸಾಪೇಕ್ಷ ಸ್ಥಿತಿಗಳು. ನಮ್ಮ ದೇಶದ ಮಟ್ಟಿಗೆ ಸದ್ಯಕ್ಕೆ ಜಾತಿಯನ್ನು ಮರೆಯಲು ಎಷ್ಟು ಪ್ರಯತ್ನಪಟ್ಟರೂ ಕಷ್ಟ. ಬಹುಶಃ ಹುಟ್ಟಿನೊಂದಿಗೇ ಬರುವ, ಸತ್ತರೂ ಹೋಗಲಾರದ ಗುರುತು ಎಂದರೆ ಜಾತಿಯೇ ಇರಬೇಕು.

ಪ್ಲಕಾರ್ಡ್ ಹಿಡಿದು ಘೋಷಣೆ ಕೂಗುತ್ತಿರುತ್ತದೆ. ಇದನ್ನು ಎರಡು ದೃಷ್ಟಿಕೋನಗಳಲ್ಲಿ ವಿಶ್ಲೇಷಿಸಬಹುದು. ಮಂಡಲ್ ವರದಿ ಜಾರಿಯಾಗಿ ಇತರೆ ಹಿಂದುಳಿದ ವರ್ಗಗಳ ಗಂಡುಗಳು ಉದ್ಯೋಗ ಗಳಿಸಿದರೆ ಮೇಲ್ಜಾತಿಯ ತಮ್ಮ ಭಾವೀ ಗಂಡಂದಿರು ನಿರುದ್ಯೋಗಿ ಗಳಾಗುತ್ತಾರೆಂದು ಆ ಹೆಣ್ಣುಮಕ್ಕಳು ಭಾವಿಸುತ್ತಾರೆ. ತಮ್ಮ ವಿದ್ಯೆ, ನೌಕರಿಯ ಬಗೆಗಿಂತ್ರ ಭಾವೀ ಗಂಡಂದಿರ ಬಗೆಗೇ ಹೆಚ್ಚು ಚಿಂತಿತರಾಗಿದ್ದಾರೆ ಎಂದಾಯಿತು. ಇಲ್ಲಿ ಇನ್ನೂ ಒಂದು ಸೂಕ್ಷ್ಮವಿದೆ. ಆ ಹುಡುಗಿ ಯರಿಗೆ ನೌಕರಿ ಪಡೆದ ಹಿಂದುಳಿದ ವರ್ಗಗಳ ಹುಡುಗರನ್ನು ಮದುವೆಯಾಗಬಾರದೆಂದು ಕಟ್ಟಳೆ ವಿಧಿಸಿರು ವುದು ಯಾರು? ಮಂಡಲ್ ಆಯೋಗವೇನೂ ಹಾಗೆ ಹೇಳಲಿಲ್ಲವಲ್ಲ? ಇಂದಿಗೂ ಜಾತಿ, ವಿವಾಹ ಕುರಿತ ಕಲಿತವರ ಧೋರಣೆಗಳು ಏನೂ ಬದಲಾಗದೇ ಮಂಡಲ್ ದಿನಗಳಂತೇ ಮುಂದುವರೆದಿವೆ. ಮ್ಯಾಟ್ರಿಮೋನಿಯಲ್ ಕಾಲಮ್ಮುಗಳು ಇದಕ್ಕೆ ಸಾಕಷ್ಟು ಪುರಾವೆ ಒದಗಿಸುತ್ತವೆ.

National Family Health survey (NFHS) ವರದಿಯನ್ನು ಪ್ರಕಟಿಸಿದೆ. ಅದು ಭಾರತದಾದ್ಯಂತ 29 ರಾಜ್ಯಗಳ 13012 ವಿವಾಹಿತ ಮಹಿಳೆಯರ ಜಾತಿ ಹಿನ್ನೆಲೆ, ಮದುವೆಯ ರೀತಿ ಇತ್ಯಾದಿಗಳನ್ನು ಪರಿಗಣಿಸಿತ್ತು. ಅದರಲ್ಲಿ ಅಂತರ್ಜಾತಿ ವಿವಾಹವಾದವರ ಸಂಖ್ಯೆ ಶೇ.11 ಮಾತ್ರ. ಕರ್ನಾಟಕದಲ್ಲಿ ಶೇ.16, ಮಹಾರಾಷ್ಟ್ರದಲ್ಲಿ ಶೇ.17, ಹರಿಯಾಣದಲ್ಲಿ ಶೇ.18 ಅಂತರ್ಜಾತಿ ವಿವಾಹಗಳು ಆಗಿದ್ದರೆ, ಅತ್ಯಂತ ಕಡಿಮೆ ಪ್ರಕರಣಗಳು ಸಂಭವಿಸಿರುವುದು ಬ್ರಾಹ್ಮಣ್ಯದ ವಿರುದ್ಧ ತೀವ್ರ ಹೋರಾಟ ಕಟ್ಟಿದ ತಮಿಳುನಾಡಿನಲ್ಲಿ 2.9%!

ಈ ಸಮೀಕ್ಷೆಯ ಫಲಿತಾಂಶ ವರದಿ ಒತ್ತಟ್ಟಿಗಿರಲಿ, ಒಂದು ಅಂಶವಂತೂ ಗಮನ ಸೆಳೆಯುತ್ತದೆ. ಅದು ಯುವ ಪೀಳಿಗೆಯಲ್ಲಿ ಶಿಕ್ಷಣ, ಉದ್ಯೋಗ, ಆರ್ಥಿಕ ಭದ್ರತೆಯ ಮಟ್ಟ ಏರುತ್ತ ಹೋದಂತೆ ಅಂತರ್ಜಾತಿ ವಿವಾಹ ಕಡಿಮೆಯಾಗಿರುವುದು. ಶಿಕ್ಷಣವು ಸಮಾನತೆಯ ಮನೋಭಾವ ಬೆಳೆಸುವಲ್ಲಿ ವಿಫಲವಾಗುತ್ತಿದೆ. ಅದಕ್ಕೆ ಸಾಕ್ಷಿಯಾಗಿ ಬಹುಪಾಲು ಕೋಮುವಾದಿ ಸಂಘಟನೆಗಳ ಮಾಸ್ಟರ್ ಮೈಂಡ್ ಆಗಿ ಉನ್ನತ ಆಧುನಿಕ ಶಿಕ್ಷಣ ಪಡೆದವರಿದ್ದಾರೆ. ಅಕ್ಷರ ಜ್ಞಾನದ ಹಂಗಿಲ್ಲದ ಸಾಮಾನ್ಯ ಜನರು ಸಹಿಷ್ಣುತೆ, ಸಮಾನತೆಯ ಕುರಿತು ಸಹಜ ನೈಸರ್ಗಿಕ ಧೋರಣೆಗಳನ್ನು ಹೊಂದಿದ್ದರೆ, ಅಕ್ಷರಜ್ಞಾನ ಪಡೆದವರು ಸಂಪ್ರದಾಯ ಮತ್ತು ಪರಂಪರೆಯ ಬಗ್ಗೆ ಅಗತ್ಯಕ್ಕಿಂತ ಹೆಚ್ಚು ನಿಷ್ಠೆ ಬೆಳೆಸಿಕೊಳ್ಳುದ್ದಾರೆ. ತಮ್ಮ ನಿಲುವನ್ನೇ ಮಹಾ ಸತ್ಯವೆಂಬಂತೆ ಬಿಂಬಿಸುತ್ತ, ಅದನ್ನೇ ಮಿಥ್‌ಗಳ ರೂಪದಲ್ಲಿ, ತಿರುಚಲಾದ ಇತಿಹಾಸದ ರೂಪದಲ್ಲಿ ಹರಡುತ್ತಿರುವುದನ್ನೂ ನೋಡುತ್ತಿದ್ದೇವೆ. ಕೋಮು ವಾದವೆಂದರೆ ಇದೇ ತಾನೇ? ಪರಮತ ಅಸಹಿಷ್ಣುತೆ, ಸಂಪ್ರದಾಯ ಶರಣತೆ, ಬದಲಾಗದ ನಿಷ್ಠೆ. ಇದು ಎಲ್ಲ ಜಾತಿ, ಧರ್ಮಗಳಲ್ಲೂ ಕಂಡುಬರುತ್ತಿದ್ದು ಈ ಸೀಮಿತ ನಿಷ್ಠೆಯೇ ಇಂದಿನ ಹಲವು ಅಧ್ವಾನಗಳಿಗೆ ಕಾರಣವಾಗುತ್ತಿದೆ.

ಮೇಲ್ಜಾತಿ ಹುಡುಗರು ಕೆಳಜಾತಿ ಹುಡುಗಿಯರನ್ನು, ಅದರಲ್ಲೂ ದಲಿತ ಮಹಿಳೆಯರನ್ನು ಮದುವೆಯಾಗುವುದು ಕಡಿಮೆ. ಏಕೆ?

'ಕೆಳಜಾತಿ ಹುಡುಗಿಯರು ನೋಡಲು ಚಂದ ಇರುವುದಿಲ್ಲ, ಬಣ್ಣ ಇರುವುದಿಲ್ಲ, ಶಿಕ್ಷಿತರಾಗಿರುವುದಿಲ್ಲ' ಎಂಬುವೆಲ್ಲ ಕುಹಕ ನೆಪಗಳಾಗಿ ಕಾಣುತ್ತವೆ. ಯಾಕೆಂದರೆ

ಎಲ್ಲಿಯವರೆಗೆ ದಮನಕ್ಕೆ ಜಾತಿ ಒಂದು ಕಾರಣ ವಾಗುವುದೋ ಅಲ್ಲಿಯವರೆಗೆ ಸರ್ಕಾರ ಜಾತಿಯನ್ನು ಗುರುತಿಸುತ್ತದೆ. ಎಲ್ಲಿಯವರೆಗೆ ಜಾತಿ ಕಾಲಂ ತುಂಬಬೇಕಾಗುತ್ತದೋ, ಜಾತಿಯಲ್ಲಿ ಗುರ್ತಿಸಿಕೊಳ್ಳುವುದು ಅನುಕೂಲಕರವೋ ಅಲ್ಲಿಯವರೆಗೆ ಜಾತಿ ಮುಂದುವರೆಯುತ್ತದೆ. ಇಂಥ ಸಾಮಾಜಿಕ ಪರಿಸ್ಥಿತಿಯಲ್ಲಿ ಅಂತರ್ಜಾತಿ ವಿವಾಹಗಳು ಜಾತಿನಾಶ ಮಾಡಬಲ್ಲವೇ? ಕಾಲವೇ ಹೇಳಬೇಕು.

ಮೇಲ್ಜಾತಿಯಲ್ಲೂ ನೋಡಲು ಚೆಂದ ಇರದ, ಕಲಿತಿರದ, ಬಿಳಿ ಬಣ್ಣವಿರದ ಗಂಡಸರೂ, ಮಹಿಳೆಯರೂ ಇದ್ದಾರೆ. ದೈಹಿಕ ರೂಪ, ಗುಣಗಳು ಯಾವ ಜಾತಿಯ ಸ್ವತ್ತಲ್ಲ. ರೂಪವೊಂದೇ ಪ್ರೀತಿ ಹುಟ್ಟಲು ಕಾರಣವಲ್ಲ.

ಮೇಲಿನ ಪ್ರಶ್ನೆಗೆ ಉತ್ತರ ಅಷ್ಟು ಸುಲಭದಲ್ಲಿ ಸಿಗುವುದಿಲ್ಲ.

ಹೆಣ್ಣುಗಂಡಿನ ನಡುವಿರುವ ಸ್ವಭಾವ ಭಿನ್ನತೆಗಳು ಇದಕ್ಕೆ ಮುಖ್ಯ ಕಾರಣ ಇರಬಹುದು. ಮೇಲ್ಜಾತಿ ಹಾಗೂ ಕೆಳಜಾತಿ ಗಂಡು ಹೆಣ್ಣುಗಳ ಸ್ವಭಾವ, ಸಾಮಾಜಿಕ ಪರಿಸ್ಥಿತಿ, ಅವಕಾಶ, ಅನಿವಾರ್ಯತೆಗಳನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ.

ಮೇಲ್ಜಾತಿ ಗಂಡಿಗೆ ಪ್ರತಿಭಟಿಸುವ, ಧಿಕ್ಕರಿಸುವ ಯಾವ ಒತ್ತಡವೂ ಇಲ್ಲ. ಆತ ಅತ್ಯಂತ ಪ್ರಿವಿಲೇಜ್ಡ್. ಮೇಲ್ಜಾತಿ ಹಾಗೂ ಗಂಡು ಎಂಬ ಎರಡೆರೆಡು ತೆರನ ಪ್ರಿವಿಲೇಜ್ ಅವನ ಪಾಲಿಗಿದೆ. ವ್ಯವಸ್ಥೆಯ ಅಂಶಗಳೆಲ್ಲ ಆತನ ಪರವಾಗೇ ಇರುವಾಗ ಯಥಾಸ್ಥಿತಿಯನ್ನೇ ಕಾಯ್ದುಕೊಂಡು ಹೋಗಲು ಬಯಸುತ್ತಾನೆ. ಅನುಕೂಲವಿರುವುದರಿಂದ ಪರಂಪರೆ ರಕ್ಷಿಸುವುದು ತನ್ನ ಕರ್ತವ್ಯ ಎಂದು ಭಾವಿಸುತ್ತಾನೆ. ಈ ಸಂಪ್ರದಾಯಶೀಲತೆ ಹಲವು ಮುಖವಾಡ ತೊಟ್ಟು ಬರುತ್ತದೆ. ಜಾತಿಯೊಳಗೇ ಮದುವೆ; ತನಗಿಂತ ಗಿಡ್ಡ, ಕಡಿಮೆ ಕಲಿತ, ಕಡಿಮೆ ವಯಸ್ಸಿನವಳನ್ನು ಮದುವೆಯಾಗುವುದು; ತನಗಿಂತ ಕಡಿಮೆ ಅಧಿಕಾರ ಹೊಂದಿದವಳನ್ನೇ ಆರಿಸಿಕೊಳ್ಳುವುದು–ಇವೆಲ್ಲವೂ ಅದರ ಭಿನ್ನ ರೂಪಗಳೇ. ಬೌದ್ಧಿಕವಾಗಿ ತನಗಿಂತ ಭಿನ್ನವಾಗಿ ಯೋಚಿಸುವ ತನ್ನದೇ ಜಾತಿಯ ಮಹಿಳೆಯ ಬಗ್ಗೆಯೂ ಹೆಚ್ಚಿನವರು ಅಸಮಾಧಾನ ಹೊಂದಿರುತ್ತಾರೆ. ಆಧುನಿಕ ಶಿಕ್ಷಣ ಕೆಲವೇ ಜನರಲ್ಲಿ ಈ ಮನಸ್ಥಿತಿಯನ್ನು ಬದಲಿಸುತ್ತದೆ. ಆಧುನಿಕ ಮನೋಭಾವ ತಾಳುವ ವರು ತಮ್ಮ ಹೆಂಡತಿ, ಮಗಳ ವಿಷಯದಲ್ಲಿ ಮಾತ್ರ ಸಂಪ್ರದಾಯಶೀಲರಾಗಿರುತ್ತಾರೆ. ಮೇಲ್ಜಾತಿ ಹುಡುಗರು ಕೆಳಜಾತಿ ಹೆಣ್ಣನ್ನು ಬಯಸದೇ ಇರಲು ಇನ್ನೂ ಒಂದು ಕಾರಣವಿದೆ. ಕೆಳಜಾತಿ ಹೆಣ್ಣುಗಳನ್ನು ದೇವರ, ಕಟ್ಟಳೆಗಳ, ದರ್ಪದ, ನ್ಯಾಯದ ಹೆಸರಿನಲ್ಲಿ ಕಟ್ಟಿಹಾಕಿದವರಿಗೆ ಅವಳ ನಿಜ ಶಕ್ತಿಸಾಮರ್ಥ್ಯದ ಬಗೆಗೆ ಅನುಮಾನಗಳಿರುತ್ತವೆ. ಹೆಂಡತಿಯಾಗಿ ಪಡೆಯಲು ಇವೆಲ್ಲ ಅಡ್ಡಬರಬಹುದು.

ಗಂಡಿನ ಮೂಲ ಸ್ವಭಾವ ನಿರಂತರ ಗೆಲ್ಲುವ ಬಯಕೆ. ಈ ಸ್ವಭಾವದಿಂದಲೇ ಕೆಳಜಾತಿ ಪುರುಷ ಮೇಲ್ಜಾತಿ ಹೆಣ್ಣನ್ನು ಮದುವೆಯಾಗಿ ಗೆದ್ದ, ಮೇಲ್ಚಲನೆ ಹೊಂದಿದ ಅನುಭವ ಹೊಂದಬಹುದು.

ಆದರೆ ಎಲ್ಲ ಜಾತಿಗಳಲ್ಲೂ ಸ್ತ್ರೀ ದಮನಿತಳೇ. ಅವಳನ್ನು ಕಟ್ಟುಪಾಡಿನ ಚೌಕಟ್ಟಿನಲ್ಲಿಡಲು ಸಮಾಜ ನೈತಿಕ ರೂಢಿ ನಿಯಮಗಳನ್ನು ಸೃಷ್ಟಿಸಿದೆ. ಎಲ್ಲ ದಮನಿತರೂ ಗುಪ್ತವಾಗಿ ರೂಢಿಯನ್ನು ಉಲ್ಲಂಘಿಸಲು ಕಾಯುತ್ತಿರುತ್ತಾರೆ. ಹಾಗೆಯೇ ಮಹಿಳೆಯಲ್ಲೂ ಪ್ರತಿರೋಧಿಸುವ ಗುಣ ಹೆಚ್ಚು. ಸ್ತ್ರೀತ್ವ ವಿಧಿಸುವ ಕಟ್ಟುಪಾಡುಗಳನ್ನು ಧಿಕ್ಕರಿಸಬಯಸುವ ಮಹಿಳೆ ಸಹಜವಾಗಿ ಸಮುದಾಯದ ಎಲ್ಲ ಕಟ್ಟುಪಾಡುಗಳನ್ನೂ ಮೀರಿ ಹೊರಬರಬೇಕಾಗುತ್ತದೆ. ಇದು ಆಲ್ ಆರ್ ನನ್ ಫಿನಾಮೆನನ್.

ಮೇಲ್ಜಾತಿ ಮಹಿಳೆಯರಿಗೆ ಶಿಕ್ಷಣದ ಅವಕಾಶ ಹೆಚ್ಚು. ಶಿಕ್ಷಿತ, ಹೊರಜಗತ್ತಿಗೆ ತೆರೆದುಕೊಂಡ ಮಹಿಳೆ ಸ್ವತಂತ್ರ ಕ್ರಾಂತಿಕಾರಿ ನಿಲುವು ತಳೆಯುತ್ತಾಳೆ. ಅಂತಹ ಮನಸ್ಥಿತಿಯವರಿಗೆ ಅಂತರ್ಜಾತಿ ಮದುವೆ ಎನ್ನುವುದು ಸುಲಭ ಹೊರದಾರಿಯಾಗಿ ಕಾಣಿಸುತ್ತದೆ. ಆದ್ದರಿಂದ ಮೇಲ್ಜಾತಿ ಮಹಿಳೆ ಕೆಳಜಾತಿಯ ಪುರುಷನನ್ನು ಮದುವೆಯಾಗುವ ಮೂಲಕ ಹೆಣ್ತನದ ನಿಷೇಧಗಳನ್ನೂ ದಾಟಿ, ಜಾತಿ ಕಟ್ಟಳೆಗಳನ್ನೂ ಮುರಿದು ಇಬ್ಬಗೆಯ ಬಿಡುಗಡೆ ಹೊಂದುತ್ತಾಳೆ. ಗೆರೆದಾಟುವ ಬಯಕೆಗೆ ಪ್ರತಿಭಟನೆ ಹಾಗೂ ಬಿಡುಗಡೆ ಈ ಎರಡು ಪ್ರಬಲ ಪ್ರೇರಣೆಗಳಾಗುತ್ತವೆ. ಕೆಳಜಾತಿ ಹುಡುಗರನ್ನು ಮೇಲ್ಜಾತಿ ಹುಡುಗಿಯರು ಇಷ್ಟಪಡಲು ಇರುವ 'ಜನಪ್ರಿಯ' ಕಾರಣ ಇದು.

ಇಂತಹ ಅವಕಾಶ ಕೆಳಜಾತಿಯ ಹೆಣ್ಣಿಗಿದೆಯೆ? ಅವಳು ದಮನಿತರಲ್ಲಿ ದಮನಿತಳು. ಮೇಲ್ಜಾತಿ ಪುರುಷ, ಮೇಲ್ಜಾತಿ ಮಹಿಳೆ, ತನ್ನದೇ ಜಾತಿಯ ಪುರುಷ ಸಮೂಹ ಹೀಗೆ ಮೂರು ದಿಕ್ಕಿನಿಂದ ಶೋಷಿಸಲ್ಪಟ್ಟವಳು ಅವಳು. ಆಕೆಗೆ ತನ್ನ ಮಿತಿಗಳನ್ನು ಮೀರಲು ಸಿಗುವ ಅವಕಾಶ ತುಂಬ ಕಡಿಮೆ. ಒಂದೊಮ್ಮೆ ಸಿಕ್ಕರೆ ತನ್ನ ಕುಲವನ್ನು ತಾಯಿಯಾಗಿ ಪೊರೆದಾಳೇ ವಿನಹ ಮೇಲ್ಚಲನೆಯ ಹಂಬಲ ಅವಳಲ್ಲಿ ಹುಟ್ಟಲಾರದು. ನಮ್ಮ ಎಷ್ಟೋ ಗ್ರಾಮೀಣ ದೈವಗಳೂ, ಅವರ ಮೇಲೆ ಕಟ್ಟಲಾಗಿರುವ ಕಥೆಗಳೂ ಇದಕ್ಕೆ ಸಾಕ್ಷಿ. ಮೇಲ್ಜಾತಿ ಹೆಣ್ಣನ್ನು ಮದುವೆಯಾಗುವುದು ಕೆಳಜಾತಿಯ ಗಂಡಿಗೆ ಧನಾತ್ಮಕ ಕ್ರಿಯೆ ಅನಿಸಬಹುದು, ಆದರೆ ಅದೇ ವರ್ಗದ ಮಹಿಳೆಗಲ್ಲ. ಕಲಿತ ಕೆಳಜಾತಿಯ ಹೆಣ್ಣು ಮೇಲ್ಜಾತಿಯ ಬಗೆಗೆ, ಮೇಲ್ಜಾತಿ ಗಂಡಿನ ಬಗೆಗೆ ಸಿಟ್ಟು ತಳೆದಾಳು. ಅಷ್ಟೇ ಸಿಟ್ಟು ಹೊಂದಿರುವ ಅಗ್ರೆಸ್ಸಿವ್ ಆದ ತನ್ನ ಜಾತಿಯ ಗಂಡನ್ನು ಬಯಸಿಯಾಳೇ ಹೊರತು ಮೇಲ್ಜಾತಿ ಯುವಕನ ಹಂಬಲ ಹುಟ್ಟಲಾರದು.

ಹೆಣ್ಣನ್ನು ಕುರಿತು ಮತ್ತೊಂದು ಮಾತು ಹೇಳಬೇಕು. ಮದುವೆಯಾಗುವ ಹೆಣ್ಣಿನ ಪ್ರೀತಿಯು ಒಂದೆ ದೈಹಿಕ ವಾಂಛೆಗಳ ಜೊತೆಗೇ ಅರಳುವುದು ತಾಯ್ತನ. ಗಂಡನನ್ನು ತಾಯಿಯಂತೆ ಕಾಪಾಡಲು ಹೆಣ್ಣು ಬಲು ಬೇಗ ಉತ್ಸಾಹ ತಾಳುತ್ತಾಳೆ. ಹಾಗೆ ನೋಡಿದರೆ ಎಲ್ಲ ಹೆಂಡತಿಯರ ಮೊದಲ ಮಗು ಅವರ ಗಂಡನೇ. ಸಾಮಾಜಿಕ ವ್ಯವಸ್ಥೆಯ ಅರಿವುಂಟಾದ ಮೇಲ್ಜಾತಿ ಹುಡುಗಿಗೆ ಕೆಳಜಾತಿಗಳ ಮೇಲೆ ಮರುಕ ತುಂಬಿದ ಪ್ರೀತಿ ಹುಟ್ಟುತ್ತದೆ. ಕೆಳಜಾತಿ ಗಂಡಿನ ಮೇಲೆ ಇದು ಪ್ರೀತಿಯ ರೂಪ ತಾಳುವ ಸಾಧ್ಯತೆಯಿದೆ.

ಅನುಲೋಮ ವಿವಾಹದ ಬಗ್ಗೆ ಮಾತನಾಡುವಾಗ ಈಗ ಉದ್ಭವಿಸಿರುವ ಒಂದು ವಿಚಿತ್ರ ಪರಿಸ್ಥಿತಿಯ ಬಗ್ಗೆ

ಉಲ್ಲೇಖಿಸಲೇಬೇಕು. ಕರಾವಳಿ, ಮಲೆನಾಡು, ಬಯಲು ಸೀಮೆ ಜಿಲ್ಲೆಗಳಲ್ಲಿ ಮೇಲ್ಜಾತಿ ಅದರಲ್ಲೂ ಬ್ರಾಹ್ಮಣರಲ್ಲಿ– ಸಾಂಪ್ರದಾಯಿಕ ವೃತ್ತಿ ಅಥವಾ ಕೃಷಿ ಕೆಲಸ ಮಾಡಿ ಕೊಂಡಿರುವವರಿಗೆ ಹೆಣ್ಣೇ ಇಲ್ಲ. ಮನೆಯ ಹೆಣ್ಣು ಮಕ್ಕಳೆಲ್ಲ ಓದಿ ನೌಕರಿ ಹಿಡಿದು ನಗರ ಸೇರಿದ್ದರೆ ಊರಲ್ಲಿ ತೋಟ, ಗದ್ದೆ, ಅಪ್ಪ, ಅಮ್ಮನನ್ನು ನೋಡಿಕೊಂಡು ಪೌರೋಹಿತ್ಯವೋ ಮತ್ತೊಂದನ್ನೋ ಮಾಡಿಕೊಂಡಿರುವವರನ್ನು ಮದುವೆಯಾಗಲು ಹೆಣ್ಣುಗಳು ಸಿದ್ಧರಿಲ್ಲ. 40 ದಾಟಿದರೂ ಮದುವೆ ಭಾಗ್ಯ ಕಾಣದ ಎಷ್ಟೋ ಗಂಡುಗಳಿದ್ದಾರೆ. ತುಂಬ ಗದ್ದೆ ತೋಟ ಹೊಂದಿ ಆಸ್ತಿವಂತರಾಗಿದ್ದರೂ ತಮ್ಮ ದೊಡ್ಡಸ್ತಿಕೆಯನ್ನು ಆಚೆಯಿಟ್ಟು ಅವರಿವರ ಹತ್ತಿರ 'ಹೆಣ್ಣು ಇದ್ದರೆ ಹೇಳಿ' ಎಂದು ಕೇಳಿಕೊಂಡು ಓಡಾಡುವುದನ್ನು ನೋಡಬಹುದು. ಸಾಧಾರಣವಾಗಿ - ದೂರದ ಉತ್ತರಕರ್ನಾಟಕದ ಬಯಲುಸೀಮೆ ಜಿಲ್ಲೆಗಳಿಂದಲೋ, ನೆರೆಯ ಕೇರಳ ಅಥವಾ ಮಹಾರಾಷ್ಟ್ರಗಳಿಂದಲೋ ದಲ್ಲಾಳಿಗೆ ದುಡ್ಡು ಕೊಟ್ಟು ಹೆಣ್ಣುಮಕ್ಕಳನ್ನು ನೋಡಿ, ಅವರು ಕೇಳಿದಷ್ಟು ದುಡ್ಡನ್ನು ಕನ್ಯೆಯ ಪಾಲಕರಿಗೆ ಕೊಟ್ಟು ಸ್ವಂತ ಖರ್ಚಿನಲ್ಲಿ ಮದುವೆಯಾಗುತ್ತಿದ್ದಾರೆ.

ಜಾತಿ ನೋಡುವಂತಿಲ್ಲ. ಭಾಷೆಯೂ ಪರವಾಗಿಲ್ಲ. ಬಣ್ಣ ರೂಪವಂತೂ ಏನೂ ಅಡ್ಡಿಯಿಲ್ಲ. ದೂರದೂರಿನ ಬೇರೆ ಉಪಭಾಷೆಯಾಡುವ ಹೆಣ್ಣು, ಜಾತಿ ಬೇರೆಯಾದರೆ ಯಾರಿಗೂ ತಿಳಿಯುವುದೂ ಇಲ್ಲ. ಅರ್ಧಕ್ಕರ್ಧ ಜನ ಇಂತಹದೇ ವಿವಾಹಬಂಧನಕ್ಕೊಳಗಾಗುತ್ತಿದ್ದಾರೆ. ಹತ್ತಿ, ಜೋಳದ ಹೊಲಗಳಲ್ಲಿ ಕೂಲಿ, ಕಮತ ಮಾಡಿಕೊಂಡು ಬದುಕುತ್ತಿದ್ದ ಹೆಣ್ಣುಜೀವಗಳು ಮದುವೆಯ ನಂತರ ಉಂಡುಡಲು ಕೊರತೆಯಿಲ್ಲದೆ ಸುಖವಾಗೇನೋ ಇರಬಹುದು. ಆದರೆ ಅವರು ಹೆಚ್ಚು ಕಡಿಮೆ ತಮ್ಮ ವಿವಾಹ ಪೂರ್ವ ಐಡೆಂಟಿಟಿಯನ್ನು ಕಳೆದು ಕೊಳ್ಳುತ್ತಾರೆ.

ಇದರಿಂದ ಜಾತಿವಿನಾಶ ಆಗುತ್ತಿದೆ ಎಂದು ಭಾವಿಸುವಂತಿಲ್ಲ. ವರಗಳು ಮೇಲ್ಜಾತಿ ಅಥವಾ ಮಧ್ಯಮ ಜಾತಿಯ ವಧುವನ್ನೇ ಬಯಸುತ್ತಾರೆ. ಹೆಣ್ಣು ಸಿಗದ ಅನಿವಾರ್ಯತೆಗೆ ಈ ರಾಜಿಗೆ ಒಪ್ಪಿರುವ ಮೇಲ್ಜಾತಿ ಗಂಡುಗಳು ಲಭ್ಯವಿದ್ದರೆ ತನ್ನದೇ ಜಾತಿಯ ಹೆಣ್ಣಿಗೆ ಹುಡುಕಾಟ ನಡೆಸುತ್ತಾರೆ. ಅವರಿಗೆ ಹುಟ್ಟುವ ಮಕ್ಕಳು ಅಪ್ಪನ ಜಾತಿಯ ಹೆಸರನ್ನೇ ಪಡೆಯುತ್ತವೆ. ಜಾತಿಯೆಂಬ ಸಂಸ್ಥೆ ಒಪ್ಪಿಯೇ ನಡೆಯುತ್ತಿರುವ ಅಂತರ್ಜಾತಿ ವಿವಾಹ ಮೇಲ್ಜಾತಿ ಪ್ರಜ್ಞೆಯನ್ನು ಕಡಿಮೆ ಮಾಡಲಾದೀತೇ? ಅವರಿಗೆ ಜಾತಿವಂತರ ಕುಟುಂಬದಲ್ಲಿ ಎಂಥ ಸ್ಥಾನಸಿಕ್ಕೀತು? ಮೇಲೆ ಹೇಳಿದ್ದಕ್ಕೆಲ್ಲ ಅಪವಾದಗಳೂ ಇರಬಹುದು. ಇದು ಒಂದು ಅವಲೋಕನ ಅಷ್ಟೆ.

ಆದರೆ..

ಎಲ್ಲಿಯವರೆಗೆ ದಮನಕ್ಕೆ ಜಾತಿ ಒಂದು ಕಾರಣವಾಗುವುದೋ ಅಲ್ಲಿಯವರೆಗೆ ಸರ್ಕಾರ ಜಾತಿಯನ್ನು ಗುರುತಿಸುತ್ತದೆ. ಎಲ್ಲಿಯವರೆಗೆ ಜಾತಿ ಕಾಲಂ ತುಂಬಬೇಕಾಗುತ್ತದೋ, ಜಾತಿಯಲ್ಲಿ ಗುರ್ತಿಸಿಕೊಳ್ಳುವುದು ಅನುಕೂಲಕರವೋ ಅಲ್ಲಿಯವರೆಗೆ ಜಾತಿ ಮುಂದುವರೆಯುತ್ತದೆ. ಇಂಥ ಸಾಮಾಜಿಕ ಪರಿಸ್ಥಿತಿಯಲ್ಲಿ ಅಂತರ್ಜಾತಿ ವಿವಾಹಗಳು ಜಾತಿನಾಶ ಮಾಡಬಲ್ಲವೇ? ಕಾಲವೇ ಹೇಳಬೇಕು.

(ಇಲ್ಲಿ ಜಾತಿ ಕುರಿತು ಬಳಸಿರುವ 'ಕೆಳ' 'ಮೇಲು' ಪದಗಳು ಸಮಾಜದ ರೂಢಿಯಂತೆ ಬಳಸಲ್ಪಟ್ಟಿವೇ ಹೊರತು ಅವುಗಳ ಪದಶಃ ಅರ್ಥದಲ್ಲಿ ಅಲ್ಲ.) □

ಗಂಡು–ಹೆಣ್ಣಾದ ಬದುಕಿನ ಕಥನಗಳು

(17ನೇ ಪುಟದಿಂದ)

ಭಾಷಾಶಾಸ್ತ್ರದಲ್ಲಿ ಎಂ.ಎ ಮುಗಿಸಿದವರು. ಭಿಕ್ಷಾಟನೆ, ಲೈಂಗಿಕ ವೃತ್ತಿ ಮಾಡಲೇ ಬಾರದೆಂದು ಹಟ ತೊಟ್ಟರು. ಆದರೆ ಬದುಕು ಸಾಗಿಸಲಿಕ್ಕಾಗಿಯೇ ಅನಿವಾರ್ಯವಾಗಿ, ಹಾಗೆ ಆಯ್ಕೆ ಇಲ್ಲದೇ ಭಿಕ್ಷಾಟನೆ, ಲೈಂಗಿಕ ವೃತ್ತಿಗೆ ತಮ್ಮ ಸಮುದಾಯದವರು ಇಳಿಯುತ್ತಾರೆಂದು ವಿದ್ಯಾರವರೂ ಒಪ್ಪುತ್ತಾರೆ.

ರೇವತಿಯವರ ಬದುಕಿನ ಪಯಣವನ್ನು ತಮಿಳುನಾಡು, ಬಾಂಬೆ, ಡೆಲ್ಲಿ, ಬೆಂಗಳೂರು ನಗರದಲ್ಲಿ ಕಾಣಬಹುದಾಗಿದೆ. ಬೆಂಗಳೂರಿನಲ್ಲಿ ಲೈಂಗಿಕ ವೃತ್ತಿಗೆ ಇಳಿಯುವ ರೇವತಿ ಪೊಲೀಸರಿಂದ ತಾವು ಅನುಭವಿಸುವ ಕಿರುಕುಳವನ್ನು ಬಿಚ್ಚಿ ಇಡುತ್ತಾರೆ. ಪೋಲೀಸ್ ಠಾಣೆಯಲ್ಲಿ ನಡೆಯುವ ಲೈಂಗಿಕ ಹಿಂಸೆಯ ಭಾಷೆ, ಕ್ರಿಯೆ ಹೇಗಿರುತ್ತದೆ ಎಂಬುದನ್ನು ವಿವರಿಸುತ್ತಾರೆ. ಪೊಲೀಸ್ ಹಾಗೂ ರೌಡಿಗಳು ತಮ್ಮಂಥವರನ್ನು ಎಂತೆಂತಹ ಇಕ್ಕಟ್ಟಿಗೆ ತಗಲಿಸುತ್ತಾರೆ ಎಂಬುದರ ಮೇಲೂ ಬೆಳಕು ಚೆಲ್ಲುತ್ತಾರೆ.

ಈ ಕಥನಗಳು ನಮ್ಮನ್ನು ಬೆಚ್ಚಿಸುತ್ತವೆ. ಬೆರಗು ಹುಟ್ಟಿಸುತ್ತವೆ. ತಾತ್ವಿಕತೆಯ ಚೌಕಟ್ಟನ್ನು ಕದಲಿಸುತ್ತವೆ. ಗಂಡು–ಹೆಣ್ಣಿನ ವ್ಯಾಖ್ಯಾನದ ಪರಿಧಿಯನ್ನು ಮಸುಕುಗೊಳಿಸುತ್ತವೆ.

ಮದುವೆಯಂತಹ ಸಂಬಂಧ ಮುರಿದು ಬೀಳುವ ಬಗೆಯನ್ನು ರೇವತಿ ವಿವರಿಸುತ್ತಾರೆ. ತಾವು NGOನಲ್ಲಿ ಕೆಲಸ ಮಾಡುವುದರಿಂದ ಸಮುದಾಯದ ಜೊತೆಗಿನ ತಮ್ಮ ಬಾಂಧವ್ಯಕ್ಕೆ ಧಕ್ಕೆ ಬರುತ್ತದೆ ಎಂಬ ಅಳುಕಿದ್ದರೂ ಈಕೆ NGOನಲ್ಲಿಯೇ ಕೆಲಸ ಮುಂದುವರಿಸುತ್ತಾರೆ.

ಲಿವಿಂಗ್‌ಸ್ಮೈಲ್ ವಿದ್ಯಾ ಸಾಕ್ಷರತೆಯ ಪ್ರಪಂಚದ ಅಂಚಿನ ಅರಿವಿನಿಂದ ಅವರ ಅನುಭವಗಳನ್ನು ತೆರೆದಿಟ್ಟರೆ, ರೇವತಿ ಅನಕ್ಷರಸ್ಥ, ಹಿಜರಾ ಲೋಕದ ಪ್ರತಿನಿಧಿಯಾಗಿ ಕಾಣಿಸುತ್ತಾರೆ. ಮೊದಲೇ ಹೇಳಿದ ಹಾಗೆ ಈ ಲೋಕದ ಮಂದಿಯಲ್ಲಿ ಅಕ್ಷರತೆ/ಅನಕ್ಷರತೆ ಕೂಡಾ ಒಂದು ಹಂತದಲ್ಲಿ ಮಬ್ಬಾಗುತ್ತದೆ. ಸಮುದಾಯದ ಒಳಗೇ ಬದುಕಿದ ರೇವತಿ ಅಲ್ಲಿರುವ ಸಂಬಂಧಗಳ ಬಗ್ಗೆ ಸೀನಿಯಾರಿಟಿಯ ಮಹತ್ವದ ಬಗ್ಗೆ, ಗುರು ಶಿಷ್ಯ ಸಂಬಂಧಗಳ ಬಗ್ಗೆ ಆಚರಣೆ, ನಿಯಮಾವಳಿಗಳ ಬಗ್ಗೆ ಸುದೀರ್ಘವಾಗಿಯೇ ಬರೆಯುತ್ತಾರೆ. ಒಟ್ಟಾಗಿ ಎರಡೂ ಆತ್ಮಕಥನಗಳೂ ಹಿಜ್ರಾ ಬದುಕಿನ ಲೋಕವನ್ನು, ಅಲ್ಲಿರುವ ತಳಮಳ, ನೋವುಗಳನ್ನು ತೆರೆದಿಡುವುದರಿಂದ–ನಾರ್ಮಲ್ ಎನ್ನಿಸಿಕೊಂಡವರ ಸೂಕ್ಷ್ಮತೆಗಳು ಈ ಬದುಕಿಗೆ ಸಂವೇದನಾತ್ಮಕವಾಗಿ ಪ್ರತಿಕ್ರಿಯಿಸಿದರೆ ಅದೊಂದು ಮಹತ್ವದ ಹೆಜ್ಜೆ ಆಗಬಹುದು. ಹಾಗೆಯೇ ಇಂತಹ ಬದುಕಿನ ಜಂಜಡದಲ್ಲಿ ಒದ್ದಾಡುವ ಹಲವಾರು ಮಂದಿಗೆ ಈ ಆತ್ಮಕಥನಗಳು ಬದುಕಿಗೆ ದಾರಿದೀಪಗಳೂ ಕೂಡಾ ಆಗಬಲ್ಲವು. □

(ಸೌಜನ್ಯ: ನಮ್ಮ ಮಾನಸ)

ಕೋಡಗುಂಟಿ ಪ್ರಶಸ್ತಿ ೨೦೧೦ಕ್ಕೆ ಕರೆ

ಬಂಡಾರ ಪ್ರಕಾಶನ, ಮಸ್ಕಿ ಇವರು ಕನ್ನಡ ಸಂಶೋಧನೆಗೆ ಮೊದಲ ಆದ್ಯತೆಯನ್ನು ಕೊಟ್ಟು ಕೆಲಸವನ್ನು ಮಾಡುತ್ತಿದ್ದಾರೆ. ಕನ್ನಡ ಸಂಶೋಧನೆಯನ್ನು ಪ್ರೋತ್ಸಾಹಿಸುವ ಮತ್ತು ಯುವ ಸಂಶೋಧಕರನ್ನು ಗುರುತಿಸಿ ಅವರನ್ನು ಉತ್ತೇಜಿಸುವ ತುಂಬಾ ಮುಖ್ಯವಾದ ಉದ್ದೇಶಗಳಿಂದ ಕನ್ನಡ – ಕರ್ನಾಟಕಗಳಿಗೆ ಸಂಬಂಧಿಸಿದ ಎಂ.ಫಿಲ್., ಪಿಎಚ್.ಡಿ.ಯಂತಾ ಪದವಿಗಳಿಗಾಗಿ ಸಿದ್ದಪಡಿಸಿದ ಸಂಶೋಧನಾ ಪ್ರಬಂಧಗಳಿಗಾಗಿ 'ಕೋಡಗುಂಟಿ ಪ್ರಶಸ್ತಿ'ಯನ್ನು ೨೦೦೬ರಿಂದ ಆರಂಭಿಸಿದೆ. ಪ್ರತಿವರುಶದಂತೆ ಈ ಸಾಲಿನ ಪ್ರಶಸ್ತಿಗೆ ೨೦೧೦ರಲ್ಲಿ ಪದವಿಯನ್ನು ಪಡೆದ ಕನ್ನಡ ಮಾತು, ಸಾಹಿತ್ಯ, ಸಂಸ್ಕೃತಿ, ಜನಪದ, ಕಲೆ, ಶಿಲ್ಪಕಲೆ, ರಂಗಭೂಮಿ, ಇತಿಹಾಸ, ನೀರು, ನೆಲ, ಗಾಳಿ, ಭೂಗೋಳ, ಪರಿಸರ ಹೀಗೆ ಒಟ್ಟಾರೆ ಕನ್ನಡ–ಕರ್ನಾಟಕಕ್ಕೆ ಸಂಬಂಧಿಸಿದ ಸಂಶೋಧನಾ ಪ್ರಬಂಧಗಳನ್ನು ಪ್ರಶಸ್ತಿಗಾಗಿ ಕಳಿಸಿಕೊಡಲು ಕೋರಲಾಗಿದೆ. ಜಗತ್ತಿನ ಯಾವುದೆ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದಿರಬಹುದು. ಪ್ರಬಂಧ ಕನ್ನಡ ಇಲ್ಲವೆ ಇಂಗ್ಲೀಶಿನಲ್ಲಿ ಇರಬಹುದು. ಉತ್ತಮವಾದ ೭.೦೦೦ ಪ್ರಬಂಧವನ್ನು ಪ್ರಶಸ್ತಿಗೆ ಆರಿಸಲಾಗುವುದು ಮತ್ತು ಅದನ್ನು ಪ್ರಕಾಶನದಿಂದ ಪ್ರಕಟಿಸಲಾಗುವುದು. ಅಲ್ಲದೆ ಉತ್ತಮ ಎಂದು ಪರಿಗಣಿಸಿದ ಪ್ರಬಂಧಗಳನ್ನು ಪ್ರಕಟಣೆಗೆ ಆಯ್ಕೆ ಮಾಡಲಾಗುವುದು. ಪ್ರಶಸ್ತಿಗೆ ಪ್ರಬಂಧದ ಒಂದು ಪ್ರತಿ, ಎರಡು ಪುಟಗಳ ಸಾರಾಲೇಖ ಮತ್ತು ಪದವಿ ಪಡೆದ ಪ್ರಮಾಣ ಪತ್ರದ ಪ್ರತಿ ಇವುಗಳನ್ನು ಕಳಿಸಿಕೊಡಲು ಕೇಳಲಾಗಿದೆ. ಪ್ರಬಂದ ಕಳಿಸಲು ಕೊನೆಯ ದಿನ ಅಗಸ್ಟ್ ೩೦. ಪ್ರಬಂಧ ಕಳಿಸಬೇಕಾದ ವಿಳಾಸ,

ಪರಶುರಾಮ ಕೋಡಗುಂಟಿ, ಸಂಪಾದಕ, ಬಂಡಾರ ಪ್ರಕಾಶನ,
ಮಸ್ಕಿ–೫೮೪೧೨೪, ಜಿ. ರಾಯಚೂರು, ಕರ್ನಾಟಕ.
ಹೆಚ್ಚಿನ ವಿಚಾರಕ್ಕೆ ಮಾತನಾಡಿ – ೯೯೧೬೦ ೫೩೦೫೭, ೯೮೪೫೭೬೬೧೪೮,
bandaraprakashana@yahoo.in

ಹಿರಿಯರ ಹಿರಿತನ ಹಿಂದೇನಾಯಿತು.
ಲೇ: ಡಾ. ವಿಜಯಕುಮಾರ್ ಎಂ. ಬೋರಟ್ಟಿ ಬೆಲೆ: ರೂ. ೨೦೦/-

ಸಾಮ್ರಾಜ್ಯಶಾಹಿ, ಪಾಶ್ಚಾತ್ಯವಾದ, ಲಿಂಗಾಯತ ಸಮುದಾಯಗಳ ನಡುವಿನ ಸಂಬಂಧ ಕುರಿತಂತೆ ಆಳವಾದ ಅಧ್ಯಯನದ ಈ ಕೃತಿಯಲ್ಲಿ ೧೨ನೇ ಶತಮಾನದಲ್ಲಿ ಆ ಸಮಾಜವು ವಚನ ಸಂಸ್ಕೃತಿಯ ಮೂಲಕ ಹೇಗೆ ತನ್ನ ಅನನ್ಯತೆಯನ್ನು ಗಟ್ಟಿಗೊಳಿಸಿಕೊಂಡಿತು ಎಂಬುದರ ಚಾರಿತ್ರಿಕ ವಿಶ್ಲೇಷಣೆಯಿದೆ. ವಸಾಹತುಶಾಹಿ ಒದಗಿಸಿಕೊಟ್ಟ ಆಧುನಿಕತೆಯ ವಿಚಾರ ನಾಡಿನ ವಿವಿಧ ವರ್ಗಗಳ ಮೇಲೆ ಬೀರಿದ ಪ್ರಭಾವವನ್ನು ಗುರುತಿಸಲಾಗಿದೆ. ವಚನ ಸಂಸ್ಕೃತಿಯ ಅಧ್ಯಯನ ಇದಾದರೂ ಅಂದಿನ ಸಾಮಾಜಿಕ ಸ್ಥಿತಿಗತಿಗಳ ಮೇಲೂ ಬೆಳಕು ಚಲ್ಲುತ್ತದೆ.

ಪ್ರ: ಪ್ರಸಾರಾಂಗ ಕನ್ನಡ ವಿ.ವಿ, ಹಂಪಿ





ಹೊಸ ಪುಸ್ತಕ

ನೆನಪುಗಳಿಗೇಕೆ ಸಾವಿಲ್ಲ?
ಲೇ: ಡಾ. ಜೆ. ಬಾಲಕೃಷ್ಣ
ಬೆಲೆ: ರೂ. ೧೦೦/-



ಈ ಕೃತಿಯಲ್ಲಿ ಸಂಗ್ರಹಗೊಂಡಿರುವ ಹದಿನಾಲ್ಕು ಕತೆಗಳು ಈಗಾಗಲೇ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು ಜೀವಪರ ನಿಲುವಿನಿಂದ ಗಮನ ಸೆಳೆಯುತ್ತವೆ. ತಮ್ಮ ಅಭಿವ್ಯಕ್ತಿಯನ್ನು ಪಡಿಮೂಡಿಸಲು ಸರಳವಾಗಿ. ಸುಲಲಿತವಾಗಿ ಭಾಷೆಯನ್ನು ದುಡಿಸಿಕೊಂಡಿದ್ದು ಸೃಜನಶೀಲತೆಯತ್ತ ತುಡಿಯುತ್ತವೆ. ಚಿಂತನೆಯ ಶ್ರೇಷ್ಠತೆಯೆಡೆಗೆ ಮಿಡಿಯುವ, ಮಣ್ಣಿನ ಗುಣವನ್ನು ಹೊರಸೂಸುವ, ವಿಸ್ತಾರ ಹರವಿನ ಸಹಜ ಅಭಿವ್ಯಕ್ತಿ ಹೊಸತನದಿಂದ ಕೂಡಿದೆ. ಇಲ್ಲಿನ ಪ್ರತಿಯೊಂದು ಕತೆಯೂ ವೈವಿಧ್ಯತೆಯಿಂದ ಕೂಡಿದ್ದು ಓದುಗನನ್ನು ತಾನೂ ಒಂದು ಪಾತ್ರವಾಗುವಂತೆ ಆಪ್ತತೆಯನ್ನುಂಟು ಮಾಡುತ್ತವೆ.

ಮಳೆಬಿಲ್ಲ ನೆರಳು
ಲೇ: ಡಾ. ಜೆ. ಬಾಲಕೃಷ್ಣ
ಬೆಲೆ: ರೂ. ೧೫೦/-

ವೈಜ್ಞಾನಿಕ ಬರಹಗಳ ಬರದಿಂದ ಸೊರಗುತ್ತಿರುವ ಕನ್ನಡ ಭಾಷೆಯ ಭಂಡಾರಕ್ಕೆ ಇಂದೊಂದು ಉಪಯುಕ್ತ ಕೃತಿ. ಮೇಲುನೋಟಕ್ಕೆ ವಿಜ್ಞಾನದ ಲೇಖನಗಳು ಎಂಬಂತೆ ಕಂಡರೂ ವಿಷಯಗಳು ವೈವಿಧ್ಯಮಯವೂ ವಿಸ್ತಾರವೂ ಆಗಿವೆ. ಜೊತೆಗೆ ವಿಜ್ಞಾನವನ್ನು ಅಭ್ಯಸಿಗರ ಅರಿವಿನ ಪರಧಿಗೆ ನಿಲುಕುವಂತ ಕುಶಲತೆಯನ್ನು ಹೊಂದಿದ್ದು ಬೇರೊಂದು ನೆಲೆಗೆ ಕೊಂಡೊಯ್ಯುತ್ತವೆ. ಕೇವಲ ಮಾಹಿತಿಯನ್ನಷ್ಟೇ ನೀಡದೆ ಸಂಸ್ಕೃತಿ ಚಿಂತನೆಯನ್ನೂ ಒಳಗೊಂಡಿರುವುದು ಇವುಗಳ ಹೆಗ್ಗಳಿಕೆ. ಹೊಸ ತಲೆಮಾರಿನ ಮಕ್ಕಳಿಗೆ ಕನ್ನಡದ ಮೂಲಕ ವಿಜ್ಞಾನದ ವಿಷಯಗಳನ್ನು ತಲುಪಿಸುವ ಈ ಪ್ರಯತ್ನ ಸ್ವಾಗತಾರ್ಹ.

ಈ ಎರಡೂ ಪುಸ್ತಕಗಳ ಪ್ರಕಾಶಕರು:
ಬರಹ ಪಬ್ಲಿಷಿಂಗ್ ಹೌಸ್,
ಹಂಪಿನಗರ, ಬೆಂಗಳೂರು



ಗಾಂಧಿ ಹೋರಾಟ ಯಾರ ವಿರುದ್ಧ?
ಲೇ: ರಘೋತ್ತಮ ಹೊ.ಬ
ಬೆಲೆ: ರೂ. ೮೦/-

ನಿಜಕ್ಕೂ ಗಾಂಧಿಯವರು ಅಸ್ಪೃಶ್ಯರಿಗೆ ಒಳ್ಳೆಯ ಬದುಕನ್ನು ಬಯಸಿದ್ದರೇ ಎಂದು ಪ್ರಧಾನವಾಗಿ ಪ್ರಶ್ನಿಸುವ ಈ ಕೃತಿಯಲ್ಲಿನ ಬರಹಗಳು ಜಿಡ್ಡುಗಟ್ಟಿದ ವಿಚಾರಗಳನ್ನು ಮರು ಚಿಂತಿಸುವಂತೆ ಮಾಡುತ್ತವೆ. ಬಾಬಾಸಾಹೇಬರ ವಿಚಾರಗಳ ಅರಿವಿನ ಹಿನ್ನಲೆಯಲ್ಲಿ ಗಾಂಧಿ ಮಾಡಿರುವ ವಂಚನೆಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿವೆ. ಅಂಬೇಡ್ಕರ್ ದಲಿತರ ಮನಕ್ಕೆ ಮುಟ್ಟುವ ಮೊದಲೇ ಗಾಂಧಿ ಅಮರಿಕೊಂಡಿದ್ದರ ಪರಿಣಾಮ ಇಷ್ಟು ವರ್ಷಗಳಾದರೂ ಅದರಿಂದ ಬಿಡುಗಡೆ ಹೊಂದಲು ಸಾಧ್ಯವಾಗದ ಬಗ್ಗೆ ವಿಷಾದಿಸುತ್ತಲೇ ಅವರ ಫಿಲಾಸಫಿಯನ್ನು ಲೇವಡಿ ಮಾಡಲಾಗಿದೆ.

ಪ್ರ: ತಾರಾ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್ ಮೈಸೂರು-4

ರಮಾಬಾಯಿ ಬೆಲೆ: ರೂ. ೬೦/-
ಲೇ: ಯಶವಂತ ಮನೋಹರ್
ಅನು: ಡಾ. ಎಚ್. ಟಿ ಪೋತೆ

ಡಾ. ಅಂಬೇಡ್ಕರ್ ಅವರ ಪತ್ನಿ ರಮಾಬಾಯಿ ಅವರ ಜೀವನ ಕುರಿತ ಮರಾಠಿಯಿಂದ ಅನುವಾದಗೊಂಡ ಈ ಅಪರೂಪದ ಕಾದಂಬರಿ ಕನ್ನಡಕ್ಕೆ ಒಂದು ಉತ್ತಮ ಸೇರ್ಪಡೆ. ಬಾಬಸಾಹೇಬರು ತಮ್ಮ ಅಧ್ಯಯನಶೀಲ ಗುಣ, ಶ್ರಮ, ಹೋರಾಟದಿಂದ ಕೋಟ್ಯಾನುಕೋಟಿ ದಲಿತರ ಬೆಳಕಾಗಿ, ಮಾರ್ಗದರ್ಶಕರಾಗಿ ವಿಮೋಚನಾಕಾರರಾಗಿ ಪ್ರಸಿದ್ಧಿಯನ್ನು ಪಡೆಯುವಲ್ಲಿ ರಮಾಬಾಯಿ ಎಲೆ ಮರೆಯ ಕಾಯಾಗಿ ಜೀವ ಸವೆಸಿದ ವೃತ್ತಾಂತ ಸಮರ್ಥವಾಗಿ ನಿರೂಪಿತವಾಗಿದೆ.

ಪ್ರ: ಸ್ವಪ್ನ ಬುಕ್ ಹೌಸ್
ಬೆಂಗಳೂರು



ಗರಿಕೆ ಬೆಲೆ: ರೂ. ೧೦೦/-
ಲೇ: ಡಾ. ಎಂ.ಎಸ್. ಶೇಖರ್

ದಬ್ಬಾಳಿಕೆಗೆ ಒಳಗಾಗಿಯೂ ಬದುಕುವ ಜೀವಸೆಲೆಯನ್ನು ಕಳೆದುಕೊಳ್ಳದ ದಲಿತರ ವಿಶಾಲ ಮನೋಭಾವವನ್ನು, ಸಮಾಜಮುಖಿ ಚಿಂತನೆಯನ್ನು ಎತ್ತಿ ಹಿಡಿಯುವ ಗುಣಧರ್ಮ ಇಲ್ಲಿನ ಕವಿತೆಗಳ ಪ್ರಧಾನ ಆಶಯ. ಮೇಲು-ಕೀಳು, ಶುದ್ಧ-ಅಶುದ್ಧಗಳ ಸೋಂಕಿನಿಂದ ಹೊರಬರುವ ತವಕ ಎದ್ದು ಕಾಣುತ್ತದೆ. ಕಾವ್ಯದ ಕಸುಬುಗಾರಿಕೆ ಮತ್ತು ಲೋಕದೃಷ್ಟಿಗೆ ಪ್ರಾತಿನಿಧಿಕವೆನಿಸುವ ರಚನೆಗಳು ದಲಿತರಂತರಾಳದ ನಿರಾಳತೆಯನ್ನೂ ಪ್ರತಿಪಾದಿಸುತ್ತವೆ. ಆಧುನಿಕತೆಪರವಾಗಿ ಧ್ವನಿಸುತ್ತಲೇ ಅದು ತರುವ ವಿಕಾರಗಳ ಬಗ್ಗೆಯೂ ದೃಷ್ಟಿ ಹರಿದಿದೆ.

ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ,
ಬಳ್ಳಾರಿಜಿಲ್ಲೆ

ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ:
ಅಸಲಿ ಚಹರೆಗಳು ಪಲ್ಲಟಗೊಳ್ಳುವ ಬಗೆ

ಡಾ. ಮೇಟಿ ಮಲ್ಲಿಕಾರ್ಜುನ

ಅರ್ಧಶತಮಾನದ ಪಠ್ಯಕ್ರಮವನ್ನು ಗಮನಿಸಿದಾಗ ನಮ್ಮ ಅರಿವಿಗೆ ಬರುವ ಸಂಗತಿಯೇನೆಂದರೆ, ವೈದಿಕ ಪರಂಪರೆಯನ್ನೇ ಲೋಕಗ್ರಹಿಕೆಯ ಮಾನದಂಡವನ್ನಾಗಿ ಬಳಸಲಾಗಿದೆ. ಬ್ರಾಹ್ಮಣ್ಯವೇ ಏಕಸ್ವಾಮ್ಯವನ್ನು ಸಾಧಿಸಿರುವುದೂ ಗೊತ್ತಾಗುತ್ತದೆ. ಇದರಲ್ಲೇನೂ ಅಚ್ಚರಿ ಪಡುವ ಸಂಗತಿಯಿಲ್ಲ. ಆದರೆ ವಸಹಾತೋತ್ತರ ಸನ್ನಿವೇಶದಲ್ಲಿಯು ದೇಶಭಾಷೆಗಳ ಹಣೆಬರೆಹದಲ್ಲಿ ಏನೂ ಬದಲಾವಣೆಯಾಗಿಲ್ಲ ಎನ್ನುವುದನ್ನು ಈ ಹೊತ್ತಿಗೆ ಗಟ್ಟಿದನಿಯಲ್ಲಿ ಹೇಳುತ್ತದೆ. ಲೋಕಗ್ರಹಿಕೆಯನ್ನು ರೂಪಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಬೇಕಾಗಿರುವುದು ಪಠ್ಯಪುಸ್ತಕಗಳೇ. ದಿಟ ಇದಕ್ಕೆ ಯಾವುದೇ ತಕರಾರು ಇರಲಾರದು. ಆದರೆ ಪಠ್ಯಪುಸ್ತಕಗಳು ವೈದಿಕ ಪರಂಪರೆಯ ತದ್ರೂಪವೇ ಏಕಾಗಿರುತ್ತವೆ ಎಂಬುದು ಈಗ ನಮ್ಮ ಮುಂದಿರುವ ಸವಾಲು.

೧

ಈಗಾಗಲೇ ನೆಲೆಯೂರಿದ ತಾತ್ವಿಕ ನಿಲುವುಗಳನ್ನೇ ಗಟ್ಟಿಗೊಳಿಸುವ ಹಠಮಾರಿತನದ ಈ ದಿನಗಳಲ್ಲಿ ಶಿಕ್ಷಣ ಎದುರಿಸುತ್ತಿರುವ ಸವಾಲುಗಳೆಂತವು? ಈ ಸವಾಲುಗಳನ್ನು ಎದುರಾಗುವ ಬಗೆಗಳಾವವು? ಯಾರು ಯಾರ ಪರವಾಗಿ ತಮ್ಮ ವಾದಗಳನ್ನು ಮಂಡಿಸುತ್ತಿದ್ದಾರೆ? ಇಂತಹ ವಾದಗಳನ್ನು ಮಂಡಿಸುವುದಕ್ಕೆ ಅವರು ಬಳಸಿಕೊಳ್ಳುತ್ತಿರುವ ಹತ್ಯಾರಗಳೆಂತವು? ಈ ಹತ್ಯಾರಗಳು ಪಠ್ಯಕ್ರಮದ ಭಾಗವಾಗಿ ಹೇಗಿರುತ್ತವೆ? ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಹೇಗೆ ತಮ್ಮ ಗುರಿಗಳನ್ನು ಸಾಧಿಸಲು ಇಂತಹ ಹತ್ಯಾರಗಳನ್ನೇ ಬಳಸಿಕೊಳ್ಳುತ್ತಾರೆ? ಎಂಬಿತ್ಯಾದಿ ಕೇಳ್ವಿಗಳಿಗೆ ಪೂರಕವಾದ ಬದಿಲುಗಳು ಡಾ. ಆರ್ ಚಲಪತಿಯವರ ಪಿಹೆಚ್‌ಡಿ ನಿಬಂಧನೆಯಲ್ಲಿ ಸಿಗುತ್ತವೆ. ಹೌದು, ಚಲಪತಿಯವರು ತಮ್ಮ ವಾದಗಳನ್ನು ಸಮರ್ಥಿಸಲು ಈ ಮೇಲಿನ ಕೇಳ್ವಿಗಳನ್ನೇ ಆಧಾರವಾಗಿಟ್ಟುಕೊಂಡು ಯಾವುದೇ ಪ್ರಮೇಯನ್ನು ಏನೂ ಕಟ್ಟಿಕೊಂಡಿಲ್ಲ. ಆದರೂ ಆ ನೆಲೆಯಲ್ಲಿಯೇ ಅವರ ಚಿಂತನೆಗಳು ಮೈದಾಳಿವೆ. ಈ ಆಲೋಚನಾಕ್ರಮವನ್ನೇ ಅನುಸರಿಕೊಂಡು ಶೈಕ್ಷಣಿಕ ಸವಾಲುಗಳನ್ನು ಬಿಡಿಸಿ ನೋಡಿದರೆ, ಬದುಕಿನ ಕ್ರಮ ಹಾಗೂ ಶೈಕ್ಷಣಿಕ ಕ್ರಮಗಳ ನಡುವಣ ಅಂತರ/ಕಂದಕಗಳು ಹುಟ್ಟಿಸುವ ಸಾಮಾಜಿಕ-ಸಾಂಸ್ಕೃತಿಕ ಅಪಾಯಗಳೆಂತಹವು ಎಂಬುದು ಯಾರಿಗಾದರೂ ಅರ್ಥವಾಗುತ್ತದೆ.

೨

ಪಠ್ಯಪುಸ್ತಕಗಳು ಅತ್ಯಂತ ಪರಿಣಾಮಕಾರಿ ಪರಿಕರಗಳು. ಇವು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ನೆಲೆಗಳನ್ನು ಪ್ರತಿನಿಧಿಸುವ ಮಾಧ್ಯಮಗಳೂ ಆಗಿರುತ್ತವೆ. ಚರಿತ್ರೆಯುದ್ದಕ್ಕೂ ನಿಗಾಯಿಟ್ಟು ನೋಡಿದರೆ ಪಠ್ಯಪುಸ್ತಕಗಳು ಬೆಳೆದು ಬಂದ ಬಗೆಯನ್ನು ತಿಳಿದುಕೊಳ್ಳಬಹುದು. ಇವು ಕೇವಲ ಯಾವುದೇ ಒಂದು ಪ್ರಬಲ ವರ್ಗದ ರಾಜಕೀಯ ಹಾಗೂ ತಾತ್ತ್ವಿಕ ಆಶೋತ್ತರಗಳನ್ನು ರೂಪಿಸುವ ಮಾದರಿಗಳಾಗಿರುವುದಷ್ಟೆ ಅಲ್ಲದೇ ಸಾಂಸ್ಕೃತಿಕ ಏಕೀಕರಣಕ್ಕೂ ಒತ್ತಾಯಿಸುತ್ತವೆ. ಇಂತಹ ಹವಣಿಕೆಯೂ ಮೇಲ್ವವರ್ಗದ ಸಾಂಸ್ಕೃತಿಕ ರಾಜಕಾರಣದಲ್ಲಿ ಸಹಜ ಹಾಗೂ ಅದೇ ಅದರ ಲಕ್ಷಣವೂ ಆಗಿರುತ್ತದೆ. ಇಂತಹ ಒತ್ತಾಯಗಳು ಚಾರಿತ್ರಿಕವಾಗಿ ನೆಲೆ ನಿಂತಿರುವ ಸಮುದಾಯಗಳ ನೆನಪುಗಳನ್ನು ಕಡೆಗಣಿಸುವುದಕ್ಕೂ ಕಾರಣವಾಗುತ್ತವೆ ಎನ್ನುವುದು ಗಮನಾರ್ಹ.

ಸಾಮಾಜಿಕ-ರಾಜಕೀಯವಾಗಿ ಪ್ರಾಬಲ್ಯ ಹೊಂದಿರುವ ಯಾವುದೇ ಒಂದು ಸಮುದಾಯದ ಸಾಂಸ್ಕೃತಿಕ ನೆನಪು, ನಂಬಿಕೆ, ಮೌಲ್ಯ ಹಾಗೂ ತಿಳುವಳಿಕೆಯನ್ನು ಮಾತ್ರ ಮಾನ್ಯ ಮಾಡುವ ಮತ್ತು ಅವುಗಳನ್ನೇ ಅಧಿಕೃತಗೊಳಿಸುವಲ್ಲಿ ಪಠ್ಯಪುಸ್ತಕಗಳು [ಅಂತಹ ವರ್ಗಗಳ] ನೆರವಿಗೆ ಬರುತ್ತವೆ. ಪಠ್ಯಪುಸ್ತಕಗಳು ಯಾರನ್ನು ಗುರಿಯಾಗಿಟ್ಟುಕೊಂಡಿರಬೇಕು ಎಂಬುದಕ್ಕಿಂತ ಯಾರ ಮೌಲ್ಯಗಳನ್ನು ನೆಲೆಗೊಳಿಸಬೇಕು ಎಂಬುದು ಮುಖ್ಯವಾಗುತ್ತದೆ. ಹೀಗೆ ರೂಪಗೊಂಡ ಯಾವುದೇ ವರ್ಗ/ಧರ್ಮ ಕೇಂದ್ರಿತ ನಿಲುವುಗಳೇ ರಾಷ್ಟ್ರೀಯತೆಯ ಸಂಕೇತಗಳಾಗಿ ಮೈದಾಳುತ್ತವೆ. ವಿಪರ್ಯಾಸವೇನೆಂದರೆ ಸಮುದಾಯಗಳ ನಡುವಣ ಯಾವುದೇ ಬಗೆಯ ಅಂತರ್ಸಂಬಂಧಗಳನ್ನು ಗುರುತಿಸಿಕೊಳ್ಳಲು ಇಲ್ಲಿ ಅವಕಾಶವೇ ಇರುವುದಿಲ್ಲ. ಇಂತಹ ಅಧಿಕಾರಸ್ಥ ರಚನೆಗಳೇ ಸಾಂಸ್ಕೃತಿಕ ನೆನಪುಗಳಾಗಿ ಮುಂಚೂಣಿಗೆ ಬರುತ್ತವೆ. ಯಾಜಮಾನ್ಯ ಸಮುದಾಯದ ಸಾಂಸ್ಕೃತಿಕ, ಸಾಮಾಜಿಕ ಹಾಗೂ ಚಾರಿತ್ರಿಕ ಸಮ್ಮತಿಗಳನ್ನು ರೂಪಿಸುವಲ್ಲಿ ಪಠ್ಯಪುಸ್ತಕಗಳೇ ಬಹುಮುಖ್ಯ ಹತ್ಯಾರಗಳು. ಇವು ಯಾವಾಗಲೂ ಏಕಮುಖಿಯಾಗಿರುತ್ತವೆಂದು ಬೇರೆ ಹೇಳಬೇಕಾಗಿಲ್ಲ. ಪಠ್ಯಪುಸ್ತಕ ಎಂಬ ಕಲ್ಪನೆಯೇ ರಾಜಕೀಯ ಪ್ರೇರಿತವಾದ ಕ್ರಿಯೆ ಎನ್ನುವುದರಲ್ಲಿ ಯಾರಿಗೂ ಅನುಮಾನವಿರಲಾರದು.

೩

"ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ ಎಂಬ ಅಡ್ಡ ಹೆಸರಿನ ಈ ಹೊತ್ತಗೆಯು ಡಾ. ಆರ್ ಚಲಪತಿಯವರು ತಮ್ಮ ಪಿಹಚ್.ಡಿ ಓದಿಗಾಗಿ ಬರೆದು ಒಪ್ಪಿಸಿದ ನಿಬಂಧನೆ ಇದಾಗಿದೆ. ಇದೊಂದು ಅಪರೂಪದ ವಸ್ತುವನ್ನು ಆರಿಸಿಕೊಂಡ ಓದು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಇದು ಕೇವಲ ಪಠ್ಯಪುಸ್ತಕಗಳ ಸ್ವರೂಪವನ್ನು ಮಾತ್ರ ಬಿಡಿಸಿ ನೋಡದೇ, ಅವುಗಳು ಸಾಂಸ್ಕೃತಿಕ ರಾಜಕಾರಣದ ಅಸ್ತ್ರಗಳಾಗಿ ಹೇಗೆ ರೂಪಗೊಳ್ಳುತ್ತವೆ ಎಂಬುದನ್ನು ಈ ಹೊತ್ತಿಗೆ ನಿಚ್ಚಳಗೊಳಿಸುತ್ತದೆ.

ಇಡೀ ಅರ್ಧಶತಮಾನದ ಪಠ್ಯಕ್ರಮವನ್ನು ಗಮನಿಸಿದಾಗ ನಮ್ಮ ಅರಿವಿಗೆ ಬರುವ ಸಂಗತಿಯೇನೆಂದರೆ, ವೈದಿಕ ಪರಂಪರೆ ಯನ್ನೇ ಲೋಕಗ್ರಹಿಕೆಯ ಮಾನದಂಡವನ್ನಾಗಿ ಬಳಸಲಾಗಿದೆ. ಬ್ರಾಹ್ಮಣ್ಯವೇ ಏಕಸ್ವಾಮ್ಯವನ್ನು ಸಾಧಿಸಿರುವುದೂ ಗೊತ್ತಾಗುತ್ತದೆ. ಇದರಲ್ಲೇನೂ ಅಚ್ಚರಿ ಪಡುವ ಸಂಗತಿಯಿಲ್ಲ. ಆದರೆ ವಸಹಾತೋತ್ತರ ಸನ್ನಿವೇಶದಲ್ಲಿಯು ದೇಶಭಾಷೆಗಳ ಹಣೆಬರೆಹದಲ್ಲಿ ಏನೂ ಬದಲಾವಣೆಯಾಗಿಲ್ಲ ಎನ್ನುವುದನ್ನು ಈ ಹೊತ್ತಿಗೆ ಗಟ್ಟಿದನಿಯಲ್ಲಿ ಹೇಳುತ್ತದೆ. ಲೋಕಗ್ರಹಿಕೆಯನ್ನು ರೂಪಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಬೇಕಾಗಿರುವುದು ಪಠ್ಯಪುಸ್ತಕಗಳೇ. ದಿಟ ಇದಕ್ಕೆ ಯಾವುದೇ ತಕರಾರು ಇರಲಾರದು. ಆದರೆ ಪಠ್ಯಪುಸ್ತಕಗಳು ವೈದಿಕ ಪರಂಪರೆಯ ತದ್ರೂಪವೇ ಏಕಾಗಿರುತ್ತವೆ ಎಂಬುದು ಈಗ ನಮ್ಮ ಮುಂದಿರುವ ಸವಾಲು. ಇದು ಹುಟ್ಟುಹಾಕಿರುವ ಬಿಕ್ಕಟ್ಟುಗಳು ಕೇವಲ ಶೈಕ್ಷಣಿಕ ಸವಾಲುಗಳಾಗಿ ಮಾತ್ರ ಉಳಿದಿಲ್ಲ. ಅವು ಸಾಂಸ್ಕೃತಿಕವಾಗಿ ಸಾಕಷ್ಟು ಬಗೆಯ ತೊಡಕುಗಳಿಗೂ ಕಾರಣವಾಗಿವೆ. ಎತ್ತುಗೆಗಾಗಿ ಸಾಹಿತ್ಯ, ಚರಿತ್ರೆ, ಸೊಲ್ಲರಿಮೆ, ಕಾವ್ಯಮೀಮಾಂಸೆ ಮುಂತಾದವುಗಳು ರೂಪಗೊಂಡ ಬಗೆಯನ್ನು ನೋಡಬಹುದು. ಇದನ್ನು ಸಾಬೀತುಪಡಿಸುವಲ್ಲಿ ಚಲಪತಿಯವರ ಚರ್ಚೆಗಳು ಸಾಕ್ಷಿಯಾಗಿವೆ. ಬಹುಳತೆಯ ಸನ್ನಿವೇಶದಲ್ಲಿ ಯಾವುದೇ ವರ್ಗ/ಧರ್ಮದ ಯಜಮಾನಿಕೆಯ ಪ್ರಾಬಲ್ಯ ಹೇಗಿರುತ್ತೇ ಎಂಬುದಕ್ಕೆ ಪಠ್ಯಪುಸ್ತಕಗಳ ಸಾಂಸ್ಕೃತಿಕ ರಾಜಕಾರಣವೇ ಸಾಕ್ಷಿ.

೪

ಕರ್ನಾಟಕದಲ್ಲಿ ಪದವಿ ತರಗತಿಗಳ ಪಠ್ಯಕ್ರಮಕ್ಕೆ ಮಾದರಿಯಾದದ್ದು ಮೈಸೂರು ವಿಶ್ವವಿದ್ಯಾನಿಲಯವೇ ಎಂಬುದು ಚಾರಿತ್ರಿಕ-ಸಾಂಸ್ಕೃತಿಕವಾಗಿ ಚರ್ಚಿಸಬೇಕಾದ ವಿಷಯವೇನೋ ಸರಿ. ಆದರೆ ಈ ಬಗೆಯ ನಡೆಯೊಂದು ಮುಂಚೂಣಿಗೆ ಬರಲು ಏನು ಕಾರಣ ಎಂಬುದನ್ನೂ ಗಮನಿಸಬೇಕಾಗುತ್ತದೆ. ಆರ್. ನರಸಿಂಹ ಚಾರ್ಯ, ಬಿ.ಎಂ.ಶ್ರೀ, ಹಾಗೂ ತೀ.ನಂ.ಶ್ರೀ ಮುಂತಾದವರು ಹುಟ್ಟುಹಾಕಿದ ಸಂಸ್ಕೃತಪರವಾದ ಚಿಂತನೆಗಳೇ ಇದಕ್ಕೆ ಮುಖ್ಯ ಕಾರಣವೆಂದು ಚಲಪತಿಯವರು ಗುರುತಿಸುತ್ತಾರೆ. ಇವತ್ತಿನ ಪಠ್ಯಕ್ರಮದಲ್ಲಿಯ ಎಲ್ಲ ಬಗೆಯ

ತೊಡಕುಗಳಿಗೂ ಇವರೇ ಹೊಣೆಗಾರರಾಗಿದ್ದರೆ, ಮತ್ತ್ಯಾಕೆ ಇವರನ್ನು ಕನ್ನಡ ಸಾಂಸ್ಕೃತಿಕ-ಸಾಹಿತ್ಯಿಕ ಲೋಕದ ಸಂಕೇತಗಳನ್ನಾಗಿ ಬಿಂಬಿಸಲಾಗಿದೆ? ಇದೊಂದು ಸೋಜಿಗದ ಸಂಗತಿಯಾಗಿಯೇ ಕಾಣುತ್ತದೆ.

ಇದಕ್ಕೆ ಬದಿಲು ಕಂಡುಕೊಳ್ಳುವುದು ಅಷ್ಟು ಸುಲುವಾದ ಕೆಲಸವಲ್ಲ. ಇದರಿಂದ ಒಂದು ಹೊಳವು ಮಾತ್ರ ನಿಚ್ಚಳವಾಗಿ ಕಾಣಿಸುತ್ತದೆ. ಅದೇನೆಂದರೆ, ಹೊಸಗನ್ನಡದ ಸಾಂಸ್ಕೃತಿಕ ಹಾಗೂ ವಿದ್ವತ್ ಲೋಕವನ್ನು ಕಟ್ಟುವ ಬಗೆಯಲ್ಲಿಯೇ ಇಂತಹ ತೊಡಕುಗಳು ಹುದುಗಿರುವುದು. ಆದರೆ ಕನ್ನಡ ವಿದ್ವತ್ ಲೋಕದ ಮುಂದಾಳುತನದ ಹೊಣೆಹೊತ್ತ ತಿಳಿವಿಗರು ಈ ತೊಡಕುಗಳನ್ನು ಬಗೆಹರಿಸುವ ಬದಲಾಗಿ ಅವೇಸೈಯೆಂದು ಒಪ್ಪಿ ಮುನ್ನೆಡೆದಿದ್ದಾರೆ. ಇಂತಹ ನಡೆಗಳಿಂದ ನಾವು ಇವತ್ತಿಗೂ ಶೈಕ್ಷಣಿಕವಾಗಿ ಸವಾಲುಗಳನ್ನು ಎದುರಿಸಬೇಕಾಗಿದೆ. ಯಾವುದೇ ಸಮರ್ಥನೆಗಳನ್ನು ಕೊಡುವುದಕ್ಕೂ ಸಾಧ್ಯವಾಗದ ನಡೆಗಳು ಮುಂಚೂಣಿಗೆ ಬಂದಿವೆ. ಎತ್ತುಗೆಗಾಗಿ, "ಕರ್ನಾಟಕದ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಭಾಷೆ, ಕನ್ನಡ ಸಾಹಿತ್ಯ ಎಂದು ಎರಡು ಪತ್ರಿಕೆಗಳ ಪಠ್ಯಕ್ರಮಗಳಾಗಿ ಅಭ್ಯಾಸ ಮಾಡಬೇಕಾದ ಕಾರಣಗಳು ಕೂಡ ಯಾಕೆ ಎಂಬುದು ಸ್ಪಷ್ಟವಾಗುವುದಿಲ್ಲ" [ಪು:76]. ಚಲಪತಿಯವರ ಅನುಮಾನ ಸರಿಯಾಗಿಯೇ ಇದೆ. ಪರಂಪರೆಯ ವ್ಯಸನವೇ ಇಂತಹ ಸಾಂಸ್ಕೃತಿಕ ರಾಜಕಾರಣಕ್ಕೆ ಕಾರಣವೆಂಬುದು ಇದರಿಂದ ದಿಟವಾಗಿ ತೋರುತ್ತದೆ.

"ದೇಶೀ ಭಾಷೆಗಳು ಅಸಮರ್ಥವೆಂದು ತೀರ್ಮಾನಿಸಿ, ಯಾಜಮಾನ್ಯ ಭಾಷೆಗಳನ್ನು ನೆಲೆಗೊಳಿಸಲು ನಡೆಸಿದ ಪ್ರಯತ್ನಗಳನ್ನು ಕುರಿತ ಸಾಕಷ್ಟು ವಿವರಗಳನ್ನು ಚಲಪತಿ ಅವರು ಬಯಲುಗೊಸಿದ್ದಾರೆ. ಚಾರಿತ್ರಿಕವಾಗಿ ಶಿಕ್ಷಣ ಕ್ರಮ ಬೆಳೆದುಬಂದ ಬಗೆಯನ್ನು ಚರ್ಚಿಸುವುದೆಂದರೆ, ಅವು ಶಿಕ್ಷಣ ಕ್ರಮದಲ್ಲಿ ಭಾಷೆಗಳು ಪಡೆದುಕೊಂಡ ಶೈಕ್ಷಣಿಕ ಮಹತ್ವವನ್ನೂ ಕುರಿತ ಚರ್ಚೆಗಳು ಆಗಿರುತ್ತವೆ. ಈ ಚರ್ಚೆಗಳು ಸ್ಥಾಪಿತ ಅಧಿಕಾರ ಸಂಬಂಧಗಳನ್ನು ಮುರಿದು ಕಟ್ಟುವಲ್ಲಿ ಹಾಗೂ ಅವುಗಳನ್ನು ಮುಂದುವರಿಸುವಲ್ಲಿ ಹೇಗೆ ಸಹಾಯಕ್ಕೆ ಬಂದಿವೆ ಎಂಬುದನ್ನು ಬಿಡಿಸಿ ನೋಡಬೇಕಿದೆ.

ಇಪ್ಪತ್ತನೇ ಶತಮಾನದ "ಸಾಂಸ್ಕೃತಿಕ ರಾಜಕಾರಣ"ವು ಕೂಡ ದೇಶ ಭಾಷೆಗಳ ಬಗ್ಗೆ ಎಷ್ಟೊಂದು 'ಅಪನಂಬಿಕೆ'ಯನ್ನು ಮೂಡಿಸಲು ಸಾಧ್ಯವೋ ಅಷ್ಟನ್ನೂ ಶಿಕ್ಷಣದ ಮೂಲಕ ಸಾಧಿಸಿದ್ದನ್ನು ಕಾಣಬಹುದು. ಇದಕ್ಕೆ ವ್ಯತಿರಿಕ್ತವಾಗಿ 1854ರ ವುಡ್‌ನ ವರದಿಯು 'ದೇಶ ಭಾಷೆಗಳ'ನ್ನು ಶೈಕ್ಷಣಿಕವಾಗಿ ಮುನ್ನೆಲೆಗೆ ತಂದಿದ್ದನ್ನು ಗಮನಿಸಬಹುದು. ಇದರ ಹಿಂದಿನ ರಾಜಕಾರಣವೇನು ರಹಸ್ಯವಾಗಿ ಉಳಿದಿಲ್ಲವಾದರೂ ಆ ವರದಿಯ ಮಹತ್ವವನ್ನು ಕಡೆಗಣಿಸುವಂತಿಲ್ಲ ಎಂಬುದು ಗಮನಾರ್ಹ. ಮುಂದಿನ ಮಾತುಗಳು ಈ ಹೇಳಿಕೆಯನ್ನು ಬಲಪಡಿಸುತ್ತವೆ. "ದೇಶೀ ಭಾಷೆಗಳಲ್ಲಿ ಯೋಗ್ಯವಾದ ಪಠ್ಯಪುಸ್ತಕಗಳನ್ನು ಒದಗಿಸಬೇಕು, ದೇಶೀ ಭಾಷಾ ಸಾಹಿತ್ಯಕ್ಕೆ ಯೋಗ್ಯ ಪುರಸ್ಕಾರ ನೀಡಬೇಕು" ಎಂಬ ಈ ಶಿಫಾರಸ್ಸು ಕೇವಲ ಶೈಕ್ಷಣಿಕವಾಗಿ ಮಹತ್ವದೆಂದು ತಿಳಿದುಕೊಳ್ಳುವ ಅಗತ್ಯವಿಲ್ಲ. ಇದೂ ಚಾರಿತ್ರಿಕ ಹಾಗೂ ಸಾಂಸ್ಕೃತಿಕವಾಗಿಯೂ ಮುಖ್ಯವಾಗುತ್ತದೆ. ದಿಟ ಅಧಿಕಾರ ಸಂಬಂಧಗಳ ಪಲ್ಲಟಕ್ಕೂ ಈ ಶಿಫಾರಸ್ಸು ಕಾರಣವಾಗಿದೆ. ಹಾಗೂ ಅಂತಹ ಅಧಿಕಾರಸ್ಥ ನಿಲುವುಗಳನ್ನೂ ಗುರುತಿಸುವ ಪ್ರಜ್ಞೆಯು ಇಂತಹ ನಿಲುವುಗಳಿಂದಲೇ ಉಂಟಾಗಿದೆ ಎಂಬುದು ವಿಶೇಷ. ಇದೊಂದು ವಿಚಿತ್ರ ಬೆಳವಣಿಗೆಯಾಗಿ ಕಾಣುತ್ತದೆ ಸಂಸ್ಕೃತದ ಯಜಮಾನಿಕೆ ಜಾಗವನ್ನು ಇಂಗ್ಲಿಷ್ ಆಕ್ರಮಿಸಿಕೊಂಡಂತೆ ಹೊರನೋಟಕ್ಕೆ ಕಾಣುತ್ತದೆ. ಆದರೆ ಸಂಸ್ಕೃತ ಮತ್ತು ಇಂಗ್ಲಿಷ್ ನುಡಿಗಳು ಹೊಂದಿರುವ ಅಧಿಕಾರಸ್ಥ ನಂಟಿನ ಸ್ವರೂಪದಲ್ಲಿ ಸಾಕಷ್ಟು ವ್ಯತ್ಯಾಸವಿದೆ.

ಅಧಿಕಾರ ಸಂಬಂಧಗಳನ್ನು ನೆಲೆಗೊಳಿಸುವಲ್ಲಿ ಪಠ್ಯಪುಸ್ತಕಗಳು ಕೇವಲ ನಿರ್ಧಾರಕಗಳು ಆಗಿರುವುದಷ್ಟೆ ಅಲ್ಲದೇ, ಅವು ಯಾವುದೇ ಧರ್ಮ ಅಥವಾ ವರ್ಗದ ಸಂಕೇತಗಳಾಗಿಯೂ ರೂಪಗೊಳ್ಳುತ್ತವೆ. 'ಭಾರತೀಯ' ಯೆಂಬ ಏಕರೂಪಿ ಸಂಸ್ಕೃತಿಯನ್ನು ನಿರ್ವಚಿಸುವಲ್ಲಿ ವಸಹಾತುಶಾಹಿ ನಿಲುವುಗಳು ಕೂಡ ಅತ್ಯಂತ ಮುಖ್ಯವಾಗಿವೆ.

ಙ

ಕನ್ನಡ ಸಾಹಿತ್ಯ ಚರಿತ್ರೆಯನ್ನು [ಸಾಹಿತ್ಯ ಚರಿತ್ರೆ ಎಂಬುದೊಂದಿಯೇ ಎನ್ನುವ ಪ್ರಶ್ನೆಯನ್ನು ಬೇರೆಯಾಗಿಯೇ ಚರ್ಚಿಸಬೇಕಿದೆ] 'ಜಾತಿ' ಅಥವಾ 'ಧರ್ಮ'ದ ಆಧಾರದ ಮೇಲೆ ವಿಂಗಡಿಸಿ ನೋಡುವ ಬಗೆ ಸಂಸ್ಕೃತವೆಂಬ ಪರಂಪರೆಯ ಸೂತಕದಿಂದಲೇ ಹುಟ್ಟಿರುವಂತಹದು. ಇದಕ್ಕೆ ಶೈಕ್ಷಣಿಕ ನಿಲುವುಗಳು ಹೇಗೆ ಒತ್ತಾಸೆಯಾಗಿ ನಿಂತಿವೆ ಎಂಬುದು ಕೂಡ ಗಮನಾರ್ಹ. ಕನ್ನಡ ಸಾಹಿತ್ಯದ ಹೆಸರಿನಲ್ಲಿ ಸಂಸ್ಕೃತ ಪರಂಪರೆಯನ್ನೇ ಪ್ರಸಾರ ಮಾಡಲಾಗಿದೆ. ಬಿ.ಎಂ.ಶ್ರೀ-ತಿ.ನಂ.ಶ್ರೀ ಎಂಬೆಲ್ಲಾ ಕನ್ನಡದ ಕಲಿಗಳು ಹಾಗೂ ಕನ್ನಡ ನುಡಿಯ ಏಳ್ಗೆಯ ಮುಂದಾಳುತನದ ಹೊಣೆಹೊತ್ತ ಇನ್ನೂ ಅನೇಕ ವಿದ್ವಾಂಸರ 'ಸಾಂಸ್ಕೃತಿಕ ನಿಲುವು'ಗಳ ಸ್ವರೂಪ ಹಾಗೂ ಉದ್ದೇಶದ ಹಿಂದಿನ ಆಸಕ್ತಿಗಳೆಂತಹವು ಎಂಬುದನ್ನು ಈ ಹೊತ್ತಗೆಯು ನಿಚ್ಚಳಗೊಳಿಸುತ್ತದೆ. ಇಂತಹ ನಿರ್ಧಾರಗಳನ್ನು ನೆಲೆಗೊಳಿಸುವಲ್ಲಿ ಶಿಕ್ಷಣ ಹೇಗೆ ವರ್ತಿಸುತ್ತದೆ ಎನ್ನುವುದನ್ನೂ ಚಲಪತಿಯವರ ಬಿಡಿಸಿ ನೋಡುವ ಪ್ರಯತ್ನವನ್ನು ಇಲ್ಲಿ ಕಾಣಬಹುದು.

ಎತ್ತುಗೆಗಾಗಿ ಕನ್ನಡ ಪಠ್ಯಕ್ರಮದ ಭಾಗವಾಗಿ 'ಸಂಸ್ಕೃತ ಕಾವ್ಯ ಮೀಮಾಂಸೆ'ಯನ್ನು ಸಾಂಸ್ಥಿಕಗೊಳಿಸಿದ ಬಗೆಯನ್ನೇ ಗಮನಿಸಬೇಕು. ಇದೊಂದು ಎತ್ತುಗೆಯೇ ಸಾಕು ಇಡೀ ಸಾಂಸ್ಕೃತಿಕ ರಾಜಕಾರಣ ಹೇಗೆ ಸಂಸ್ಕೃತದ ಪರವಾಗಿ ನಡೆದುಕೊಂಡಿದೆ ಎಂಬುದನ್ನು ತಿಳಿದುಕೊಳ್ಳಲು. ಕನ್ನಡದ ಸಾಂಸ್ಕೃತಿಕ ಹಾಗೂ ಸೃಜನಾತ್ಮಕ ಕಸುವನ್ನು ನಾಶಗೊಳಿಸುವಲ್ಲಿಯೂ ಸಂಸ್ಕೃತದ ಪಾತ್ರ ಎಷ್ಟೊಂದು ಮುಖ್ಯವಾಗಿದೆ ಎಂಬುದನ್ನು ಚಲಪತಿಯವರು ನಿಚ್ಚಳಗೊಳಿಸಿದ್ದಾರೆ. ಪರಂಪರೆಯನ್ನು ಕಟ್ಟುವ ನೆಲೆಗಳು ರೂಪಗೊಂಡ ಬಗೆಗಳು ಹಾಗೂ ಅದಕ್ಕೆ ಒತ್ತಾಸೆಯಾಗಿ ನಿಂತಿರುವ ಜಾತಿ, ಧರ್ಮಗಳು ಹೇಗೆ ಅಧಿಕಾರದ ಜಾಗಗಳನ್ನು ಪಡೆದುಕೊಳ್ಳುತ್ತವೆ ಎಂಬ ಚರ್ಚೆಗಳು ಈ ನಿಬಂಧನೆಯ ಉದ್ದಕ್ಕೂ ಹರಡಿ ಕೊಂಡಿವೆ. ಪರಂಪರೆ ಎನ್ನುವ ಕಲ್ಪನೆಯೇ ಒಂದು ಹುಸಿ ಕಲ್ಪನೆ. ಇದು ಬಹುಳತೆಯನ್ನು ಕಡೆಗಣಿಸಿ ಏಕರೂಪಿ ಸಂಸ್ಕೃತಿಯನ್ನಾಗಿಸುತ್ತದೆ ಹಾಗೂ ವೈವಿಧ್ಯಮಯ ಅಸ್ಮಿತೆಯನ್ನು ಅಳಿಸಿ ಹಾಕಿ, ಯಾವುದೇ ಬಲವಂತದ ಅಸ್ಮಿತೆಯನ್ನು ಆರೋಪಿಸುತ್ತದೆ.

ಇಂತಹ ನಿಲುವುಗಳನ್ನು ಪಠ್ಯಪುಸ್ತಕದ ಮೂಲಕ ಸಾಧಿಸುವ ಹುನ್ನಾರ ಹೇಗೆ ನಡೆಯುತ್ತದೆ ಅನ್ನುವುದು ಗಮನಾರ್ಹ. ಸಾಂಸ್ಕೃತಿಕ ನಿಲುವುಗಳನ್ನು ನಿರ್ಧರಿಸುವ ಮತ್ತು ನಿರ್ವಚಿಸುವ ಅಧಿಕಾರವನ್ನು ಶಿಕ್ಷಣವು ಪಡೆದುಕೊಂಡಿದ್ದೇ ಪಠ್ಯಪುಸ್ತಕಗಳ ರಾಜಕಾರಣದಿಂದ. ಇದೊಂದು ಅಚ್ಚರಿಯ ಸಂಗತಿಯಾಗಿ ತೋರಿದರೂ ವಸ್ತುಸ್ಥಿತಿಯೊಂದನ್ನು ಅಲ್ಲಗಳೆಯುವುದು ಹೇಗೆ ಸಾಧ್ಯ?

ಅಧಿಕಾರ ಸಂಬಂಧಗಳನ್ನು ನೆಲೆಗೊಳಿಸುವಲ್ಲಿ ಪಠ್ಯಪುಸ್ತಕಗಳು ಕೇವಲ ನಿರ್ಧಾರಕಗಳು ಆಗಿರುವುದಷ್ಟೆ ಅಲ್ಲದೇ, ಅವು ಯಾವುದೇ ಧರ್ಮ ಅಥವಾ ವರ್ಗದ ಸಂಕೇತಗಳಾಗಿಯೂ ರೂಪಗೊಳ್ಳುತ್ತವೆ. 'ಭಾರತೀಯ' ಯೆಂಬ ಏಕರೂಪಿ ಸಂಸ್ಕೃತಿಯನ್ನು ನಿರ್ವಚಿಸುವಲ್ಲಿ ವಸಹಾತುಶಾಹಿ ನಿಲುವುಗಳು ಕೂಡ ಅತ್ಯಂತ ಮುಖ್ಯವಾಗಿವೆ. ಏಕೆಂದರೆ ವೈದಿಕ ತತ್ವಶಾಸ್ತ್ರ, ಕಾವ್ಯಮೀಮಾಂಸೆ ಹಾಗೂ ಜ್ಞಾನಶಾಸ್ತ್ರೀಯ ತಿಳುವಳಿಕೆಗಳು ಮುನ್ನೆಲೆಗೆ ಬರಲು ಇಂತಹ ನಿಲುವುಗಳೇ ಕಾರಣ. ಬಹುಮುಖಿ ಸಂಸ್ಕೃತಿಯನ್ನು ಅಂಚಿಗೆ ತಳ್ಳುವ ಹುನ್ನಾರಕ್ಕೂ ಇವೇ ನಿಲುವುಗಳು ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಯಾವುದೇ ಸಾಂಸ್ಕೃತಿಕ ತಿಳುವಳಿಕೆಯು 'ದರ್ಶನ'ವಾಗಿ ರೂಪಗೊಳ್ಳುವ ಪ್ರಕ್ರಿಯೆಯಲ್ಲಿ ಧರ್ಮ ಮತ್ತು ಶಿಕ್ಷಣಗಳದ್ದೇ ಪ್ರಮುಖ ಪಾತ್ರವಿರುತ್ತದೆ ಎಂಬುದು ಇದರಿಂದ ಗೋತ್ತಾಗುತ್ತದೆ. ವೈದಿಕಶಾಹಿ ಹಾಗೂ ವಸಹಾತುಶಾಹಿಗಳ ನಡುವಣ ಹೊಂದಾಣಿಕೆಯೂ ಇಂತಹದೇ ಪ್ರಕ್ರಿಯೆ ಒತ್ತಾಸೆಯಾಗಿರುತ್ತದೆ. ಭಾರತದಲ್ಲಿ ಬಹುಸಂಖ್ಯಾತರು ಒಟ್ಟೊಟ್ಟಿಗೆ ವೈದಿಕ ಹಾಗೂ ವಸಹಾತುಶಾಹಿ ಶೋಷಣೆಗೆ ಒಳಗಾಗಿದ್ದನ್ನೂ ನಿಚ್ಚಳವಾಗಿ ಗುರುತಿಸಬಹುದು. ದಿಟ, ಕೆಲವು ವಸಹಾತುಶಾಹಿ ನಿಲುವುಗಳು ದಲಿತ, ಶೂದ್ರ ಇತ್ಯಾದಿ ಹಿಂದುಳಿದ ವರ್ಗದವರಿಗೆ ಹೊರಚಾಚುಗಳನ್ನು ತೋರಿಸಿವೆ. ಇದರ ಪ್ರಮಾಣ ಅತ್ಯಂತ ಕಮ್ಮಿಯೆಂದೇ ಹೇಳಬೇಕು. ಇಂತಹ ಹೊರಚಾಚುಗಳು ಆಕಸ್ಮತ್ತಾಗಿ ವಸಹಾತುಶಾಹಿ ಪ್ರಭುತ್ವದ ರಚನೆಯಲ್ಲಿಯೇ ಅಡಕಗೊಂಡಿವೆ. ಈ ರಚನೆಗಳು ಉದ್ದೇಶಿತ ಹೌದೋ ಅಲ್ಲೋ ಎಂಬುದನ್ನು ಬಿಡಸಿ ನೋಡಬೇಕು. ಇವುಗಳು ಬ್ರಿಟಿಷ್ ಸಾಮ್ರಾಜ್ಯಶಾಹಿತ್ವಕ್ಕೆ ಅಗತ್ಯವಾದ ರಚನೆಗಳೂ ಆಗಿರಬಹುದು. ಅದಕ್ಕಾಗಿಯೇ ಹೇಳಿದ್ದು, ವೈದಿಕ ಹಾಗೂ ವಸಹಾತುಶಾಹಿ ಪ್ರಭುತ್ವಗಳ ರಚನೆಯಲ್ಲಿ ಪರಸ್ಪರ ಹೊಂದಾಣಿಕೆ ಇದೆಯೆಂದು.

ವಸಹಾತುಶಾಹಿ ಹಾಗೂ ಸಂಸ್ಕೃತದ ಜ್ಞಾನ ಮೀಮಾಂಸೆಯನ್ನೇ ಕನ್ನಡದ ನೈಜ ಜ್ಞಾನ ಮೀಮಾಂಸೆಯನ್ನಾಗಿ ಒಪ್ಪಿಸಲಾಗಿದೆ. ಇಂತಹ ಪ್ರಜ್ಞೆಯೊಂದು ಹೇಗೆ ಅಧಿಕಾರಸ್ಥ ನೆಲೆಯಾಗಿ ರೂಪಗೊಳ್ಳುತ್ತದೆ ಎಂಬುದನ್ನುಈ ಹೊತ್ತಗೆಯ ಚರ್ಚೆಗಳು ಎತ್ತಿತೋರಿಸುತ್ತವೆ. ಎತ್ತುಗೆಗಾಗಿ ಕನ್ನಡ ಅಧ್ಯಯನ ಸಂಸ್ಥೆಯ ಮುಂದಾಳುತನವನ್ನು ವಹಿಸಿಕೊಂಡ ಜಿ.ಎಸ್.ಎಸ್. ಹಾ.ಮಾ.

(39ನೇ ಪುಟಕ್ಕೆ)

ಭುಗಿಲೆದ್ದಿರುವ ಭ್ರಷ್ಟಾಚಾರದ ವಿರುದ್ಧ ಕುಬ್ಜವಾಗುತ್ತಿರುವ ಹೋರಾಟ

ಜ. ಹೊ. ನಾರಾಯಣಸ್ವಾಮಿ

ಭ್ರಷ್ಟತೆ ಭಾರತವನ್ನು ಬಾಚಿ ತಬ್ಬುತ್ತಿದೆ. ಉಸಿರಿನಷ್ಟು ಸಹಜವಾಗಿ ರೋಮರೋಮಗಳಲ್ಲಿ ರಿಂಗಣಿಸುತ್ತಿದೆ. ಒಂದುವೇಳೆ ನಮ್ಮ ಈ ಸ್ವತಂತ್ರ ಭಾರತ ಭ್ರಷ್ಟತೆಯಿಂದ ಮುಕ್ತವಾಗಿದ್ದರೆ ಈ ಹೊತ್ತಿಗಾಗಲೆ ವಿಶ್ವದ ಪ್ರಬಲ ರಾಷ್ಟ್ರವಾಗಿ ಇತಿಹಾಸ ನಿರ್ಮಿಸುತ್ತಿತ್ತು. ಅದಕ್ಕೆ ಈಗಲೂ ಕಾಲ ಮಿಂಚಿಲ್ಲ. ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವ ಪ್ರಯತ್ನಗಳಿಗೆ ಈಗ ಚಾಲನೆ ದೊರೆಯುತ್ತಿರುವುದು ಶುಭ ಸೂಚನೆಯಾಗಿದ್ದು ಆಶಾದಾಯಕವಾಗಿದೆ.

ಯಾವುದೇ ಅಸಂವಿಧಾನಿಕ, ಅನೀತಿಯುತ ಚಟುವಟಿಕೆಗಳನ್ನು ಚಿವುಟಿಹಾಕಲು ಸರ್ಕಾರ ವಿಫಲವಾದಾಗ ಅಸಹಕಾರ, ಅಹಿಂಸಾ ಮಾರ್ಗದ ಚಳವಳಿಗಳು, ಉಪವಾಸದಂತ ಸತ್ಯಾಗ್ರಹಗಳು ಅಂಥಹ ಅನೀತಿ ಯುತ ಕ್ರಿಯೆಗಳನ್ನು, ಬಗ್ಗುಬಡಿಯುವ ಪ್ರಬಲ ನಾಗರಿಕ ಅಸ್ತ್ರಗಳಾಗಿವೆ. ಇದಕ್ಕೆ ಅಮೆರಿಕದ ಹೆನ್ರಿ ಡೇವಿಡ್ ಥೋರೋ 'ನಾಗರಿಕ ಅಸಹಕಾರ'ದ (Civil Disobedience) ಮೂಲಕ ಮಾರ್ಗ ತೋರಿದರೆ ಅದರಿಂದ ಪ್ರಭಾವಿತರಾದ ಮಹಾತ್ಮ ಗಾಂಧೀಜಿ ಅದನ್ನು ವಿಶ್ವ ಮಟ್ಟದಲ್ಲಿ ಸಾಕಾರಗೊಳಿಸಿ ಹೊಸ ಹೋರಾಟಕ್ಕೆ ನಾಂದಿ ಹಾಡಿದರು. ಅದು ಎಂಥ ಅಧ್ಯಾತ್ಮಿಕ ಶಕ್ತಿಯದ್ದಾಗಿತ್ತೆಂದರೆ ಬ್ರಿಟಿಷ್ ಸಾಮ್ರಾಜ್ಯ ಮೈತುಂಬ ವೈವಿಧ್ಯಮಯ ವಸ್ತ್ರಗಳನ್ನ ಶಸ್ತ್ರಾಸ್ತ್ರಗಳನ್ನ ತೊಟ್ಟು ಅರೆಬೆತ್ತಲಾಗಿದ್ದ ಗಾಂಧೀಜಿಯವರ ಮುಂದೆ ಬೆತ್ತಲಾಗಬೇಕಾಯಿತು. ಉಪವಾಸ, ಸತ್ಯಾಗ್ರಹ ಮುಂತಾದ ನಾಗರಿಕ ಅಸ್ತ್ರಗಳ ಅಂತರಂಗದಲ್ಲಿ ಅಡಗಿರುವ ನಿಸರ್ಗದತ್ತವಾದ ಅದ್ಭುತ ಶಕ್ತಿ ಅದು.

ಅಣ್ಣಾ ಹಜಾರೆ ಗಾಂಧಿಯ ನಂತರ ಕಾಣಿಸಿಕೊಂಡ ಒಂದು ಬಹುದೊಡ್ಡ ಆಶಾಕಿರಣ. ಭ್ರಷ್ಟಾಚಾರದ ವಿರುದ್ಧ ಅವರು ದನಿ ಎತ್ತಿದಾಗ ರಾಷ್ಟ್ರಾದ್ಯಂತ ಒಂದು ಹೊಸ ವಿದ್ಯುತ್ ಸಂಚಲನ ಉಂಟಾಯಿತು. ಸಮಾಜದ ನಾಗರಿಕರು ದೇಶದಾದ್ಯಂತ ಅವರ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಈ ಸಂಚಲನದ ನಾಡಿಮಿಡಿತವನ್ನು ಅರಿತ ರಾಜಕೀಯ ಪಕ್ಷವೊಂದು ಒಳನುಸಿಯಲು ಹುನ್ನಾರ ಹೂಡಿದಾಗ ಅದರ ನಾಡಿ ಮಿಡಿತವನ್ನು ಅರಿತಿದ್ದ ಅಣ್ಣಾ ಹಜಾರೆಯವರು ಅದಕ್ಕೆ ಅವಕಾಶ ವೀಯದೆ ಗೌರವಯುತವಾಗಿ ದೂರ ಇಟ್ಟರು. ರಂಗೋಲಿ ಕೆಳಗೆ ನುಸುಳುವ ಚಾಣಾಕ್ಷತೆಯುಳ್ಳ ಆ ಪಕ್ಷ ಹಾಗೂ ಪರಿವಾರಗಳು ಅನ್ಯ ಮಾರ್ಗಕ್ಕೆ ಮುಂದಾದುವು. ಆಗ ಅವರ ಕೈಗೆ ಗೊಂಬೆಯಾಗಿ ಸಿಕ್ಕಿದ್ದೇ ಯೋಗ ಗುರುವೆಂದು ಬಿಂಬಿಸಿಕೊಂಡಿರುವ 'ಬಾಬಾ ರಾಂದೇವ್' ಅಣ್ಣಾ ಹಜಾರೆಯವರಿಂದ ಭ್ರಷ್ಟಾಚಾರ ವಿರೋಧಿ ಚಳವಳಿಯನ್ನು ಹೈಜಾಕ್ ಮಾಡಲು ಹೂಡಿದ ಷಡ್ಯಂತ್ರ ಇದಾಗಿದ್ದು ಆರ್.ಎಸ್.ಎಸ್ ರಾಂದೇವ್ ಅವರನ್ನು ಬೆಂಬಲಿಸುವ ಬಹಿರಂಗ ಹೇಳಿಕೆಯನ್ನು ನೀಡಿತು. ರಾಮ ಹಾಗೂ ರಾಮಜನ್ಮಭೂಮಿಯ ರಾಜಕೀಯ ಕುಟಿಲಗಳು ಫಲಕೊಡದ ಕಾರಣ ಬಿಜೆಪಿ ಸಂಘ ಪರಿವಾರದವರು ಭ್ರಷ್ಟಾಚಾರ ಮತ್ತು ವಿದೇಶಗಳಲ್ಲಿಟ್ಟಿರುವ ಕಪ್ಪುಹಣದ ಹೆಸರಿನಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಈಗ ನಿದ್ದೆಗೆಟ್ಟು ಹವಣಿಸುತ್ತಿವೆ. ಭ್ರಷ್ಟಾಚಾರದ ವಿರೋಧದ ಸುತ್ತ ಇಂಥ ಹುತ್ತಗಳು ಬೆಳೆಯುತ್ತಿರುವುದು ವಿಷಾದ ನೀಯ. ಯಾವ ಹುತ್ತದಲ್ಲಿ ಯಾವ ಹಾವು ಇದೆಯೋ ಬಲ್ಲವರಾರು?

ಒಮ್ಮೆ ಶಾಂತವಾಗಿ ಯೋಚಿಸಿ. ಬಿಜೆಪಿ ಸರ್ಕಾರ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ವಿದೇಶಗಳಲ್ಲಿರುವ ಕಪ್ಪು ಹಣವನ್ನು ತರಲು ಅದಕ್ಕೆ ಯಾವ ಅಡ್ಡಿ ಇತ್ತು? ಏಕೆ ತರಲಿಲ್ಲ? ಭ್ರಷ್ಟಾಚಾರದ ವಿರುದ್ಧ ಏಕೆ ಕ್ರಮ ಕೈಗೊಳ್ಳಲಿಲ್ಲ? ಏಕೆಂದರೆ ಅದೂ ಕೂಡ ಇತರ ಪಕ್ಷಗಳಲ್ಲಿ ಇರುವಂತೆ ತನ್ನ ಅಂತರಂಗದಲ್ಲಿಯೂ ಕಾವು ಕೊಡುತ್ತಿದ್ದುದು ಅನಿಷ್ಟ ಭ್ರಷ್ಟಾಚಾರಕ್ಕಾಗಿಯೆ ಅಲ್ಲವೆ?

ಈ ಭ್ರಷ್ಟಾಚಾರವೆಂಬುದು ಯಾವುದೇ ಒಂದು ಪಕ್ಷಕ್ಕಾಗಲೀ ಅಥವಾ ಕಾವಿಬಣ್ಣಕ್ಕಾಗಲೀ ಸೀಮಿತವಾದುದಲ್ಲ. ಅದು ಸಾರ್ವತ್ರಿಕವಾದ ಅಂಟುರೋಗ. ಅದು ಭ್ರಷ್ಟಾಚಾರದಿಂದ ದೂರವಿರುವವರನ್ನೂ ಬಲಿ ತೆಗೆದುಕೊಳ್ಳಲು ಯತ್ನಿಸುತ್ತದೆ. ಅದಕ್ಕೆ ಅಸಂಖ್ಯಾತ ಅಮಾಯಕರೂ ಬಲಿಯಾಗಿದ್ದಾರೆ. ಅದು ಸಾವಿರಾರು ವರ್ಷಗಳಷ್ಟು ದೀರ್ಘವಾದ ಭಾರತದಂಥ ಒಂದು ಗುಲಾಮೀಯ ರಾಷ್ಟ್ರದ ಪ್ರಜೆಗಳ ಮೈಮನಗಳಲ್ಲಿ ಮನೆ ಮಾಡಿರುವ, ಸಾರ್ವಭೌಮತೆಯ ಸವಿಯನ್ನು ಒಂದಿನಿತೂ ಕಾಣದ, ಒಂದು ಗುಲಾಮೀಯತೆಯ ರೋಗ. ಭಾರತದಲ್ಲಿ ನೆಲೆಯೂರಿರುವ ಈ 'ಗುಲಾಮೀಯ ರೋಗ'ಕ್ಕೆ ಮದ್ದನ್ನು ಕಂಡುಕೊಂಡಿದ್ದ ಸ್ವಾಮಿ ವಿವೇಕಾನಂದರು 'ನನ್ನ ಇಡೀ ಜೀವಿತೋದ್ದೇಶ ಮನುಷ್ಯ ನಿರ್ಮಾಣ' ಎಂದು ಘೋಷಿಸಿದ್ದರು. ಶಿಕ್ಷಣ ಹಾಗೂ ಧಾರ್ಮಿಕ ಕ್ಷೇತ್ರಗಳೂ ಸೇರಿ ದಂತೆ ಈಗ ಭಾರತದಲ್ಲಿ ಆಗುತ್ತಿರುವುದು ಕೇವಲ ಇಟ್ಟಿಗೆ, ಗಾರೆಗಳ ನಿರ್ಮಾಣವೇ ಹೊರತು ಮನುಷ್ಯ ನಿರ್ಮಾಣವಲ್ಲ. ವಿವೇಕಾನಂದರಂಥ ಧೀಮಂತ ವ್ಯಕ್ತಿಗಳನ್ನು ವಿಶ್ವಕ್ಕೆ ನೀಡಿದ ಭಾರತ ವ್ಯಕ್ತಿ ನಿರ್ಮಾಣದತ್ತ ಬೆನ್ನು ಮಾಡಿರುವ ಅದರ ನಡೆ ವಿಷಾದದ ನಡೆಯಲ್ಲದೆ ಮತ್ತೇನೂ ಅಲ್ಲ.

ಸ್ವಾತಂತ್ರ್ಯ ಪೂರ್ವದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದ 'ಕಾಂಗ್ರೆಸ್' ಹೊರಬೇಕಾಗಿದ್ದ ಜವಾಬ್ದಾರಿಯನ್ನು ಕುರಿತು ವಿವೇಕಾನಂದರು "ಘೋರ ಕ್ಷಾಮ, ಪ್ರವಾಹ, ಖಾಯಿಲೆ, ಸಾಂಕ್ರಾಮಿಕ ಜಾಡ್ಯಗಳು ಇರುವ ಸಮಯದಲ್ಲಿ ಕಾಂಗ್ರೆಸ್ಸಿನವರು ಎಲ್ಲಿರುವರು ಹೇಳು! ದೇಶದ ರಾಜ್ಯಾಡಳಿತವನ್ನು ನಮಗೆ ಕೊಟ್ಟುಬಿಡಿ ಎಂದು ಹೇಳಿಬಿಟ್ಟರೆ ಸಾಕೆ?" (7–320) ಎಂದು ಪ್ರಶ್ನಿಸಿದ್ದಾರೆ. ಈ ಪ್ರಶ್ನೆ ಇಂದಿಗೂ ಎಲ್ಲಾ ರಾಜಕೀಯ ಪಕ್ಷದವರಿಗೂ ಪ್ರಸ್ತುತವಾಗಿದೆ. ಯಾವೊಂದು ಪಕ್ಷವೂ ರಾಷ್ಟ್ರದ ಜ್ವಲಂತ ಸಮಸ್ಯೆಗಳ ಬಗ್ಗೆ ಸ್ಪಂದಿಸದಿರುವುದು ರಾಷ್ಟ್ರಗಳಿಸಿದ ಸ್ವಾತಂತ್ರ್ಯದ ಅಣಕವಾಗಿ ಪರಿಣಮಿಸಿದೆ. ಯಾವ ಬಿಕ್ಕಟ್ಟು ಇಲ್ಲದೆ ಭ್ರಷ್ಟಾಚಾರ ಭುಗಿಲೆದ್ದು ಬೆಳೆಯುತ್ತದೆ.

ತಮ್ಮ ಪ್ರಮಾಣಿಕತೆಯಿಂದ ರಾಷ್ಟ್ರದ ಜನತೆಯ ಜೀವನಾಡಿ ಸ್ಪಂದಿಸುವಂತೆ ಮಾಡಿದ ಅಣ್ಣಾ ಹಜಾರೆ ಅವರ ನಡೆ ನುಡಿಯಲ್ಲಿ, ಉಡಿಗೆ ತೊಡುಗೆಯಲ್ಲಿ ಸರಳತೆ ಹಾಗೂ ಶುದ್ಧತೆ ಕಂಡರೆ ರಾಂದೇವ್ ಅವರ ನಡೆ ನುಡಿಯಲ್ಲಿ, ಉಡುಗೆ ತೊಡುಗೆಯಲ್ಲಿ ಅದನ್ನು ಕಾಣಲಾಗುತ್ತಿಲ್ಲ. ಈ ಅನುಭವ ಸಾರ್ವತ್ರಿಕವಾದುದು. ಅಣ್ಣಾ ಅವರು ಧರಿಸಿರುವ ಬಿಳಿ ಬಟ್ಟೆಯಲ್ಲಿ ಶಾಂತಿ, ಸ್ವಚ್ಛತೆ ಪಾರದರ್ಶಕತೆ ಹಾಗೂ ಸ್ನೇಹ ಭಾವ ಸುಳಿಯುತ್ತಿದ್ದರೆ ರಾಂದೇವ್ ಅವರ ಕಾವಿಯಲ್ಲಿ ಅವು ಕಂಡು ಬರುತ್ತಿಲ್ಲ. ಅದು ಕಂಡುದು ಸ್ವಾಮಿ ವಿವೇಕಾನಂದರ ಕಾವಿಯಲ್ಲಿ ಮಾತ್ರ, ಅದೇ ಮೊದಲು ಅದೇ ಕೊನೆ. ಒಂದೆರಡು ಅಪವಾದ ಇದ್ದರೂ ಇರು ಬಹುದು. ಅದರೆ ಬಹುತೇಕ ಕಾವಿಗಳು ನಿಗೂಢವಾಗಿರುವ ಹುತ್ತದಂತೆ ವಂಚನೆಯನ್ನೆ ಉಸಿರಾಗಿಸಿಕೊಂಡಿವೆ.

ದಶಕಗಳ ಯೋಗಸಾಧನೆ ಮಾಡಿದ ಬಾಬಾ ರಾಂದೇವ್ ಅವರಲ್ಲಿ ಸಲ್ಲಕ್ಷಣಗಳು ಮೈವೆತ್ತಿದೆಯೆ? ಶಾಂತಿ, ಸಮಾಧಾನ, ಆತ್ಮ ಶಕ್ತಿ, ಆತ್ಮ ನಂಬುಗೆ, ಮಾನಸಿಕ ದೃಢತೆ, ನಿರ್ದಿಷ್ಟ ಗುರಿಗಳು ಅವರ ಮೈಮನಗಳಲ್ಲಿ ಕಾಣುತ್ತಿವೆಯೆ? ಕುಟಿಲತೆ ಎದ್ದುಕಾಣುತ್ತಿಲ್ಲವೆ? ಒಂದು ಗುರುತರ ಉದ್ದೇಶಕ್ಕಾಗಿ ಕೈಗೊಂಡ ಉಪವಾಸವನ್ನು ಕೈಬಿಡುವಾಗ ಬೆಂಬಲಿಗರನ್ನೂ ಮರೆಮಾಚಿ ಕೇಂದ್ರ ಸರ್ಕಾರಕ್ಕೆ ಗುಟ್ಟಾಗಿ ನೀಡಿದ್ದ ಪತ್ರ

ಬ್ರಿಟಿಷ್ ಸಾಮ್ರಾಜ್ಯ ಮೈತುಂಬ ವೈವಿಧ್ಯಮಯ ವಸ್ತ್ರಗಳನ್ನ ಶಸ್ತ್ರಾಸ್ತ್ರಗಳನ್ನ ತೊಟ್ಟ ಅರೆಬೆತ್ತಲಾಗಿದ್ದ ಗಾಂಧೀಜಿಯವರ ಮುಂದೆ ಬೆತ್ತಲಾಗಬೇಕಾಯಿತು. ಉಪವಾಸ, ಸತ್ಯಾಗ್ರಹ ಮುಂತಾದ ನಾಗರಿಕ ಅಸ್ತ್ರಗಳ ಅಂತರಂಗದಲ್ಲಿ ಅಡಗಿರುವ ನಿಸರ್ಗ ದತ್ತವದ ಅದ್ಭುತ ಶಕ್ತಿ ಅದು. ಅಣ್ಣಾ ಹಜಾರೆ ಗಾಂಧಿಯ ನಂತರ ಕಾಣಿಸಿಕೊಂಡ ಒಂದು ಬಹುದೊಡ್ಡ ಆಶಾಕಿರಣ. ಭ್ರಷ್ಟಾಚಾರದ ವಿರುದ್ಧ ಅವರು ದನಿ ಎತ್ತಿದಾಗ ರಾಷ್ಟ್ರಾದ್ಯಂತ ಒಂದು ಹೊಸ ವಿದ್ಯುತ್ ಸಂಚಲನ ಉಂಟಾಯಿತು. ಸಮಾಜದ ನಾಗರಿಕರು ದೇಶದಾದ್ಯಂತ ಅವರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಅವರ ವಿಶ್ವಾಸಾರ್ಹತೆಗೆ ಪೂರಕವಾದದ್ದೆ? ಬೆಂಬಲಿಗರನ್ನು ಪೊಲೀಸ್ ದೌರ್ಜನ್ಯಕ್ಕೆ ಬಿಟ್ಟು ನಾನು ಸಾಯಲೂ ಹೆದರುವುದಿಲ್ಲ ಎಂಬ ಧೀರೋದ್ದಾತ್ತ ಹೇಳಿಕೆ ಇತ್ತೂ ಹೇಡಿಯಂತೆ ಮಹಿಳೆ ವಸ್ತ್ರ ಧರಿಸಿ ಫಲಾಯನ ಮಾಡಲು ಯತ್ನಿಸಿದ ಅವರ ಬದ್ಧತೆ ಯಾವ ಸ್ವರೂಪದ್ದು? ರಾಂದೇವ್ ಗ್ಲೂಕೋಸ್ ನಿರಾಕರಿಸಿ ನಿಂಬೆಹಣ್ಣಿನ ರಸ ಸೇವಿಸಿದ್ದರಲ್ಲಿ ಯಾವ ಅಚಲವಾದ ನಿರ್ಧಾರವಿದೆ? ಇವುಗಳನ್ನು ಗಮನಿಸಿದರೆ ರಾಂದೇವ್ ಅವರಲ್ಲಿ ಒಂದು ಹೋರಾಟಕ್ಕೆ ಬೇಕಾದ ರಾಜಸಗುಣವೂ ಇಲ್ಲದೆ ಸಾತ್ವಿಕ ಪೋಷಾಕಿನಲ್ಲಿ ತಾಮಸ ಶಕ್ತಿ ಕ್ರಿಯಾಶೀಲವಾಗಿರುವಂತೆ ತೋರುತ್ತಿದೆ. ಆದಕಾರಣವೆ. ಅವರು ಹನ್ನೊಂದು ಸಾವಿರ ಸಶಸ್ತ್ರ ಯುವಕರ ಬೃಹತ್ ಪಡೆ ಕಟ್ಟಲು ಮುಂದಾಗಿದ್ದಾರೆ. ಈಗಾಗಲೇ ಸಂಘಪರಿವಾರದವರು 'ತ್ರಿಶೂಲ'ಗಳ ಪ್ರಯೋಗ ಮಾಡಿ ಮಣ್ಣು ಮುಕ್ಕಿ ಇತಿಹಾಸದ ಗರ್ಭ ಸೇರಿರುವಂತೆ ಈ ಸಶಸ್ತ್ರ ಪಡೆಗಳನ್ನೂ ತನ್ನ ಗರ್ಭಕ್ಕೆ ಸೇರಿಸಿಕೊಳ್ಳುವ ವಿಶಿಷ್ಟ ಶಕ್ತಿ ಭಾರತದ ಮಣ್ಣಿನದು.

ಸ್ವಾಮಿ ವಿವೇಕಾನಂದರು 'ಪ್ರಾಮಾಣಿಕ ಹೃದಯದ, ಸರ್ವಸಂಘ ಪರಿತ್ಯಾಗದ, ಆತ್ಮಾರ್ಪಣ ಮನೋದಾಢ್ಯದ ಹನ್ನೆರಡು ಜನ ಸಿಕ್ಕರೆ ಈ ಪ್ರಪಂಚವನ್ನೇ ಬದಲಿಸುತ್ತೇನೆ' ಎಂದಿದ್ದರೆ, 'ರಾಂದೇವ್' ಹನ್ನೊಂದು ಸಾವಿರ ಸಶಸ್ತ್ರ ಯುವಕರ ಪಡೆಯನ್ನು ಸರ್ಕಾರದ ರಕ್ಷಣೆಯ ಪಡೆಯ ವಿರುದ್ಧ ಕಟ್ಟುವರಂತೆ! ಅಷ್ಟೇ ಅಲ್ಲದೆ ಅವರಿಗೆ 'ಶಾಸ್ತ್ರ' ಹಾಗೂ ಶಸ್ತ್ರ' ವಿದ್ಯೆ ಎರಡನ್ನೂ ಕಲಿಸುವರಂತೆ!

'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯದನಿಗೂ ಮಿಗಿಲು ಶಾಸ್ತ್ರವಿಹುದೇನು?'

ಎಂಬ ಕುವೆಂಪು ಅವರ ಎದೆಯ ದನಿಯನ್ನು ದಮನಗೈದು ಮತ್ತೆ 'ಶಾಸ್ತ್ರ'ದ ಶೂಲಕ್ಕೇರಿಸುವ ಹುಂಬತನದ ರಾಂದೇವ್ ಒಬ್ಬ ಯೋಗ ಗುರುವೇ? ಖಂಡಿತ ಅಲ್ಲ. ಆತ ಕಾವಿಯ ವೇಷ ಧರಿಸಿರುವ ಒಂದು ದುಷ್ಟ ಗೋಮುಖವ್ಯಾಘ್ರ ಎನ್ನುವ ಎಲ್ಲ ಲಕ್ಷಣಗಳೂ ಒಂದೊಂದಾಗಿ ಬಹಿರಂಗಗೊಳ್ಳುತ್ತಿವೆ, 'ಅವರು ನಮ್ಮನ್ನು ಯಾವುದೋ ಕಂದಾಚಾರಗಳ ಯುಗಕ್ಕೆ ಕರೆದೊಯ್ಯುತ್ತಿದ್ದಾರೆ. ಇದು ದೊಡ್ಡ ಅಪಾಯ' ಎನ್ನುವ ಯು. ಆರ್. ಅನಂತ ಮೂರ್ತಿಯವರ ಗ್ರಹಿಕೆ ಸತ್ಯಕ್ಕೆ ಹತ್ತಿರವಾದದ್ದು.

ಸರ್ಕಾರದ ರಕ್ಷಣಾ ಪಡೆಯ ವಿರುದ್ಧ ಶಸ್ತ್ರಾಸ್ತ್ರ ಪಡೆ ರಚಿಸುತ್ತೇನೆ ಎಂಬ ರಾಂದೇವ್ ಆಲೋಚನೆ ಕ್ರೂರ ಹಾಗೂ ಅನಾಗರಿಕವಾದುದು, ಅದು ರಕ್ಷಿಸುವ ತಾಯ್ತನದಿಂದ ದೂರವಾದ ಭಕ್ಷಿಸುವ ನೀಚತನದ್ದು. ಅಲ್ಲದೆ ಅದು ರಾಷ್ಟ್ರದ ಒಳಗೇ ರಾಷ್ಟ್ರದ ವಿರುದ್ಧವೇ ಆಗಿರುವುದರಿಂದ ಅದನ್ನು ಮೊಳಕೆಯಲ್ಲಿ ಚಿವುಟಿಹಾಕುವುದು ವಿಹಿತ. ಏಕೆಂದರೆ ಅದರ ಅಂತರಂಗದಲ್ಲಿ ರಾಷ್ಟ್ರದ ಅರಾಜಕತೆಯನ್ನು ಬಿತ್ತುವ ಬೀಜಗಳಿವೆ. ಆದ್ದರಿಂದ ಪರಿಸ್ಥಿತಿ ಕೈಮೀರಿ ಹೋಗುವ ಮುನ್ನವೆ ಎಚ್ಚರ ವಹಿಸುವ ಅಗತ್ಯವಿದೆ. ಯಾರೂ ಏನೇ ಆಗಿರಲಿ ಇಂಥ ಹಾದಿ ತಪ್ಪಿದವರ ಪ್ರಚೋದನೆಗೆ ಒಳಗಾಗದೆ ವಾಸ್ತವ ಸತ್ಯಗಳನ್ನರಿತು ಎಚ್ಚರಿಕೆಯಿಂದ ಅಡಿ ಇಡಬೇಕಾದ ಗುರುತರ ಜವಾಬ್ದಾರಿ ದೇಶದ ಯುವ ಜನತೆಯದ್ದಾಗಿದೆ. ಹಾಗೆ ವಯಸ್ಕರೂ ವಿವೇಚನೆಯಿಂದ ವರ್ತಿಸಬೇಕಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಸಂದರ್ಭದಲ್ಲಿ ವಿನ್‌ಸ್ಟಿನ್ ಚರ್ಚಿಲ್ ನೀಡಿದ ಎಚ್ಚರಿಕೆಯ ನುಡಿಗಳೆಂದರೆ "ಸ್ವತಂತ್ರ ಭಾರತದಲ್ಲಿ ಅಧಿಕಾರ ಎನ್ನುವುದು ದಗಾಕೋರರ, ಠಕ್ಕರ ಹಾಗೂ ನಿರಂಕುಶ ದರೋಡೆ ಕೋರರ ಕೈಗೆ ಹೋಗುತ್ತದೆ. ಅವರು ತಮ್ಮ ತಮ್ಮೊಳಗೆ ಹೊಡೆದಾಡುತ್ತಾರೆ. ಈ ಬಹಿರಂಗ ಕಾದಾಟದಿಂದಾಗಿ ಭವ್ಯ ಭಾರತ ಕಳೆದು ಹೋಗುತ್ತದೆ" ಎನ್ನುವುದು. ಈಗ ಭ್ರಷ್ಟಗೊಂಡಿರುವ ರಾಜಕೀಯದೊಂದಿಗೆ ಕಾವಿ ಪಡೆಗಳೂ ಕೈಜೋಡಿಸುತ್ತಿರುವುದನ್ನು ನೋಡಿದರೆ ಚರ್ಚಿಲ್ ಅವರ ಮಾತು ಅಕ್ಷರಶಃ ನಿಜವಾಗುತ್ತಿದೆ. ಒಟ್ಟಿನಲ್ಲಿ ನೈತಿಕತೆ ನೇಪಥ್ಯಕ್ಕೆ ಸರಿಯುವ ಎಲ್ಲ ಲಕ್ಷಣಗಳೂ ಗೋಚರಿಸುತ್ತಿವೆ.

ಭ್ರಷ್ಟಾಚಾರದ ವಿರುದ್ಧ ಮೊದಲಿಗೆ ದನಿ ಎತ್ತಿದ ಅಣ್ಣಾ ಹಜಾರೆಯವರಿಗೂ ಅನಂತರ ಅದಕ್ಕೆ ಪ್ರವೇಶ ಪಡೆದ ಬಾಬಾ ರಾಂದೇವ್‌ಗೂ ಭೂಮಿ ಆಕಾಶಗಳ ಅಂತರ ವಿದೆ. ಅಣ್ಣಾ ಅವರದು ಮಣ್ಣಿಗೆ ಹತ್ತಿರವಾಗಿದ್ದರೆ ರಾಂದೇವ್‌ರದು ನೆಲೆಯಿರದ ಆಕಾಶದಲ್ಲಿ ಸೂತ್ರವಿರದ ಗಾಳಿಪಟದಂತೆ ಗೋತಾ ಹಾಕುವತ್ತ ಸಾಗುತ್ತಿದೆ. ತನ್ಮೂಲಕ ಭ್ರಷ್ಟಾಚಾರ ವಿರೋಧಿ ಬೆಂಬಲಿಗರನ್ನೂ ಗೊಂದಲಕ್ಕೆ ಈಡು ಮಾಡುತ್ತಿದ್ದಾರೆ.

ಆತ್ಮಶಕ್ತಿಯಿರದ ಜಾಗೃತಗೊಂಡ ಅಹಿಂಸಾತ್ಮಕ ಹೋರಾಟ ಪ್ರಬಲ ಶಸ್ತ್ರಸಜ್ಜಿತ ಸಾಮ್ರಾಜ್ಯವನ್ನೂ ಮಣಿಸಬಹುದು ಎಂಬ ದಿವ್ಯ ಸಂದೇಶವನ್ನು ಭಾರತ ವಿಶ್ವಕ್ಕೆ ಗಾಂಧೀಜಿ ಮೂಲಕ ಕರುಣಿಸಿದೆ. ಇದರಿಂದ ಸ್ಫೂರ್ತಿಗೊಂಡು ವಿಶ್ವದ ವಿವಿಧ ರಾಷ್ಟ್ರಗಳು ಅಹಿಂಸಾತ್ಮಕ ಪ್ರತಿಭಟನೆಯ ಮೂಲಕ ವಿಜಯಸಾಧಿಸುವ ಸತ್ಪಥದಲ್ಲಿ ಸಾಗುತ್ತಿವೆ. ಆದರೆ ಭಾರತದಲ್ಲಿ ಅಂಥ ಶಕ್ತಿಯುತ ಹೋರಾಟದ ಮಾರ್ಗಗಳನ್ನು ಈ ಕಾವಿಧಾರಿಗಳು ಶಿಥಿಲಗೊಳಿಸುವ ಕ್ರಿಯೆಯಲ್ಲಿ ತೊಡಗಿ ಹೇಡಿಗಳಂತೆ ಶಸ್ತ್ರಗಳ ಮೊರೆ ಹೋಗುತ್ತಾ ಪಥ ಭ್ರಷ್ಟರಾಗುತ್ತಿರುವುದು ಮನುಕುಲದ ದೊಡ್ಡ ವ್ಯಂಗ್ಯ ಹಾಗೂ ದುರಂತ.

ವಿವೇಕಾನಂದರು "ಸಂಖ್ಯೆ, ಅಧಿಕಾರ, ಐಶ್ವರ್ಯ, ಪಾಂಡಿತ್ಯ, ವಾಚಾಳಿತನ ಮೊದಲಾದ ಯಾವುದೊಂದು ಜಯಶೀಲವಾಗುವುದಿಲ್ಲ. ಆದರೆ ಪವಿತ್ರತೆ, ಜೀವನದಲ್ಲಿ ಅದರಂತೆ ನಡೆಯುವುದು ಜಯಕ್ಕೆ ದಾರಿ. ಯಾರು ಹಣಕ್ಕಾಗಲೀ, ಅಧಿಕಾರಕ್ಕಾಗಲೀ, ಕೀರ್ತಿಗಾಗಲ್ಲೀ, ಗಮನ ಕೊಡುವುದಿಲ್ಲವೋ ಅಂಥವರು ಇಡೀ ಜಗತ್ತನ್ನೇ ಅಲ್ಲಾಡಿಸುವರು." (6–354) ಎಂದು ಆತ್ಮ ಶಕ್ತಿಯ ವಿರಾಟ ಸ್ವರೂಪವನ್ನು ವ್ಯಕ್ತಪಡಿಸಿದ್ದಾರೆ.

ವಿವೇಕಾನಂದರು ವ್ಯಕ್ತಪಡಿಸಿದ ಆ ಆತ್ಮಶಕ್ತಿಯನ್ನ ಅನವರತ ವ್ರತದಂತೆ ಆಚರಿಸುತ್ತಾ ತಮ್ಮ ವ್ಯಕ್ತಿತ್ವದ ಚುಂಬಕ ಶಕ್ತಿಯಿಂದ ವಿಶ್ವವನ್ನು ತನ್ನಡೆಗೆ ಸೆಳೆದುಕೊಂಡು ಅಹಿಂಸಾವ್ರತಧಾರಿಯಾದ ಗಾಂಧೀಜಿಯವರನ್ನು ಬ್ರಿಟನ್ನ ಮಿಲ್ಟ್ರಿ ಅಧಿಕಾರಿಯಾಗಿದ್ದ ಜಾನ್ ಕ್ರಿಶ್ಚಿಯನ್ ಸ್ಮುಶ್ ಬಂಧಿಸಲು ಅಶಕ್ತನಾಗಿದ್ದ. ಅಲ್ಲದೆ ಗಾಂಧೀಜಿಯವರ ನೈತಿಕತೆಯ ವಿರುದ್ಧ ಹೋರಾಡುವ ಹೃದಯವೂ ಅವನದಾಗಿರಲಿಲ್ಲ. ಅಂಥ ಅಸಹಾಯಕ ಸಂದರ್ಭದಲ್ಲಿ ಆಕ್ಸ್‌ಫರ್ಡ್‌ನ ಪ್ರಾಧ್ಯಾಪಕರಾದ ಗಿಲ್ಬರ್ಟ್ ಮುರ್ರೆ ಸ್ಮುಶ್ ಅವರಿಗೆ ನೀಡಿದ ಎಚ್ಚರಿಕೆ ಎಂದರೆ

"ಯಾರು ದೇಹ ಸುಖಕ್ಕಾಗಲೀ, ವೈಭೋಗಕ್ಕಾಗಲೀ, ಹೊಗಳಿಕೆಗಾಗಲೀ, ಸ್ಥಾನಮಾನಗಳಿಗಾಗಲೀ ಆಶಿಸದೆ ತಾನು ಸರಿ ಎಂದು ನಂಬಿದ ತತ್ವಕ್ಕಾಗಿ ಸಮರ್ಪಿಸಿಕೊಂಡಿರುವನೋ ಅಂಥವನ ಬಗ್ಗೆ ಜಾಗೃತನಾಗಿರು. ಆತ ಅಹಿತಕಾರಿ ಹಾಗೂ ಅಪಾಯಕಾರಿ ಶತ್ರು, ಏಕೆಂದರೆ ನೀನು ವಶಪಡಿಸಿಕೊಳ್ಳಬಹುದಾದ ಆತನ ಶರೀರ ಆತನ ಆತ್ಮಶಕ್ತಿಯ ಎದುರು ನಗಣ್ಯವಾಗಿ ಬಿಡುತ್ತದೆ." (ದಿ ಲೈಫ್ ಆಫ್ ಮಹಾತ್ಮ ಗಾಂಧಿ; ಲೂಯಿ ಫಿಷರ್. ಪುಟ–118)

ಇದು ನಿಸರ್ಗ ಸತ್ಯ, ಸರ್ವಕಾಲಿಕವಾದ ನಿತ್ಯಸತ್ಯ. ಈ ಪಥದಿಂದ ವಿಮುಖವಾದ ಯಾವುದೇ ಚಳವಳಿ, ಸತ್ಯಾಗ್ರಹ, ಉಪವಾಸ ಮುಂತಾದವುಗಳು ಹಾಲು ಕರೆಯದ ಗೊಡ್ಡುಗಳಾಗಿ ಬಿಡುತ್ತವೆ.

ಆದ್ದರಿಂದಲೇ "ತಾನು ನಂಬಿದ ತತ್ವ ಅಥವಾ ಸಿದ್ಧಾಂತಕ್ಕೆ ಮುಂಚೂಣಿಯಲ್ಲಿರುವವರು ಬದ್ಧರಿರಬೇಕಾಗುತ್ತದೆ. ತಾತ್ವಿಕವಾದ ನಿರ್ಧಾರದಲ್ಲಿ ಅವಿಶ್ವಾಸ, ಅಪನಂಬುಗೆ ಮತ್ತು ಗೊಂದಲ ಇರಬಾರದು. ಒಂದು ಚಳವಳಿಯ ಹಿನ್ನೆಲೆಯಲ್ಲಿ ಸ್ಪಷ್ಟ ನಿರ್ಧಾರ ಇರಬೇಕು. ಸೂಕ್ತ ನಿರ್ಧಾರ ಮತ್ತು ನಿರ್ದೇಶನ ಪರಸ್ಪರ ಪೂರಕವಾಗಿ ಇರಬೇಕಾಗುತ್ತದೆ. ದೃಢ ನಿರ್ಧಾರ ಇಲ್ಲವಾದಾಗ, ಹಿತಾಸಕ್ತರು ಅದನ್ನು ತಮಗೆ ಬೇಕೆದಂತೆ ಬಳಸಿಕೊಳ್ಳುವ ಸಾಧ್ಯತೆ ಇರುತ್ತದೆ. ಅಂಥ ಸಂದರ್ಭಗಳಲ್ಲಿ ನಾಯಕತ್ವ ಅಲ್ಲಾಡುತ್ತದೆ. ಇಡೀ ಹೋರಾಟ ಗೊಂದಲದ ಗೂಡಾಗುತ್ತದೆ." ಎಂದು ಡಾ॥ ಶ್ರೀ ಶಿವಮೂರ್ತಿಮುರುಘಾ ಶರಣರು (ಸಂಗತ: ಪ್ರಜಾವಾಣಿ: 7–6–11) ಸಕಾಲಿಕವಾಗಿ ಎಚ್ಚರಿಸಿದ್ದಾರೆ.

ಈಗ ಭಾರತದಲ್ಲಿ ಚಾಲನೆಗೊಂಡಿರುವ ಭ್ರಷ್ಟಾಚಾರ ಹಾಗೂ ದೇಶಗಳಲ್ಲಿರುವ ಕಪ್ಪು ಹಣದ ವಿರುದ್ಧದ ಹೋರಾಟದ ಸುತ್ತ ಯಾವುದೇ ಗೊಂದಲದ ಹುತ್ತ ಹುಟ್ಟಿಕೊಳ್ಳದಂತೆ ಹಾಗೂ ನಡೆಸುತ್ತಿರುವ ಚಳವಳಿ ಭುಗಿಲೆದ್ದಿರುವ ಭ್ರಷ್ಟಾಚಾರದ ವಿರುದ್ಧ ಕುಬ್ಜವಾಗದಂತೆ ಪ್ರಜ್ಞಾವಂತ ನಾಗರಿಕರು ಎಚ್ಚರ ವಹಿಸಬೇಕು ಎಂಬುದು ಕಾಲದ ಕರೆಯಾಗಿದೆ. □

ಸ್ವಾಮಿ ವಿವೇಕಾನಂದರು 'ಪ್ರಾಮಾಣಿಕ ಹೃದಯದ, ಸರ್ವಸಂಘ ಪರಿತ್ಯಾಗದ, ಆತ್ಮಾರ್ಪಣ ಮನೋದಾಢ್ಯದ ಹನ್ನೆರಡು ಜನ ಸಿಕ್ಕರೆ ಈ ಪ್ರಪಂಚವನ್ನೇ ಬದಲಿಸುತ್ತೇನೆ' ಎಂದಿದ್ದರೆ, 'ರಾಂದೇವ್' ಹನ್ನೊಂದು ಸಾವಿರ ಸಶಸ್ತ್ರ ಯುವಕರ ಪಡೆಯನ್ನು ಸರ್ಕಾರದ ರಕ್ಷಣೆಯ ಪಡೆಯ ವಿರುದ್ಧ ಕಟ್ಟುವರಂತೆ! ಅಷ್ಟೇ ಅಲ್ಲದೆ ಅವರಿಗೆ 'ಶಾಸ್ತ್ರ' ಹಾಗೂ ಶಸ್ತ್ರ' ವಿದ್ಯೆ ಎರಡನ್ನೂ ಕಲಿಸುವರಂತೆ! 'ಯಾವ ಕಾಲದ ಶಾಸ್ತ್ರವೇನು ಹೇಳಿದ ರೇನು? ಎದೆಯದನಿಗೂ ಮಿಗಿಲು ಶಾಸ್ತ್ರ ವಿಹುದೇನು?' ಎಂಬ ಕುವೆಂಪು ಅವರ ಎದೆಯ ದನಿಯನ್ನು ದಮನಗೈದು ಮತ್ತೆ 'ಶಾಸ್ತ್ರ'ದ ಶೂಲಕ್ಕೇರಿಸುವ ಹುಂಬತನದ ರಾಂದೇವ್ ಒಬ್ಬ ಯೋಗ ಗುರುವೇ? ಖಂಡಿತ ಅಲ್ಲ. ಆತ ಕಾವಿಯ ವೇಷ ಧರಿಸಿರುವ ಒಂದು ದುಷ್ಟ ಗೋಮುಖ ವ್ಯಾಘ್ರ ಎನ್ನುವ ಎಲ್ಲಾ ಲಕ್ಷಣಗಳೂ ಒಂದೊಂದಾಗಿ ಬಹಿರಂಗಗೊಳುತ್ತಿವೆ,

ಇವು ಚಂದ್ರಶೇಖರ ಐಜೂರು ಮತ್ತು ಮಂಜುನಾಥ್ ಲತಾ ಅವರು 'ದೇಶ ಕಾಲ' ಪತ್ರಿಕೆ ಹಾಗೂ ಅದರ ವಿಶೇಷಾಂಕದ ಬಗ್ಗೆ 'ಲಂಕೇಶ್'ನಲ್ಲಿ ಆರಂಭಿಸಿ ನಡೆಸಿದ ಚರ್ಚೆಯ ಉದ್ದೇಶಿತ ಪುಸ್ತಕ ರೂಪಕ್ಕೆ ಬರೆದ ಪ್ರಸ್ತಾವನೆಯ ಮಾತುಗಳು. ಆದರೆ, ತರಾತುರಿಯಲ್ಲಿ ಮತ್ತು ಒತ್ತಾಯಪೂರ್ವಕವಾಗಿ ಹಾಗೂ ನನಗೆ ಓದು-ಬರಹ ಕಷ್ಟವಾಗಿದ್ದ ಅವಧಿಯಲ್ಲಿ ನನ್ನಿಂದ ಈ ಪ್ರಸ್ತಾವನೆಯನ್ನು ಬರೆಸಿದ ಇವರು, ಪುಸ್ತಕವನ್ನು ಮಾತ್ರ ಅದೂ ಇದೂ ಕಾರಣ ಹೇಳುತ್ತಾ, ತಿಂಗಳುಗಳು ಕಳೆದರೂ ಪ್ರಕಟಿಸದೇ ಹೋದರು! ಕುತೂಹಲಗೊಂಡ ನಾನು ಈ ಬಗ್ಗೆ ನನ್ನ ಇತರ ಗೆಳೆಯರನ್ನು ವಿಚಾರಿಸಿದಾಗ, ನನ್ನ ಪ್ರಿಯ ಗೆಳೆಯರೇ ಆದ ಬಂಜಗೆರೆ ಜಯಪ್ರಕಾಶರಿಂದಲೂ ಇವರು ಇನ್ನೊಂದು ಪ್ರಸ್ತಾವನೆಯನ್ನು ಬರೆಸಿದ್ದಾರೆ ಮತ್ತು ನಾನು ಈಗಾಗಲೇ ಪ್ರಸ್ತಾವನೆಯೊಂದನ್ನು ಬರೆದಿರುವುದನ್ನು ಅವರಿಗೆ ತಿಳಿಸದೆ ಇದನ್ನು ಮಾಡಿದ್ದಾರೆ ಎಂಬ ಸಂಗತಿ ತಿಳಿದು ಬಂತು. ಇದರಿಂದಾಗಿ, ನನ್ನನ್ನು ಕುರಿತ ಅವರ ನಿರೀಕ್ಷೆಗಳು ಹುಸಿಯಾಗಿ ನನ್ನ ಪ್ರಸ್ತಾವನೆಯ ಮಾತುಗಳಿಂದ ಅವರಿಗೆ ಮುಜುಗರವುಂಟಾಗಿದೆ ಎಂಬುದು ನನಗೆ ಸ್ಪಷ್ಟವಾಯಿತು. ಹಾಗೇ, ಅವರ ಈ ನಿರ್ಧಾರದಿಂದ ಅವರನ್ನು ಕುರಿತ ನನ್ನ ನಿರೀಕ್ಷೆಗಳೂ ಹುಸಿಯಾದವು ಎಂಬುದನ್ನು ಇಲ್ಲಿ ಬೇರೆ ಹೇಳಬೇಕಿಲ್ಲ. ಹಾಗಾಗಿ, ನಾನು ಐಜೂರರಿಗೆ ಅವರ ಉದ್ದೇಶಿತ ಪುಸ್ತಕದಲ್ಲಿ ನನ್ನ ಪ್ರಸ್ತಾವನೆಯನ್ನು ಪ್ರಕಟಿಸುವ ಅಗತ್ಯ ಎಲ್ಲ ಮಾತ್ರವಲ್ಲ, ಅದನ್ನು ಯಾವುದೇ ಕಾರಣದಿಂದ ಇನ್ನೊಂದು ಪ್ರಸ್ತಾವನೆಯೊಂದಿಗೆ ಪ್ರಕಟಿಸಕೂಡದೆಂದು (ಇಬ್ಬರಿಗೂ ಮುಜುಗರವಾಗದಿರಲೆಂದು) ಹೇಳಿದ ಮೇಲೂ, ಯಾವ ದ್ವಂದ್ವಕ್ಕೆ ಸಿಕ್ಕಿಯೋ ಏನೋ; ಅಥವಾ ಮತ್ತಾವ ಕಾರಣದಿಂದಲೋ, ಅವರು ಪುಸ್ತಕವನ್ನು ಇನ್ನೂ ಪ್ರಕಟಿಸಿಲ್ಲ. ಹಾಗಾಗಿ, ಅವರು ಆದಷ್ಟು ಬೇಗ ಬಂಜಗೆರೆಯವರ ಪ್ರಸ್ತಾವನೆಯೊಂದಿಗೇ ಪುಸ್ತಕ ಪ್ರಕಟಿಸಲು ಅನುವಾಗುವಂತೆ ಮತ್ತು ಅನಗತ್ಯ ವಿಳಂಬದಿಂದಾಗಿ ಈ ಚರ್ಚೆ ಸಾಂದರ್ಭಿಕ ಪ್ರಸ್ತುತತೆಯನ್ನು ಕಳೆದುಕೊಳ್ಳಬಾರದೆಂಬ ದೃಷ್ಟಿಯಿಂದ ನನ್ನ ಆ ಪ್ರಸ್ತಾವನೆಯ ಮಾತುಗಳನ್ನು ಇಲ್ಲಿ ಪ್ರಕಟಿಸುತ್ತಿರುವೆ.

'ಲಂಕೇಶ' ಪತ್ರಿಕೆಯಲ್ಲಿ ಬಂದ ಚರ್ಚೆಯನ್ನು ವಿವರವಾಗಿ ಗಮನಿಸದ ಮತ್ತು ಗಮನಿಸದೇ ಹೋದವರೂ ಕೂಡಾ ಈ ಪ್ರಸ್ತಾವನೆಯನ್ನು ಸ್ಥೂಲವಾಗಿಯಾದರೂ ಗ್ರಹಿಸಬಹುದಾದಂತೆ ಇದನ್ನು ಆದಷ್ಟೂ ಕಡೆ ಹಿನ್ನೆಲೆ ನೀಡಿ, ವಿವರಗಳೊಂದಿಗೆ ಬರೆಯಲಾಗಿದೆ. ಗೆಳೆಯರ ಮುಕ್ತ ಮತ್ತು ಗಂಭೀರ ಅಭಿಪ್ರಾಯಗಳಿಗೆ ಸ್ವಾಗತವಿದೆ. –ಲೇಖಕ

'ಭಾಷೆಯೇ ದೈವ' ನಿಜ! ಹಾಗಾಗಿಯೇ ಭಾಷೆ ದೆವ್ವವೂ ಹೌದು!!

ಒಂದು ಮುಗಿಯಲಾರದ ಚರ್ಚೆ...

ಡಿ. ಎಸ್ ನಾಗಭೂಷಣ

'ದೇಶಕಾಲ'ವೆಂಬ ಕನ್ನಡ ತ್ರೈಮಾಸಿಕವೊಂದು ಐದು ವರ್ಷಗಳನ್ನು ಪೂರೈಸಿದ ನೆನಪಿಗಾಗಿ ವಿಶೇಷಾಂಕವೊಂದನ್ನು ಹೊರ ತಂದ ಸಂದರ್ಭದಲ್ಲಿ ನನ್ನ ಕಿರಿಯ ಗೆಳೆಯರಾದ ಮಂಜುನಾಥ ಲತಾ ಹಾಗೂ ಚಂದ್ರಶೇಖರ ಐಜೂರು ಅವರು 'ದೇಶ'ವಿದೇನಹಾ! 'ಕಾಲ'ವಿದೇನಹಾ? ಎಂಬ ಲೇಖನ ಬರೆದು, ಅದು ಸಾರ್ವಜನಿಕವಾಗಿ ಪ್ರಕಟವಾಗುವ ಮುನ್ನವೇ, ಅದರ ಪ್ರತಿಯೊಂದನ್ನು ಈ-ಮೇಲ್ ಮೂಲಕ ನನಗೆ ಕಳಿಸಿದ್ದರು. ಅದನ್ನು ಕಷ್ಟಪಟ್ಟು ಓದಿದ ನನಗೆ, ಅದಕ್ಕೆ ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸುವ ಮನಸ್ಸಾಗಲಿಲ್ಲ. ಈ ಗೆಳೆಯರು ತಪ್ಪು ಕಾರಣಗಳನ್ನೆತ್ತಿಕೊಂಡು–ಜಗತ್ತಿನ ಇಂದಿನ ಎಲ್ಲ ಅನಾಹುತಗಳಿಗೂ, ಕೆಟ್ಟ ಬೆಳವಣಿಗೆಗಳಿಗೂ ಈ ಪತ್ರಿಕೆಯೂ ಜವಾಬ್ದಾರವೆಂಬಂತೆ–ಸಂಚಿಕೆಯನ್ನು ತುಂಬಾ ರೂಕ್ಷವಾಗಿ ಟೀಕಿಸಿದ್ದಾರೆನಿಸಿತು. ಕೆಲ ದಿನಗಳ ನಂತರ ಐಜೂರ್ ದೂರವಾಣಿ ಕರೆ ಮಾಡಿ ನನ್ನ ಪ್ರತಿಕ್ರಿಯೆ ಕೇಳಿದಾಗ ನಾನು ಇದನ್ನೇ ಹೇಳಿದೆ. ಜೊತೆಗೆ ಕೆಲವು ಕಿವಿ ಮಾತುಗಳನ್ನೂ:

ಮುಖ್ಯವಾಗಿ; ಜಾತಿಯೊಂದನ್ನೇ ಮನಸ್ಸಿನಲ್ಲಿಟ್ಟುಕೊಂಡು ಟೀಕಿಸುವಾಗ, ಅದು ನಮಗೇ ಗೊತ್ತಿಲ್ಲದ ಹಾಗೆ-ಆದರೆ 'ಸುಮ್ಮನೆ' ನೋಡುವವರಿಗೆ ಅಥವಾ ಓದುವವರಿಗೆ ಎದ್ದು ಕಾಣುವಂತೆ-ಅದು ಎರಡೂ ಕಡೆ ಕತ್ತರಿಸಿಕೊಂಡು ಹೋಗುತ್ತಾ ನಮ್ಮನ್ನೇ–ನಮ್ಮ ಸಣ್ಣತನಗಳನ್ನೇ–ಬಯಲು ಮಾಡಬಲ್ಲುದಾಗಿದೆ. ಹಾಗಾಗಿ ಜಾತಿ ಹಿಡಿದು ಮಾತಾಡುವಾಗ ನಾವು ಜಾತ್ಯತೀತರಾಗಿದ್ದರೆ ಮಾತ್ರ ನಮ್ಮ ಮಾತುಗಳು ವಿಶ್ವಾಸಾರ್ಹವೆನಿಸಿಕೊಳ್ಳುತ್ತವೆ ಎಂದು ಹೇಳಿದೆ. ಹಾಗೇ, ಇಂದು ಮೇಲ್ಜಾತಿವಾದ ಎಂಬುದಷ್ಟೇ ಜಾತಿವಾದವೆನ್ನಿಸಿಕೊಳ್ಳದೆ, ಇಂದಿನ ಸಂದರ್ಭದಲ್ಲಿ ಕೆಳಜಾತಿವಾದವೂ ಅಪಾಯಕಾರಿ ಜಾತಿವಾದವೆನ್ನಿಸಿಕೊಳ್ಳಬಹುದಾಗಿದೆ ಎಂದೂ ಸೂಚಿಸಿದೆ. ಇವರೆಡರ ನಡುವಣ ಸ್ಪರ್ಧೆಯೇ ಇಂದು ಬೇರೆ ಬೇರೆ ವೇಷ ತೊಟ್ಟು ಕನ್ನಡದಲ್ಲಿ ಹೇಗೆ ಸಂಸ್ಕೃತಿ ಚಿಂತನೆಯ ಹೆಸರಿನಲ್ಲಿ ವಾಗ್ವಾದಗಳನ್ನು ಸೃಷ್ಟಿಸಿ ನಮ್ಮೆಲ್ಲರನ್ನೂ ದಾರಿ ತಪ್ಪಿಸುತ್ತಿದೆ ಎಂದು ಅದಕ್ಕೆ ಒಂದೆರಡು ಉದಾಹರಣೆಗಳನ್ನೂ ನೀಡಿದೆ. ಅಷ್ಟೇ ಅಲ್ಲ, ನಿಮ್ಮ ಲೇಖನವೂ ಜಾತಿಯೊಂದನ್ನೇ ಮುಂದಿಟ್ಟುಕೊಂಡು; ಆದರೆ ಅದಕ್ಕೆ ಸಾಮಾಜಿಕ-ರಾಜಕೀಯ ನ್ಯಾಯದ ಮುಸುಕು ಹಾಕಿ, ಆ ಮೂಲಕ ಸಂಸ್ಕೃತಿ ಚಿಂತನೆ ಮಾಡುವ ಸುತ್ತು ಬಳಸಾದ ಹತಾಶ ಪ್ರಯತ್ನದಂತೆ ನನಗೆ ಕಾಣುತ್ತಿದ್ದು, ಇದು ಇನ್ನೊಂದು ಹುಸಿ ವಾಗ್ವಾದದ ಸೃಷ್ಟಿಗೆ ಕಾರಣವಾಗಬಹುದಾದ್ದರಿಂದ ನಾನು ಪ್ರತಿಕ್ರಿಯಿಸಲಾರೆ ಎಂದು ಮಾತು ಮುಗಿಸಲು ಯತ್ನಿಸಿದೆ.

ಆದರೆ ಐಜೂರರು, ಮಾತು ಮುಂದುವರೆಸಲೋ ಏನೋ, ಶ್ರೀನಿವಾಸ ವೈದ್ಯರ 'ಹಳ್ಳ ಬಂತು ಹಳ್ಳ'ಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದುದಕ್ಕೆ ಜಾತಿ ರಾಜಕಾರಣವೇ ಕಾರಣವಲ್ಲವೇ ಎಂದು ಕೇಳಿದಾಗ ನನಗೆ ರೇಗಿ ಹೋಯಿತು. ರೇಗುತ್ತಲೇ 'ನೀವು ಅದನ್ನು ಓದಿದ್ದೀರೇನ್ರಿ?' ಎಂದು ಕೇಳಿದಾಗ ಅವರಿಂದ ಬಂದ 'ಇಲ್ಲ' ಎಂಬ ಉತ್ತರ ನನ್ನನ್ನು ನಿಜವಾಗಿ ಅಪ್ಪಳಿಸಿತೆಂದೇ ಹೇಳಬೇಕು! ಎಲಾ ಈತನ

ಜಾತಿಯೊಂದನ್ನೇ ಮನಸ್ಸಿನಲ್ಲಿಟ್ಟುಕೊಂಡು ಟೀಕಿಸುವಾಗ, ಅದು ನಮಗೇ ಗೊತ್ತಿಲ್ಲದ ಹಾಗೆ-ಆದರೆ 'ಸುಮ್ಮನೆ' ನೋಡುವವರಿಗೆ ಅಥವಾ ಓದುವವರಿಗೆ ಎದ್ದು ಕಾಣುವಂತೆ-ಅದು ಎರಡೂ ಕಡೆ ಕತ್ತರಿಸಿಕೊಂಡು ಹೋಗುತ್ತಾ ನಮ್ಮನ್ನೇ-ನಮ್ಮ ಸಣ್ಣತನಗಳನ್ನೇ-ಬಯಲು ಮಾಡಬಲ್ಲುದಾಗಿದೆ. ಹಾಗಾಗಿ ಜಾತಿ ಹಿಡಿದು ಮಾತಾಡುವಾಗ ನಾವು ಜಾತ್ಯತೀತರಾಗಿದ್ದರೆ ಮಾತ್ರ ನಮ್ಮ ಮಾತುಗಳು ವಿಶ್ವಾಸಾರ್ಹವೆನಿಸಿಕೊಳ್ಳುತ್ತವೆ. ಇಂದು ಮೇಲ್ಜಾತಿವಾದ ಎಂಬುದಷ್ಟೇ ಜಾತಿವಾದವೆನ್ನಿಸಿಕೊಳ್ಳದೆ, ಇಂದಿನ ಸಂದರ್ಭದಲ್ಲಿ ಕೆಳಜಾತಿವಾದವೂ ಅಪಾಯಕಾರಿ ಜಾತಿವಾದವೆನ್ನಿಸಿಕೊಳ್ಳಬಹುದಾಗಿದೆ.

ಧೈರ್ಯವೇ ಎಂದು ಒಂದು ಕ್ಷಣ ಅವಾಕ್ಕಾದೆನಾದರೂ, ಮರುಕ್ಷಣವೇ ಆ ಉತ್ತರದ ಹಿಂದಿದ್ದ ಮುಗ್ಧ 'ಸತ್ಯ ನಿಷ್ಠೆ'ಯ ಮುಂದೆ ನನ್ನ ಕೋಪವೆಲ್ಲ ಕರಗಿ ಹೋಯಿತು. ಮನಸ್ಸು ಸ್ವಲ್ಪ ನಿಸೂರಾದಂತಾಗಿ, 'ಮೊದಲು ನೀವು ಆ ಕಾದಂಬರಿಯನ್ನು ಓದಿ. ಆನಂತರ ನಿಮ್ಮ ನೋಟ ಮತ್ತು ಭಾಷೆ ಕೊಂಚವಾದರೂ ಬದಲಾಗಬಹುದು' ಎಂದು ಮಾತು ಮುಗಿಸಿದೆ.

ಈ ನಿರ್ದಿಷ್ಟ ಸಂದರ್ಭವನ್ನು ಏಕೆ ಹೇಳುತ್ತಿದ್ದೇನೆಂದರೆ, ಅದು ಐಜೂರು ಮತ್ತು ಅವರ ಮಿತ್ರರ ವಾದಗಳಲ್ಲಿ ಜನಪರತೆ ಎಂಬ ಕಲ್ಪನೆಯ ಅತಿ ಸರಳೀಕರಣ ಮತ್ತು ಅದರಿಂದ ಹುಟ್ಟಿದ ಹುಚ್ಚು ಆವೇಶ, ಭಂಡ ತರ್ಕಗಳು ಇರುವುವಾದರೂ, ಅಪ್ರಮಾಣಿಕತೆ ಇರಲಾರದು ಎಂದು ನನಗೆ ಹೊಳೆದ ಸಂದರ್ಭವಾದ್ದರಿಂದ. ಇವರ ಲೇಖನ ಮುಂದೆ 'ಲಂಕೇಶ್' ಪತ್ರಿಕೆಯಲ್ಲಿ ಆರಂಭಿಸಿದ ಪತ್ರ ಸಮರ ರೂಪದ ಚರ್ಚೆಯ ಯಾವ ಹಂತದಲ್ಲೂ, ಅನೇಕರ ಒತ್ತಾಯದ ಹೊರತಾಗಿಯೂ ನಾನು ಭಾಗವಹಿಸಲಿಲ್ಲ. ಕಾರಣ, ದಿಕ್ಕಾಪಾಲಾಗಿ ಹರಿದು ಹೋಗುತ್ತಿದ್ದ ಅದರ ರಭಸಕ್ಕೆ ನಾನು ಬೆದರಿದ್ದೆ. ಆದರೆ ಇಂದು ನಾನು, ಈ ಚರ್ಚೆ ಪುಸ್ತಕ ರೂಪದಲ್ಲಿ ಬರುತ್ತಿರುವಾಗ ಅದಕ್ಕೊಂದು ಪ್ರಸ್ತಾವನೆ ಬರೆಯಲು ಮುಂದಾಗಿರುವುದಕ್ಕೆ ಇದೂ ಒಂದು ಕಾರಣ. ಅಂದರೆ; ಇವರೊಂದಿಗೆ ಎಷ್ಟೇ ಕಷ್ಟವಾದರೂ ಮಾತು ಮುಂದುವರೆಸಬಹುದು ಮತ್ತು ಮುಂದುವರಿಸಬೇಕು ಎಂಬುದು.

ಇನ್ನೊಂದು, ಐಜೂರರು ನನ್ನ ಕಟು ಟೀಕೆಯ ಮಾತುಗಳ ಹೊರತಾಗಿಯೂ, ಅವನ್ನೆಲ್ಲ ವಿಧೇಯ ವಿದ್ಯಾರ್ಥಿಯಂತೆ ಕೇಳಿಸಿಕೊಂಡು, ನನ್ನ ಕಣ್ಣಿನ ಶಸ್ತ್ರಚಿಕಿತ್ಸೆಯಿಂದಾಗಿ ಅನಿರ್ದಿಷ್ಟ ಅವಧಿಯವರೆಗೆ ವಿಳಂಬವಾಗಲಿದೆ ಎಂದು ಹೇಳಿದರೂ, ಈ ಪ್ರಸ್ತಾವನೆ ಬರೆಯಲು ನನ್ನನ್ನು ಪ್ರೀತಿಪೂರ್ವಕವಾಗಿ ಒತ್ತಾಯಿಸಿರುವುದು. ಜೊತೆಗೆ ನಾನು ಮಂಜುನಾಥ್ ಲತಾ-ಐಜೂರು ಹಾಗೂ ಅವರ ಓರಿಗೆಯ ಕಿರಿಯ ಗೆಳೆಯರಿಗೆ ಅವರ ಕೆಲವು ಅನಗತ್ಯ 'ಆಟಾಟೋಪ'ಗಳನ್ನು ನೋಡಿದಾಗ ಹೇಳಲೇಬೇಕೆಂದಿದ್ದ; ಆದರೆ ಸೂಕ್ತ ಸಂದರ್ಭ ಬಾರದೆ ಹೇಳಲಾಗದಿದ್ದ ಹಲವು ಮಾತುಗಳನ್ನೂ, ಸಂಗತಿಗಳನ್ನು ಹೇಳಲು ಈ ಸಂದರ್ಭ ಒಂದು ಸೂಕ್ತ ಪರಿಪ್ರೇಕ್ಷವನ್ನೂ ಒದಗಿಸಿರುವುದು ಮತ್ತೊಂದು ಕಾರಣವೆಂದೂ ಹೇಳಬಹುದು. ಹೀಗಾಗಿ ನನ್ನ ಈ ಬರಹ ನನ್ನ ಹಿರಿಯರಿಗೆ ಮತ್ತು ಓರಿಗೆಯವರಿಗೆ ಅತಿ ದೀರ್ಘವೆನಿಸಿದರೆ ಕ್ಷಮೆ ಇರಲಿ. ಹೇಗೂ ಐಜೂರರು ಎಷ್ಟಾದರೂ ಬರೆಯಿರಿ, ಏನಾದರೂ ಬರೆಯಿರಿ, ಅಂತೂ ಈ ಸಂದರ್ಭದಲ್ಲಿ ನೀವು ಬರೆಯಿರಿ ಎಂದು ಅಭಯ ನೀಡಿದ್ದಾರೆ!

-೨-

ನನ್ನ ಈ ಮೇಲಿನ ಮಾತುಗಳನ್ನು ಓದಿ, ನಾನು ಈ ಚರ್ಚೆಯಲ್ಲಿ ಭಾಗವಹಿಸದಿರಲು 'ದೇಶಕಾಲ'ದ ಚರಿತ್ರೆಯ ಬಗೆಗೆ ಈತನಿಗೆ ನಿಜವಾಗಿ ಯಾವೊಂದು ನಿಲುವಾಗಲೀ, ಅಭಿಪ್ರಾಯವಾಗಲೀ ಇಲ್ಲದಿರುವುದೂ ಒಂದು ಕಾರಣವಿರಬಹುದು ಎಂದು ಯಾರಾದರೂ ಯೋಚಿಸಿದ್ದರೆ ಅದು ತಪ್ಪು. ಮಂಜುನಾಥ್ ಲತಾ ಹಾಗೂ ಐಜೂರರ ಲೇಖನ ಬರುವ ಮುನ್ನವೇ ನಾನು ಈ ಪತ್ರಿಕೆಯ ವಿಶೇಷಾಂಕದ ಬಿಡುಗಡೆಯು 'ಪ್ರಜಾವಾಣಿ'ಯೂ ಸೇರಿದಂತೆ ನಮ್ಮ ಎಲ್ಲ ಮಾಧ್ಯಮಗಳಲ್ಲಿ ಪಡೆದ 'ಅಭೂತ

ಪೂರ್ವ' ಪ್ರಚಾರ ಕಂಡು, ಅದನ್ನು ಪ್ರಶ್ನಿಸಿ, ಟೀಕಿಸಿ 'ಪ್ರಜಾವಾಣಿ'ಗೆ ಪುಟ್ಟ ಪತ್ರವೊಂದನ್ನು ಬರೆದಿದ್ದೆ. ಆದರೆ ಆ ಪತ್ರಿಕೆ ತನ್ನ ನಿಲುವನ್ನು ಪ್ರಶ್ನಿಸಿದ, ಟೀಕಿಸಿದ ಏನನ್ನೂ ಪ್ರಕಟಿಸದ ತನ್ನ ಎಂದಿನ ನೀತಿಗನುಗುಣವಾಗಿ ಪ್ರಕಟಿಸಲಿಲ್ಲ.(ಈ ಪತ್ರ ಇತ್ತೀಚಿನ ನನ್ನ 'ಇಲ್ಲಿ ಯಾರೂ ಅಮುಖ್ಯರಲ್ಲ' ಪುಸ್ತಕದಲ್ಲಿ ಪ್ರಕಟವಾಗಿದೆ.)

ಹಾಗೆ ನೋಡಿದರೆ ನಾನು 'ದೇಶಕಾಲ' ಪತ್ರಿಕೆ ಆರಂಭವಾದಾಗಿನಿಂದಲೂ ಅದರ ಚಂದಾದಾರನಾಗಿದ್ದವನು. ಅಷ್ಟೇ ಅಲ್ಲ, ಕೆ.ವಿ. ಅಕ್ಷರ ಅವರ ಕೋರಿಕೆಯ ಮೇರೆಗೆ ಒಂದು ಸಂಚಿಕೆಯ 'ಸಮಯ ಪರೀಕ್ಷೆ' ವಿಭಾಗಕ್ಕಾಗಿ 'ಟೆಲಿವಿಷನ್' ಬಗ್ಗೆ ಒಂದು ಪುಟ್ಟ ಲೇಖನವನ್ನೂ ಬರೆದವನು. ಹಾಗೇ, ಈ ಪತ್ರಿಕೆಯ ಪುಸ್ತಕ ವಿಮರ್ಶೆ ವಿಭಾಗದ ಹೊಣೆ ಹೊತ್ತಿದ್ದ ಜಿ. ರಾಜಶೇಖರರು ಪತ್ರಿಕೆಗಾಗಿ ಪುಸ್ತಕ ವಿಮರ್ಶೆ ಮಾಡಲು ಕೋರಿದಾಗ, ಇವರು ಆಯ್ದು ಕೊಟ್ಟ ಪುಸ್ತಕಗಳನ್ನಷ್ಟೇ ವಿಮರ್ಶೆ ಮಾಡಬೇಕಾಗಿದ್ದುದರಿಂದ ಅದು ಒಪ್ಪಿಗೆಯಾಗದೆ ನಿರಾಕರಿಸಿದವನು. ಆದರೆ ಅದರ ಆರನೇ ಸಂಪುಟಕ್ಕೆ ಹಾಗೂ ವಿಶೇಷಾಂಕಕ್ಕೆ ಸಕಾಲದಲ್ಲಿ ಚಂದಾ ಕಳಿಸಲು ಮರೆತು ಚಂದಾದಾರತ್ವವನ್ನು ಕಳೆದುಕೊಂಡವನು! (ಹಾಗೆಂದು ನೆನಪು.) ಮಿತ್ರರನೇಕರು ವಿಶೇಷ ಸಂಚಿಕೆಯಲ್ಲಿನ 'ವಿಶೇಷ'ಗಳ ಬಗ್ಗೆ ಮಾತನಾಡಲು ತೊಡಗಿದಾಗ, ನನಗೇಕೆ ಆರನೇ ಸಂಪುಟದ ಮೊದಲ ಸಂಚಿಕೆಯಾಗಲೀ, ವಿಶೇಷ ಸಂಚಿಕೆಯಾಗಲೀ ಬಂದಿಲ್ಲ ಎಂದು ಯೋಚಿಸಿದಾಗಲೇ ನನ್ನಿಂದಾಗಿದ್ದ ಪ್ರಮಾದ ಗೊತ್ತಾದದ್ದು! ಕನ್ನಡ ಸಾಹಿತ್ಯ ಪತ್ರಿಕೆಗಳ ಇತಿಹಾಸದಲ್ಲೇ ಬಹುಶಃ ಇಷ್ಟು ಕಟ್ಟುನಿಟ್ಟಾದ ಸದಸ್ಯತ್ವ ಕಾರ್ಯಕ್ರಮ ಎಂದೂ ನಡೆದಿರಲಾರದು! ಬಹುಶಃ ಇದು ಈ ಪತ್ರಿಕೆಯ ದೊಡ್ಡಸ್ಥಿಕೆಗಳಲ್ಲಿ ಒಂದಾಗಿರಬಹುದು! ನಾನೂ ನನ್ನ ಕೆಲವು ಗೆಳೆಯರೊಂದಿಗೆ ಹತ್ತು-ಹದಿನೈದು ವರ್ಷಗಳ ಕಾಲ '(ಸಾಹಿತ್ಯ) ಸಂವಾದ' ಎಂಬ ಒಂದು ಸಾಹಿತ್ಯ ಪತ್ರಿಕೆ ನಡೆಸಿದವನಾಗಿ, ಕನ್ನಡ ಸಾಹಿತ್ಯ ಪತ್ರಿಕೆಯೊಂದು ಇಂತಹ ದೊಡ್ಡಸ್ಥಿಕೆ ಸಂಪಾದಿಸಿರುವುದು ನನಗೆ ಹೆಮ್ಮೆಯ ಎನಿಸಿ ಸುಮ್ಮನಾದೆ.

ಆದರೆ ಆರನೇ ಸಂಪುಟದ ಮೊದಲ ಸಂಚಿಕೆಯ ಬಗೆಗೆ ನನಗೆ ಕುತೂಹಲವಿರಲಿಲ್ಲವಾದರೂ, ವಿಶೇಷ ಸಂಚಿಕೆ ಕುರಿತು, ಅದರ ಬಗ್ಗೆ ಈ ಹಿಂದಿನ ಸಂಚಿಕೆಯಲ್ಲಿ ನೀಡಿದ್ದ ಮಾಹಿತಿಯಿಂದಾಗಿ ಕುತೂಹಲವಿತ್ತು. ಆರನೇ ಸಂಪುಟದ ಬಗ್ಗೆ ಕುತೂಹಲವಿಲ್ಲದಿರಲು ಕಾರಣ, ಅದರ ಐದು ವರ್ಷಗಳ ಯಾವೊಂದು ಸಂಚಿಕೆಯೂ ನನ್ನಲ್ಲಿ ಅಂತಹ ವಿಶೇಷ ಕುತೂಹಲವನ್ನೇನೂ ಹುಟ್ಟಿಸದಿದ್ದುದು. ಒಳ್ಳೆಯ ಕಾಗದ, ಕನ್ನಡ ಸಾಹಿತ್ಯ ಪತ್ರಿಕೆಗಳಿಗೆ ನವೀನ ರಕ್ಷಾಪುಟ, ಪುಟ ವಿನ್ಯಾಸ, ರೇಖಾ ಚಿತ್ರಗಳು ಮತ್ತು ಅತ್ಯುತ್ತಮ ಮುದ್ರಣಗಳೊಂದಿಗೆ ಸಾಮಾನ್ಯ ಸಾಮಗ್ರಿಯನ್ನು ಅಸಾಮಾನ್ಯವೆಂಬಂತೆ ಪ್ರಸ್ತುತಗೊಳಿಸುವ ಹೊಸ ಕಾಲದ ವಾಣಿಜ್ಯ ಲೋಕದ ಪ್ಯಾಕೇಜ್ ತಂತ್ರ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಅದರ ಕರಾರುವಕ್ಕು ಕ್ಲುಪ್ತತೆ ಮಾತ್ರ ಈ ಪತ್ರಿಕೆಯ ಹೆಚ್ಚುಗಾರಿಕೆ.

ನಾವು ತರುತ್ತಿದ್ದ '(ಸಾಹಿತ್ಯ) ಸಂವಾದ', ನ್ಯೂಸ್ ಪ್ರಿಂಟ್ ಕಾಗದದಲ್ಲಿ; ಮಲ್ಲಾಡಿಹಳ್ಳಿ, ಹೊಳಲ್ಕೆರೆ, ಹಾಸನ ಇತ್ಯಾದಿ ಸಣ್ಣಪುಟ್ಟ ಊರುಗಳ ಸಾಮಾನ್ಯ ಮುದ್ರಣಾಲಯಗಳಲ್ಲಿ ಅತಿ ಸಾಮಾನ್ಯ ರೀತಿಯಲ್ಲಿ ಮುದ್ರಣಗೊಳ್ಳುತ್ತಿದ್ದರೂ, ಅದರ ಸಂಚಿಕೆಗಳು ಈ ಪತ್ರಿಕೆಯ ಸಂಚಿಕೆಗಳಿಗಿಂತ ಹೆಚ್ಚು ಮೌಲಿಕವಾಗಿದ್ದುವೆಂದೇ ಈಗ ಕಾಲದೂರದಲ್ಲಿ ನಿಂತು ನೆನೆದಾಗಲೂ ನನಗೆ ಅನ್ನಿಸುತ್ತಿದೆ. ಆಗಾಗಿಯೇ ಅದರ ಚಂದಾದಾರರ ಸಂಖ್ಯೆ ಒಂದು ಕಾಲದಲ್ಲಿ ಒಂದು ಸಾವಿರದ ಹತ್ತಿರ ಹತ್ತಿರ ಮುಟ್ಟಿ, ನನಗೆ ತಿಳಿದಂತೆ ಸಣ್ಣ ಪತ್ರಿಕೆಗಳ ಇತಿಹಾಸದಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿತ್ತು. ಆದರೆ ಇಂದು ಆ ಪತ್ರಿಕೆಯ ಸಾಮಾನ್ಯ ಸಂಚಿಕೆಗಳ ಬಗೆಗಿರಲಿ, ಅದು ಹೊರತಂದ ಅಂದಿನ ಬಹು ಮುಖ್ಯ ಲೇಖಕರ ಬಹು ಮುಖ್ಯ ಲೇಖನಗಳನ್ನೊಳಗೊಂಡ 'ಆಲನಹಳ್ಳಿ ಕೃಷ್ಣ', 'ಮಾಸ್ತಿ', 'ಸತ್ಯಜಿತ್ ರೇ', 'ಎ.ಕೆ. ರಾಮಾನುಜನ್', 'ಮಹಿಳಾ ಸಾಹಿತ್ಯ ಸ್ಪಂದನ' ಮುಂತಾದ ವಿಶೇಷಾಂಕಗಳ ಬಗೆಗೂ ಯಾರೂ ಸಾಂದರ್ಭಿಕವಾಗಿ ಕೂಡಾ ಪ್ರಸ್ತಾಪ ಮಾಡುತ್ತಿಲ್ಲ! ಏಕೆಂದರೆ ಅದು ಯಾವುದೇ (ಸಾಹಿತ್ಯ ಅಥವಾ ಸಾಹಿತ್ಯೇತರ)ಸ್ಥಾಪಿತ ಹಿತಾಸಕ್ತಿಗಳ ದಾಕ್ಷಿಣ್ಯಕ್ಕೆ ಅಥವಾ ಮರ್ಜಿಗೆ ಸಿಗದಂತೆ ಎಚ್ಚರಿಕೆ ವಹಿಸಿ ತನ್ನ ಪಾಡಿಗೆ ತನ್ನ ದಾರಿ ಸವೆಸಿತು. ಆ ದಾರಿ ಬಿಟ್ಟೊಡನೆ ಅದು ಸ್ಥಗಿತಗೊಂಡಿತು ಎಂಬುದು ಬೇರೆ ವಿಚಾರ.

ಆದರೆ ಇಂದು 'ದೇಶಕಾಲ'ವನ್ನು ಕೆಲವರು ಅಡಿಗರ 'ಸಾಕ್ಷಿ'ಗೆ ಹೋಲಿಸಿಕೊಂಡು, ಸಾಹಿತ್ಯೇತರ 'ಕಲ್ಮಶ'ಗಳಿಂದ ಮಲಿನಗೊಂಡಿರುವ ಇಂದಿನ ಕನ್ನಡ ಸಾಹಿತ್ಯ ಜಗತ್ತಿನಲ್ಲಿ 'ಶ್ರೇಷ್ಠ ಸಾಹಿತ್ಯ'ದ ದಿನಗಳು ಮರಳಿ ಬರಲು

ಬೇಕಾದ ಬಾಗಿಲನ್ನು ತೆರೆಯಲಾಗಿದೆ ಎಂದು ಸಂಭ್ರಮ ಪಡುತ್ತಿದ್ದರೆ; ಇನ್ನು ಕೆಲವರು ಇದನ್ನು ಈಗ ಇದ್ದಕ್ಕಿದ್ದಂತೆ ಕೆಲವರಿಂದ ಆರಂಭವಾಗಿರುವ 'ಅಡಿಗ ಪುನರುತ್ಥಾನ' ಕಾರ್ಯಕ್ರಮದ ಭಾಗವಾಗಿ ನೋಡುತ್ತಾ, 'ಶ್ರೇಷ್ಠ ಸಾಹಿತ್ಯ' ಕಲ್ಪನೆಯ ಪುನರಾಗಮನವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸುತ್ತಿದ್ದಾರೆ! ಇದು ನಮ್ಮ ಇಂದಿನ ಸಾಹಿತ್ಯ ಜಗತ್ತು ಕೇವಲ ತತ್ಕಾಲೀನ ಸಾಹಿತ್ಯ ರಾಜಕಾರಣದ ಹುದಲಿನಲ್ಲಿ ಸಿಕ್ಕಿಕೊಂಡು ತನ್ನ ಇತ್ತೀಚಿನ ಪರಂಪರೆಯ ಬಗೆಗೇ ಹೇಗೆ ಕಿವಿಗೆ ಬಿದ್ದ ಬರೀ ಅರ್ಧ ಸತ್ಯದ ಮಾತುಗಳ ಆಧಾರದ ಮೇಲೇ ಚರ್ಚೆಗಳನ್ನು ಕಟ್ಟಿಕೊಂಡು ದೊಡ್ಡ ದೊಡ್ಡ ತೀರ್ಮಾನಗಳಿಗೆ ಬರುವಂತಹ ದುಃಸ್ಥಿತಿಗೆ ಈಡಾಗಿದೆ ಎಂಬುದನ್ನು ಸೂಚಿಸುತ್ತದೆ. ಏಕೆಂದರೆ, ಇವರಿಬ್ಬರಿಗೂ, 'ಸಾಕ್ಷಿ' ಏನಾಗಿತ್ತು ಹಾಗೂ ಇದನ್ನು 'ದೇಶಕಾಲ'ದೊಂದಿಗೆ ಏಕೆ ಹೋಲಿಸಲಾಗದು ಮತ್ತು 'ಜಾಗೃತ ಸಾಹಿತ್ಯ ಸಮ್ಮೇಳನ'ದ ಸಂದರ್ಭ ಎಂತಹುದು ಹಾಗೂ ಅಲ್ಲಿ 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆ ಮತ್ತು ಚರ್ಚೆ ಏಕೆ ಮತ್ತು ಹೇಗೆ ಮೂಡಿಬಂತು ಎಂಬುದರ ಪರಿವೆಯೇ ಇದ್ದಂತಿಲ್ಲ.

'ಸಾಕ್ಷಿ' ಒಳ್ಳೆಯದಕ್ಕೋ ಕೆಟ್ಟದಕ್ಕೋ (ಇದು ಸರಳ ತೀರ್ಮಾನಗಳಿಗೆ ಸಿಗದ ಬೇರೆಯೇ ಚರ್ಚೆ) ಕನ್ನಡ ಸಾಹಿತ್ಯ ಕಂಡ ಒಂದು ದೊಡ್ಡ ಪಲ್ಲಟದ ದಿಕ್ಕು-ದೆಸೆ ಹಾಗೂ ತಲ್ಲಣಗಳನ್ನು ದಾಖಲಿಸುವ ತುರ್ತಿನಲ್ಲಿ ಹುಟ್ಟಿದ ಪತ್ರಿಕೆ. ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅದಕ್ಕೊಂದು ಸ್ಥಾನವಿದೆ. ಆದರೆ 'ದೇಶಕಾಲ'ದ ಹಿಂದೆ, 'ಸಮಯ ಪರೀಕ್ಷೆ'ಯಂತಹ ಅದರ ಕೆಲವು ಬೌದ್ಧಿಕ ವಯ್ಯಾರಗಳನ್ನು ಗಮನಿಸಿದಾಗ ಅದರದೇ ಆದ ಕೆಲವು ಸಾಹಿತ್ಯಿಕ-ಸಾಂಸ್ಕೃತಿಕ ಆತಂಕಗಳು ಗೋಚರವಾಗುವುವಾದರೂ, ಅಂತಹ ಯಾವುದೇ ಚಾರಿತ್ರಿಕ ತುರ್ತೂ ಇದ್ದಂತಿಲ್ಲ. ಅದು ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿ ತನ್ನ ಸ್ಥಾನವನ್ನಿರಲಿ, ಅಸ್ತಿತ್ವವನ್ನೇ ಇನ್ನೂ ಸ್ಥಾಪಿಸಿಕೊಂಡಂತಿಲ್ಲ. ಹೀಗಿರುವಾಗ ಈ ಪತ್ರಿಕೆಯ ಸುತ್ತ ಇಷ್ಟು ದೊಡ್ಡದಾಗಿ, ದೊಡ್ಡ ದನಿಯಲ್ಲಿ ನಡೆದಿರುವ ಚರ್ಚೆ ಕನ್ನಡ ಸಾಹಿತ್ಯ ಜಗತ್ತಿನ ಚರ್ಚೆಗಳನ್ನು ಇಂದು ಈ ಜಗತ್ತಿನ ಹೊರಗಿನ ಶಕ್ತಿಗಳೇ ನಿಯಂತ್ರಿಸುತ್ತಿರುವ ದುರಂತವನ್ನು ಸೂಚಿಸುತ್ತದೆ ಎಂದು ಭಾವಿಸಿರುವೆ.

ಈ ಕಾರಣದಿಂದಾಗಿಯೇ, ಗೋಪಾಲಕೃಷ್ಣ ಅಡಿಗರು ಪ್ರತಿಪಾದಿಸಿದ್ದ 'ಶ್ರೇಷ್ಠ ಸಾಹಿತ್ಯ'ದ(ಇದು, ಅದರ ಉದ್ದೇಶಿತ ಅರ್ಥದ ಸಮರ್ಪಕ ವರ್ಣನೆಯಲ್ಲವಾದರೂ!) ಕಲ್ಪನೆಯ 'ಐತಿಹಾಸಿಕತೆ'ಯ ಬಗ್ಗೆ ಇಲ್ಲಿ ಒಂದಿಷ್ಟು ವಿಸ್ತಾರವಾಗಿಯೇ ಬರೆಯಬೇಕಾಗಿದೆ. ಇದು ಮೊದಲ ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಶಿವರಾಮ ಕಾರಂತರು ಕೇಳಿದ 'ಮಸಾಲೆ ದೋಸೆ' ಪ್ರಶ್ನೆಯಂತೆಯೇ ಉದ್ದೇಶಪೂರ್ವಕ ಅಪವ್ಯಾಖ್ಯಾನಕ್ಕೊಳಗಾಗಿದೆ. ಆ ಮೂಲಕ ಅನೇಕ ಗೊಂದಲಗಳನ್ನೂ, ಅನಗತ್ಯ ಆತಂಕಗಳನ್ನು ಸೃಷ್ಟಿಸುತ್ತಾ, ಸಾಹಿತ್ಯಿಕ-ಸಾಂಸ್ಕೃತಿಕ ಚರ್ಚೆಗಳನ್ನು ಮಂಜುನಾಥ್ ಲತಾ-ಐಜೂರರ ಬರಹದಂತೆ ಸಲ್ಲದ ವಲಯಗಳಿಗೆ, ಹೋಲಿಕೆಗಳಿಗೆ, ಉದಾಹರಣೆಗಳಿಗೆ, ಭಾಷೆಗೆ ಎಳೆದೊಯ್ಯುವ ಪ್ರಯತ್ನಗಳಿಗೆ ದಾರಿ ಮಾಡಿಕೊಟ್ಟಿದೆ.

ಸಾಹಿತ್ಯ, ಅದೆಷ್ಟೇ ಸಾಮಾಜಿಕ-ರಾಜಕೀಯ ಸತ್ವವನ್ನು ಗಳಿಸಿಕೊಂಡರೂ, ಅದು ತನ್ನ ಮೂಲ ಲಕ್ಷಣಗಳನ್ನು ಕಳೆದುಕೊಳ್ಳದೆ ಸಾಹಿತ್ಯವಾಗಿ ಉಳಿಯಬೇಕು.



ಗೋಪಾಲಕೃಷ್ಣ ಅಡಿಗ

ಅಂದರೆ ಅದು ಮನುಷ್ಯನನ್ನು ಒಳಗಿಂದ ಅಲ್ಲಾಡಿಸಬೇಕು. ಹೊರಗಿಂದ ಅಲ್ಲ. ಅದು ಹೊರಗಿಂದ ಅಲ್ಲಾಡಿಸ ಹೊರಟಷ್ಟೂ ಅದು ತನ್ನ ಸತ್ವವನ್ನು ಕಳೆದುಕೊಂಡು ಸಾಹಿತ್ಯವಾಗಿ ತನ್ನ ವಿಶ್ವಾಸಾರ್ಹತೆಯನ್ನೂ ಕಳೆದುಕೊಳ್ಳುತ್ತದೆ. ಇದು ನಮ್ಮ ಸಾಹಿತ್ಯ ಪರಂಪರೆಗೇ ಮಾಡುವ ಅನ್ಯಾಯ. ಅತ್ತ ನವ್ಯದ ಅತಿ ವಿಶಿಷ್ಟ ಸಾಹಿತ್ಯ ಮೀಮಾಂಸೆಯ ಮಡಿವಂತಿಕೆಯ ಕಾಟದಿಂದಾಗಿಯೂ, ಇತ್ತ ಅದರ ಸಾಂಸ್ಕೃತಿಕ ರಾಜಕಾರಣ ವಿರುದ್ಧ ಸೆಟೆದೆದ್ದ 'ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟ'ವು ಸಾಹಿತ್ಯ ಗುಣದ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ನಿರಾಕರಿಸಿದ ನಿಲುವಿನಿಂದಾಗಿಯೂ, ಎಲ್ಲೂ ಸಲ್ಲದ ಕೆಲವು ಸಾಹಿತಿ ವೇಷಧಾರಿಗಳು ಬಂಡಾಯ ಸಾಹಿತ್ಯ 'ಸಂಘಟನೆ'ಯ ಹೆಸರಿನಲ್ಲಿ ನಡೆಸಲಾರಂಭಿಸಿದ ರಾಜಕೀಯ ಪುಢಾರಿತನದ ಮುಖವಾಣಿಯಾಗ ಹೊರಟ ಆಧುನಿಕ ಕನ್ನಡ ಸಾಹಿತ್ಯ, ತನ್ನ ಈ ದುರ್ಬಲ ಘಟ್ಟದಲ್ಲಿ ಎದುರಿಸಿದ್ದು ಇಂತಹ ಅಪಾಯವನ್ನೇ. ಈ ಸಂದರ್ಭದಲ್ಲೇ ಜನ ಮತ್ತು ಜೀವಗಳ ಮೇಲೆ ಗುತ್ತೇದಾರಿಕೆಯನ್ನು ಸಾರಿಕೊಂಡ ಕನ್ನಡ ಸಾಹಿತ್ಯದ ನವ (ಮಾಂಸಾಹಾರಿ!) ಪುರೋಹಿತರು, ಸಾಹಿತ್ಯದ ಜನಪರ, ಜೀವಪರ, ಜನವಿರೋಧಿ, ಜೀವವಿರೋಧಿ ಇತ್ಯಾದಿ ಸುಲಭ ವರ್ಗೀಕರಣವನ್ನು ಆರಂಭಿಸಿದ್ದು.

ಸಾಹಿತ್ಯ ಮನುಷ್ಯನನ್ನು ಒಳಗಿಂದ ಅಲ್ಲಾಡಿಸಬೇಕು. ಹೊರಗಿಂದ ಅಲ್ಲ. ಅದು ಹೊರಗಿಂದ ಅಲ್ಲಾಡಿಸ ಹೊರಟಷ್ಟೂ ಅದು ತನ್ನ ಸತ್ವವನ್ನು ಕಳೆದುಕೊಂಡು ಸಾಹಿತ್ಯವಾಗಿ ತನ್ನ ವಿಶ್ವಾಸಾರ್ಹತೆಯನ್ನೂ ಕಳೆದುಕೊಳ್ಳುತ್ತದೆ. ಅತ್ತ ನವ್ಯದ ಅತಿ ವಿಶಿಷ್ಟ ಸಾಹಿತ್ಯ ಮೀಮಾಂಸೆಯ ಮಡಿವಂತಿಕೆಯ ಕಾಟದಿಂದಾಗಿಯೂ, ಇತ್ತ ಅದರ ಸಾಂಸ್ಕೃತಿಕ ರಾಜಕಾರಣ ವಿರುದ್ಧ ಸೆಟೆದೆದ್ದ 'ಅಖಿಲ ಕರ್ನಾಟಕ ಲೇಖಕರ ಮತ್ತು ಕಲಾವಿದರ ಒಕ್ಕೂಟ'ವು ಸಾಹಿತ್ಯ ಗುಣದ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ನಿರಾಕರಿಸಿದ ನಿಲುವಿನಿಂದಾಗಿಯೂ, ಎಲ್ಲೂ ಸಲ್ಲದ ಕೆಲವು ಸಾಹಿತಿ ವೇಷಧಾರಿಗಳು ಬಂಡಾಯ ಸಾಹಿತ್ಯ 'ಸಂಘಟನೆ'ಯ ಹೆಸರಿನಲ್ಲಿ ನಡೆಸಲಾರಂಭಿಸಿದ ರಾಜಕೀಯ ಪುಢಾರಿತನದ ಮುಖವಾಣಿಯಾಗ ಹೊರಟ ಆಧುನಿಕ ಕನ್ನಡ ಸಾಹಿತ್ಯ, ತನ್ನ ಈ ದುರ್ಬಲ ಘಟ್ಟದಲ್ಲಿ ಎದುರಿಸಿದ್ದು ಇಂತಹ ಅಪಾಯವನ್ನೇ.

ಇದರಿಂದ ಆತಂಕಿತಗೊಂಡ ಸಹಜ ಸಾಹಿತಿಯಾದ ಲಂಕೇಶ್-ಇವರು ಬಂಡಾಯವನ್ನು'ಡಂಬಾಯ' ಎಂದು ವ್ಯಂಗ್ಯವಾಡುತ್ತಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು-ಈ ಪ್ರವೃತ್ತಿಯ ವಿರುದ್ಧ ಜಾಗೃತಿ ಮೂಡಿಸಲು ಹಮ್ಮಿಕೊಂಡಿದ್ದೇ 'ಜಾಗೃತ ಸಾಹಿತ್ಯ ಸಮ್ಮೇಳನ'. ಅವರು ಇದನ್ನು ಆಯೋಜಿಸಿದ್ದು, ತಮ್ಮ ಮೊದಲ ಅವತಾರದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯ ಸಂಸ್ಥಾಪಕರಾಗಿ ಅದಕ್ಕೆ ಖಡ್ಗ ದೀಕ್ಷೆ ನೀಡಿದ ಡಿ.ಆರ್. ನಾಗರಾಜರ ಸಂಚಾಲಕತ್ವದಲ್ಲಿ ಎಂಬುದನ್ನೂ ನಾವು ಗಮನಿಸಬೇಕು. ನಾಗರಾಜರು ತಮ್ಮ ಈ ಎರಡನೇ ಅವತಾರದಲ್ಲಿ ತಮ್ಮ ಮೊದಲ ಅವತಾರದಲ್ಲಿ ಮಾಡಿದ್ದ ಸಾಹಿತ್ಯ 'ಪಾಪ'ವನ್ನು ತೊಳೆದುಕೊಳ್ಳಲು ಯತ್ನಿಸಿದರೂ, ಅವರು ಇಂದೂ ಕಾವ್ಯವನ್ನು ಖಡ್ಗ ಮಾಡುವ ಕಾವ್ಯ ಕಮ್ಮಾರಿಕೆಯಲ್ಲಿ ನಿರತರಾಗಿರುವ ಕೆಲವರ ಕಣ್ಮಣಿಯೂ ಆಗಿರುವುದಕ್ಕೆ, ಅವರ ಜಾತಿಮೂಲವಷ್ಟೇ ಕಾರಣವಾಗಿದ್ದರೆ ಆಶ್ಚರ್ಯವಿಲ್ಲ!

ಅದೇನೇ ಇರಲಿ, ಆ ಹೊತ್ತಿಗೆ ಅಡಿಗರು ತಮ್ಮ ಆವರೆಗಿನ ಪ್ರತಿಪಾದನೆಗಳಿಗೇ ಉಲ್ಟಾ ಹೊಡೆದಂತೆ (ಮರ್ಮಸ್ಥಾನಕ್ಕೇ ಬಿದ್ದ 'ಒಕ್ಕೂಟ'ದವರ ಹೊಡೆತ ತಾಳಲಾರದೆ?) ಧರ್ಮಸ್ಥಳದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರಿಂದ(ಇದು ಆಗ ಕಸಾಪದ ಅಧ್ಯಕ್ಷರಾಗಿದ್ದ ಹಂಪನಾ ಮಾಡಿದ ಕ್ರಾಂತಿ!) ಆರಂಭವಾದಂತೆ ಸಾಕಷ್ಟು ಕಾಲ ತಮ್ಮ ವಿವಾದಾತ್ಮಕ ಸಾಂಸ್ಕೃತಿಕ ನಂಬಿಕೆಗಳು ಮತ್ತು ರಾಜಕೀಯ ನಿಲುವುಗಳಿಂದಾಗಿ ಸರ್ವದಿಕ್ಕುಗಳಿಂದಲೂ ಟೀಕೆ-ದೂಷಣೆಗಳನ್ನೇ ಎದುರಿಸಿ ಹಣ್ಣಾಗಿದ್ದರೂ, ಅವರು ಈ ಸಮ್ಮೇಳನದಲ್ಲಿ ಸಾಹಿತ್ಯದ ಸ್ವಾಯತ್ತತೆ ಕುರಿತಂತೆ, ಅದನ್ನು ತಮ್ಮ 'ಜೀವನ್ಮರಣದ ಪ್ರಶ್ನೆ' ಎಂಬಂತೆ ಪರಿಗಣಿಸುವುದಾಗಿ ಹೇಳುತ್ತಾ ಆಡಿದ ಕೆಲವು ದಿಟ್ಟ ಮಾತುಗಳು ಆಧುನಿಕ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ದಾಖಲರ್ಹವಾದವು. ಅವು, ಕನ್ನಡ ಸಾಹಿತ್ಯದ ಮೇಲೆ ಪಂಪ, ಅಲ್ಲಮ, ಹರಿಹರ, ಕುಮಾರವ್ಯಾಸ, ಬೇಂದ್ರೆ, ಕುವೆಂಪು ಅವರಿಗಿಂತ, ಹಾವನೂರು ಆಯೋಗದ ಪ್ರಭಾವವೇ ಹೆಚ್ಚಾಗಿ ಅದು ತನ್ನ ಮೂಲ ಅಸ್ಮಿತೆಯ ಬಿಕ್ಕಟ್ಟನ್ನು ಎದುರಿಸಿದ್ದಾಗ ಆಡಿದ ಮಾತುಗಳು;ಅದೂ, ತನ್ನನ್ನು ಒಬ್ಬ ಬ್ರಾಹ್ಮಣ ಎಂದು ಸಾಂಸ್ಕೃತಿಕವಾಗಿಯಾದರೂ ಗುರುತಿಸಿಕೊಳ್ಳುತ್ತಿದ್ದ ಲೇಖಕನೊಬ್ಬ ಅಂದಿನ ಕೂಗುಮಾರಿ ಸಾಹಿತ್ಯ ವಾತಾವರಣದ ಮಧ್ಯೆ ಎಂಬ

ಕಾರಣಕ್ಕೂ; ಅವುಗಳ ದಿಟ್ಟತನ ಐತಿಹಾಸಿಕವಾಗಿ ಗಮನಾರ್ಹವೆನಿಸುತ್ತದೆ.

ಆದರೆ ಕೆ.ವಿ. ಸುಬ್ಬಣ್ಣನವರು ತಾವು ಆಗಾಗ್ಗೆ ಪ್ರದರ್ಶಿಸುವ ತಮ್ಮ ಬೌದ್ಧಿಕ 'ವಿಭಿನ್ನತೆ'ಯನ್ನು ಸಾರುವ ಏಲುತನದ ಭಾಗವಾಗಿ (ಇಂತಹ ಏಲುತನದಿಂದಾಗಿಯೇ ಅವರು, ಕನ್ನಡ ರಂಗಭೂಮಿ ಇತಿಹಾಸದಲ್ಲೇ ಒಂದು ಅಪೂರ್ವ ಪ್ರಯೋಗವೆನಿಸಬಹುದಾಗಿದ್ದ 'ಸದಾರಮೆ'ಯಂತಹ ಸಹಜ ಕಂಪನಿ ನಾಟಕವನ್ನು ಬಿ.ವಿ. ಕಾರಂತರಂತಹವರ ಕೈಗೆ ಕೊಟ್ಟೂ, ಅದು ಮಕಾಡೆ ಮಲಗುವಂತೆ ಮಾಡಿದ್ದು ನನಗೆ ನೆನಪಿದೆ.) ಅಂದಿನ ಕಾಲಕ್ಕೆ ತಕ್ಕ 'ರಾಜಕೀಯ ಸರಿತನ'ದ ಭಾಷಣ ಮಾಡುವ ಪ್ರಯತ್ನ ಮಾಡಿ, 'ಶ್ರೇಷ್ಠ ಸಾಹಿತ್ಯ' ಕಲ್ಪನೆ ಕುರಿತ ಚರ್ಚೆಯನ್ನೇ ದಾರಿ ತಪ್ಪಿಸಿದರು. ಬಹುಶಃ ತಾವು ನೀನಾಸಂ ಮೂಲಕ ತಮ್ಮದೇ ರೀತಿಯಲ್ಲಿ ತೊಡಗಿದ್ದ ಸಾಹಿತ್ಯ ಸಂಸ್ಕೃತಿ ಶ್ರೇಷ್ಠತೆಯ ಆಂದೋಲನದ ಬಗೆಗಿನ 'ಅಪರಾಧ ಭಾವ'ದಿಂದ ಹೊರಬರುವ ಸುಲಭ ಹೊರ ದಾರಿಯಾಗಿ ಅವರು ಈ ಸರಳ 'ಸಮಾಜಮುಖಿ' ನಿಲುವನ್ನು ತಾಳಿರಬಹುದು. ಸುಬ್ಬಣ್ಣ ಆಗಾಗ್ಗೆ ತಮ್ಮನ್ನು ತಾವು ಸಮಾಜವಾದಿ ಎಂದು ಗುರುತಿಸಿಕೊಳ್ಳುತ್ತಿದ್ದವರು ತಾನೇ! ಅವರು ಈ ಭಾಷಣದಲ್ಲಿ 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆ ಹುಟ್ಟಿಸುವ ಅಮಲಿನ ಬಗ್ಗೆ ಆಡಿದ ಕೆಲವು ಎಚ್ಚರಿಕೆಯ ಮಾತುಗಳು ಗಮನಾರ್ಹವಾದುವಾದರೂ, ಒಟ್ಟಾರೆ ಅದರ ಗಮನ ಬೌದ್ಧಿಕವಾಗಿಯೂ ರೋಚಕವೆನಿಸುವ ಸುಲಭ ಜನಪರತೆಯ ಕಡೆಗೇ ಇತ್ತು ಎಂಬುದನ್ನು ನಾವು ಗಮನಿಸಬೇಕು. 'ಶ್ರೇಷ್ಠತೆ ಸಾಹಿತ್ಯದ ಕಸುಬಿನಲ್ಲಿ ಸಹಜವಾಗಿ ಮೂಡಿಬರುವುದು ಅಪೇಕ್ಷಣೀಯ. ಆದರೆ ಶ್ರೇಷ್ಠತೆ ಸಾಧಿಸಬೇಕು ಎನ್ನುವುದು ವ್ಯಸನವಾಗುವುದು ಅವಶ್ಯಕವೋ?' ಎಂಬ ಅವರ ಗೊಂದಲಕಾರಿಯಾದ ಪ್ರಶ್ನೆ ಯಾರನ್ನು ಉದ್ದೇಶಿದ್ದು ಮತ್ತು ಏಕೆ ಎಂದು ಅರ್ಥವಾಗುವುದಿಲ್ಲ!

ಇದರಿಂದಾಗಿ, ಯಾರೂ ಲಂಕೇಶ್ ಮತ್ತು ಡಿ.ಆರ್. ನಾಗರಾಜರ ಉದ್ದೇಶಗಳ ಬಗ್ಗೆಯಾಗಲೀ ಅಡಿಗರ ಮಾತುಗಳ ಬಗ್ಗೆಯಾಗಲೀ ಚರ್ಚಿಸದೆ, ಸುಬ್ಬಣ್ಣನವರ ಭಾಷಣದ ಶೀರ್ಷಿಕೆಯಿಂದಲೇ ಮತ್ತೇರಿಸಿಕೊಂಡು ಈಗಲೂ ಜನಪರ ಸಾಹಿತ್ಯದ ಜೈಕಾರ ಕೂಗುತ್ತಲೇ ಇದ್ದಾರೆ. ಈ ಮತ್ತಿನಲ್ಲಿ; ಅಡಿಗರ ವಿರುದ್ಧ ಕಟು ಮಾತುಗಳನ್ನಾಡಿ ದೂರವಾದ ಮೇಲೆ, ಅವರ ಮತ್ತು ಅವರ ಶಿಷ್ಯರ ವಿರುದ್ಧ ತಾವೇ ಟಂಕಿಸಿದ 'ಬ್ರೇಮಿನ್' ಗುಣವಾಚಕವನ್ನು ರೋಚಕ ಪರಿಣಾಮದೊಂದಿಗೆ ಚಲಾಯಿಸುತ್ತಾ ದೊಡ್ಡ 'ಪ್ರಚಾರಾಂದೋಲನ'ವನ್ನೇ ನಡೆಸಿದ್ದ ಲಂಕೇಶ್‌ಗೆ, ಈ ಸಮ್ಮೇಳನಕ್ಕೆ ಅಡಿಗರನ್ನೇ ಕರೆಸುವ ಅನಿವಾರ್ಯತೆ ಏಕುಂಟಾಯಿತು ಎಂಬ ಬಗ್ಗೆಯೂ ಯಾರೂ ಯೋಚಿಸಿದಂತಿಲ್ಲ. ಹಾಗೇ ಅಡಿಗರು ಈ ಭಾಷಣ ಮಾಡುವ ಹೊತ್ತಿಗೆ ಎಷ್ಟು ದಾರಿ ಸವೆಸಿ, ಏನಾಗಿದ್ದರು ಎಂಬುದರ ಬಗ್ಗೆಯೂ ಯಾರೂ ಅಷ್ಟಾಗಿ ತಲೆ ಕಡೆಸಿಕೊಂಡಂತಿಲ್ಲ. ಈ ಸಂಬಂಧ ನನ್ನ ಒಂದು ಅನುಭವವನ್ನು ಇಲ್ಲಿ ದಾಖಲಿಸಿದರೆ ತಪ್ಪಾಗಲಾರದು.

ಅಡಿಗರ ಕಾವ್ಯವನ್ನು(ಅದು ನನಗೆ ಅಷ್ಟೇನೂ ಪರಿಚಯವಿಲ್ಲದ ವೈದಿಕ ಸಂಪ್ರದಾಯದ ಕಲ್ಪನೆಗಳು ಮತ್ತು ಪರಿಭಾಷೆಯ ನುಡಿಗಟ್ಟುಗಳಿಂದಾಗಿ ಸರಿಯಾಗಿ ಸಂವಹನವಾಗುತ್ತಿಲ್ಲ ಎಂಬ ಕಾರಣಕ್ಕೆ) ಅಷ್ಟಾಗಿ ಇಷ್ಟಪಡದಿದ್ದ ನಾನು ಅವರನ್ನು ಅವರ ಕೊನೆಯ ದಿನಗಳಲ್ಲೊಮ್ಮೆ(ಆಲನಹಳ್ಳಿ ಕೃಷ್ಣನ ಸಾವಿನ ಸಂದರ್ಭದಲ್ಲಿ ಆಕಾಶವಾಣಿಗಾಗಿ ನಾನು ರೂಪಿಸಿದ ಕಾರ್ಯಕ್ರಮವೊಂದಕ್ಕಾಗಿ ಅವರಿಂದ ಕೆಲವು ನೆನಪಿನ ಮಾತುಗಳನ್ನು ಧ್ವನಿಮುದ್ರಿಸಿಕೊಳ್ಳಲು) ಅವರ ಮನೆಯಲ್ಲೊಮ್ಮೆ ಭೇಟಿಯಾಗಿದ್ದೆ. ಆ ಸಂದರ್ಭದಲ್ಲಿ ಹೀಗೇ ಸಣ್ಣದಾಗಿ ಸಾಹಿತ್ಯ ಚರ್ಚೆ ಆರಂಭವಾಗಿ, ನಾನು ಮಾತುಗಳ ಮಧ್ಯೆ 'ನಿಮ್ಮ ಇತ್ತೀಚಿನ ಕವನಗಳು ನನಗೆ ತುಂಬಾ ಇಷ್ಟವಾಗುತ್ತವೆ' ಎಂದೆ. ನಾನು ಅವರ 'ಚಿಂತಾಮಣಿಯಲ್ಲಿ ಕಂಡ ಮುಖ'ದ ಕೆಲವು ಪದ್ಯಗಳನ್ನು ಉಲ್ಲೇಖಿಸಿದೆ. ತಕ್ಷಣ ಅವರ ಮುಖದಲ್ಲಿ ಕಿರುನಗೆ ಪುಟಿದೆದ್ದು, 'ಯಾಕೇಂದ್ರೆ ಅವುಗಳಲ್ಲಿ ನವ್ಯದ ವಾಸನೆ ಕಡಿಮೆಯಾಗಿದೆ ಕಣಯ್ಯ!' ಎಂದು ನನ್ನನ್ನು ದಂಗು ಬಡಿಸಿದರು.(ಇದನ್ನು ನಾನು 'ಸಾಹಿತ್ಯ ಸಂವಾದ'ಕ್ಕಾಗಿ ಮಾಡಿದ ಅವರ 'ಸುವರ್ಣ ಪುತ್ಥಳಿ' ಕವನ ಸಂಕಲನದ ವಿಮರ್ಶೆಯಲ್ಲೂ ಉಲ್ಲೇಖಿಸಿದ್ದೇನೆ)[2] ನನ್ನ ಪ್ರಕಾರ ಆ ಹೊತ್ತಿಗೆ ಅಡಿಗರಿಗೇ ನವ್ಯದ ಮತ್ತು ಅದರ ಹೆಸರಿನಲ್ಲಿ ನಡೆದ ಚಳವಳಿಯ ಮಿತಿಗಳು, ಅನಾಹುತಗಳು ಗೊತ್ತಾಗಿದ್ದವು.

ಕೆ. ವಿ. ಸುಬ್ಬಣ್ಣ

ಅಡಿಗರೊಂದಿಗೆ ಅಂದು ಮಾತಾಡಿದ ನನಗೆ ಅನ್ನಿಸಿದ ಇನ್ನೊಂದು ಅಂಶವೆಂದರೆ, ಅವರು ಜನಸಂಘ ಮತ್ತು ಆನಂತರ ಭಾಜಪದ ಅಭ್ಯರ್ಥಿಯಾಗಿ ಚುನಾವಣೆಗಳಲ್ಲಿ ಭಾಗವಹಿಸಿದ್ದರ ಹಿಂದೆ ಹೆಚ್ಚು ಕಾಂಗ್ರೆಸ್ ವಿರೋಧಿ ಧೋರಣೆ ಇರಬಹುದೇ ಹೊರತು(ಅವರು ಆರಂಭದಲ್ಲಿ ಲೋಹಿಯಾ ಅಭಿಮಾನಿಯಾಗಿದ್ದರು ಎಂಬುದನ್ನು ಗಮನಿಸಬೇಕು.), ಹಿಂದುತ್ವವಲ್ಲ ಎಂಬುದು.[3] ಅವರ ಕಾಂಗ್ರೆಸ್ ವಿರೋಧಿ ಧೋರಣೆ ಕಾಲಕ್ರಮದಲ್ಲಿ ವಿಮರ್ಶಾತ್ಮಕವಾಗದೆ ಕುರುಡಾಗಿ, ಅವರನ್ನು ಹಿಂದುತ್ವದ ಕಡೆಗೆ ತಳ್ಳಿರಬಹುದು. ಈ ಮಧ್ಯೆ ಅವರು ಬರೆದ 'ಮತ್ತೆ ಮೊಳಗಲಿ ಪಾಂಚಜನ್ಯ', 'ನಾನು ಹಿಂದೂ, ನಾನು ಬ್ರಾಹ್ಮಣ'ದಂತಹ ಅಗ್ಗದ ಪದ್ಯಗಳು, ಅವರು ಆಂತರ್ಯದಲ್ಲಿ ಎದುರಿಸುತ್ತಿದ್ದ ಈ ರಾಜಕೀಯ ಆಯ್ಕೆಯ ಬಿಕ್ಕಟ್ಟಿನಿಂದ(ನವ್ಯ ಕಾವ್ಯ ಕುರಿತ ನನ್ನ ಸೀಮಿತ ತಿಳುವಳಿಕೆ ಪ್ರಕಾರ, ಅವರ ಶಿಖರ ಕಾಲದ ಮುಖ್ಯ ರಚನೆಗಳು ಎಂದು ಹೇಳಲಾಗುವ ಸರಿ ಸುಮಾರು ಎಲ್ಲ ಕವನಗಳಲ್ಲೂ ಇದು ಕಾಣುವಂತಿದ್ದು, ಇದೇ ಅವುಗಳ ಶಿಲ್ಪ ಸೌಂದರ್ಯಕ್ಕೂ, ಅನುಮಾನಾಸ್ಪದ ತಾತ್ವಿಕತೆಗೂ ಕಾರಣವಾಗಿರುವಂತಿದೆ.) ಪಾರಾಗಲು ಆರಿಸಿಕೊಂಡ ಸುಲಭ ಮಾರ್ಗದ ಫಲಗಳಾಗಿ ಮಾತ್ರ ನನಗೆ ಕಾಣುತ್ತವೆ.[3] ಆ ಮಟ್ಟಿಗೆ ಅಡಿಗರು ರಾಜಕೀಯ ವ್ಯಕ್ತಿತ್ವವಾಗಿ ದುರ್ಬಲರೆಂದೇ ಹೇಳಬೇಕು. ವ್ಯಕ್ತಿತ್ವದ ಈ ಬಿರುಕು ನವ್ಯದ ಹೆಗ್ಗುರುತಾಗಿದ್ದು, ಇದು ಲಂಕೇಶರನ್ನೂ ಸೇರಿದಂತೆ ಈ ಚಳವಳಿಯ ಸಂಪರ್ಕಕ್ಕೆ ಬಂದ ಯಾರನ್ನೂ ಕಾಡದೇ ಬಿಟ್ಟಿಲ್ಲ ಎಂಬುದನ್ನು ನಾವು ಗಮನಿಸಬೇಕು. ಲಂಕೇಶರ ಸಾಹಿತ್ಯದಲ್ಲಿ ಮಾತ್ರವಲ್ಲ, ಪತ್ರಿಕೋದ್ಯಮದ ಬದುಕಿನಲ್ಲೂ ಇಂತಹ ಹಲವಾರು ಬಿರುಕು-ದೌರ್ಬಲ್ಯಗಳನ್ನು(ಆದರೆ ಇವು ಮಂಜುನಾಥ್ ಲತಾ-ಐಜೂರರಿಗೆ ಮಾತ್ರ ತಮ್ಮ ಬರಹದ ಧಾಟಿಯನ್ನು ಸಮರ್ಥಿಸಿಕೊಳ್ಳಲು ಆಧಾರವಾಗಿರುವುದು, ಇವೊತ್ತಿನ ಸಾಹಿತ್ಯ-ಸಾಂಸ್ಕೃತಿಕ ಚರ್ಚೆಗಳು ಹಿಡಿದಿರುವ ಅಡ್ಡದಾರಿಯನ್ನು ಸೂಚಿಸುತ್ತದಷ್ಟೆ!) ನಾವು ಗಮನಿಸಬಹುದು.[4] ಇದು ಲಂಕೇಶರಿಗೇನೂ ಗೊತ್ತಿರಲಿಲ್ಲವೆಂದಲ್ಲ. ಹಾಗೇ ಅಡಿಗರ ದೌರ್ಬಲ್ಯಗಳೂ, ಶಕ್ತಿಗಳೂ.

ಇದನ್ನೆಲ್ಲ ಇಲ್ಲಿ ಏಕೆ ಹೇಳಬೇಕಾಯಿತೆಂದರೆ, 'ಶ್ರೇಷ್ಠ ಸಾಹಿತ್ಯ' ಎಂಬುದು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಅಂದು ಅಗತ್ಯವಾಗಿದ್ದ ಕಲ್ಪನೆಯಾಗಿತ್ತು ಮತ್ತು ಅದು ಕನ್ನಡ ಸಾಹಿತ್ಯದ ಏಳುಬೀಳುಗಳ ಮಧ್ಯೆ ನಮ್ಮ ಕಾಲದ ಇಬ್ಬರು ಗಂಭೀರ ಸಾಹಿತ್ಯ ಕುಶಲ ಕರ್ಮಿಗಳ ಸಾಕ್ಷ್ಯದಲ್ಲಿ ಕಮ್ಮಟಗೊಂಡು ಮೂಡಿದುದಾಗಿತ್ತು ಎಂಬುದನ್ನು ಸೂಚಿಸಲು. ಆದರೆ ಇಂದು ಅದನ್ನು ಹಾಗೆಯೇ-ಸಂದರ್ಭದಿಂದ ಕಿತ್ತು-ಎತ್ತಿಕೊಂಡು ಚರ್ಚಿಸ ಹೊರಟರೆ ದಾರಿ ತಪ್ಪುತ್ತೇವೆ. 'ದೇಶಕಾಲ'ದ ಬಗ್ಗೆ ನಡೆದಿರುವ ಈ ಚರ್ಚೆಯ ಎರಡೂ ಬದಿಗಳ ಹಿಂದಿರುವ ಮುಖ್ಯ ತೊಂದರೆ ಇದೇ ಎನ್ನಿಸುತ್ತದೆ. ಏಕೆಂದರೆ, ಎರಡೂ ಕಡೆಯವರು ಅದನ್ನು ನೇರವಾಗಿ, ಸ್ಪಷ್ಟವಾಗಿ ಹೇಳ್ಕೊಳ್ಳದಿದ್ದರೂ, 'ದೇಶಕಾಲ'ವು 'ಶ್ರೇಷ್ಠ ಸಾಹಿತ್ಯ'ದ ರಾಜಕಾರಣ ಮಾಡುತ್ತಾ ತನ್ನ 'ಪ್ರತಿಷ್ಠೆ'ಯನ್ನು ಮೆರೆದಿದೆ ಎಂಬ ಆಕ್ರೋಶ ಮಂಜುನಾಥ್-ಐಜೂರು ಮತ್ತು ಅವರ ಬೆಂಬಲಿಗ ಗೆಳೆಯರ ಬರಹದ ಹಿಂದೆ ಕಂಡರೆ; ಕೆ. ಫಣಿರಾಜ್-ಜಿ. ರಾಜಶೇಖರ್‌ರ ಪ್ರತಿಕ್ರಿಯೆ ಅದೇ 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆಯನ್ನು, ಅದರ ತರ್ಕ ಮತ್ತು ಪರಿಭಾಷೆಯನ್ನು ನಂಬಿ, ಸಾಹಿತ್ಯ ಕುರಿತ ಎಲ್ಲ ಮಾತುಗಳೂ ವಿಮರ್ಶೆಯ ಭಾಷೆಯಲ್ಲಿರಬೇಕು ಎಂದು ನಿರೀಕ್ಷಿಸುತ್ತದೆ. ರಾಜಶೇಖರರ ಖಡಕ್ ವಾದವಂತೂ, 'ನವ್ಯದ ಗುಡಿಯ ಜೀರ್ಣೋದ್ಧಾರ'ಕ್ಕಾಗಿ ಚಂದಾ ಎತ್ತಲು 'ಎಚ್ಚರಿಕೆ!'ಯ ಕರಪತ್ರ ಬರೆದ ಹಾಗೆ ಪದೇ ಪದೇ ಅಡಿಗರ ಕಾವ್ಯ ಮತ್ತು ಮಾತುಗಳನ್ನು ಉಲ್ಲೇಖಿಸುತ್ತಾ ತನ್ನ ವಾದವನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಹಾಗಾಗಿಯೇ ಈ ಚರ್ಚೆಯಲ್ಲಿ ಎರಡೂ ಕಡೆ ಪದೇ ಪದೇ ಅಡಿಗ-ಲಂಕೇಶ-ಸುಬ್ಬಣ್ಣರ ಕಾಲದ 'ಶ್ರೇಷ್ಠ ಸಾಹಿತ್ಯ' ಕಲ್ಪನೆ ಕುರಿತ 'ಮೌಲಿಕ' ಚರ್ಚೆಗಳ ಉಲ್ಲೇಖಗಳು ಬರುತ್ತದೆ.

ಇದು ನನ್ನ ಪ್ರಕಾರ ಅಸಂಗತ ಪ್ರಲಾಪ. ಏಕೆಂದರೆ ಇಂದು ಸಂದರ್ಭ ಬದಲಾಗಿದೆ. 'ಶ್ರೇಷ್ಠ ಸಾಹಿತ್ಯ'ದ ಚರ್ಚೆಯನ್ನು ಮುನ್ನೆಲೆಗೆ ತಂದ ಬಂಡಾಯ ಮೊಂಡಾಗಿ, ವೈವಿಧ್ಯಮಯ ಹಿನ್ನೆಲೆಗಳುಳ್ಳ ಹೊಸ ತಲೆಮಾರಿನ ಅನೇಕ ಲೇಖಕ-ಲೇಖಕಿಯರು ಯಾರ ಮತ್ತು ಯಾವ ಮರ್ಜಿಗೂ ಸಿಗದೆ ವೈವಿಧ್ಯಮಯ ಬಣ್ಣ ಬೆಡಗುಗಳೊಂದಿಗೆ ತಮ್ಮಷ್ಟಕ್ಕೆ ತಾವು ಬರೆಯುತ್ತಾ, ವಿಮರ್ಶೆಯ ಹೊಸ ಪರಿಭಾಷೆಯನ್ನೇ ಒತ್ತಾಯಿಸುವಷ್ಟು ಸಾಹಿತ್ಯ ಸಂದರ್ಭ ಚಲನಶೀಲವಾಗಿದೆ.[5] [illegible] ಇದು ತೇಜಸ್ವಿ ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾ ಸಂಗ್ರಹಕ್ಕೆ 'ಹೊಸ ದಿಗಂತೆಡೆಗೆ' ಶೀರ್ಷಿಕೆಯಲ್ಲಿ

ಬರೆದಿದ್ದ ಮುನ್ನುಡಿಯ ಮಾತುಗಳ ವಿಸ್ತರಣೆಯಾಗಿ 'ಮಾಯಾಲೋಕ-1'ರ ಲೇಖಕರ ಮಾತುಗಳಲ್ಲಿ ಸೂಚಿಸಿದ 'ಹೊಸ ಕಾಲದ ಹೊಸ ನುಡಿಗಟ್ಟುಗಳ, ಉಕ್ತಿಭಂಗಿಗಳ ಹಾಗೂ ಅಭಿವ್ಯಕ್ತಿ ವಿಧಾನಗಳ' ಅನ್ವೇಷಣೆಯ ತಹತಹದಂತೆಯೇ ಕಾಣುತ್ತದೆ. ಏಕೆಂದರೆ ನನಗೆ ತಿಳಿದಂತೆ ಕಳೆದ ಇಪ್ಪತ್ತೈದು-ಮುವ್ವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯವನ್ನು ಜಾತಿ-ಮತ-ವರ್ಗ ಹಾಗೂ ಸಾಹಿತ್ಯ-ಸಾಹಿತ್ಯೇತರ ಹಿನ್ನೆಲೆಗಳ ಬೇಧವಿಲ್ಲದೆ; ಹಾಗಾಗಿ 'ಸಾಹಿತ್ಯ ಮೀಮಾಂಸೆ'ಯ ಬೌದ್ಧಿಕ ಕಾಟವಿಲ್ಲದೆ ಯಾರಾದರೂ ಏಕಾಕಿಯಾಗಿ ಪ್ರಭಾವಿಸಿ ನಿರ್ದೇಶಿಸಿದ್ದರೆ, ಅವರು ತೇಜಸ್ವಿಯವರೇ. ತಮ್ಮ ವಿಫುಲವಾದ 'ಅ-ಶ್ರೇಷ್ಠ' ಮತ್ತು 'ಅ-ಮೌಲಿಕ' ಸಾಹಿತ್ಯದ ಮೂಲಕ. ಹಾಗಾಗಿಯೇ ಕೆಲ ಅಡಿಗ ಪುನರುತ್ಥಾನವಾದಿ 'ಸಾಹಿತ್ಯ ನಿಷ್ಠುರ' ವಿಮರ್ಶಕರು ಅವರನ್ನು ಅನಂತಮೂರ್ತಿ-ಲಂಕೇಶರಿಗೆ ಹೋಲಿಸಿ, ಅವರು ('ಶ್ರೇಷ್ಠ')ಸಾಹಿತಿಯೇ ಅಲ್ಲ ಎಂದು ತಮಗೆ (ವಿಶ್ವಾಸವಿದ್ದವರ ಬಳಿ ಕಿವಿಯಲ್ಲಿ)ಹೇಳುವುದುಂಟು. ಇರಲಿ, ಈ ವಿಷಯಕ್ಕೆ ಮತ್ತೆ ಬರೋಣ.

–೩–

ಮೊದಲಾಗಿ 'ದೇಶಕಾಲ', ನಿರ್ದಿಷ್ಟವಾಗಿ ಅದರ ವಿಶೇಷಾಂಕ; ನಾನು ಈಗಾಗಲೇ ಸೂಚಿಸಿದ ಹಾಗೆ, 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆಯನ್ನು ನಂಬಿ ರೂಪುಗೊಂಡಿಲ್ಲ. ನಂಬಿಯೇ ರೂಪುಗೊಂಡಿರುವುದು ಎಂದು ಯಾರಾದರೂ ಸಂಪಾದಕರ ಮೇಲೆ 'ಮಂಪರು ಪರೀಕ್ಷೆ' ನಡೆಸಿ ಕಂಡು ಹಿಡಿದಿದ್ದರೂ, ಅದರ ಕುರುಹುಗಳು ಸಂಚಿಕೆಯಲ್ಲಿ ಕಾಣುವುದಿಲ್ಲ. ಇದರ ಬಗ್ಗೆ ನಾನು ಹೆಚ್ಚು ಮಾತಾಡಲು ಹೋಗುವುದಿಲ್ಲ. ಏಕೆಂದರೆ, ಈ ಪತ್ರಿಕೆಯ ಬಗ್ಗೆ ತಮ್ಮ ಪ್ರತಿಕ್ರಿಯೆಗಳುದ್ದಕ್ಕೂ ಕಾಣುವ ಹಾಗೆ ವಿಪರೀತ ಅಭಿಮಾನವಿಟ್ಟವರಂತೆ ತೋರುವ ರಾಜಶೇಖರರು, 'ಎಲ್ಲಿ, ನಿಮ್ಮ ಈ ಮಾತಿಗೆ ಪಠ್ಯದ ಸಾಕ್ಷ್ಯ ನೀಡಿ' ಎಂದು ಕೇಳಿಯಾರು! ಆದುದರಿಂದ ಅವನ್ನೆಲ್ಲ ಬಿಟ್ಟು, ಸಂಪಾದಕರು ಆರಿಸಿರುವ 21ನೇ ಶತಮಾನದ 21 ಲೇಖಕರ ಮತ್ತು 21 ಕೃತಿಗಳ ಪಟ್ಟಿಯ ಹಿಂದಿನ ಯೋಜನೆಯ ರೀತಿ-ನೀತಿಗಳನ್ನಷ್ಟೇ ನೋಡೋಣ. ಈ ಪಟ್ಟಿಯ ಹೆಸರುಗಳ, ಕೃತಿಗಳ ಆಯ್ಕೆಯ ಹಿಂದಿರುವ ನ್ಯಾಯಾನ್ಯಾಯಗಳ ವಿಷಯ ಬೇಡ(ಮತ್ತೆ ಅದಕ್ಕೆ ರಾಜಶೇಖರ್ ಸಾಕ್ಷ್ಯ ಕೇಳಿಯಾರು!); ಅದರ ಕಲ್ಪನೆಯ ಹಿಂದಿನ ಧಾರ್ಷ್ಟ್ಯವನ್ನು ನೋಡಿದರೇ ಈ ಸಂಚಿಕೆಯ ಆಯೋಜಕರ ಅಡ್ಡಕಸುಬಿತನ ಕಾಣುತ್ತದೆ. 21ನೇ ಶತಮಾನದ ಹತ್ತನೇ ಒಂದು ಭಾಗವೂ ಮುಗಿದಿಲ್ಲದಿರುವಾಗ ಮತ್ತು ಒಬ್ಬ ಮನುಷ್ಯನ ಬರಹದ ಬದುಕೇ ಸರಾಸರಿ 40-50 ವರ್ಷ ಇರುವಾಗ, ಇವರು ಮುಂದಿನ ನೂರು ವರ್ಷಗಳ ಸಾಹಿತ್ಯದ ಬಗ್ಗೆ, ಕೃತಿಗಳ ಬಗ್ಗೆ ಮಾತನಾಡಬಲ್ಲ (ಆ ಮಾತು ಎಂತಹುದೇ ಆಗಿರಲಿ) ಧೈರ್ಯ ಮಾಡುತ್ತಾರೆಂದರೆ ಇವರನ್ನು ತಲೆ ಕೆಟ್ಟವರೆಂದು ನಿರ್ಲಕ್ಷಿಸಬೇಕೋ ಅಥವಾ ಇದರ ಹಿಂದಿನ ಅಪ್ರಬುದ್ಧ 'ಸಾಹಿತ್ಯ ರಾಜಕಾರಣ'ವನ್ನು ಕಂಡು ಹೇಸಬೇಕೋ ತಿಳಿಯದಾಗುತ್ತದೆ!

ಜೊತೆಗೆ ಈ 21 ಜನ ಲೇಖಕ/ಲೇಖಕಿಯರ ಬಗ್ಗೆ ಇವರೇ ಅಥವಾ ಇವರ ಸಂಪಾದಕೀಯ ಬಳಗದ ಯಾರಾದರೂ ಬರೆಯದೆ, ಈ ಆಯ್ಕೆಗೆ ಸಂಬಂಧವೇ ಇಲ್ಲದ ಮತ್ತು ಯಾವ ಉದ್ದೇಶಕ್ಕಾಗಿ ತಾವು ಬರೆಯುತ್ತಿದ್ದೇವೆ ಎಂಬುದು ಗೊತ್ತಿಲ್ಲದೇ ಇರುವವರಿಂದ ಬರೆಸುವ ಹುನ್ನಾರ ಬೇರೆ! ಬರಿ ಹುನ್ನಾರವೇನು, ಕೆಟ್ಟ ರಾಜಕಾರಣವಿದು. ನನ್ನ ಪತ್ನಿಗೂ ಹೀಗೆ ಯಾಕೆಂದು ಗೊತ್ತಿಲ್ಲದೆ ಒಬ್ಬ ಕವಿ/ಕವಯತ್ರಿಯ ಬಗ್ಗೆ ಬರೆಯುವ ಆಹ್ವಾನ ಬಂದಿದ್ದುದರಿಂದ; ಆದರೆ ಆಕೆಗೆ ಆ ಆಹ್ವಾನದ ಈ ಪರಿಯಲ್ಲೇ ಇದ್ದ 'ರಾಜಕಾರಣ'ದ ವಾಸನೆ ಬಡಿದೋ ಏನೋ ನಿರಾಕರಿಸಿದ್ದರಿಂದ ಇದು ನನಗೆ ಗೊತ್ತಾಯಿತಷ್ಟೆ. ಈ ಸಂಬಂಧ ನನಗೆ ತಿಳಿದುಬಂದ ಇನ್ನೊಂದು ಸಂಗತಿಯೆಂದರೆ, ನನ್ನ ಪತ್ನಿಯಂತೆಯೇ ಹಲವು ಲೇಖಕರು ಬರೆಯಲು ನಿರಾಕರಿಸಿದ್ದರಿಂದಾಗಿ, ತಮ್ಮ ಈ ಆಯ್ದ 21 ಜನ ಲೇಖಕರಲ್ಲಿ ಹಲವರ ಬಗ್ಗೆ ಈ ಪತ್ರಿಕೆಯ ಸಂಪಾದಕ ಬಳಗ ಯಾರನ್ನು ಸಾಹಿತ್ಯದ ಗಂಧ-ಗಾಳಿ ಇಲ್ಲದವರು ಎಂದು ಪರಿಗಣಿಸಿ ನಿರ್ಲಕ್ಷಿಸಿತ್ತೋ, ಕೊನೆಗೆ ಅಂತಹವರನ್ನೇ ಕಾಡಿ ಬೇಡಿ, ಪುಸಲಾಯಿಸಿ ಬರೆಯಿಸಿದ್ದಾರೆ! ಇನ್ನು ಈ ಇಡೀ ಯೋಜನೆಯ ಮಟ್ಟ ಎಲ್ಲಿಗೆ ಇಳಿದಿರಬಹುದು ಯೋಚಿಸಿ!

ಬಹುಶಃ ಇದನ್ನು ತಿಳಿದೇ-ತಮ್ಮ ಈ ಗುಪ್ತ ರಾಜಕೀಯ ಸಾಹಸ ಹಾಸ್ಯಾಸ್ಪದ ರೀತಿಯಲ್ಲಿ ವಿಫಲಗೊಂಡಿದ್ದರಿಂದಾದ ಮುಜುಗರವನ್ನು ಮರೆಮಾಚಿಕೊಳ್ಳಲೆಂದೇ-ಸಂಪಾದಕ ಮಂಡಳಿಯವರು, ಕೆಲವರು ಪತ್ತೇದಾರಿ ನಡೆಸಿ ಹೇಳುತ್ತಿರುವಂತೆ, ತಮ್ಮ ಈ 'ಉತ್ಪನ್ನ'ದ ಬಿಡುಗಡೆಗಾಗಿ ಮಾಧ್ಯಮಗಳ ಮೇಲೆ ಕಾರ್ಪೋರೇಟ್ ಸಂಸ್ಥೆಗಳು ಅನುಸರಿಸುವ ಅತ್ಯಾಧುನಿಕ ಮಾದರಿಯ 'ಸಂಪನ್ಮೂಲ'ಗಳನ್ನೇ ಬಳಸಿ ಭರ್ಜರಿ ಪ್ರಚಾರ ಪಡೆದಿರಬಹುದು! ಆದರೆ ಇದೇ ಅವರಿಗೆ ಮುಳುವಾಗಿ, ನಮ್ಮಂತಹವರ ಕೆಟ್ಟ ಕಣ್ಣು(ಮತ್ತು ಮಂಜುನಾಥ್ ಲತಾ-ಐಜೂರರಂತಹ ಹಲವರ 'ದುಷ್ಟ' ಕಣ್ಣೂ?) ಅವರ ಮೇಲೆ ಬೀಳುವಂತೆಯೂ ಆಗಿಬಿಟ್ಟಿತಲ್ಲಾ? ಅದೇನೇ ಇರಲಿ, 'ದೇಶಕಾಲ'ದ ಈ ಪ್ರಯತ್ನ ಬಂಡಾಯದ ಕೆಲವರು ಮಾಡಿದ ಪ್ರಯತ್ನದಂತೆಯೇ ಸಾಹಿತ್ಯಕ್ಕೆ ಹಾನಿ ಮಾಡುವ ಪ್ರಯತ್ನವೇ ಆಗಿದೆ. ವಾಸ್ತವ ಹೀಗಿರುವಾಗ ಈ ಪತ್ರಿಕೆಯ ಮೇಲೆ 'ಶ್ರೇಷ್ಠ ಸಾಹಿತ್ಯ'ದ ರಾಜಕಾರಣ ಮಾಡುತ್ತಿದ್ದಾರೆ ಎಂದು ಆರೋಪ ಮಾಡಿದರೆ ಅದಕ್ಕಿಂತ ಹಾಸ್ಯಾಸ್ಪದ ಸಂಗತಿ ಇನ್ನೊಂದಿರಲಾರದು!

ಇಂದು 'ಸಾಮಾಜಿಕ ನ್ಯಾಯ'ದ ರಾಜಕಾರಣ ಸಾಹಿತ್ಯ ಕ್ಷೇತ್ರಕ್ಕೂ ಹಬ್ಬಿ ಅಕಾಡೆಮಿ ಅಧ್ಯಕ್ಷತೆ, ಸದಸ್ಯತ್ವ, ಬಹು ಮಾನ-ಪ್ರಶಸ್ತಿ ಇತ್ಯಾದಿ ಬಹುತೇಕ ಅಧಿಕೃತ ಮಾನ್ಯತೆಗಳು ಸಾಹಿತ್ಯ ನ್ಯಾಯವೊಂದನ್ನು ಬಿಟ್ಟು 'ಸಾಮಾಜಿಕ ನ್ಯಾಯ'ದ ವಿವಿಧ ಶಾಖೆಗಳಿಗೆ ಸಂಬಂಧಿಸಿದ 'ನ್ಯಾಯ'ಗಳ ಹೆಸರಲ್ಲಿ ಬಹುಪಾಲು ಅಯೋಗ್ಯರ ಪಾಲಾಗುತ್ತಾ, ಸಾರ್ವಜನಿಕರಲ್ಲಿ ಸಾಹಿತ್ಯದ ಗುಣಾತ್ಮಕತೆ ಕುರಿತಂತೆ ಗಂಭೀರ ಸಂದೇಹಗಳು ಸೃಷ್ಟಿಯಾಗುತ್ತಿರುವ ದಿನಗಳನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ ಇದು ಇಂದಿನ ಈ ಸಂದರ್ಭಕ್ಕೆ ಪತ್ರಿಕೆ ತೋರಿಸುತ್ತಿರುವ ತನ್ನದೇ ರೀತಿಯ ಪ್ರತಿಕ್ರಿಯೆ ಯಾಕಾಗಿರಬಾರದು?

ಇನ್ನು ಪತ್ರಿಕೆಯಲ್ಲಿ/ವಿಶೇಷಾಂಕದಲ್ಲಿ ಬ್ರಾಹ್ಮಣ ಲೇಖಕರ ಸಂಖ್ಯೆ ಹೆಚ್ಚಾಗಿದೆ (ಅರುಣ್ ಜೋಳದಕೂಡ್ಲಿಗಿಯವರ ಭಾಷೆಯಲ್ಲಿ, 'ಬ್ರಾಹ್ಮಣರ ಲಾಬಿ') ಎನ್ನುವ ಆಧಾರದ ಮೇಲೆ 'ಶ್ರೇಷ್ಠತೆಯ ವ್ಯಸನ'ದ ಆರೋಪ ಮಾಡಿದರೆ, ಅದು ಲಂಕೇಶ್ ನಂಬಿದ್ದ 'ಶ್ರೇಷ್ಠ ಸಾಹಿತ್ಯ'ದ ಕಲ್ಪನೆಗೇ ಮಾಡುವ ಅವಮಾನ. ಹಾಗಾಗಿ, ಇದರ ಮೇಲೆ ಹೆಚ್ಚೆಂದರೆ ಸುಪ್ತ (ಮೇಲ್) ಜಾತೀಯತೆಯ ಆರೋಪ ಮಾಡಿ ತೃಪ್ತಿ ಪಟ್ಟುಕೊಳ್ಳಬಹುದು. ಆದರೆ ಇಂದು 'ಸಾಮಾಜಿಕ ನ್ಯಾಯ'ದ ರಾಜಕಾರಣ ಸಾಹಿತ್ಯ ಕ್ಷೇತ್ರಕ್ಕೂ ಹಬ್ಬಿ ಅಕಾಡೆಮಿ ಅಧ್ಯಕ್ಷತೆ, ಸದಸ್ಯತ್ವ, ಬಹುಮಾನ-ಪ್ರಶಸ್ತಿ ಇತ್ಯಾದಿ ಬಹುತೇಕ ಅಧಿಕೃತ ಮಾನ್ಯತೆಗಳು ಸಾಹಿತ್ಯ ನ್ಯಾಯವೊಂದನ್ನು ಬಿಟ್ಟು 'ಸಾಮಾಜಿಕ ನ್ಯಾಯ'ದ ವಿವಿಧ ಶಾಖೆಗಳಿಗೆ ಸಂಬಂಧಿಸಿದ 'ನ್ಯಾಯ'ಗಳ ಹೆಸರಲ್ಲಿ ಬಹುಪಾಲು ಅಯೋಗ್ಯರ ಪಾಲಾಗುತ್ತಾ, ಸಾರ್ವಜನಿಕರಲ್ಲಿ ಸಾಹಿತ್ಯದ ಗುಣಾತ್ಮಕತೆ ಕುರಿತಂತೆ ಗಂಭೀರ ಸಂದೇಹಗಳು ಸೃಷ್ಟಿಯಾಗುತ್ತಿರುವ ದಿನಗಳನ್ನು ನಾವು ನೋಡುತ್ತಿದ್ದೇವೆ. ಹಾಗಾಗಿ ಇದು ಇಂದಿನ ಈ ಸಂದರ್ಭಕ್ಕೆ ಪತ್ರಿಕೆ ತೋರಿಸುತ್ತಿರುವ ತನ್ನದೇ ರೀತಿಯ ಪ್ರತಿಕ್ರಿಯೆ ಯಾಕಾಗಿರಬಾರದು?(ಅಥವಾ ಪತ್ರಿಕೆಯ ಆರಂಭದ ಹಿಂದಿನ ಸ್ಫೂರ್ತಿಯೇ ಇದಾಗಿರಬಹುದು, ಯಾರಿಗೆ ಗೊತ್ತು?) ತೇಜಸ್ವಿ ಪ್ರಕಾರ ಇಂದು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಮೀಸಲು ಏನಾದರೂ ಅಗತ್ಯವಿದ್ದರೆ ಅದು ಬ್ರಾಹ್ಮಣರಿಗೆ ಅಗತ್ಯವಾಗಿದೆ.' ಅದನ್ನು 'ದೇಶಕಾಲ' ಅರ್ಥ ಮಾಡಿಕೊಂಡು ಜಾರಿಗೆ ತಂದಿರಲೂಬಹುದು!

–೪–

ಇರಲಿ. ಈ ಚರ್ಚೆಯಲ್ಲಿ ನನಗೆ ಮೊದಲಿಗೇ ಎದ್ದು ಕಾಣುವ ದುಃಖ, ವಿಷಾದದ ಸಂಗತಿ ಎಂದರೆ, ಮಂಜುನಾಥ್ ಲತಾ-ಐಜೂರರ ಲೇಖನವನ್ನು, ಅದರಲ್ಲಿನ ಪ್ರತಿ ಮಾತನ್ನೂ ಫಣಿರಾಜ್-ರಾಜಶೇಖರರು ವಿಮರ್ಶೆಯೆಂದು(ಅದು ಸೂಕ್ತ ಪರಿಭಾಷೆಯಲ್ಲಿಲ್ಲವೆಂದು ದೂರುತ್ತಲೇ!) ಬಗೆದು, ಸಹಜವಾಗಿಯೇ ಅದಕ್ಕೆ ಉತ್ತರಿಸಲಾಗದ ಹತಾಶೆ-ಕ್ರೋಧಗಳಿಗೆ ತಮ್ಮನ್ನು ತಾವು ತೆತ್ತುಕೊಂಡಿರುವುದು. ಆದರೆ ನನಗೆ ಅದು ಮೊದಲ ನೋಟಕ್ಕೇ ದಿಕ್ಕು ದೆಸೆಯಿಲ್ಲದ ಸಾರ್ವಜನಿಕ ದೂರು-ಬೈದಾಟಗಳು ತುಂಬಿದ ದೊಡ್ಡ ರಂಪದಂತೆ ಕಂಡಿದೆ. ಹಾಗಾಗಿಯೇ ನಾನು ಅದಕ್ಕೆ ಪ್ರತಿಕ್ರಿಯಿಸಬೇಕಾಗಿಲ್ಲ; ಪ್ರತಿಕ್ರಿಯಿಸಬೇಕಾದವರು ಬೇರೆ ಇದ್ದಾರೆ ಎಂದು ಸುಮ್ಮನಾದೆ. ನನ್ನ ಆಶ್ಚರ್ಯಕ್ಕೆ, ಇದಕ್ಕೆ ಯಾರು ಪ್ರತಿಕ್ರಿಯಿಸಬೇಕಿತ್ತೋ(ಪ್ರತಿಕ್ರಿಯಿಸಬೇಕೆನಿಸಿದರೆ) ಅವರು ಪ್ರತಿಕ್ರಿಯಿಸದೆ, ಈ ಇಬ್ಬರು ಪ್ರತಿಕ್ರಿಯಿಸಿದ್ದಾರೆ! ಅದೂ ಕತ್ತಿವರಸೆಯ ಆವೇಶದೊಂದಿಗೆ... ಇದರಿಂದಾಗಿ, ಇವರು ಈ ರಂಪವಾದರೂ ಏಕೆ ಹುಟ್ಟಿಕೊಂಡಿದೆ ಎಂದು ಯೋಚಿಸುವ, ಅದರ ಹಿಂದಿನ ಪ್ರವೃತ್ತಿಗಳನ್ನೂ, ಕಾರಣಗಳನ್ನು ಗುರುತಿಸಿ ಅವಕ್ಕೆ ನೇರವಾಗಿ ಪ್ರತಿಕ್ರಿಯಿಸುವ ಮೂಲಕ ಚರ್ಚೆಯನ್ನು ಆರಂಭದ ಹಂತದಲ್ಲೇ ಮುಕ್ತಾಯಗೊಳಿಸುವ ಸಹನೆ-ವ್ಯವಧಾನಗಳನ್ನು ಸಂಘಟಿಸಿಕೊಳ್ಳಲಾಗದೆ, ಸುಖಾಸುಮ್ಮನೆ ತಮ್ಮ ದೌರ್ಬಲ್ಯಗಳನ್ನು ಬಯಲು ಮಾಡಿಕೊ

ಳ್ಳಲು ಅವಕಾಶ ಕಲ್ಪಿಸಿಕೊಂಡಿದ್ದಾರೆ. ಈ ತಪ್ಪು ಹೆಜ್ಜೆಯಿಂದಾಗಿ ಇವರ ವಾದಗಳೂ ಒಂದೇ ಸಮನೆ ತಪ್ಪು ಹೆಜ್ಜೆಗಳನ್ನಿಡುತ್ತಾ ಹೋಗಿವೆ. ಕೆಲವೆಡೆ ಅನುಮಾನಾಸ್ಪದವೆನ್ನಿಸುವಂತೆ ಕೂಡಾ. ಇದು ನನ್ನಲ್ಲಿ ಸಾಕಷ್ಟು ಕಸಿವಿಸಿಯನ್ನೂ ಕೆಲವು ಆತಂಕಗಳನ್ನೂ ಹುಟ್ಟು ಹಾಕಿದೆ.

ಏಕೆಂದರೆ, ಇವರಿಬ್ಬರು ಇವೊತ್ತಿನ ಕನ್ನಡ ಸಾಹಿತ್ಯ ಸಂದರ್ಭವನ್ನು ಇಂದು ತಮ್ಮದೇ ವಿಶಿಷ್ಟ ಜವಾಬ್ದಾರಿ ಮತ್ತು ಒಳನೋಟಗಳೊಂದಿಗೆ ವ್ಯಾಖ್ಯಾನಿಸುತ್ತಿರುವ ಎರಡು ಪ್ರಮುಖ ವೈಚಾರಿಕ ಧಾರೆಗಳಲ್ಲಿ ಒಂದರ ಬಹು ಮುಖ್ಯ ವಕ್ತಾರರೆಂದು ನಾನು ಭಾವಿಸಿದ್ದೇನೆ. ಇವರು ಸದರಿ ಚರ್ಚೆಯೇ ಒಂದು ನೆಪವಾಗಿ, ಈ ಧಾರೆಯ ಇವೊತ್ತಿನ ನಂಬಿಕೆಗಳನ್ನು, ನಿಲುವುಗಳನ್ನು ತಮ್ಮದೇ ಕಾರಣಗಳಿಂದಾಗಿ ಸಾಕಷ್ಟು ಕಟುವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಮಂಡಿಸಿದ್ದಾರೆ. ಇದರಿಂದ ಕೆರಳಿದ, ಕುತೂಹಲಗೊಂಡ ಇತರ ಅನೇಕರು ಅನಿವಾರ್ಯವೆಂಬಂತೆ ಮಧ್ಯ ಪ್ರವೇಶಿಸಿ, ಚರ್ಚೆಯನ್ನು 'ದೇಶಕಾಲ'ವನ್ನು ಮೀರಿದ ಸಮಕಾಲೀನ ಸಾಹಿತ್ಯ ರಾಜಕಾರಣದ ಕೆಲವು ಪ್ರಶ್ನೆಗಳಿಗೆ ವಿಸ್ತರಿಸಿ ಒಳ್ಳೆಯದನ್ನೇ ಮಾಡಿದ್ದಾರೆ. ಇದರಿಂದಾಗಿ ನನಗೂ, ಮಂಜುನಾಥ್ ಲತಾ-ಐಜೂರರ ರಂಪ ನೆಪ ಮಾತ್ರವಾಗಿ, ಇವೊತ್ತಿನ ಸಾಹಿತ್ಯಿಕ-ಸಾಂಸ್ಕೃತಿಕ ಸಂದರ್ಭದ ಈ ವಿಸ್ತಾರದಲ್ಲಿ ನನ್ನನ್ನು ನಾನೇ ಕಂಡುಕೊಳ್ಳಲು, ಸ್ಪಷ್ಟಪಡಿಸಿಕೊಳ್ಳಲು ಅವಕಾಶವಾಗಿದೆ. ಹೀಗಾಗಿ ನಾನು ಇಲ್ಲಿ ಇವರ ಇಲ್ಲಿನ ಅಭಿಪ್ರಾಯ-ನಿಲುವುಗಳನ್ನು ಮತ್ತು ವಾದ ವೈಖರಿಗಳನ್ನು ಸಂದರ್ಭೋಚಿತ ನಿಷ್ಠುರತೆಯಿಂದ ಮತ್ತು ಸವಿವರವಾಗಿ ಪರಿಶೀಲಿಸುವ ಹುಮ್ಮಸ್ಸು ಮೂಡಿದೆ. ಈ ನನ್ನ ಗೆಳೆಯರು ಇದನ್ನು ಸಹಿಸಬಲ್ಲರೆಂಬ ನಂಬಿಕೆ ನನಗಿದೆ.

ಮೊದಲಾಗಿ ಈ ಚರ್ಚೆಯ ಸಂದರ್ಭದಲ್ಲಿ ನನ್ನನ್ನು ಕಾಡಿದ ಮುಖ್ಯ ಪ್ರಶ್ನೆಯೆಂದರೆ, 'ದೇಶಕಾಲ'ದ ಮುಖ್ಯ ಪಾತ್ರಧಾರಿಗಳೇ ಸುಮ್ಮನಿರುವಾಗ, ಫಣಿರಾಜ್-ರಾಜಶೇಖರರೇಕೆ ಅದರ ಪರವಾಗಿ ಉತ್ತರ ಕೊಡಲು ಹೊರಟರು? ಅದೂ, ಅದರ ಜೊತೆ ನೀನಾಸಂ, ಅಕ್ಷರ ಪ್ರಕಾಶನ, ಟಿ.ಪಿ. ಅಶೋಕ, ಅಕ್ಷರ, ಅನಂತಮೂರ್ತಿ ಇತ್ಯಾದಿಗಳನ್ನೆಲ್ಲ ಸೇರಿಸಿಕೊಂಡು! ಮೊದಲೇ ಈ ಪತ್ರಿಕೆ ಒಂದು ಖಾಸಗಿ ಲಿಮಿಟೆಡ್ ಕಂಪನಿ ಎಂಬ 'ಆರೋಪ'ಕ್ಕೆ ಈಡಾಗಿರುವಾಗ, ಈ 'ಆರೋಪ' ಸರಿಯಾಗಿಯೇ ಇದೆ ಎನ್ನುವಂತೆ ರಾಜಶೇಖರ್ ಪದೆ ಪದೇ, ಇದು ಶುದ್ಧ ಖಾಸಗಿ ಪ್ರಯತ್ನವಾಗಿರುವುದರಿಂದ ಸಾರ್ವಜನಿಕ ಉತ್ತರದಾಯಿತ್ವದ ಪ್ರಶ್ನೆಯೇ ಏಳುವುದಿಲ್ಲ ಎಂದು ಪತ್ರಿಕೆಯ ಉತ್ತರದಾಯಿತ್ವವನ್ನು ತಾವೇ ಹೊತ್ತವರಂತೆ ಘೋಷಿಸುತ್ತಾರೇಕೆ? ಇನ್ನು ಅಂತಹ ಪ್ರಶ್ನೆ ಕೇಳಬಹುದಾದವರನ್ನು 'ಪೋಲಾಂಡ ನಾಯಕರು', 'ತಲೆ ತಿರುಕರು' ಇತ್ಯಾದಿ ಅರ್ಥವಾಗದ ಮತ್ತು ಅರ್ಥವಾಗುವ ಹಲವು ಗುಣವಾಚಕ-ಬಿರುದುಗಳಿಂದ ಅಲಂಕರಿಸುವಷ್ಟು ಪತ್ರಿಕೆ ಕುರಿತ ತೀವ್ರ ಮಮಕಾರವೇಕೆ? ಎಲ್ಲಕ್ಕಿಂತ ಮಿಗಿಲಾಗಿ, ಇವರಿಬ್ಬರೂ-ಒಬ್ಬರು ವಾಗ್ವಾದ ಪರಂಪರೆಯನ್ನು ಎತ್ತಿಹಿಡಿಯುವ ನೆಪದಲ್ಲಿ, ಇನ್ನೊಬ್ಬರು ಪತ್ರಿಕೆಯಲ್ಲಿ ಬರೆದ ಜವಾಬ್ದಾರಿಯ ಹೆಸರಿನಲ್ಲಿ-'ದೇಶಕಾಲ'ದ ವಿರೋಧಿಗಳಿಗೆ ಅಪ್ಪಟ ಸಾಹಿತ್ಯಿಕ-ಸಾಂಸ್ಕೃತಿಕ ರಾಜಕಾರಣದಂತೆ ಕಾಣುವ ಅದರ ಆಯ್ಕೆ ಮತ್ತು ಅಭಿರುಚಿಗಳನ್ನು ನಿರ್ಧರಿಸುವ ಸಂಪಾದಕೀಯ ನೀತಿಯನ್ನು ಈ ಕಂಪನಿಯ ಪಿ.ಆರ್.ಓ.ಗಳಂತೆ ಸಮರ್ಥಿಸುವ



ಪಿ. ಲಂಕೇಶ್

ಪ್ರಯತ್ನ ಮಾಡುವರೇಕೆ? ಇದನ್ನು ರಾಜಶೇಖರರು ಪದೇ ಪದೇ ಪತ್ರಿಕೆ ವಿಮರ್ಶಾತೀತವಲ್ಲವೆಂದು ಹೇಳಹೇಳುತ್ತಲೇ, ಆದರೆ ಯಾರು ಏನು ಹೇಳಿದರೂ ಕೇಳಿಸಿಕೊಳ್ಳದವರಂತೆ, ಪ್ರಶ್ನಾತೀತಗೊಳಿಸಿ; ಮತ್ತು ಫಣಿರಾಜರು ಮೂಲ ಲೇಖನದ ವಾಗ್ವಾದ ಭಂಜನಾ ಪ್ರವೃತ್ತಿಯನ್ನು ಎಳೆ ಎಳೆಯಾಗಿ ವಿವರಿಸುವ ಪ್ರಯತ್ನದಲ್ಲಿ ಇಲ್ಲಿ ಚರ್ಚೆಯೇ ಸಾಧ್ಯವಿಲ್ಲವೆಂದು ಹೇಳುತ್ತಾ ಅದನ್ನು ಚರ್ಚಾತೀತಗೊಳಿಸಿ, ಗಾಬರಿ ಹುಟ್ಟಿಸುತ್ತಾರೆ.

ಫಣಿರಾಜರು ತಮ್ಮ ವಾದವನ್ನು ಸಮರ್ಥಿಸಿಕೊಳ್ಳಲು ಆಧುನಿಕ ಕನ್ನಡ ಸಾಹಿತ್ಯ ವಾಗ್ವಾದ ಪರಂಪರೆಯ ಚರಿತ್ರೆಯನ್ನೇ ಬಿಚ್ಚಿಡುತ್ತಾ, ಅದರಲ್ಲಿ ತಮ್ಮ ಸಕ್ರಿಯ ಭಾಗವಹಿಸುವಿಕೆಯ ಸ್ವರೂಪವನ್ನು 'ವಾಕ್ಯ ವಾಕ್ಯಗಳ ವಾಚ್ಯಾರ್ಥ ಮತ್ತು ಧ್ವನ್ಯಾರ್ಥಗಳನ್ನು ಬಗೆ ಬಗೆದು...' ಇತ್ಯಾದಿಯಾಗಿ ಯಾವುದೋ ಭರ್ಜರಿ ಮಾಂಸಾಹಾರಿ ಭೋಜನದ ವರ್ಣನೆಯಂತೆ ರುಚಿಕಟ್ಟಾಗಿ ವಿವರಿಸುತ್ತಾ, ಆದರೆ ಅದಕ್ಕೆ ಇಲ್ಲಿ ಅವಕಾಶವೇ ನೀಡಿಲ್ಲವೆಂದು ಗೋಳಾಡುತ್ತಾ, ಮಂಜುನಾಥ್ ಲತಾ-ಐಜೂರ ಲೇಖನದ ಪ್ರಸ್ತುತತೆಯನ್ನೇ ತಳ್ಳಿಹಾಕಿದ್ದಾರೆ. ಆದರೆ ಅವರ ವಾಗ್ವಾದ ಪ್ರಿಯತೆ ಅವರನ್ನು ಮತ್ತೆ ಮತ್ತೆ ಕಾಡುತ್ತಾ, ಒಂದಲ್ಲ ಒಂದು ನೆಪ ಹುಡುಕಿಕೊಂಡು ಅವರು ಚರ್ಚೆಯಲ್ಲಿ ರಾಜಶೇಖರರ ಜೊತೆ ತಾವೂ ಪ್ರಮುಖ ಪಾತ್ರ ವಹಿಸಲು ನಿರಂತರವಾಗಿ ಹೆಣಗಿದ್ದಾರೆ! ಹಾಗಾದರೆ ಫಣಿರಾಜ್ ದೂಷಿಸುವ ಹಾಗೆ, ಮಂಜುನಾಥ್ ಲತಾ-ಐಜೂರರು ವಾಗ್ವಾದ ಭಂಜಕರೋ ಅಥವಾ ಜನಕರೋ? ಫಣಿರಾಜರೇ ಹೇಳಬೇಕು!

ಅದೆಲ್ಲ ಒತ್ತಟ್ಟಿಗಿರಲಿ, ವಾಗ್ವಾದ ಪ್ರಿಯ ಫಣಿರಾಜರಿಗೆ ನನ್ನ ಒಂದೇ ಪ್ರಶ್ನೆ: ನೀವು ಅನೇಕ ವಾಗ್ವಾದಗಳನ್ನು ಸುಪ್ರಸಿದ್ಧವೆಂದೂ, ಅಮೂಲ್ಯವೆಂದೂ ಹೆಸರಿಸಿದ್ದೀರಿ. ಆದರೆ ಇವು ಸುಪ್ರಸಿದ್ಧ, ಅಮೂಲ್ಯ ಯಾಕೆ? ಇವು ನಿಮ್ಮಂತಹವರ ವಾಗ್ವಾದಗಳ ತಾಂತ್ರಿಕ ಪರಿಣಿತಿ ಯನ್ನು ಚುರುಕುಗೊಳಿಸಿವೆಯೆಂದೋ ಅಥವಾ ಇವು ನಿಮ್ಮ ಸಾಹಿತ್ಯ ಗ್ರಹಿಕೆಯ ಸೂಕ್ಷ್ಮಗಳ ಮೇಲೆ ಏನಾದರೂ ನಿರ್ಣಾಯಕ ಪರಿಣಾಮ ಬೀರಿವೆಯೆಂದೋ? ನೀವು ಒಟ್ಟಿಗೇ ಮಾಸ್ತಿ, ಕುವೆಂಪು, ಲಂಕೇಶ್, ತೇಜಸ್ವಿ, ಸುಬ್ಬಣ್ಣ, ಅಡಿಗ, ಅನಂತಮೂರ್ತಿಯವರನ್ನೊಳಗೊಂಡ ವಾಗ್ವಾದಗಳನ್ನು ನಿಮ್ಮ ವಾಗ್ವಾದ ಪರಂಪರೆಯ ಬುಟ್ಟಿಯಲ್ಲಿಟ್ಟು, ಈ ಬುಟ್ಟಿ ನೋಡಿ ಎಷ್ಟು ಭದ್ರವಿದೆ, ಚೆಂದವಿದೆ ಎಂದು ಮಾತ್ರ ಕೂಗಿ ಕೂಗಿ ಹೇಳುತ್ತಿರುವಂತಿದೆ. ಮಾಸ್ತಿಗೆ ಕುವೆಂಪು ನೀಡಿದ ಉತ್ತರ, 'ಸಾಕ್ಷಿ'ಗೆ ಲಂಕೇಶ್ ಬರೆದ ಅಪ್ರಕಟಿತ ಪತ್ರ ಮತ್ತು ಅದನ್ನು ಕುರಿತ ಲಂಕೇಶರ ಟಿಪ್ಪಣಿ, ಅನಂತಮೂರ್ತಿಯವರನ್ನು ಮಾದರಿಯಾಗಿಟ್ಟುಕೊಂಡು ನವ್ಯದ ಬಗ್ಗೆ ತೇಜಸ್ವಿ ಬರೆದ ಟೀಕೆ ಮತ್ತು ಸುಬ್ಬಣ್ಣನವರ 'ಕುವೆಂಪುಗೊಂದು ಪುಟ್ಟ ಕನ್ನಡಿ' ಪುಸ್ತಕದ ಬಗ್ಗೆ ಲಂಕೇಶ್ ಮಾಡಿದ ವಿಮರ್ಶೆ ಇವುಗಳು 'ಆಹಾ ಎಂತಹ ವಾಗ್ವಾದಗಳು! ವಾಗ್ವಾದಗಳೆಂದರೆ ಹೀಗಿರಬೇಕು!!' ಎಂದು ಲೊಟ್ಟೆ ಹೊಡೆಯುತ್ತಾ ಚಪ್ಪರಿಸುವ ದಕ್ಕಷ್ಟೇ ಇವೆಯೋ ಅಥವಾ ಅವುಗಳಿಂದ ಏನನ್ನಾದರೂ ಕಲಿತು/ಪಡೆದು ಬೆಳೆದಿದ್ದೇವೆಯೋ? ವಾಗ್ವಾದವೆಂದರೆ, ನೀವು ಬಹು ಅಮೂಲ್ಯವೆಂಬಂತೆ ವರ್ಣಿಸಿರುವ 'ಬಹಳ ಪರಿಶ್ರಮದಿಂದ ವಿಮರ್ಶೆಯ ಪರಿಕಲ್ಪನೆಗಳನ್ನು ರೂಢಿಸುವ ಜೀವಮಾನದ ಕಸುಬಿ'ಗೆ ಒದಗಿ ಬರುವ ಜಡ ಪಂಡಿತ ಪಠ್ಯವಲ್ಲ ಎಂದು ನಾನು ಭಾವಿಸಿದ್ದೇನೆ.

ಮಂಜುನಾಥ್ ಮತ್ತು ಐಜೂರರ ಲೇಖನದ ಹಿಂದೆ ಈ ಪ್ರಶ್ನೆ, ಈ ಅನುಮಾನ ಇದ್ದಂತಿದೆ. ಆದರೆ ಕೂಸನ್ನು ಬಿಟ್ಟು ಮಾಸನ್ನು ಮೂಸಿನೋಡಿದಂತೆ, ಫಣಿರಾಜ್ ಮತ್ತು ರಾಜಶೇಖರರು ಪ್ರಸ್ತುತ ಬರಹದಲ್ಲಿನ ಅದರ ಅಸಾಧ್ಯ ವ್ಯಂಗ್ಯ-ಕಟಕಿಗಳಿಂದ ವಿಚಲಿತರಾಗಿ ಈ ಪ್ರಶ್ನೆ/ಅನುಮಾನಗಳನ್ನು ಗುರುತಿಸಲು ವಿಫಲರಾಗಿದ್ದಾರೆ. ಹಾಗಾಗಿ ಈ ಬರಹದಲ್ಲಿ ಅವರು ಬರೀ ದುರುದ್ದೇಶವನ್ನೇ ಕಂಡು ರೋಸಿ ಹೋದವರಂತೆ ವ್ಯಗ್ರರಾಗಿ, ತಾವೂ ಅದೇ ತೆರನ ವ್ಯಂಗ್ಯ ಕಟಕಿಗಳಿಗೆ ಶರಣಾಗಿದ್ದಾರೆ. ಆ ಮೂಲಕ ಚರ್ಚೆ ತಮ್ಮ ಹಿಡಿತವನ್ನು ಮೀರಿ ಬೆಳೆಯಲು ತಾವೇ ಆಹ್ವಾನ ನೀಡಿಕೊಂಡಿದ್ದಾರೆ. ಈ ಆಹ್ವಾನವನ್ನು ಅಗತ್ಯ ವೀರಾವೇಶದಿಂದಲೇ ರಾಜಶೇಖರರು ಎದುರಿಸಿದ್ದಾರೆ, ನಿಜ. ಆದರೆ, ವಸಂತ ಬನ್ನಾಡಿಯವರು ಈ ಚರ್ಚೆಯಲ್ಲಿ ಮಧ್ಯ ಪ್ರವೇಶಿಸಿ ಈ ಬರಹದ ಮೂಲ ಕಾಳಜಿಗಳನ್ನು ಹಲವು ಉದಾಹರಣೆಗಳ ಮೂಲಕ ಎತ್ತಿ ತೋರಿಸಿದಾಗಲೂ ಮತ್ತು ಇಂದಿನ ಸಂದರ್ಭದಲ್ಲಿ ಅವುಗಳನ್ನು ಚರ್ಚಿಸಬೇಕಾದ ಅನಿವಾರ್ಯತೆಯನ್ನು ಸೂಚಿಸಿದಾಗಲೂ(ಆದರೆ ಬನ್ನಾಡಿಯವರು, ಇಡೀ ದೇಶವೇ ಈಗ ಫೋರ್ಡ್ ಫೌಂಡೇಶನ್‌ನ ಅಪ್ಪನಂತಿರುವ ವಿಶ್ವ ಬ್ಯಾಂಕ್‌ನ ಹಣ ಮತ್ತು ನಿರ್ದೇಶನಗಳಲ್ಲಿ ನಡೆಯುತ್ತಿರುವಾಗ, ನೀನಾಸಂ ಯಾವುದೋ ಪುರಾತನ ಕಾಲದಲ್ಲಿ ಫೋರ್ಡ್ ಫೌಂಡೇಶನ್ ಹಣ ಪಡೆದದ್ದರ ಬಗ್ಗೆ ಈಗಲೂ ಅದನ್ನು ಅಟಕಾಯಿಸುವುದು ತರವಲ್ಲ ಎಂದೇ ನನ್ನ ಭಾವನೆ.) ಜಾಣತನದಿಂದ ಅವುಗಳಿಂದ ತಪ್ಪಿಸಿಕೊಂಡು ಮತ್ತೇನನ್ನೋ ಹೇಳತೊಡಗಿದಾಗ ಮಾತ್ರ ಅವರ ಇಡೀ ವಾದವೇ ಅನುಮಾನಾಸ್ಪದವೆನ್ನಿಸಬಿಡತೊಡಗುತ್ತದೆ.

ಉದಾಹರಣೆಗೆ, ಅಡಿಗರ ಕಾವ್ಯದ ಬಗ್ಗೆ ಅನಂತಮೂರ್ತಿಯವರು ಬರೆದ ಮುನ್ನುಡಿ ಕುರಿತು ಬನ್ನಾಡಿ ಮಾಡಿದ ಟೀಕೆಯ ಮೊದಲ ಭಾಗವನ್ನು('ಇವರ ಕಾವ್ಯ ಅರ್ಥವಾಗಲು ನಮ್ಮ ಆರ್ಯ ಸಂಪ್ರದಾಯದ ಪರಿಚಯವಿರಬೇಕು' ಇತ್ಯಾಗಿ) ನಿರ್ಲಕ್ಷಿಸುವ(ಇದು ಏಕೆನ್ನುವುದೇ ಇಲ್ಲಿ ಮುಖ್ಯ.) ಅವರು ಎರಡನೇ ಭಾಗವನ್ನಷ್ಟೇ(ಅಡಿಗ ಮತ್ತು ಬೇಂದ್ರೆಯವರ ಕಾವ್ಯದ ಶ್ರೇಷ್ಠತೆಯನ್ನು ಕುರಿತ

ಮಾತು) ಹಿಡಿದುಕೊಂಡು ತಮ್ಮ ಜಾಣತನವನ್ನೆಲ್ಲ ಬಳಸುತ್ತಾ ಬನ್ನಾಡಿಯವರ ಮೇಲೇ ವ್ಯಂಗ್ಯದ ಬಾಣ ಬಿಡುತ್ತಾರೆ. ಇನ್ನು 'ಕುವೆಂಪು ಕವಿಯಾದರೆ ನಾನು ಕವಿಯಲ್ಲ' ಎಂಬ ಅಡಿಗರು ಆಡಿದರೆನ್ನಲಾದ ಮಾತನ್ನು ಸಾಂಸ್ಕೃತಿಕ ರಾಜಕಾರಣದ ಉದಾಹರಣೆಯಾಗಿ ಬನ್ನಾಡಿ ಉಲ್ಲೇಖಿಸಿದರೆ, ರಾಜಶೇಖರ್ ಅದನ್ನು ನೇರವಾಗಿ ಜಾತಿನೆಲೆಗೇ ಒಯ್ದು, ಅಡಿಗರು ಅನೇಕ ಬ್ರಾಹ್ಮಣ ಕವಿಗಳನ್ನೂ ಹೀಗೆ ಹಂಗಿಸಿದ್ದಾರೆ ಎಂದು ಸಮರ್ಥಾಯಿಸಿ ಕೊಡುತ್ತಾರೆ. ಆ ಮೂಲಕ ಕಾವ್ಯ ಕುರಿತ ಅಡಿಗರ ನಿಲುವನ್ನು 'ಆಜ್ಞೆ' ಎಂಬಂತೆ ಒಪ್ಪಿಕೊಂಡು, ಕುವೆಂಪು ಕಾವ್ಯವನ್ನೇ ಇಡಿಯಾಗಿ ಅಲ್ಲಗಳೆಯುವ ಪ್ರಯತ್ನ ಮಾಡುತ್ತಾರೆ.(ಬನ್ನಾಡಿಯವರು ದೂರುವಂತೆ, ಎಸ್. ಮಂಜುನಾಥರ ಕವನಗಳು 'ದೇಶಕಾಲ'ದಲ್ಲಿ ಹೆಚ್ಚು ಪ್ರಕಟವಾಗಿರುವುದು, ಕುವೆಂಪು ಕುರಿತ ಅವರ ಇಂತಹುದೇ ನಂಬಿಕೆಯ ಕಾರಣದಿಂದಲೇ ಎಂದು ಬನ್ನಾಡಿಯವರೂ ಸೇರಿದಂತೆ ಯಾರಾದರೂ ಅನುಮಾನಪಟ್ಟರೆ ಅದನ್ನು ನಾನು ಒಪ್ಪುವುದಿಲ್ಲ.) ಮತ್ತೆ ಆ ಮೂಲಕ ರಾಜಶೇಖರರು ನಮ್ಮ ಸಾಹಿತ್ಯ ಪರಂಪರೆಯಲ್ಲಿ 'ಕವಿ' ಎಂದರೆ ಏನು, ಅದರಲ್ಲಿ ಯಾವೆಲ್ಲ ಆಯಾಮಗಳು ಒಳಗೊಳ್ಳುತ್ತವೆ ಎಂಬುದರ ಪರಿವೆಯೇ ಇಲ್ಲದಂತೆ, ತಾವು 'ವೈಯಕ್ತಿಕ' ಎಂಬ ಶಬ್ದದ ಅರ್ಥವಲಯವನ್ನೇ ಸಂಕುಚಿತಗೊಳಿಸಿದ ಆಧುನಿಕ ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಸೆರೆಯಾಳಾಗಿರುವುದನ್ನು ಹೆಮ್ಮೆಯಿಂದ ಒಪ್ಪಿಕೊಂಡಂತೆ ಕಾಣುತ್ತದೆ.

ಒಂದೇ ಕಾಲದಲ್ಲಿ ಬಿಡುಗಡೆಯಾದ 'ಸಂಸ್ಕಾರ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳ ಬಗ್ಗೆ 'ಸಾಕ್ಷಿ'ಯಲ್ಲಿ ತಲಾ ಎಷ್ಟೆಷ್ಟು ಲೇಖನಗಳು ಪ್ರಕಟವಾಗಿವೆ ಸ್ವಲ್ಪ ನೋಡಿ ಎಂದು ಬನ್ನಾಡಿ ಹೇಳಿದರೆ, ರಾಜಶೇಖರ್ ಮುಗುಮ್ಮಾಗಿ 'ಮಲೆಗಳಲ್ಲಿ ಮದುಮಗಳು'ವಿನ ಸಾಹಿತ್ಯ ಶ್ರೇಷ್ಠತೆ ಪ್ರಶ್ನಾತೀತವಾಗಿತ್ತು' ಎಂದು ತಾವೀಗ ಸರ್ಟಿಫಿಕೇಟ್ ಕೊಟ್ಟು, 'ಸಂಸ್ಕಾರ'ದ ಬಗ್ಗೆ ಲೇಖನಗಳ ಮಹಾಪೂರವೇ ಹರಿದು ಬರಲು ಅದು ಉಂಟು ಮಾಡಿದ ಕೋಲಾಹಲವೇ ಕಾರಣವೆಂದು ಹೇಳುತ್ತಾರೆ. ಎಂತಹ ಕೋಲಾಹಲ, ಯಾರ ಮಧ್ಯೆ? ಅದು ಕಾದಂಬರಿಯ ಒಳಗಿಗೆ ಸಂಬಂಧಿಸಿದ್ದೋ ಅಥವಾ ಹೊರಗೆ ಮೂಡಿದ್ದೋ? ಇದನ್ನು ಮಾತ್ರ ಅವರು ಹೇಳುವುದಿಲ್ಲ! 'ಮಲೆಗಳಲ್ಲಿ ಮದುಮಗಳು' ಬಗ್ಗೆ ಹೆಚ್ಚು ಚರ್ಚೆಯಾಗದ್ದಕ್ಕೆ ಕಾರಣ, ಅದರ ವಸ್ತು ವಿವಾದಾತ್ಮಕವಾಗಿಲ್ಲದಿದ್ದುದಂತೆ! ಸಾಹಿತ್ಯ ವಿಮರ್ಶೆ ತನ್ನನ್ನು ತಾನು ಇಂತಹ ಕೋಲಾಹಲ–ವಿವಾದಗಳಿಗೆ ಗಂಭೀರವಾಗಿ ತೆತ್ತುಕೊಳ್ಳಬಹುದೆನ್ನುವುದು 'ಸಾಕ್ಷಿ' ಹೇಳಿದ ಸಾಹಿತ್ಯ ಪಾಠವೇ ಆಗಿದ್ದರೆ, ರಾಜಶೇಖರ್ ಈ ಪತ್ರಿಕೆ ಮತ್ತು ಅಡಿಗರ ಬಗ್ಗೆ ಇನ್ನೊಂದೆಡೆ ಮಾಡುವ 'ಎಂತಹ ದೊಡ್ಡ ಕವಿ! ಎಂತಹ ದೊಡ್ಡ ಪತ್ರಿಕೆ!' ಎಂಬ ಉದ್ಗಾರ ನಮ್ಮಲ್ಲಿ ಆಕಳಿಕೆಯನ್ನು ಮಾತ್ರ ಹುಟ್ಟಿಸಬಲ್ಲುದು.

'ಮಲೆಗಳಲ್ಲಿ ಮದುಮಗಳು'ವಿನಂತಹ ಮೊದಲ ನೋಟಕ್ಕೇ ಕನ್ನಡಕ್ಕೆ ಸಂಪೂರ್ಣ 'ಹೊಸತು' ಎನ್ನಿಸುವ ಕಾದಂಬರಿ ಬಂದಾಗ ಅದರ 'ಹೊಸತು'ಗಳನ್ನು ವಿವರವಾಗಿ ಗುರುತಿಸುವ ವಿಮರ್ಶಾತ್ಮಕ ಪ್ರಯತ್ನವಿರಲಿ, ಅದರ ಬಗ್ಗೆ ಅಗತ್ಯ('ಸಂಸ್ಕಾರ'ಕ್ಕೆ ತೋರಿದ ಹತ್ತನೇ ಒಂದು ಭಾಗದಷ್ಟಾದರೂ) ಕುತೂಹಲವನ್ನೂ ತಾಳಲಾಗಲಿಲ್ಲವೆಂದರೆ 'ಸಾಕ್ಷಿ' ಮತ್ತು ಅದರ ಬಳಗದ ನೋಟಕ್ರಮದಲ್ಲೇ ಮೂಲ ದೋಷವಿದ್ದಿರಬಹುದು ಎಂಬ

ಡಾ. ಡಿ.ಆರ್ ನಾಗರಾಜ್

ಸಂದೇಹ ಈಗಲಾದರೂ ರಾಜಶೇಖರರಿಗೆ ಉಂಟಾಗಲಿಲ್ಲವೆಂದರೆ ಏನು ಹೇಳುವುದು? ರಾಜಶೇಖರ್ ಕುವೆಂಪು ಬಗೆಗೆ ಆಗ ವಿಫುಲವಾಗಿ ಬರೆದ ವಿಮರ್ಶಕರನ್ನು 'ವಂದಿ ಮಾಗಧರು' ಎಂದು ಕರೆಯುತ್ತಾರೆ. ಎಂ.ಜಿ. ಕೃಷ್ಣಮೂರ್ತಿ ಬ್ರಾಹ್ಮಣರೂ, ಇಂಗ್ಲಿಷ್ ಅಧ್ಯಾಪಕರೂ ಆಗಿದ್ದರೂ ಕೂಡ ಕುವೆಂಪು ಅವರನ್ನು ಓದಬೇಕಾದ, ಅರ್ಥೈಸಿಕೊಳ್ಳಬೇಕಾದ ಹೊಸ ಬಗೆಗಳನ್ನು ಅನಾವರಣ ಮಾಡಿದರಂತೆ! (ರಾಜಶೇಖರ್‌ರಿಂದ ಇಂತಹ ಮಾತುಗಳನ್ನು ಕೇಳಿ ನಾನು ಗಾಬರಿಗೊಂಡಿದ್ದೇನೆ ಎಂದಷ್ಟೇ ಇಲ್ಲಿ ಹೇಳಬಲ್ಲೆ!) ಆದರೆ ಕುವೆಂಪು ಅವರನ್ನು ಓದಬೇಕಾದ, ಅರ್ಥೈಸಿಕೊಳ್ಳಬೇಕಾದ ಬಗೆಯನ್ನು ಸಕಲ ಶಾಸ್ತ್ರೀಯ ಹಿನ್ನೆಲೆ ಮತ್ತು ಸಾಹಿತ್ಯಿಕ ಒಳನೋಟಗಳೊಂದಿಗೆ ಅದ್ಭುತವಾಗಿ ನಿರೂಪಿಸಿರುವವರು ಬಹುಶಃ ರಾಜಶೇಖರ್ ಈ 'ವಂದಿ ಮಾಗಧ'ರಲ್ಲಿ ಒಬ್ಬರೆಂದು ಪರಿಗಣಿಸುವ 'ಸುಜನಾ' ಅವರೆಂಬುದು ಅವರಿಗೆ ತಿಳಿದಿರಲಾರದು. ಇದಕ್ಕೆ ಅವರು ಶೂದ್ರರೂ, ಕನ್ನಡ ಅಧ್ಯಾಪಕರೂ ಆಗಿರುವುದು ಕಾರಣವಿರಲಾರದು ಎಂದು ನಾನು ಭಾವಿಸಿದ್ದೇನೆ.

ಒಂದೇ ಕಾಲದಲ್ಲಿ ಬಿಡುಗಡೆಯಾದ 'ಸಂಸ್ಕಾರ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳ ಬಗ್ಗೆ 'ಸಾಕ್ಷಿ'ಯಲ್ಲಿ ತಲಾ ಎಷ್ಟೆಷ್ಟು ಲೇಖನಗಳು ಪ್ರಕಟವಾಗಿವೆ ಸ್ವಲ್ಪ ನೋಡಿ ಎಂದು ಬನ್ನಾಡಿ ಹೇಳಿದರೆ, ರಾಜಶೇಖರ್ ಮುಗುಮ್ಮಾಗಿ 'ಮಲೆಗಳಲ್ಲಿ ಮದುಮಗಳು'ವಿನ ಸಾಹಿತ್ಯ ಶ್ರೇಷ್ಠತೆ ಪ್ರಶ್ನಾತೀತವಾಗಿತ್ತು' ಎಂದು ತಾವೀಗ ಸರ್ಟಿಫಿಕೇಟ್ ಕೊಟ್ಟು, 'ಸಂಸ್ಕಾರ'ದ ಬಗ್ಗೆ ಲೇಖನಗಳ ಮಹಾಪೂರವೇ ಹರಿದು ಬರಲು ಅದು ಉಂಟು ಮಾಡಿದ ಕೋಲಾಹಲವೇ ಕಾರಣವೆಂದು ಹೇಳುತ್ತಾರೆ. ಎಂತಹ ಕೋಲಾಹಲ, ಯಾರ ಮಧ್ಯೆ? ಅದು ಕಾದಂಬರಿಯ ಒಳಗಿಗೆ ಸಂಬಂಧಿಸಿದ್ದೋ ಅಥವಾ ಹೊರಗೆ ಮೂಡಿದ್ದೋ? ಇದನ್ನು ಮಾತ್ರ ಅವರು ಹೇಳುವುದಿಲ್ಲ!

'ದೇಶಕಾಲ' ಅದರ ಬೈಂಡ್ ಒಳಗಷ್ಟೇ ಇಲ್ಲ, ಅದರ ಹೊರಕ್ಕೂ ಒಂದು 'ಭಾವುಕ ಕೂಟ'ವಾಗಿ ಚಾಚಿಕೊಂಡಿದೆ ಎಂದು ಬನ್ನಾಡಿ ಹೇಳಿದರೆ, ಅದನ್ನು ಕುಚೇಷ್ಟೆಯಿಂದ ಅರ್ಥೈಸಿ ವ್ಯಂಗ್ಯವಾಡುವ ರಾಜಶೇಖರ್; ತೇಜಸ್ವಿ ನಿಧನರಾದ ಸಂದರ್ಭದಲ್ಲಾದರೂ ಅವರ ಬಗ್ಗೆ ಈ ಪತ್ರಿಕೆಯಲ್ಲಿ ಒಂದು ಲೇಖನವೂ ಬರಲಿಲ್ಲವೇಕೆ(ನನ್ನ ಪ್ರಕಾರ ಈ ಪ್ರಶ್ನೆಯೇ ಅಸಂಗತ.) ಎಂದು ಕೇಳಿದಾಗ ಮಾತ್ರ ಎಚ್ಚರದಪ್ಪಿಯೋ ಏನೋ (ಪಾಪ, ಅವರನ್ನು ಇಷ್ಟು ಕಾಡಿದರೆ ಇನ್ನೇನಾದೀತು!) ಟಿ.ಪಿ. ಅಶೋಕ ತೇಜಸ್ವಿ ಬಗ್ಗೆ ಪ್ರತ್ಯೇಕ ಪುಸ್ತಕವನ್ನೇ ಬರೆದಿಲ್ಲವೇ, ಅವರ ಸಾಹಿತ್ಯದ ಬಗ್ಗೆ ನೀನಾಸಂ ಅನೇಕ ಅಧ್ಯಯನ ಶಿಬಿರಗಳನ್ನು ನಡೆಸಿಲ್ಲವೇ ಎಂದು ಕೇಳುತ್ತಾರೆ! ಇನ್ನು ಬನ್ನಾಡಿಯವರು ಇದೇ ಟಿ.ಪಿ. ಅಶೋಕರ ತಥಾಕಥಿತ 'ವಿಮರ್ಶಾ ರಾಜಕಾರಣ'ದ ಪ್ರಸ್ತಾಪ ಮಾಡಿದರೆ, ಫಣಿರಾಜರು ಅನಾಮತ್ತಾಗಿ ಅವರ ರಕ್ಷಣೆಗೆ ಧಾವಿಸಿ, ಇವರು ಇದೀಗ ತಾನೇ ಎಚ್.ಎಸ್. ಶಿವಪ್ರಕಾಶ್ ಅವರ 'ಸಮಗಾರ ಭೀಮವ್ವ' ಪದ್ಯವನ್ನು 'ಸಂಯುಕ್ತ ಕರ್ನಾಟಕ'ದಲ್ಲಿ ಕನ್ನಡದ ಶ್ರೇಷ್ಠ ಪದ್ಯವೆಂದು ಗುರುತಿಸಿದ್ದಾರಲ್ಲಾ ಎಂದು ಉತ್ತರಿಸುತ್ತಾರೆ! (ಈ ಇಡೀ ಸಂದರ್ಭ, ನಾವು ಶಾಲಾ ಕಾರ್ಯಕ್ರಮಗಳಲ್ಲಿ ನೋಡಿ ನಲಿಯುತ್ತಿದ್ದ, ಏನೋ ಕೇಳಿದರೆ ಏನೋ ಉತ್ತರಿಸುವ 'ಕಿವುಡು ಬ್ರಾಹ್ಮಣರ ಪ್ರಹಸನ' ನೆನಪಿಗೆ ಬರುತ್ತದೆ!) ಆದರೆ ಈ ವಿಶೇಷಾಂಕದಲ್ಲಿ ಎಚ್.ಎಸ್.ಶಿವಪ್ರಕಾಶರ ಪದ್ಯವೇಕಿಲ್ಲ(ಎಂಬ ಮತ್ತೊಂದು ಅಸಂಗತ) ಪ್ರಶ್ನೆಗೆ ಉತ್ತರ ಕೊಡುವಾಗ, ಶಿವಪ್ರಕಾಶ್ ತಮ್ಮದೇ ಕಾರಣಗಳಿಗಾಗಿ 'ದೇಶಕಾಲ'ಕ್ಕೆ ಬರೆಯಬೇಕೆಂಬ ಕೋರಿಕೆಯನ್ನು ನಿರಾಕರಿಸಬಹುದು ಎಂಬ ಅನುಮಾನ ಯಾರಿಗೂ ಬಾರದಂತೆ ಇವರು ವಹಿಸಿರುವ ಎಚ್ಚರಿಕೆ ಮಾತ್ರ ಗಮನಾರ್ಹವಾಗಿದೆ!

ಇದೇ ರೀತಿಯಲ್ಲಿ ವಾದ ಮುಂದುವರೆಸುತ್ತಾ, ಜಯಂತ ಕಾಯ್ಕಿಣಿಯವರು ಲೇಖಕರನ್ನು ಪರಿಚಯಿಸುವ ರೀತಿಯ ಬಗ್ಗೆ ಟೀಕೆ ಮಾಡಿದವರನ್ನು, ಅವರಿಗೆ ಅದರಲ್ಲೇ ಇರುವ ಜಯಂತರ 'ಕೋಮಲ ಗಾಂಧಾರ'ವೆಂಬ ಒಳ್ಳೆಯ ಕಥೆ ಕಾಣುವುದಿಲ್ಲವೇಕೆ ಎಂದು ರಾಜಶೇಖರ್ ಪ್ರಶ್ನಿಸುತ್ತಾರೆ. ನಿಜ ರಾಜಶೇಖರ್, ಜಯಂತರ ಈ ಕಥೆ ಚೆನ್ನಾಗಿದೆ; ತುಂಬಾನೇ ಚೆನ್ನಾಗಿದೆ. ಆದರೆ ಅದು ಅವರು ಲೇಖಕರನ್ನು ಪರಿಚಯಿಸುವ ಹುಸಿ ರೀತಿ ನೀತಿಗಳನ್ನು ರದ್ದು ಮಾಡಿಬಿಡುವುದೇ? ಒಂದು ಗಂಭೀರ ಸಾಹಿತ್ಯ ಸಂಚಿಕೆಯಲ್ಲಿ ಲೇಖಕರ ಪರಿಚಯವನ್ನೂ ವಿಮರ್ಶೆಯ ಜವಾಬ್ದಾರಿಯಿಂದಲೇ ಮಾಡಬೇಕಾಗುತ್ತದೆ; ಸಿನೆಮಾ ಹಾಡಿನ ಹುಸಿ ಶೈಲಿ ಅವರ ಸಾಹಿತ್ಯಿಕ ಪ್ರಾಮಾಣಿಕತೆಯನ್ನೇ ಅನುಮಾನಾಸ್ಪದಗೊಳಿಸಬಲ್ಲುದಾಗಿದೆ. ಹೀಗೆ ರಾಜಶೇಖರ್(ಜೊತೆಗೆ ಫಣಿರಾಜ್) ತಾವು ಇಲ್ಲವೆಂದು ಹೇಳುವ 'ಭಾವುಕ ಕೂಟ' 'ಭಾವುಕ ನೆಂಟಸ್ತಿಕೆ' ಇತ್ಯಾದಿಗಳು ಇದ್ದರೂ ಇರಬಹುದೇನೋ ಎಂಬ ಅನುಮಾನವನ್ನು ಓದುಗರಲ್ಲಿ ಹುಟ್ಟಿಸುವ ರೀತಿಯಲ್ಲಿ ವಾದ ಮಾಡುವುದನ್ನು ಕಂಡು ಪರಮಾಶ್ಚರ್ಯವಾಗುತ್ತದೆ.

ಈ ಮೊದಲೇ ಹೇಳಿದಂತೆ, ಚರ್ಚೆ ಎಂದರೆ ಕೋರ್ಟು ಕಛೇರಿಗಳ ನಡಾವಳಿ ಎಂಬಂತೆ, ಅದರಲ್ಲಿ ಅನ್ನಿಸಿಕೆ-ಅಭಿಪ್ರಾಯಗಳಿಗೆ ಅವಕಾಶವೇ ಇಲ್ಲವೆಂದು ಸಾರುತ್ತಾ, ರಾಜಶೇಖರ್ ಎಲ್ಲದಕ್ಕೂ ಪತ್ರದ ಸಾಕ್ಷ್ಯ ಕೇಳುತ್ತಾರೆ. ಆದರೆ ತಾವು ಮಾತ್ರ 'ದೇಶಕಾಲ'ದ ವಿಶೇಷಾಂಕವನ್ನು, ಅದರ ಚಿಲ್ಲರೆ ಮಾರಾಟಗಾರರಂತೆ ಅದರ ಪರಿವಿಡಿಯನ್ನು ಪಟಪಟನೆ ಹೇಳಿ, 'ಇಷ್ಟು ತಿಳಿದರೆ ಸಾಕು, ಯಾರಿಗಾದರೂ ಇದು ಯಾವುದೇ ದೀಪಾವಳಿ ವಿಶೇಷಾಂಕಕ್ಕೆ ಹೋಲಿಸಿದರೂ ವಿಶಿಷ್ಟವಾಗಿ ನಿಲ್ಲುತ್ತದೆ ಎಂದು ಗೊತ್ತಾಗಲು!' ಎಂಬಂತೆ ಒಂದೇ ವಾಕ್ಯದಲ್ಲಿ ತೀರ್ಪು ಘೋಷಿಸಿಬಿಡುತ್ತಾರೆ! (ತಾವೇ ಹೇರುವ ಚರ್ಚೆಯ ನಿರ್ಬಂಧಗಳು ಇಲ್ಲಿ ಅವರ ಅರಿವಿಗೆ ಬಂದಿದೆ ಎಂದು ಭಾವಿಸೋಣ!) ಇನ್ನು ಬನ್ನಾಡಿಯವರು ನೀನಾಸಂ ಆವರಣದಲ್ಲಿ ತಮಗೆ ಉಸಿರುಗಟ್ಟಿದಂತಾಗುತ್ತದೆ ಎಂದರೆ, ರಾಜಶೇಖರರು ಅದಕ್ಕೂ ಪತ್ರದ ಸಾಕ್ಷ್ಯ ಕೇಳಲು ಹವಣಿಸುತ್ತಾರೆಂದರೆ ಏನು ಹೇಳುವುದು? ರಾಜಶೇಖರರಿಗೆ ಚರ್ಚೆಯಲ್ಲಿ ರೂಪಕ ಭಾಷೆಯೂ ನಿಷಿದ್ಧವೇ? ಇರಲಿ, ಇನ್ನು ಮುಂದೆ ಬನ್ನಾಡಿಯವರಿಗೆ ಎಂದಾದರೂ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದೆನಿಸಿ, ಅದಕ್ಕಾಗಿ ಉಸಿರುಗಟ್ಟಿ ಸಾಯುವ ಮಾರ್ಗವನ್ನೇ ಆಯ್ದುಕೊಂಡು ನೀನಾಸಂಗೆ ಹೋದರೆ, ರಾಜಶೇಖರರಿಗೆ ಸಾಕ್ಷ್ಯ ಒದಗಿಸುವ ದೃಷ್ಟಿಯಿಂದಲಾದರೂ ಜೊತೆಯಲ್ಲಿ ವೈದ್ಯರೊಬ್ಬರನ್ನು ಕರೆದುಕೊಂಡು ಹೋಗುವುದು ಒಳ್ಳೆಯದು!

-೫-

ಕೊನೆಗೆ ರಾಜಶೇಖರ್ ಸಾಹಿತ್ಯ ನೆಲೆಯ ಚರ್ಚೆಯಿಂದ ಸುಸ್ತಾದವರಂತೆ ಸಾಮಾಜಿಕ ನೆಲೆಗೆ ಹೊರಳುತ್ತಾರೆ. ಬಸವಣ್ಣನ ಉದಾಹರಣೆ ಕೊಟ್ಟು, 'ಬ್ರಾಹ್ಮಣ' ಮತ್ತು 'ಬ್ರಾಹ್ಮಣ್ಯ'ದ ನಡುವೆ ವ್ಯತ್ಯಾಸವೇ ಇಲ್ಲವೇ ಎಂದು (ಎಚ್ಚೆಸ್ವಿಯವರ ವಾದದ ಬೆಂಬಲದೊಂದಿಗೆ) ಆಶ್ಚರ್ಯಪಡುತ್ತಾ, ಬ್ರಾಹ್ಮಣನಿಗೆ ಬದಲಾಗುವ ಸಾಧ್ಯತೆಗಳನ್ನೇ ಅಲ್ಲಗೆಳೆಯಲಾಗುತ್ತಿದೆಯೇ ಎಂದು ಕೇಳಿದಾಗ ಮಾತ್ರ ನಿಜವಾಗಿಯೂ ಬೇಸರವೆನಿಸುತ್ತದೆ. ಆದರೆ, ಬ್ರಾಹ್ಮಣರನ್ನು ಹೀಗೇ ಕಾಡಿದ ಲೋಹಿಯಾವಾದಿಗಳು ನೇಪಥ್ಯಕ್ಕೆ ಸರಿದ ಮೇಲೆ ಬನ್ನಾಡಿಯಂಥವರು ಆ ಕೆಲಸವನ್ನು ಕೈಗೆತ್ತಿಕೊಂಡಂತಿದೆ ಎಂದು ಅವರು ಹೇಳಿದಾಗ, ಈ ಬೇಸರ ಮರುಕವಾಗಿ ಮಾರ್ಪಡುತ್ತದೆ. ಅದೇನೇ ಇರಲಿ, ಅಂತೂ ಈ ಮೂಲಕ ರಾಜಶೇಖರ್ ನೇಪಥ್ಯಕ್ಕೆ ಸರಿದಿರುವುದು ಲೋಹಿಯಾವಾದಿಗಳೇ ಹೊರತು ಲೋಹಿಯಾವಾದವಲ್ಲ ಎಂಬುದನ್ನು ಗುರುತಿಸಿದ್ದಾರೆ. ಅದಕ್ಕಾಗಿ ಲೋಹಿಯಾವಾದಿಗಳೆನಿಸಿಕೊಂಡವರೆಲ್ಲರ ಪರವಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಜೊತೆಗೆ, ಇದಕ್ಕೆಲ್ಲ ಕಾರಣ; ಲೋಹಿಯಾ ಎತ್ತಿದ್ದ ಜಾತಿ ಪದ್ಧತಿಯ ಹಿಂದಿನ ರಾಜಕಾರಣದ ಸಂಕೀರ್ಣ ಪ್ರಶ್ನೆ ಕನ್ನಡ ಸಾಹಿತ್ಯ-ಸಂಸ್ಕೃತಿ ಸಂದರ್ಭದಲ್ಲಿ ಇನ್ನೂ ಸಂಪೂರ್ಣ ಪರಿಹಾರವಾಗದಿರುವುದೇ ಆಗಿದೆ ಎಂದು ರಾಜಶೇಖರ್‌ಗೆ ತಿಳಿಸಬಯಸುತ್ತೇನೆ.

ಈ ಪರಿಸ್ಥಿತಿಗೆ 'ಸಾಮಾಜಿಕ ನ್ಯಾಯ'ವನ್ನು ಕೇವಲ ಕೆಳಜಾತಿವಾದವಾಗಿ ಮಾರ್ಪಡಿಸಿದ ಹಿಂದುಳಿದ ಜಾತಿಗಳ ಕಳ್ಳ ಪ್ರಗತಿಪರರು ಎಷ್ಟು ಕಾರಣರೋ (ಬರಗೂರು ರಾಮಚಂದ್ರಪ್ಪನವರ ಇಲ್ಲಿನ ಪ್ರತಿಕ್ರಿಯೆಯ ಪ್ರಕಾರ, 'ಕರ್ನಾಟಕದ ಮಟ್ಟಿಗೆ ಮೇಲ್ಜಾತಿ ಮತ್ತು ಮಧ್ಯಮ ಪ್ರಬಲ ಜಾತಿಗಳ ನಾಯಕತ್ವದ ಮನಸ್ಸು ಮಲಿನಗೊಂಡಿದೆ.' ಆಹಾ! ಎಂತಹ ಒಕ್ಕಣ್ಣಿನ ಸತ್ಯ!) ಅಷ್ಟೇ ಕಾರಣರು, ಎಚ್ಚೆಸ್ವಿಯವರು ವಿವರಿಸುವಂತಹ ನವೋದಯ ಸಾಹಿತಿಗಳು 'ಜಾತಿ ಮೀರಿದ' ಮಾದರಿಯನ್ನು ಎತ್ತಿ ಹಿಡಿಯುತ್ತಾ ಜನಿವಾರಗಳನ್ನು ಸಂದರ್ಭಾನುಸಾರ ಬಿಚ್ಚಿ ಹಾಕಿಕೊಳ್ಳುವ(ಹಾಗೂ ತಮ್ಮ ಮಕ್ಕಳು ಮತ್ತು ಮೊಮ್ಮಕ್ಕಳಿಗೂ ತಾವೇ ಮುಂದೆ ನಿಂತು ಹಾಕಿಸುವ) ಆತ್ಮದ್ರೋಹಿ ಬ್ರಾಹ್ಮಣ ಬಂಡಾಯಗಾರರೂ ಕಾರಣ. ಅನಂತಮೂರ್ತಿಯವರಂತಹ ಅನಂತಮೂರ್ತಿಯವರೇ ಈಗ ನಮ್ಮ ಜಾತಿ ವಿರೋಧಿ ಆಂದೋಲನ (ಅಂತಹುದೇನಾದರೂ ಈಗ ಇದ್ದರೆ!) ಜಾತಿಗಳು ಸೃಷ್ಟಿಸಿದ ಸಾಂಸ್ಕೃತಿಕ ನೆಲೆಗಳ ವೈವಿಧ್ಯಗಳ ನಾಶಕ್ಕೆ ಕಾರಣವಾಗಬಾರದು ಎಂದು ಕರೆ ಕೊಡಬಲ್ಲಂತಹ ತಲೆಕೆಳಗಾದ ಸೌಂದರ್ಯ ಕಲ್ಪನೆಯನ್ನು (ಜಾತಿಯಿಂದ ಈ 'ಸಾಂಸ್ಕೃತಿಕ' ವೈವಿಧ್ಯವೋ ಅಥವಾ ಈ 'ಸಾಂಸ್ಕೃತಿಕ' ವೈವಿಧ್ಯದಿಂದ ಜಾತಿಯೋ?) ಕಟ್ಟಿಕೊಡಬಲ್ಲರೆಂದರೆ, ಬ್ರಾಹ್ಮಣ್ಯವೆಂಬುದು ಯಾವ ಯಾವಾಗ ಯಾವ್ಯಾವ ರೂಪಗಳನ್ನು ತಾಳಬಲ್ಲುದೆಂಬುದನ್ನು ರಾಜಶೇಖರ್‌ಯೋಚಿಸಬಲ್ಲರೆ?[8]

ಇಷ್ಟೆಲ್ಲ ಪ್ರಶ್ನೆ-ಗೊಂದಲಗಳು ಇನ್ನೂ ಉಳಿದಿರುವಾಗ, ಅಡಿಗ-ಸುಬ್ಬಣ್ಣ-ಅನಂತಮೂರ್ತಿ ಒಂದು ದೀರ್ಘಾವಧಿಯವರೆಗೆ ಪರಸ್ಪರ ಬೆನ್ನು ಕೆರೆದುಕೊಂಡಿದ್ದನ್ನು ಕಂಡವರಲ್ಲಿ (ಸುಬ್ಬಣ್ಣ ಅವರು ಅನಂತಮೂರ್ತಿಯವರ ಮೊದಲ ಮೂರು ಕಾದಂಬರಿಗಳನ್ನು 'ತ್ರಿವಳಿ'ಯಾಗಿ ನೋಡಿ ಬರೆದಿರುವ ದೀರ್ಘ ಲೇಖನವನ್ನು ಗಮನಿಸಿರುವವರಿಗೆ ವಿಮರ್ಶೆಯಲ್ಲಿ ಕಲ್ಪನೆಗೂ ಎಷ್ಟು ಅಗಾಧ ಅವಕಾಶವಿದೆ ಎಂದು ಆಶ್ಚರ್ಯವಾಗುತ್ತದೆ!) ಕೆಲ 'ಜಾತಿ ಜನಗಣತಿವಾದಿ'ಗಳಿಗೆ ಅದರಲ್ಲಿ ದೂರದಲ್ಲಾದರೂ 'ಜಾತಿ' ಗೋಚರವಾದರೆ ಆಶ್ಚರ್ಯವೇನು? ಈಗಲೂ ಅಕ್ಷರ ಪ್ರಕಾಶನದ ಪ್ರಕಟಣೆಗಳ ಪಟ್ಟಿ ನೋಡಿದರೆ, ಅದರಲ್ಲಿ ಒಂದು ಜಾತಿಯ ಲೇಖಕರೇ ಪ್ರಧಾನವಾಗಿ ಗೋಚರವಾಗುತ್ತಾರೆ ಏಕೆ ಎಂದು ಯಾರಾದರೂ(ಆತ ಜಾತಿವಾದಿಯೇ ಆಗಿರಲಿ) ಕೇಳಿದರೆ, ಅದಕ್ಕೆ ಗುಣಮಟ್ಟದ ಲೇಖಕರು ಆ ಒಂದು ಜಾತಿಯಲ್ಲೇ ಹೆಚ್ಚಿದ್ದಾರೆ ಎಂದು ಯಾರಾದರೂ ಉತ್ತರ ಕೊಡಬಲ್ಲರೇ? ಅಥವಾ ರಾಜಶೇಖರ್‌ರಂತಹವರು ಅದೊಂದು ಸರ್ಕಾರಿ ಅನುದಾನಕ್ಕೆ ಕೈಯೊಡ್ಡದ ಖಾಸಗಿ ಪ್ರಕಾಶನ;ಅದಕ್ಕೆ ಈ ಪ್ರಶ್ನೆ ಹಾಕಬಾರದು ಎಂದು ಉತ್ತರ ಹೇಳುವುದರ ಜೊತೆಗೆ, ಅದರಿಂದ ನನ್ನ ಒಂದು ಪುಸ್ತಕವೂ ಪ್ರಕಟವಾಗಿರುವುದರಿಂದ ಅವರ ಪರವಾಗಿ ಉತ್ತರ ಕೊಡುವುದು ನನ್ನ ಜವಾಬ್ದಾರಿ ಎಂದೂ ಸೇರಿಸುವರೋ? 'ವಿಜಯ ಕರ್ನಾಟಕ'ದ ಪ್ರತಾಪ ಸಿಂಹ ತನ್ನ ಪಂಥಕ್ಕೆ ವಿರುದ್ಧವಾದವರ ಮೇಲೆಲ್ಲ ಕೆಸರೆರಚುತ್ತಿದ್ದಾಗ ಸುಮ್ಮನಿದ್ದ ಫಣಿರಾಜರಂತಹವರು, ಅದೊಮ್ಮೆ ಅನಂತಮೂರ್ತಿಯವರ ಮೇಲೆ ಬಿದ್ದಾಗ ಮಾತ್ರ ಹೌಹಾರಿ ಸಹಿ ಸಂಗ್ರಹಕ್ಕೆ ಮುಂದಾಗುತ್ತಾರೆಂದರೆ (ಈ ಸಂಬಂಧ ನನ್ನ ಸಹಿಗಾಗಿ ಫಣಿರಾಜ್ ಅಂತರ್ಜಾಲದ ಮೂಲಕ ನನ್ನೊಂದಿಗೆ ನಡೆಸಿದ 'ವಾಗ್ವಾದ' ಇಂತಹ ಇನ್ನೊಂದು ಚರ್ಚೆಗೆ ಕಾರಣವಾಗಬಹುದಷ್ಟು ದೊಡ್ಡದಾಗಿದೆ!) ಅದನ್ನು ಏನೆಂದು ಅರ್ಥೈಸುವುದು? ಇದಕ್ಕೆ ಬಹುಶಃ ಇವರು ತಮ್ಮ ವಾದಗಳನ್ನು ವಿಷದೀಕರಿಸಲು ಆಗಾಗ್ಗೆ ಉಲ್ಲೇಖಿಸುವ



ಡಾ. ಯು.ಆರ್. ಅನಂತಮೂರ್ತಿ

'ಸಾಮಾಜಿಕ ನ್ಯಾಯ'ವನ್ನು ಕೇವಲ ಕೆಳಜಾತಿವಾದವಾಗಿ ಮಾರ್ಪಡಿಸಿದ ಹಿಂದುಳಿದ ಜಾತಿಗಳ ಕಳ್ಳ ಪ್ರಗತಿಪರರು ಎಷ್ಟು ಕಾರಣರೋ (ಬರಗೂರು ರಾಮಚಂದ್ರಪ್ಪನವರ ಇಲ್ಲಿನ ಪ್ರತಿಕ್ರಿಯೆಯ ಪ್ರಕಾರ, 'ಕರ್ನಾಟಕದ ಮಟ್ಟಿಗೆ ಮೇಲ್ಜಾತಿ ಮತ್ತು ಮಧ್ಯಮ ಪ್ರಬಲ ಜಾತಿಗಳ ನಾಯಕತ್ವದ ಮನಸ್ಸು ಮಲಿನಗೊಂಡಿದೆ.' ಆಹಾ! ಎಂತಹ ಒಕ್ಕಣ್ಣಿನ ಸತ್ಯ!) ಅಷ್ಟೇ ಕಾರಣರು, ಎಚ್ಚೆಸ್ವಿಯವರು ವಿವರಿಸುವಂತಹ ನವೋದಯ ಸಾಹಿತಿಗಳು 'ಜಾತಿ ಮೀರಿದ' ಮಾದರಿಯನ್ನು ಎತ್ತಿ ಹಿಡಿಯುತ್ತಾ ಜನಿವಾರಗಳನ್ನು ಸಂದರ್ಭಾನುಸಾರ ಬಿಚ್ಚಿ ಹಾಕಿಕೊಳ್ಳುವ ಆತ್ಮದ್ರೋಹಿ ಬ್ರಾಹ್ಮಣ ಬಂಡಾಯಗಾರರೂ ಕಾರಣ. ಅನಂತಮೂರ್ತಿಯವರೇ ಈಗ ನಮ್ಮ ಜಾತಿ ವಿರೋಧಿ ಆಂದೋಲನ ಜಾತಿಗಳು ಸೃಷ್ಟಿಸಿದ ಸಾಂಸ್ಕೃತಿಕ ನೆಲೆಗಳ ವೈವಿಧ್ಯಗಳ ನಾಶಕ್ಕೆ ಕಾರಣವಾಗ ಬಾರದು ಎಂದು ಕರೆ ಕೊಡಬಲ್ಲಂತಹ ತಲೆಕೆಳಗಾದ ಸೌಂದರ್ಯ ಕಲ್ಪನೆಯನ್ನು ಕಟ್ಟಿಕೊಡಬಲ್ಲರೆಂದರೆ, ಬ್ರಾಹ್ಮಣ್ಯವೆಂಬುದು ಯಾವ ಯಾವಾಗ ಯಾವ್ಯಾವ ರೂಪಗಳನ್ನು ತಾಳಬಲ್ಲುದೆಂಬುದನ್ನು ರಾಜಶೇಖರ್ ಯೋಚಿಸಬಲ್ಲರೆ?

ಚೋಮ್‌ಸ್ಕಿಯಾಗಲೀ, ಫ್ಯುಕೋ ಆಗಲೀ ವಾಲ್ಟರ್ ಬೆಂಜಮಿನ್ ಆಗಲೀ ಉತ್ತರಿಸಲಾರರು!

—೬—

ಉತ್ತರ, ಕಾಣಬಲ್ಲವರಿಗೆ; ಫಣಿರಾಜರು ತಮ್ಮ 'ವಾಗ್ವಾದ ಚರಿತ್ರೆ'ಯಲ್ಲಿ ಕನ್ನಡದ ಮುಖ್ಯ ವಾಗ್ವಾದಗಳಲ್ಲೊಂದು ಎಂದು ಹೆಸರಿಸುವ ತೇಜಸ್ವಿಯವರ 'ಒಕ್ಕೂಟ'ದ ಭಾಷಣವೆಂದೇ ಪ್ರಸಿದ್ಧವಾದ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ'ಯಲ್ಲಿದೆ ಎಂದರೆ ಈ ಗೆಳೆಯರು ಒಪ್ಪಲಾರರು. ಅದು ಪೂರ್ಣ ಬ್ರಾಹ್ಮಣ ವಿರೋಧಿ ಎಂದಲ್ಲದಿದ್ದರೂ, ಜಾತಿ ಕೇಂದ್ರಿತ ವಿಶ್ಲೇಷಣೆ ಎಂದು ಅವರು ಹೇಳಿಯಾರು. 'ಹೇಳಿಯಾರು' ಎಂಬ ಪದಪ್ರಯೋಗ ಏಕೆ ಮಾಡಿರುವೆನೆಂದರೆ, ತೇಜಸ್ವಿಯವರ ಬಹು ಮುಖ್ಯ ಲೇಖನವೆಂದು ನಾನು ಪರಿಗಣಿಸಿರುವ ಇದರ ಬಗ್ಗೆ ನನಗೆ ತಿಳಿದ ಮಟ್ಟಿಗೆ ಈವರೆಗೆ ಯಾರೂ (ತೇಜಸ್ವಿ ಬಗ್ಗೆ ವಿಫುಲವಾಗಿ, ವಿಸ್ತಾರವಾಗಿ ಬರೆದಿರುವರೆಂದು ಹೇಳಲಾಗುವವರೂ ಸೇರಿದಂತೆ) ಏನೂ ಹೇಳಿಲ್ಲ! ಈ ದೃಷ್ಟಿಯಿಂದ ಫಣಿರಾಜರು ಈ ತೇಜಸ್ವಿ ಲೇಖನವನ್ನು ವಾಗ್ವಾದವೆಂದು ಭವ್ಯವಾಗಿ ಕರೆದಿರುವುದೇ ಒಂದು ತಮಾಷೆ. ಏಕೆಂದರೆ, ಅದು ಪ್ರಕಟವಾದ 38 ವರ್ಷಗಳ ನಂತರವೂ ನಮ್ಮ ವಿಶ್ವವಿದ್ಯಾಲಯಗಳೊಳಗಿನ ಮತ್ತು ಹೊರಗಿನ 'ಅಧಿಕೃತ' ಸಂಸ್ಕೃತಿ ಚಿಂತಕರ ನಡುವೆ ಅದು ಚರ್ಚೆಗೆ ಬರುವುದಿರಲಿ, ಪ್ರಸ್ತಾಪಕ್ಕೂ ಬಂದಿಲ್ಲ![9] ಅದು ಸ್ಥಾಪಿತ ಕನ್ನಡ ಸಾಹಿತ್ಯ-ಸಂಸ್ಕೃತಿ ಸಂಕಥನದ ಆಧಾರಗಳನ್ನೇ, ಅದನ್ನು ಏಕಪಕ್ಷೀಯವಾಗಿ ಪೋಷಿಸಿಕೊಂಡು ಬರುತ್ತಿರುವ ವಿಶ್ವವಿದ್ಯಾಲಯಗಳೊಳಗಿನ ಮತ್ತು ಹೊರಗಿನ ಸ್ಥಾಪಿತ ಹಿತಾಸಕ್ತಿಗಳ ಬುಡಗಳನ್ನೇ ಅಲ್ಲಾಡಿಸಬಲ್ಲ ರೀತಿಯಲ್ಲಿ ಕನ್ನಡ ಸಾಹಿತ್ಯ-ಸಂಸ್ಕೃತಿ ಚರಿತ್ರೆಯನ್ನು ಸ್ಫೋಟಕವೆನ್ನಿಸುವ ನೆಲೆಗಳಲ್ಲಿ ಪುನರ್‌ನಿರೂಪಿಸುವ ಒಂದು ದೊಡ್ಡ ತಾತ್ವಿಕ ಪ್ರಯತ್ನ ಮಾಡುತ್ತದೆ ಎಂಬುದೇ ಅದಕ್ಕೆ ಕಾರಣ ಎಂದು ನಾನು ಭಾವಿಸಿದ್ದೇನೆ.

ತೇಜಸ್ವಿ ಇಲ್ಲಿ ಜಾತಿಯನ್ನು ಕೇವಲ ಸಾಮಾಜಿಕ ಶ್ರೇಣೀಕರಣದ ನೆಲೆಯಲ್ಲಿ ನೋಡದೆ, ಅದು ಹೇಗೆ ಬದುಕಿನ ಗ್ರಹಿಕೆ ಮತ್ತು ಅಭಿವ್ಯಕ್ತಿ ಸಾಮರ್ಥ್ಯ ಹಾಗೂ ಕ್ರಮಗಳೂ ಸೇರಿದಂತೆ ಸರ್ವ ಸೂಕ್ಷ್ಮಗಳನ್ನೂ ನಿಯಂತ್ರಿಸುವ ಒಂದು ರಾಜಕೀಯ ತಂತ್ರವಾಗಿ;ಆದರೆ ಪ್ರಾಚೀನ ತತ್ವ ಪರಂಪರೆಯ ಮಾರುವೇಷದಲ್ಲಿ ಕ್ರಿಯಾಶೀಲವಾಗಿದೆ ಎಂಬುದನ್ನು ವಿವರಿಸುವ ಪ್ರಯತ್ನ ಮಾಡುತ್ತಾರೆ. ಇದರ ಭಾಗವಾಗಿ, ನವ್ಯ ಸಾಹಿತ್ಯದ ಒಂದು ಮಾದರಿ ಚಿಂತನೆಯನ್ನಿಟ್ಟುಕೊಂಡು (ಯು.ಆರ್.ಅನಂತಮೂರ್ತಿಯವರ 'ಭಾರತೀಯ ಸಂಸ್ಕೃತಿ ಮತ್ತು ಕನ್ನಡ ಲೇಖಕ') ಸಮಕಾಲೀನ ಸಂದರ್ಭದಲ್ಲಿನ ಅದರ ಆಟ-ಪಾಠಗಳನ್ನು ಅನನ್ಯ ಒಳನೋಟಗಳೊಂದಿಗೆ ವ್ಯಾಖ್ಯಾನಿಸುತ್ತಾರೆ. ಆ ಮೂಲಕ ಅವರು ಇಂದಿನ ಆಧುನಿಕ ಸಂದರ್ಭದಲ್ಲಿ ಜಾತಿಯನ್ನು ಅದರೆಲ್ಲ ವೇಷಭೂಷಣಗಳೊಂದಿಗೆ ಮಾತ್ರವಲ್ಲ, ನಮ್ಮ ಬದುಕಿನ ಸರ್ವಾಂಗಗಳಲ್ಲೂ ಆಳಕ್ಕಿಳಿದಿರುವ ಅದರ ಬೇರುಗಳೊಡನೆ ಕಿತ್ತೊಗೆಯಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತಾರೆ. ಇದರ ಹೊರತಾಗಿ ಸಾಹಿತ್ಯ-ಸಂಸ್ಕೃತಿ-ಧರ್ಮಗಳೂ ಸೇರಿದಂತೆ ನಮ್ಮ ಬದುಕಿನ ಒಟ್ಟು ರಾಜಕೀಯವೇ ಇಂದಿನ ವಿಕ್ಷಿಪ್ತತೆಗಳಿಂದ ಸುತರಾಂ ಹೊರಬರಲಾರದು ಎಂಬುದನ್ನು ಒಂದು ಹೊಸ ತತ್ವದರ್ಶನದ ರೂಪದಲ್ಲಿ ಮಂಡಿಸುತ್ತಾರೆ.[10]


ಪೂರ್ಣಚಂದ್ರ ತೇಜಸ್ವಿ

ಮೇಲ್ನೋಟಕ್ಕೆ ಇದು, ಭಾರತೀಯ ಸಂಸ್ಕೃತಿಯ ಹೆಸರಿನಲ್ಲಿ ವೈದಿಕ ಸಂಸ್ಕೃತಿ ಬೀಸುತ್ತಿರುವ ಏಕರೂಪಿ ಆಯ್ಕೆ ಮತ್ತು ಅಭಿರುಚಿಗಳ ಜಾಲದ ಬಗೆಗಿನ ತನ್ನ ತೀಕ್ಷ್ಣ ನೋಟ ಮತ್ತು ಮಾತುಗಳಿಂದಾಗಿ; ಬ್ರಾಹ್ಮಣರಾಗಿ ನೋಡಿದರೆ ಬ್ರಾಹ್ಮಣ ವಿರೋಧಿಯಾಗಿಯೂ, ಶೂದ್ರರಾಗಿ ನೋಡಿದರೆ ಶೂದ್ರ ಪರವಾಗಿಯೂ ಕಾಣುತ್ತದೆ. ಆದರೆ ಈ ಎರಡೂ ನೋಟಗಳನ್ನು ಧಿಕ್ಕರಿಸಿ ನೋಡಬಲ್ಲವರಿಗೆ, ಅದು ಜಾತಿ ವಿರೋಧಿಯಾಗಿ ತನ್ನ ಸಂಸ್ಕೃತಿ ವಿಶ್ಲೇಷಣೆಯನ್ನು ಮಂಡಿಸುತ್ತಾ ಭಾರತದ ಬದುಕಿನ ಜೀವಸತ್ವವಾದ ಬಹು ಸಂಸ್ಕೃತಿಯ ಸಮಾಜಕ್ಕಾಗಿ ಹಂಬಲಿಸುತ್ತಿರುವುದು ಗೊತ್ತಾಗುತ್ತದೆ. ಆದರೆ ನಮ್ಮ ಸಮಾಜ ತೇಜಸ್ವಿ ಹೇಳುವ ಅರ್ಥದಲ್ಲಿನ ಜಾತಿ ವಿರೋಧಿ ನಿಲುವನ್ನು ತಳೆಯಲಾಗದೆ, ಸದಾ ವೇಷ ಮತ್ತು ಭಾಷೆಗಳನ್ನು ಬದಲಾಯಿಸುತ್ತಾ ತನ್ನ ಬೌದ್ಧಿಕ ನಾಯಕತ್ವವನ್ನು ಭದ್ರ ಮಾಡಿಕೊಳ್ಳುತ್ತಾ ಹೋಗುತ್ತಿರುವ ಬ್ರಾಹ್ಮಣ ಪುರೋಹಿತಶಾಹಿಯ ರಾಜಕಾರಣ ಹಾಗೂ ಆದಷ್ಟೂ ತನ್ನ ಜಾತಿಗಷ್ಟೇ ಲೌಕಿಕ ಲಾಭಗಳನ್ನು ಗೆಬರಿಕೊಳ್ಳಲು ಹವಣಿಸುವುದರಾಚೆಗೆ ಬೆಳೆಯಲು ನಿರಾಕರಿಸುತ್ತಿರುವ 'ಸಾಮಾಜಿಕ ನ್ಯಾಯ'ದ ವಿಷವ್ಯೂಹಕ್ಕೆ ಸಿಕ್ಕ ಶೂದ್ರ ರಾಜಕಾರಣಗಳಿಂದಾಗಿ; ಎಂದೂ ಮುಗಿಯಲಾರದ ಜಾತಿ ಸಂಘರ್ಷದ ಮನೋಸ್ಥಿತಿಯಲ್ಲೇ ತೊಳಲಾಡುವಂತಹ ಪರಿಸ್ಥಿತಿಗೆ ಈಡಾಗಿದೆ. ಇದರಿಂದಾಗಿ ಈ ಚಿಂತನೆ ಬ್ರಾಹ್ಮಣ ವಿರೋಧಿ ಮತ್ತು ಶೂದ್ರಪರವೆಂಬ ಎರಡು ಜಾತಿವಾದಿ ನೋಟಗಳಿಗಷ್ಟೇ ಸಿಗುತ್ತಾ ಕಳೆದು ಹೋಗಿದೆ. 'ದೇಶ ಕಾಲ' ಕುರಿತ ಸದರಿ ಚರ್ಚೆಯಲ್ಲೂ ನಾನು ಕಾಣುವುದು ಈ ಪರಿಸ್ಥಿತಿಯನ್ನೇ. ಹಾಗಾಗಿ ಅದು ಇನ್ನೊಂದು ಎಂದೂ ಮುಗಿಯಲಾರದ ಚರ್ಚೆಯಾಗಿಯೇ ಉಳಿಯುವ ಅಪಾಯವನ್ನು ಎದುರಿಸುತ್ತಿರುವುದು.

ತೇಜಸ್ವಿ ಅವರ ವಾದದಲ್ಲಿ ಕೆಲವು ತೊಂದರೆಗಳಿವೆ, ಅತಿಗಳಿವೆ. ಮುಖ್ಯವಾಗಿ ನಾನು ಗಮನಿಸಿದ್ದು, ಬಹು ನೆಲೆಗಳ ಜಾತಿವ್ಯವಸ್ಥೆಯನ್ನು ಬರಿ ಬ್ರಾಹ್ಮಣ-ಶೂದ್ರ ನೆಲೆಯಲ್ಲಿ ವ್ಯಾಖ್ಯಾನಿಸಿ ತೀರ್ಮಾನಗಳಿಗೆ ಬರುವುದು; ವೈದಿಕ ಪರಂಪರೆಯನ್ನು ಏಕಶಿಲಾಖಂಡ ರೂಪದಲ್ಲಿ ನೋಡಿ ಅರ್ಥೈಸುವ ಪ್ರಯತ್ನ ಮಾಡುವುದು; ಆಳದಲ್ಲಿ ಜೈನಕ್ಕಿಂತ ಹೆಚ್ಚಾಗಿ ಬೌದ್ಧ ಪರಂಪರೆ ಕನ್ನಡ ಸಮಾಜದ ತಾತ್ವಿಕ ಪ್ರತಿರೋಧ ಶಕ್ತಿಯನ್ನು ರೂಪಿಸಿದೆ ಎಂಬುದನ್ನು ಗುರುತಿಸದೇ ಹೋಗಿರುವುದು, ಇತ್ಯಾದಿ. ಆದರೆ ಇವು ತೇಜಸ್ವಿ ಈ ದರ್ಶನವನ್ನು ಮಂಡಿಸಿದ ಕಾಲದಲ್ಲಿ ನಡೆದಿದ್ದ ಚರ್ಚೆಗಳು ಹೇರಿದ್ದ ಮಿತಿಗಳು ಹಾಗೂ ಒತ್ತಾಯಗಳು ಎಂದು ನಾನು ಭಾವಿಸುತ್ತೇನೆ. ಇದನ್ನು ದರ್ಶನವೆಂದು ಕರೆಯುವುದು ದೊಡ್ಡ ಮಾತು ಎಂದು ಯಾರಾದರೂ ಭಾವಿಸಿದರೆ; ಬೇಡ. ಚಿಂತನೆ ಎಂದೇ ಕರೆಯೋಣ.

ನಿಜ, ಡಿ.ಆರ್.ನಾಗರಾಜರು ರೂಪಿಸದ್ದೆಂದು ಹೇಳಲಾಗುವ ಸಂಸ್ಕೃತಿ ಚಿಂತನೆಯ ಹಿಂದೆ ಇದರ (ಋಣ ನೆನೆಯದ) ಗಾಢ ಪ್ರಭಾವವನ್ನು ಕಾಣಬಹುದು. ಆದರೆ ಅವರ ಈ ಸಂಸ್ಕೃತಿ ಚಿಂತನೆ ತನಗೊಲ್ಲದ/ಸಲ್ಲದ ಮಹತ್ವಾಕಾಂಕ್ಷೆಯೊಂದಿಗೆ ಸೀಮೋಲ್ಲಂಘನ ನಾಡಿ ವಿಶ್ವಾತ್ಮಕ ನೆಲೆಗಳಿಗೆ ಮತ್ತು ಪರಿಭಾಷೆಗೆ ವಿಸ್ತರಿಸಿಕೊಂಡಿದ್ದರಿಂದ, ಅದರೊಳಗಿನ ತೇಜಸ್ವಿ ಚಿಂತನೆಯ ಬೇರುಗಳು ನೆಲ ಕಳಚಿಕೊಂಡಂತಾಗಿವೆ. ಹಾಗಾಗಿ, ಅದು ಯಾವ ನೆಲೆಗಳಲ್ಲಿ ತನ್ನ ನಿಜವಾದ ಪ್ರಸ್ತುತತೆಯನ್ನೂ, ವಿಸ್ತರಣೆಯನ್ನೂ, ಪರಿಣಾಮಶೀಲತೆಯನ್ನೂ ಕಂಡುಕೊಳ್ಳಬೇಕಿತ್ತೋ ಅಲ್ಲಿ ಕಂಡುಕೊಳ್ಳಲಾಗದಾಗಿದೆ. ಆದರೆ ಇಂದು ಆ ಸಾಧ್ಯತೆಗೆ ಅವಕಾಶಗಳು ತೆರೆದುಕೊಂಡಂತಿದೆ. ಏಕೆಂದರೆ, ಈಗ ಪ್ರಧಾನವಾಗಿ ತೇಜಸ್ವಿ ಕಟ್ಟಿದ ಪರಂಪರೆ ಎಂದೇ ಗುರುತಿಸಬಹುದಾದ ರೀತಿಯಲ್ಲಿ, (ಅನಂತಮೂರ್ತಿಯವರು ತೇಜಸ್ವಿಯವರನ್ನು 'ಮಾರ್ಗ ಪ್ರವರ್ತಕ ಲೇಖಕ' ಎಂದು ಗುರುತಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು) ಹೊಸ ತಲೆಮಾರಿನ ಹಲವು ಲೇಖಕರು ಸಾಹಿತ್ಯ ನಿರ್ಮಾಣಕ್ಕೆ 'ಸಾಮಾನ್ಯ ಸಾಮಾಜಿಕ ಪರಿಜ್ಞಾನ'ವಷ್ಟೇ ಸಾಕೆಂಬಂತೆ (ಸಾಹಿತ್ಯ ಸಂಪ್ರದಾಯಗಳ ಭಾರದಿಂದ) 'ಮುಕ್ತ'ವಾಗಿ ಬರೆಯುತ್ತಿದ್ದಾರೆ. ತೇಜಸ್ವಿ ಚಿಂತನೆ, ಹೊಸ ತಲೆಮಾರಿನ ಈ ಲೇಖಕರು ಜಾಗತೀಕರಣದ ಬಹುಮುಖಿ ಪರಿಣಾಮಗಳಿಂದಾಗಿ ಸದ್ಯದ ಸಾಹಿತ್ಯಿಕ-ಸಾಂಸ್ಕೃತಿಕ ಸಂದರ್ಭದಲ್ಲಿ ಎದುರಿಸುತ್ತಿರುವ ಹಲವು ತಾತ್ವಿಕ ಪ್ರಶ್ನೆಗಳಿಗೆ ಮುಖಾಮುಖಿಯಾಗುತ್ತಾ, ಇಂದು ನಮ್ಮನ್ನು ಮತ್ತೆ ಚರ್ಚೆಗಾಗಿ ಆಹ್ವಾನಿಸುತ್ತಿರುವಂತಿದೆ. ಈ ತಲೆಮಾರಿಗೇ ಸೇರಿದ ಮಂಜುನಾಥ್ ಲತಾ-ಐಜೂರರ ಲೇಖನದ ಹಿಂದಿನ ಗೊಂದಲಗಳೂ, ಅಸಂಬದ್ಧ ಆಕ್ರೋಶಗಳೂ, ಗೋಜಲಾದ ಪ್ರಶ್ನೆಗಳೂ;

ಹಾಗಿದ್ದೂ ಅದು ಹುಟ್ಟು ಹಾಕಿರುವ ಸದರಿ ಕುತೂಹಲಕರ ಚರ್ಚೆ ಇದಕ್ಕೆ ಸಾಕ್ಷಿಯಂತಿದೆ.

ಈ ಹಿನ್ನೆಲೆಯಲ್ಲಿ, ಯಾರಿಗಾದರೂ ಏಳುವ ದೊಡ್ಡ ಪ್ರಶ್ನೆಯೆಂದರೆ, ತೇಜಸ್ವಿಯವರ ಚಿಂತನೆಯನ್ನು ಸಾಮಾನ್ಯ ಸಾಮಾಜಿಕರು ಹೋಗಲಿ, ನಮ್ಮ ಲೇಖಕ-ಬುದ್ಧಿಜೀವಿಗಳಾದರೂ ಏಕೆ ಈವರೆಗೆ ಗಂಭೀರ ಪರಿಶೀಲನೆಗೆ ಒಳಪಡಿಸಿಲ್ಲ? ಅವರ ಸಾಹಿತ್ಯವನ್ನು ಅದರ ಒಟ್ಟು ತಾತ್ವಿಕತೆಯ ಅನ್ವೇಷಣೆಯಾ ಪ್ರಯತ್ನವಾಗಿ ನೋಡದೆ, ಅದನ್ನು ಸಾಹಿತ್ಯ ಪ್ರಕಾರವಾರು ವಿಂಗಡಿಸಿ ವಿಶ್ಲೇಷಿಸಿ; ಅಂತಹ ವಿಶ್ಲೇಷಣೆಗಳಿಂದ ಪಡೆದ ಸಾಮಾಜಿಕ ಮತ್ತು ಸಾಹಿತ್ಯಿಕ ರೋಮಾಂಚನಗಳಲ್ಲಿ ಮುಳುಗಿ ಹೋಗಿರುವಂತೆ ತೋರುವ ನಮ್ಮ ಪ್ರಧಾನ ಧಾರೆಯ ವಿಮರ್ಶೆ ಸಹಜವಾಗಿಯೇ, ಆ ತಾತ್ವಿಕತೆಯ ಬೇರುಗಳನ್ನು ತಡಕಲು ಹೋಗದೆ ತನ್ನ ರಾಜಕೀಯ ಆಸಕ್ತಿಗಳು ಭಂಗಗೊಳ್ಳದಂತೆ ನೋಡಿಕೊಂಡಿದೆ. ಕೆಲವರು ತಾವು ಮತ್ತೆ ನನ್ನೋ ಬರೆಯುವದರ ಭಾಗವಾಗಿಯಷ್ಟೇ, ನಾನು (ಬಹುಶಃ ನಾನೊಬ್ಬನೇ?) ಈ ಬಗ್ಗೆ ಬರೆದ ನಾಲ್ಕೈದು ಲೇಖನಗಳ[11] ಗಲಾಟೆ ತಾಳಲಾಗದೆಂಬಂತೆ, ಅಲ್ಲೊಂದು ಇಲ್ಲೊಂದು ಪ್ರತಿಕ್ರಿಯೆ ನೀಡುತ್ತಾ ಆನುಷಂಗಿಕವಾದ ಕೆಲವು ತಕರಾರುಗಳನ್ನು ಎತ್ತಿರುವುದನ್ನು ಗಮನಿಸಿದ್ದೇನೆ. (ಹಾಗೆ ನೋಡಿದರೆ ಮುಖ್ಯವಾಗಿ ಪ್ರತಿಕ್ರಿಯೆ ಬರಬೇಕಾಗಿದ್ದದ್ದು ಅನಂತಮೂರ್ತಿಯವರಿಂದ; ಆದರೆ ಬರಲಿಲ್ಲ!)

ನಿಜ, ತೇಜಸ್ವಿ ಅವರ ವಾದದಲ್ಲಿ ಕೆಲವು ತೊಂದರೆಗಳಿವೆ, ಅತಿಗಳಿವೆ. ಮುಖ್ಯವಾಗಿ ನಾನು ಗಮನಿಸಿದ್ದು, ಬಹು ನೆಲೆಗಳ ಜಾತಿವ್ಯವಸ್ಥೆಯನ್ನು ಬರಿ ಬ್ರಾಹ್ಮಣ-ಶೂದ್ರ ನೆಲೆಯಲ್ಲಿ ವ್ಯಾಖ್ಯಾನಿಸಿ ತೀರ್ಮಾನಗಳಿಗೆ ಬರುವುದು; ವೈದಿಕ ಪರಂಪರೆಯನ್ನು ಏಕಶಿಲಾಖಂಡ ರೂಪದಲ್ಲಿ ನೋಡಿ ಅರ್ಥೈಸುವ ಪ್ರಯತ್ನ ಮಾಡುವುದು; ಆಳದಲ್ಲಿ ಜೈನಕ್ಕಿಂತ ಹೆಚ್ಚಾಗಿ ಬೌದ್ಧ ಪರಂಪರೆ ಕನ್ನಡ ಸಮಾಜದ ತಾತ್ವಿಕ ಪ್ರತಿರೋಧ ಶಕ್ತಿಯನ್ನು ರೂಪಿಸಿದೆ ಎಂಬುದನ್ನು ಗುರುತಿಸದೇ ಹೋಗಿರುವುದು, ಇತ್ಯಾದಿ. ಆದರೆ ಇವು ತೇಜಸ್ವಿ ಈ ದರ್ಶನವನ್ನು ಮಂಡಿಸಿದ ಕಾಲದಲ್ಲಿ ನಡೆದಿದ್ದ ಚರ್ಚೆಗಳು ಹೇರಿದ್ದ ಮಿತಿಗಳು ಹಾಗೂ ಒತ್ತಾಯಗಳು ಎಂದು ನಾನು ಭಾವಿಸುತ್ತೇನೆ.

ಇದನ್ನು ದರ್ಶನವೆಂದು ಕರೆಯುವುದು ದೊಡ್ಡ ಮಾತು ಎಂದು ಯಾರಾದರೂ ಭಾವಿಸಿದರೆ; ಬೇಡ. ಚಿಂತನೆ ಎಂದೇ ಕರೆಯೋಣ. ಆದರೆ ಇಷ್ಟು ದೊಡ್ಡ ಚಿಂತನೆಯನ್ನು ಬೆಳೆಸುವುದು ಹೋಗಲಿ, ಕನಿಷ್ಠ ಒಂದು 'ವಿವಾದ' ಎಂದಾದರೂ ನಮ್ಮ ಲೇಖಕ-ಬುದ್ಧಿಜೀವಿಗಳು ಚರ್ಚೆಗೆ ಎತ್ತಿಕೊಳ್ಳಲಿಲ್ಲ ಎಂದರೆ ಅದಕ್ಕೇನು ಕಾರಣ? ತೇಜಸ್ವಿಯವರ ಮಾತುಗಳಲ್ಲಿಯೇ ಹೇಳುವುದಾದರೆ, ನಮ್ಮ ಜನ ಜಾತಿ ಸುದ್ದಿ ಎತ್ತಿದರೆ ವಿದ್ಯುತ್‌ತಂತಿ ಮುಟ್ಟಿದ ಹಾಗೆ ಆಡುತ್ತಾರೆ. ಇದು ಸಾಮಾನ್ಯ ಜನಕ್ಕಿಂತ ಹೆಚ್ಚಾಗಿ ನಮ್ಮ ಬುದ್ಧಿಜೀವಿಗಳಿಗೆ ಅನ್ವಯಿಸುವ ಮಾತು. ಏಕೆಂದರೆ ಸಾಮಾನ್ಯ ಜನಕ್ಕೆ ಜಾತಿ ಒಂದು (ಕುರುಡು) ನಂಬಿಕೆ ಮಾತ್ರವಾಗಿದ್ದರೆ, ನಮ್ಮ ಬಹಳಷ್ಟು ಬುದ್ಧಿಜೀವಿಗಳಿಗೆ ಅದು ಅವರ ಅಸ್ತಿತ್ವದ ನಿಜ ಆಧಾರ! ತೇಜಸ್ವಿ ಹೇಳಿದ ಅರ್ಥದಲ್ಲಿ ಜಾತಿ ಬಿಡಿ ಎಂದರೆ, ಅವರು ತಮ್ಮ ಲೌಕಿಕ ಬದುಕಿನ ಹಲವು-ಹೆಂಡತಿ, ನೆಂಟರಿಷ್ಟರು-ನೆಲೆಗಳಲ್ಲಿ (ಅನಗತ್ಯ) ತೊಂದರೆ, ಕಷ್ಟ ಕೋಟಲೆ ಹಾಗೂ ಗೋಜಲುಗಳಿಗೆ ಸಿಕ್ಕಿಹಾಕಿಕೊಳ್ಳುವುದಲ್ಲದೆ, ತಮ್ಮ ಬುದ್ಧಿಜೀವತ್ವಕ್ಕೆ



ಜಿ. ರಾಜಶೇಖರ್

> **ನಾವು ಮಾಡುವ ಎಲ್ಲ ಕೆಲಸಗಳಿಗೂ ಒಂದು 'ವಿಷನ್' ಇದ್ದೀತು. ಆದರೆ ರಾಜಶೇಖರ್ ಎಲ್ಲ ಆದರ್ಶಗಳೂ, ಸಿದ್ಧಾಂತಗಳೂ ಅವುಗಳ ವಿರೋಧಾಭಾಸಗಳಿಂದಾಗಿಯೋ, ಮತ್ತಾವುದೋ ಕಾರಣದಿಂದಲೋ ಮಣ್ಣು ಪಾಲಾಗಿರುವಾಗ ಯಾವ ಸಿದ್ಧಾಂತ, ಯಾವ 'ವಿಷನ್' ಎಂದು ಕೇಳುತ್ತಾ ವ್ಯಂಗ್ಯ ವಾಡುತ್ತಾರೆ. ಅವರೂ ಜಾಗತೀಕರಣದ ತಾತ್ವಿಕರಂತೆ ಇತಿಹಾಸವೇ ಅಂತ್ಯವಾದಂತೆ ಮಾತಾಡುತ್ತಿರುವುದು ಆಶ್ಚರ್ಯಕರ! ರಾಜಶೇಖರ್ ಎಲ್ಲಿದ್ದವರು ಎಲ್ಲಿಗೆ ಬಂದು ಮುಟ್ಟಿದ್ದಾರೆ ಎಂದೂ ಆಶ್ಚರ್ಯವಾಗುತ್ತದೆ!**

ಮತ್ತು ಅದರಿಂದ ಲಭ್ಯವಾಗಿರುವ ಸ್ಥಾನಮಾನ-ಕೀರ್ತಿ-ಸವಲತ್ತುಗಳಿಗೆ ಆಧಾರಗಳಾದ ಅವರ ಓದಿನ ಆಯ್ಕೆ, ಗಳಿಸಿದ ಪಾಂಡಿತ್ಯ, ರೂಢಿಸಿಕೊಂಡ ಚಿಂತನಾ ಕ್ರಮ, ಕಟ್ಟಿಕೊಂಡ ಮಾದರಿಗಳು, ಅವು ರೂಪಿಸಿದ ನಂಬಿಕೆಗಳು, ಎತ್ತಿಹಿಡಿದ ವಿಚಾರಗಳು, ಕರೆ ನೀಡಿದ ಬಂಡಾಯಗಳು, ಊದಿದ ಕ್ರಾಂತಿ ಕಹಳೆಗಳು ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಮರುಳು ಮಾಡುವ ಅವುಗಳ ಪರಿಭಾಷೆ ಎಲ್ಲವನ್ನೂ ತ್ಯಜಿಸಬೇಕಾಗುತ್ತದೆ. ಇಡಿಯಾಗಿ ತಮ್ಮನ್ನು ತಾವು ಹೊಸದಾಗಿ ಕಟ್ಟಿಕೊಳ್ಳಬೇಕಾಗುತ್ತದೆ.

ಈ ಪ್ರಳಯ, ಸ್ವಯಂನಾಶ (ಇದಕ್ಕೆ ರಚನಾತ್ಮಕ ಪರ್ಯಾಯ-ಬೌದ್ಧ-ಶಬ್ದವೆಂದರೆ 'ಆತ್ಮ'ನಾಶ) ಯಾರಿಗೆ ಬೇಕು? ಆದರೆ ಇವರು ಅಲ್ಲಮಪ್ರಭುವಿನ 'ತನ್ನ ತಾನರಿತರೆ ಅದೇ ಪ್ರಳಯ!' ಎಂಬ ಮಾತನ್ನು ಮಾತ್ರ ಅವಕಾಶ ಸಿಕ್ಕೆಡೆಗಳಲ್ಲೆಲ್ಲ ರೋಮಾಂಚಿತರಾಗಿ ಹೇಳುತ್ತಾ, ವ್ಯಾಖ್ಯಾನಿಸುತ್ತಾ ಆನಂದಿಸುವುದನ್ನು ಮಾತ್ರ ನಿಲ್ಲಿಸುವುದಿಲ್ಲ! ಇದೇ, ಇದೇ, ನಮ್ಮ ಬೌದ್ಧಿಕ ಜಗತ್ತಿನ ಈ ಆತ್ಮದ್ರೋಹಿ ವರ್ತನೆಯೇ, ಇಂದಿನ ಕನ್ನಡ ಸಮಾಜವನ್ನು ಈ 'ದೇಶಕಾಲ' ಕುರಿತ ಈ ಚರ್ಚೆಯಲ್ಲಿಯೂ ಕಾಣುವಂತಹ ಪರಸ್ಪರ ಅರಿವ, ಅನುಸಂಧಾನಿಸುವ, ಸಮೀಪಿಸುವ ಯಾವುದೇ ಸಾಧ್ಯತೆಯೂ ಗೋಚರವಾಗದ ರೀತಿಯಲ್ಲಿ ಒಡೆದಿಟ್ಟಿರುವುದು.

–೨–

ಫಣಿರಾಜ್ ತಾವು ತೇಜಸ್ವಿ ವಾದದ ಪರ ಇರುವುದಾಗಿ ಹೇಳಿಕೊಂಡಿದ್ದಾರೆ.[12] ಅಷ್ಟೇ ಅಲ್ಲ, ತೇಜಸ್ವಿಯವರ ಈ ಚಿಂತನೆಯನ್ನು ಅಮೂಲ್ಯ ಪಠ್ಯವೆಂದೂ ವರ್ಣಿಸಿದ್ದಾರೆ, ಆದರೆ ಇಂತಹ ಹೇಳಿಕೆಗಳಿಂದ, ವರ್ಣನೆಗಳಿಂದ ಏನು ಪ್ರಯೋಜನ? ಸಾಕಷ್ಟು ಬರೆದಿರುವ, ಮಾತನಾಡಿರುವ, ಹೋರಾಟ-ಕಾರ್ಯಕ್ರಮಗಳನ್ನು ರೂಪಿಸಿರುವ ಅವರು ತೇಜಸ್ವಿಯವರ ಈ ಚಿಂತನೆಯ ಬಗ್ಗೆ ಎಲ್ಲಿ, ಯಾವ ಸಂದರ್ಭದಲ್ಲಿ ಯಾವ ರೂಪದಲ್ಲಿ ಚರ್ಚೆ ಎತ್ತಿದ್ದಾರೆ? ಚರ್ಚೆ ಎತ್ತುವುದಿರಲಿ, ಉಲ್ಲೇಖವನ್ನಾದರೂ ಮಾಡಿದ್ದಾರೆ? ಮಾಡಿರುವುದೇ ಆದರೆ, ಸದರಿ ಚರ್ಚೆಯಲ್ಲಿಯೂ ಅಂತಹ ಯಾವ ತಾತ್ವಿಕ ಸೂಚನೆಗಳೂ ಕಾಣುವುದಿಲ್ಲವಲ್ಲ? ತೇಜಸ್ವಿ ಚಿಂತನೆ ಪರವಾದ ಇಲ್ಲಿನ ಅವರ ಇಂತಹ ಬಾಯಿಮಾತಿನ ಸಗಟು ಸಹಾನುಭೂತಿ, ಅವರ 'ಕೋಮು ಸೌಹಾರ್ದ' ಕಾರ್ಯಕ್ರಮದಂತಹ ಒಂದು ಕಾರ್ಯಕ್ರಮದ ರೂಪದಲ್ಲಾದರೂ ಕಾಣಿಸಿಕೊಳ್ಳುವಂತಾಗಿದ್ದರೆ, ಅವರ ಸಹಾನುಭೂತಿಗೆ ಒಂದು ಅರ್ಥವಿರುತ್ತಿತ್ತು.

ಅಂತಹ ಕಾರ್ಯಕ್ರಮ ರೂಪುಗೊಳ್ಳಲು ಮೊದಲು ಅಂತಹ ಚಿಂತನೆಯನ್ನು ಕುರಿತ ಮಂಥನ ನಡೆಯಬೇಕಲ್ಲ? ಹಾಗಾಗಿ ಫಣಿರಾಜ್ ತಮ್ಮ ವಾಗ್ವಾದಪ್ರಿಯತೆಗೆ ಒಂದು ಕ್ರಿಯಾಶೀಲ ರೂಪು ಕೊಟ್ಟು ಅದನ್ನು ಅರ್ಥಪೂರ್ಣಗೊಳಿಸಲು ಮೊದಲು ಮಾಡಬೇಕಾದುದು, ತಾವು ಪರವಾಗಿರುವುದಾಗಿ ಹೇಳಿಕೊಂಡಿರುವ ಈ ಚಿಂತನೆಯ ಕುರಿತು ತಮ್ಮ ಸಹಮನಸ್ಕ ಮಿತ್ರರೊಂದಿಗೆ ಚರ್ಚೆ ಆರಂಭಿಸುವುದು. ಅದಕ್ಕೇ 'ದೇಶಕಾಲ'ವೇ ಮೊದಲ ವೇದಿಕೆಯಾಗುವುದಾದರೆ ಇನ್ನೂ ಒಳ್ಳೆಯದೇ! ಹಾಗೇ ಮಂಜುನಾಥ್ ಲತಾ-ಚಂದ್ರಶೇಖರ ಐಜೂರ್ ಹಾಗೂ ಅವರ ಮಿತ್ರರು ಈ ಚರ್ಚೆಯನ್ನು ಮುಂದುವರೆಸಿ, ಆ ಚಿಂತನೆ ಎಲ್ಲ ಸಾಮಾಜಿಕ ಶ್ರೇಣಿಗಳ ಜನರ ಅನುಭವಗಳ ಮೂಸೆಯಲ್ಲಿ ಎರಕಗೊಂಡು; ಅದೊಂದು ವ್ಯಾಪಕ ರಾಜಕೀಯ ಕಾರ್ಯಕ್ರಮವಾಗಿ ರೂಪುಗೊಳ್ಳುವಂತೆ ನೋಡಿಕೊಳ್ಳಲು ಸಾಧ್ಯವೇ? ಇದರ ಭಾಗವಾಗಿ, ಈ ಚರ್ಚೆಗೆ ಧುಮುಕಿದ ಎಲ್ಲರೂ ಈ ಧುಮುಕಿನ ಉತ್ಸಾಹದೊಂದಿಗೇ ತಮ್ಮ ಕೊಡುಗೆ ಸಲ್ಲಿಸುವಂತೆ ಪ್ರೇರೇಪಿಸಲು ಸಾಧ್ಯವಾದರೆ, ಈ ಚರ್ಚೆ ಒಂದು ಸಾರ್ಥಕ ಅಂತ್ಯ ಕಂಡೀತು. ಇಲ್ಲವಾದರೆ, ಮಂಜುನಾಥ್-ಐಜೂರರ (ಉದ್ದನೆಯ) ಬಾಲ ತರ್ಕವನ್ನೇ ಬಳಸಿ ಹೇಳುವುದಾದರೆ, 'ಉತ್ತರ ಕರ್ನಾಟಕದ ಸಾವಿರಾರು ಜನ ನೆರೆ ಸಂತ್ರಸ್ತರು ಕೇಳುವವರಿಲ್ಲದೆ ಬೀದಿ ಪಾಲಾಗಿರುವಾಗ' ಚರ್ಚೆಗಾಗಿ ಚರ್ಚೆ ನಡೆಸಿದ ಸಾಮಾಜಿಕ ಅಪರಾಧದಲ್ಲಿ ನಾವೆಲ್ಲರೂ ಪಾಲುದಾರರಾಗಬೇಕಾಗುತ್ತದೆ!

ಬಹುಶಃ ಇದನ್ನೇ(ಈ ಚಿಂತನೆಯನ್ನೇ ಆಧರಿಸಿದ್ದಲ್ಲವಾದರೂ) ಕೆ.ಪಿ. ಸುರೇಶ್ 'ದೇಶಕಾಲ'ಕ್ಕೆ 'ವಿಷನ್'ನ ಕೊರತೆ ಇದೆ ಎಂದು ಹೇಳಲು ಹೋಗಿದ್ದು ಎಂದು ಕಾಣುತ್ತದೆ. ಮೊದಲಾಗಿ ನಮ್ಮ ಬದುಕಿಗೆ ಒಂದು 'ವಿಷನ್' ಇರುವುದಾದರೆ, ನಾವು ಮಾಡುವ ಎಲ್ಲ

ಕೆಲಸಗಳಿಗೂ ಒಂದು 'ವಿಷನ್' ಇದ್ದೀತು. ಆದರೆ ರಾಜಶೇಖರ್ ಎಲ್ಲ ಆದರ್ಶಗಳೂ, ಸಿದ್ಧಾಂತಗಳೂ ಅವುಗಳ ವಿರೋಧಾಭಾಸಗಳಿಂದಾಗಿಯೋ, ಮತ್ತಾವುದೋ ಕಾರಣದಿಂದಲೋ ಮಣ್ಣು ಪಾಲಾಗಿರುವಾಗ ಯಾವ ಸಿದ್ಧಾಂತ, ಯಾವ 'ವಿಷನ್' ಎಂದು ಕೇಳುತ್ತಾ ವ್ಯಂಗ್ಯವಾಡುತ್ತಾರೆ. ಅವರೂ ಜಾಗತೀಕರಣದ ತಾತ್ವಿಕರಂತೆ ಇತಿಹಾಸವೇ ಅಂತ್ಯವಾದಂತೆ ಮಾತಾಡುತ್ತಿರುವುದು ಆಶ್ಚರ್ಯಕರ! ರಾಜಶೇಖರ್ ಎಲ್ಲಿದ್ದವರು ಎಲ್ಲಿಗೆ ಬಂದು ಮುಟ್ಟಿದ್ದಾರೆ ಎಂದೂ ಆಶ್ಚರ್ಯವಾಗುತ್ತದೆ! ಅವರು ಆಗ ಅಲ್ಲಿದ್ದುದಕ್ಕೇ ಈಗ ಇಲ್ಲಿಗೆ ಬಂದು ಮುಟ್ಟಿರುವುದೋ? ನಾನಂತೂ, ಇಪ್ಪತ್ತು-ಇಪ್ಪತ್ತೈದು ವರ್ಷಗಳ ಹಿಂದೆ ಇದೇ ರಾಜಶೇಖರರು ಶಿವರಾಮ ಕಾರಂತರನ್ನು ಸಂದರ್ಶಿಸಿದ್ದಾಗ ಕಾರಂತರು ಪ್ರತಿ ಪ್ರಶ್ನೆಗೂ ಎಲ್ಲವನ್ನೂ ಮೊದಲೇ ನಿಶ್ಚಯಿಸಿಕೊಂಡವರ ಹಾಗೆ ಇವರ ಮೇಲೆ ಹರಿಹಾಯ್ದಿದ್ದದನ್ನು ಓದಿ ಹೇಗೆ ಬೆಪ್ಪಾಗಿದ್ದೆನೋ, ಈಗ ರಾಜಶೇಖರರು ಈ ಚರ್ಚೆಯಲ್ಲಿ ಪ್ರಶ್ನೆ ಕೇಳಿದವರ ಮೇಲೆಲ್ಲಾ ಯಥಾವತ್ ಹಾಗೇ ಹರಿಹಾಯ್ದಿರುವುದನ್ನು ಓದಿ ಬೆಪ್ಪಾಗಿದ್ದೇನೆ. ಕಾಲಚಕ್ರ ಎಷ್ಟು ಬೇಗ ತಿರುಗಿ ಇಲ್ಲಿಗೆ ಬಂದು ನಿಂತಿದೆ ಎಂದು ಆಶ್ಚರ್ಯವಾಗುತ್ತದೆ!

ಅದೇನೇ ಇರಲಿ, ಎಷ್ಟೇ ಸಾವಿರ ಸಿದ್ಧಾಂತಗಳು ಸಾಯಲಿ, ತನ್ನ ಅಸಂಗತ ರಚನೆಗಳಲ್ಲಿ ಎದುರಾಗಿ ನಮ್ಮನ್ನು ಹೆದರಿಸುವ ಬದುಕನ್ನು ಸಂಗತ ಮಾಡಿಕೊಂಡು, ಸ್ವಲ್ಪವಾದರೂ ನೆಮ್ಮದಿಯಿಂದ ಬದುಕಲು ಒಂದು ಸಿದ್ಧಾಂತ-ಅದು ತೇಜಸ್ವಿ ಹೇಳುವಂತೆ 'ಕಾಮನ್ ಸೆನ್ಸ್' ರೂಪದಲ್ಲೇ ಇರಲಿ-ಬೇಕೇ ಬೇಕು. ಆದರೆ ಅದು ಸದಾ ಕೆಡವುತ್ತಾ, ಆದರೆ ಅದೇ ಸಮಯದಲ್ಲಿ ಕಟ್ಟಿಕೊಳ್ಳುತ್ತಾ ಇರುವ ಚಲನಶೀಲ ಸಿದ್ಧಾಂತವಾಗಿರಬೇಕಾಗುತ್ತದಷ್ಟೆ. ಇದು ಗೊತ್ತಿದ್ದರೆ, ಸಿದ್ಧಾಂತಗಳ ಸಾವು ಅಥವಾ ನಾಶ ಎಂಬ ಮಾತೇ ಅಸಂಗತ ಎಂಬುದು ಸ್ಪಷ್ಟವಾದೀತು! ಇದೆಲ್ಲ ರಾಜಶೇಖರ್‌ಗೆ ಗೊತ್ತಿಲ್ಲವೆಂದು ಹೇಳುತ್ತಿಲ್ಲ. ಅವರಿಗೆ ಹೇಳುವ ನೆಪದಲ್ಲಿ ಮಂಜುನಾಥ್ ಲತಾ-ಐಜೂರರಿಗೂ ಹೇಳುತ್ತಿರುವೆನಷ್ಟೆ. ಏಕೆಂದರೆ ಇವರಿಬ್ಬರೂ ಸದರಿ ಚರ್ಚೆಯನ್ನು ಮುಗಿಸುತ್ತಾ (ಅದರೆಲ್ಲ ಅರ್ಥಗಳಲ್ಲಿ?) ಇಡೀ ಚರ್ಚೆಯಿಂದ ಏನೂ ಪಡೆಯದವರಂತೆ ಅಥವಾ ಏನನ್ನೂ ಕಳೆದುಕೊಳ್ಳದವರಂತೆ, ಒಟ್ಟಿನಲ್ಲಿ ಅದರಲ್ಲಿ ಕಲಿಯಲು ಏನೂ ಇರಲಿಲ್ಲವೆಂಬಂತೆ; ಛಲ ಬಿಡದ ತ್ರಿವಿಕ್ರಮನ ರೀತಿ ಅದೇ ಹಳೆಯ ಆರೋಪಗಳ, ವ್ಯಂಗ್ಯ-ಟೀಕೆಗಳ ಬೇತಾಳವನ್ನು ಇನ್ನಷ್ಟು ಉಬ್ಬಿದ ಆತ್ಮವಿಶ್ವಾಸದೊಂದಿಗೆ ಹೆಗಲಿಗೇರಿಸಿಕೊಂಡು ನಡೆದಿರುವುದನ್ನು ಕಂಡು ನಿಜವಾಗಿ ಸುಸ್ತಾಗಿರುವೆ.

ಹಾಗಾಗಿ, ನಾನು ಈವರೆಗೆ ಬರೆದಿರುವ ಈ ಪುರಾಣವೆಲ್ಲ ಶಿವರಾತ್ರಿಯ ಒಂದು ಹರಿಕಥೆಗೆ ಸಮವಾಗಿಬಿಡಬಹುದೇ ಎಂಬ ಅನುಮಾನದಿಂದಲೇ ಈ ಬರಹವನ್ನು ಮುಗಿಸುತ್ತಿರುವೆ! ಆದರೆ ಮುಗಿಸುವ ಹೊತ್ತಿನಲ್ಲಿ ಏಕೋ, ಫಣಿರಾಜರು ಆರಂಭದಲ್ಲೇ ತಮ್ಮ ವಾದಕ್ಕೆ ಬೆಂಬಲವಾಗಿ 'ಭಾಷೆಯೇ ದೈವ' ಎಂಬುದು ಲಂಕೇಶರ 'ನಿಷ್ಠುರ ತಿಳುವಳಿಕೆ'ಯಾಗಿತ್ತು ಎಂಬ ಪಾಠ ಹೇಳಿದ್ದು ನೆನಪಿಗೆ ಬರುತ್ತಿದೆ. ಇದು ಲಂಕೇಶರ ಮೂಲ ತಿಳುವಳಿಕೆಯೋ, ಅಲ್ಲವೋ ನನಗೆ ತಿಳಿಯದು. ಆದರೆ ನನಗೆ ಒಂದು ತಿಳಿದಿದೆ: ದೆವ್ವವಿದ್ದೆಡೆ ಮಾತ್ರ ದೈವವಿರಬಲ್ಲುದು. ಅವರೆಡೂ ಅವಳಿ ಸೃಷ್ಟಿಗಳು! ಹಾಗಾಗಿ 'ಭಾಷೆಯೇ ದೈವ' ಎಂಬ ಮಾತಿನ ಹಿಂದೆಯೇ 'ಭಾಷೆಯೇ ದೆವ್ವ' ಎಂಬ ಮಾತಿರುತ್ತದೆ ಎಂಬ 'ನಿಷ್ಠುರ ತಿಳುವಳಿಕೆ'ಯೂ ನಮಗಿದ್ದರೆ ಒಳ್ಳೆಯದು ಎಂಬ ಎಚ್ಚರಿಕೆಯ ಮಾತನ್ನೂ ಇಲ್ಲಿ ಸೇರಿಸಬಯಸುವೆ.

ಅಡಿ ಟಿಪ್ಪಣಿ

1 ಈ 'ಅಖಿಲ ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟವು' 1973ರಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ನೇತೃತ್ವದಲ್ಲಿ ಮೈಸೂರಿನಲ್ಲಿ ಸಮಾವೇಶ ನಡೆಸಿ, ನವ್ಯ ಸಾಹಿತ್ಯದ ಹಿಂದೆ ತಾನು ಗುರುತಿಸಿದ ಅಘೋಷಿತ ಸಾಂಸ್ಕೃತಿಕ ರಾಜಕೀಯ ಪ್ರಣಾಳಿಕೆಯ ವಿರುದ್ಧ ಸಮರ ಸಾರಿತು. ಇದರ ಅಧ್ಯಕ್ಷರು, ಜಿ.ಎಸ್.ಶಿವರುದ್ರಪ್ಪ, ಈ ಸಮಾವೇಶವನ್ನು ಉದ್ಘಾಟನೆ ಮಾಡಿದವರು ಕುವೆಂಪು. ಈ ಉದ್ಘಾಟನಾ ಭಾಷಣವೇ 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಎಂದು ಮುಂದೆ ಪ್ರಸಿದ್ಧವಾದದ್ದು. ಈ ಸಮಾವೇಶದ ಇನ್ನೊಂದು ಮುಖ್ಯ ಭಾಷಣವೆಂದರೆ, ಕನ್ನಡ ಸಾಹಿತ್ಯ-ಸಂಸ್ಕೃತಿಗಳನ್ನು ಕುರಿತ ಚರ್ಚೆಯ ನೆಲೆಗಳನ್ನೇ ಸಂಪೂರ್ಣ ಬದಲಿಸಿದ ತೇಜಸ್ವಿಯವರ 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ'.

ಈ ಸಮಾವೇಶದಲ್ಲಿ ಭಾಗವಹಿಸಿದ್ದ ಪ್ರಮುಖರೆಂದರೆ, ಪಿ.ಲಂಕೇಶ್, ದೇವನೂರ ಮಹಾದೇವ, ಎಂ.ಡಿ. ನಂಜುಂಡಸ್ವಾಮಿ, ಚಂದ್ರಶೇಖರ ಪಾಟೀಲ, ಸಿದ್ಧಲಿಂಗ ಪಟ್ಟಣಶೆಟ್ಟಿ, ಕೆ.ಎಂ. ಶಂಕರಪ್ಪ, ಕೆ. ರಾಮದಾಸ್, ರಾಜಶೇಖರ ಕೋಟಿ, ಪ. ಮಲ್ಲೇಶ್, ಆಲನಹಳ್ಳಿ ಕೃಷ್ಣ, ಬೆಸಗರಹಳ್ಳಿ ರಾಮಣ್ಣ, ಕಾಳೇಗೌಡ ನಾಗವಾರ, ಕಲ್ಲೆ ಶಿವೋತ್ತಮ ರಾವ್, ವಿಶುಕುಮಾರ್ ಮುಂತಾದವರು. ಈ ಒಕ್ಕೂಟ ಅದರ ಪದಾಧಿಕಾರಿಗಳ ನಡುವೆ ತಾಳಮೇಳವಿಲ್ಲದ ಕಾರಣ (ತೇಜಸ್ವಿ ಪ್ರಕಾರ) ಸಂಘಟನೆಯಾಗಿ ಬಹುಬೇಗ ಕಳೆದುಹೋಯಿತಾದರೂ, ಅದು ಉಂಟು ಮಾಡಿದ ಪ್ರಭಾವ ಕನ್ನಡ ಸಾಹಿತ್ಯದ ದಿಕ್ಕು ದೆಸೆಗಳನ್ನೇ ಬದಲಿಸಿ, ನವ್ಯ ಚಳವಳಿಗೆ ಅಂತ್ಯ ಹಾಡಿತು. ಈ ಸಮಾವೇಶದ ಪ್ರಮುಖ ಭಾಷಣಗಳು 'ಸಂಕ್ರಮಣ-60'ರಲ್ಲಿ ಪ್ರಕಟವಾಗಿವೆ.

2 ಇದು ನನ್ನ 'ಗಮನ'(1990) ವಿಮರ್ಶಾ ಸಂಕಲನದ 'ನಾಲ್ಕು ಕವನ ಸಂಕಲನಗಳು' ಶೀರ್ಷಿಕೆಯ ಲೇಖನದ ಭಾಗವಾಗಿ ಪ್ರಕಟವಾಗಿದೆ.

3 ಈ ಸಂದರ್ಭದಲ್ಲಿ ನನ್ನಲ್ಲಿ ಮೂಡಿದ ಇನ್ನೊಂದು ಅನ್ನಿಸಿಕೆಯೆಂದರೆ, ಅಡಿಗರಂತಹ ತೀವ್ರ ಸಂವೇದನಾಶೀಲ ಪ್ರತಿಭಾವಂತ ಕವಿ 'ಹಿಂದುತ್ವ'ದಂತಹ ಬರಡು ಸಿದ್ಧಾಂತಕ್ಕೆ ಮರುಳಾಗಿರಲಾರರು. ಮರುಳಾಗಿದ್ದಲ್ಲಿ, 'ಚಿಂತಾಮಣಿಯಲ್ಲಿ ಕಂಡ ಮುಖ', 'ಯಜಮಾನ' 'ಬಂಡಾಯ', 'ಪ್ರೀತಿ', 'ಮೈಗೆ ಹಿತವಾದರೆ', 'ಸಂತೋಷವಾಗುತ್ತದೆ', 'ಶಾಂತವೇರಿಯ ಅಶಾಂತ ಸಂತ'ದಂತಹ ಕವನಗಳನ್ನು ಬರೆಯಲಾರರು.

4 ಇದರ ಬಗ್ಗೆ ನಾನು ನನ್ನ 'ಅನೇಕ'(2005) ವಿಮರ್ಶಾ ಸಂಕಲನದ 'ಐದು ಪ್ರತಿಕ್ರಿಯೆಗಳು' ಶೀರ್ಷಿಕೆಯ ಲೇಖನದಲ್ಲಿ ವಿವರವಾಗಿಯೇ ಬರೆದಿದ್ದೇನೆ.

5 ಈ ಬಗ್ಗೆ ನಾನು ನನ್ನ ಇತ್ತೀಚಿನ 'ಇಲ್ಲಿ ಯಾರೂ ಅಮುಖ್ಯರಲ್ಲ' (2010) ಸಮಾಜವಾದಿ ಸಂಕಥನಗಳು-4 ಸಂಗ್ರಹದಲ್ಲಿನ 'ಸಮಕಾಲೀನ ಸಾಹಿತ್ಯ ಮತ್ತು ಸೃಜನಶೀಲತೆ' ಕುರಿತ ಲೇಖನದಲ್ಲಿ ವಿವರವಾಗಿ ಬರೆದಿದ್ದೇನೆ.

6 ಇದೇ ಸಂದರ್ಭದಲ್ಲಿ ಉಲ್ಲೇಖಿಸಲೇಬೇಕಾದ ತೇಜಸ್ವಿಯವರ ಇನ್ನೊಂದು ಮಾತೆಂದರೆ, 'ನಾನು ಹಲವಾರು ಯುವ ಬರಹಗಾರರ, ದಲಿತ, ಬಂಡಾಯ ಸಾಹಿತ್ಯ ಕಮ್ಮಟಗಳಲ್ಲಿ ಕುಳಿತು ಕೇಳಿದ್ದೇನೆ. ಅಲ್ಲೆಲ್ಲ ತಮ್ಮ ಬರವಣಿಗೆಯ ರಾಜಕೀಯ ಮತ್ತು ಸಾಮಾಜಿಕ ಆಯಾಮಗಳ ಬಗ್ಗೆ ಮಾತಾಡುತ್ತಾರೆಯೇ ಹೊರತು, ಸಾಹಿತ್ಯ ಒಂದು ಲಲಿತ ಕಲೆ, ತಮ್ಮ ಕಲಾಭಿವ್ಯಕ್ತಿ ಭಾಷೆಯಲ್ಲಿ ಅಭಿವ್ಯಕಿಯಾಗಿ ರೂಪುಗೊಳ್ಳುವಾಗ ಪಡೆಯುವ ಆಕಾರಗಳೇನು? ಹಿಂದಿನ ಸಾಹಿತ್ಯಕ್ಕೂ ತಮಗೂ ಸಾಮ್ಯಗಳೇನು? ವ್ಯತ್ಯಾಸಗಳೇನು? ಇತ್ಯಾದಿಗಳ ಬಗ್ಗೆ ಅವರು ಹೆಚ್ಚು ಚಿಂತಿಸಿದಂತೆ ಕಾಣಲಿಲ್ಲ.... ಸಾಹಿತ್ಯದಲ್ಲಿ ಎಂದೂ ಮೀಸಲಾತಿ ಪ್ರಶ್ನೆಯೇ ಬರುವುದಿಲ್ಲ. ನಮ್ಮ ಜಾತಿ ಆಧಾರದ ಮೇಲೆ ವಿಶೇಷ ಸೌಲಭ್ಯ ಯಾಚಿಸುವುದಕ್ಕಿಂತ ವಿಶ್ವದ ಶ್ರೇಷ್ಠ ಬರಹಗಾರರೊಡನೆ ಹೋಲಿಸಿ ಎರಡನೇ ಅಥವಾ ಮೂರನೇ ದರ್ಜೆ ಬರಹಗಾರನಾದರೂ ಒಳ್ಳಿತೆಂಬುದು ನನ್ನ ನಿಲುವು'

7 ಆಧುನಿಕ ಕನ್ನಡ ಸಾಹಿತ್ಯದಲ್ಲಿನ ವಾರಸುದಾರಿಕೆಗಳ ಬಗ್ಗೆ ವಿಶೇಷ ಆಸಕ್ತಿ ಮತ್ತು ಪರಿಶ್ರಮಗಳನ್ನು ತೋರಿರುವ ಈ ವಿಮರ್ಶಕರ ಪ್ರಕಾರ, ಕನ್ನಡ ಸಾಹಿತ್ಯವೆಂದಾಕ್ಷಣ ಈಗ ಇಬ್ಬರು ಶ್ರೀನಿವಾಸರು ನೆನಪಿಗೆ ಬರುತ್ತಾರೆ; ಒಬ್ಬರು ಶ್ರೀನಿವಾಸ ವೈದ್ಯರಾದರೆ, ಇನ್ನೊಬ್ಬರು ಕೆ.ಎಚ್. ಶ್ರೀನಿವಾಸರು!

8 ಅಂತರ್ಜಾತಿ ವಿವಾಹಿತರ ಸಮಾವೇಶವೊಂದರ ಸಂದರ್ಭದಲ್ಲಿ 'ಅಂತರ್ಜಾತಿ ವಿವಾಹ'ಗಳ ಬಗ್ಗೆ ಕೆ.ವಿ. ಸುಬ್ಬಣ್ಣನವರನ್ನು ಅಭಿಪ್ರಾಯ ಕೇಳಿದರೆ-ತಮ್ಮ ಆದರ್ಶ ಸಾಂಸ್ಕೃತಿಕ ನಾಯಕ ಶಿವರಾಮ ಕಾರಂತರು ಜಾತಿ ಬಿಟ್ಟು ಮದುವೆಯಾದ ಮುಕ್ಕಾಲು ಶತಮಾನದ ನಂತರವೂ-'ಸರಿ ಸರಿ, ಆದರೆ ಸಹೃದಯತೆ ಮತ್ತು ಸಮಾನ ಮನಸ್ಕತೆ ಗಮನದಲ್ಲಿರಬೇಕು' ಎಂದು ವಿಶೇಷ ಎಚ್ಚರಿಕೆ ಕೊಡುವರೆಂದರೆ ಏನು ಹೇಳುವುದು? ಜಾತಿ ವಿವಾಹಗಳಲ್ಲಿ ಈ ಸಹೃದಯತೆ ಮತ್ತು ಸಹಮನಸ್ಕತೆಗಳು ಸಹಜವೆಂದು ಇದರ ಅರ್ಥವಾದರೆ, ಸುಬ್ಬಣ್ಣ ಏನು ಹೇಳುತ್ತಿದ್ದಾರೆಂದು ಆಶ್ಚರ್ಯವಾಗುವುದಿಲ್ಲವೆ? ಏಕೆ ಹೀಗೆ?

9 ಈ ಲೇಖನ ಮತ್ತು ಅದಕ್ಕೆ ಪೂರಕವೆನ್ನಿಸುವ ಅವರ ಇನ್ನಷ್ಟು ಲೇಖನಗಳನ್ನೊಳಗೊಂಡ ಸಂಗ್ರಹ, 'ವಿಮರ್ಶೆಯ ವಿಮರ್ಶೆ' ಪ್ರಕಟವಾಗಿ ಎರಡು ವರ್ಷವಾಗುತ್ತಾ ಬಂದರೂ, ತಮ್ಮ 'ಗೆಣೆಕಾರ/ಕಾರ್ತಿ'ಯರ ಪುಸ್ತಕ ಬಂದೊಡನೆ ಪತ್ರಿಕೆಗಳಿಗೆ ವಿಮರ್ಶೆ ಬರೆಯಲು ಹಾತೊರೆದು ಬೀಳುವ ಈ ವಲಯದ ಯಾವೊಬ್ಬ ವಿಮರ್ಶಕನೂ/ಳೂ ಈ ಪುಸ್ತಕದ ಬಗ್ಗೆ ಒಂದು ವಿಮರ್ಶೆ ಬರೆಯುವುದರಿರಲಿ, ಎಲ್ಲೂ ಮಾತಾಡಲೂ ಹೋಗಿಲ್ಲ! ಅಷ್ಟೇ ಅಲ್ಲ, ಕನ್ನಡದ ಪ್ರಮುಖ ಪತ್ರಿಕೆ-'ಪುರವಣಿ'ಗಳಾವುವೂ ಇದರ ವಿಮರ್ಶೆ ಇರಲಿ, ಪರಿಚಯವನ್ನೂ ಮಾಡಿಸುವ ಗೋಜಿಗೆ ಹೋಗಿಲ್ಲ. ಇದೆಲ್ಲ ಏನನ್ನು ಸೂಚಿಸುತ್ತದೆ?

10 ಇದನ್ನೇ ಅವರು ನಂತರ ತಮ್ಮ 'ಜಾತಿ ಪದ್ಧತಿ ಮತ್ತು ಕಲಾಭಿವ್ಯಕ್ತಿ' ಎಂಬ ಲೇಖನದಲ್ಲಿ ಹೇಳಿದ್ದು ಹೀಗೆ: 'ಈ ನ್ಯೂನತೆಗಳನ್ನು ಕೇವಲ ಸಾಹಿತ್ಯದ ಮಟ್ಟಿಗೆ, ಸಂಸ್ಕೃತಿಯ ಮಟ್ಟಿಗೆ ರಿಪೇರಿ ಮಾಡಲು ಸಾಧ್ಯವೇ ಇಲ್ಲ. ಏಕೆಂದರೆ ಈ ನ್ಯೂನತೆ ಸಾಹಿತ್ಯದ ಸಾಲುಗಳ ನಡುವೆ ಪೂರ್ಣ ವಿರಾಮ, ಅರ್ಧ ವಿರಾಮ, ಕಾಮಾಗಳಿಂದಲೋ, ಸಮಾಸಗಳಿಂದಲೋ, ತತ್ಸಮ ತದ್ಭವಗಳಿಂದಲೋ ಉದ್ಭವಿಸಿರುವ ವ್ಯಾಕರಣ ದೋಷಗಳಲ್ಲ. ಅದರ ಬೇರುಗಳು ಸಾಹಿತ್ಯ ಸಾಂಸ್ಕೃತಿಕ ಕ್ಷೇತ್ರವನ್ನೂ ಮೀರಿ ಸಾಮಾಜಿಕ ಸ್ಥರದಲ್ಲಿ ದಟ್ಟವಾಗಿ ವ್ಯಾಪಿಸಿರುವುದರಿಂದಲೇ, ಜಾತಿ ಪದ್ಧತಿಯನ್ನು ಅಲ್ಲಿ ನಿರ್ನಾಮ ಮಾಡಿದರೆ ಮಾತ್ರ ಮಿಕ್ಕ ಕ್ಷೇತ್ರಗಳಲ್ಲಿ ಮುಸುಗಿರುವ ಹೊಗೆ ತಿಳಿಯಾಗುತ್ತದೆ ('ವಿಮರ್ಶೆಯ ವಿಮರ್ಶೆ')

11 'ಗಮನ'(1990)ದ 'ನವ್ಯೋತ್ತರ ವಿಮರ್ಶೆ: ಒಂದು ತಾತ್ವಿಕ ನೋಟ', 'ಬೇರು ಬಿಳಲು'(2006)ವಿನ 'ಆಧುನಿಕ ಕನ್ನಡದ ತಾತ್ವಿಕ ಸಂವಾದಗಳು', 'ಈ ಭೂಮಿಯಿಂದ ಆ ಆಕಾಶದವರೆಗೆ'(2007)ವಿನ 'ತೇಜಸ್ವಿಯವರ ಸಾಹಿತ್ಯ ಮೀಮಾಂಸೆ' ಹಾಗೂ 'ಇಲ್ಲಿ ಯಾವುದೂ ಅಮುಖ್ಯವಲ್ಲ'(2010)ದ 'ತೇಜಸ್ವಿಯವರ ಪರ್ಯಾಪ್ತ ಸಂಸ್ಕೃತಿ ಚಿಂತನೆ' ಹಾಗೂ 'ತೇಜಸ್ವಿಯವರ ಬೌದ್ಧ ಮಾರ್ಗ ಪ್ರವರ್ತಕತೆ' ಲೇಖನಗಳನ್ನು ಗಮನಿಸಬಹುದು.

12 ಇದೇ ಸಂಬಂಧವಾಗಿ, ತಾವು ಕೋಮುವಾದದ ವಿಷಯವಾಗಿ ಕೋಮುವಾದ ಕುರಿತ 'ವಾಗ್ವಾದ'ಧಲ್ಲಿ ತೇಜಸ್ವಿ ಜೊತೆಗಿರಲಾರೆನೆಂದೂ; ಅನಂತಮೂರ್ತಿ ಮತ್ತು ಸುಬ್ಬಣ್ಣನವರ ಪರವಾಗಿ ಇರಬಯಸುವುದಾಗಿಯೂ ಹೇಳಿದ್ದಾರೆ. ಆದರೆ, ಎನ್.ಡಿ.ಎ. ಸರ್ಕಾರ ಚುನಾವಣೆ ಮೂಲಕ ಪದಚ್ಯುತವಾಗವವರೆಗೆ ಕೋಮುವಾದ ಕುರಿತ ಅನಂತಮೂರ್ತಿಯವರ ನಿಲುವು ಹೇಗಿತ್ತು(ಗುಜರಾತ್‌ನಲ್ಲಿ ಮುಸ್ಲಿಮರ ನರಮೇಧ ನಡೆಯುತ್ತಿದ್ದ ಸಂದರ್ಭದಲ್ಲಿ, ಆ ಬಗ್ಗೆ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಅನಂತಮೂರ್ತಿಯವರು ನೀಡಿದ ಎಚ್ಚರ ತುಂಬಿದ 'ಸೂಕ್ಷ್ಮ ಸಮತೋಲನ'ದ ಉತ್ತರ ಹೀಗಿತ್ತು: 'ಈ ದೇಶಕ್ಕೆ ಮೋದಿ ಮತ್ತು ಲಾಲೂ ಅವರ ರಾಜಕಾರಣ ಒಳ್ಳೆಯದಲ್ಲ!') ಮತ್ತು ಆನಂತರ ಯಾವ ತೀವ್ರತೆ ಪಡೆಯಿತು ಎಂಬುದನ್ನು ಫಣಿರಾಜ್ ಸ್ವಲ್ಪ ವಿವರವಾಗಿ ಗಮನಿಸಿದರೆ ಒಳ್ಳೆಯದು. ಇನ್ನು ಸುಬ್ಬಣ್ಣನವರ ಸುಪ್ರಸಿದ್ಧ 'ಗುಜರಾತ್ ಸ್ವಗತ' ಓದಿ, ಅದರ ಧಾಟಿ ನೋಡಿ ನನಗಂತೂ, ಗುಜರಾತಿನ ಮುಸಲ್ಮಾನರ ಬಗೆಗಿಂತ ಸುಬ್ಬಣ್ಣನವರ ಬಗೆಗೇ 'ಅಯ್ಯೋ ಪಾಪ! ಎನಿಸಿತ್ತು! □

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು:-

ಡೆಂಗಿ ಜ್ವರ ಎಂದರೇನು?

ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಕಾಯಿಲೆ. ಈ ಕಾಯಿಲೆಯು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು:-

1) ಡೆಂಗಿ ಹರಡುವ ಈಜಿಪ್ಟೈ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕುಂಡದ ನೀರಿನ ಸಂಗ್ರಹಗಳು, ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.

2) ಬಯಲಲ್ಲಿ ಪೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

3) ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ಧರು, ಕಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದು. ಹೀಗೆ ಮಾಡುವುದರಿಂದ ಈ ರೋಗವನ್ನು ತಡೆಗಟ್ಟುವುದು ಸುಲಭ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

ಕರ್ನಾಟಕ ವಾರ್ತೆ
Karnataka Information

ಸಮಾಜ ಹಾಗೂ ಸಂಸ್ಕೃತಿ ವಿಶ್ಲೇಷಣೆ

ಕವಿಯಾಗಿ, ವಿಮರ್ಶಕರಾಗಿ, ಸಂಪಾದಕರಾಗಿ, ಸಂಶೋಧಕರಾಗಿ ಮತ್ತು ವೈಚಾರಿಕ ಬರಹಗಾರರಾಗಿ ಹೀಗೆ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳಲ್ಲಿ ಹಲವಾರು ಕೃತಿಗಳನ್ನು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಡಾ. ಕಾ.ವೆಂ. ಶ್ರೀನಿವಾಸಮೂರ್ತಿಯವರ ಮತ್ತೊಂದು ಕೃತಿಯೇ 'ಉರಿಯ ಪೇಟೆ', ಈ ಕೃತಿಯು ಮುಖ್ಯವಾಗಿ ಭಾಷೆ, ಕೋಮು ಸೌರ್ಹಾದತೆ, ಹೆಣ್ಣು ಜಾಗತೀಕರಣ, ದಲಿತ-ಬಂಡಾಯ ಚಳುವಳಿ, ಸಾಮಾಜಿಕ ಮತ್ತು ಖಾಸಗಿ ವಲಯ, ಶಿಕ್ಷಣ, ಗಾಂಧಿ, ಬಿ.ವಿ.ಕಾರಂತ, ಧಾರ್ಮಿಕ ಸೌರ್ಹಾದತೆ.. ಇತ್ಯಾದಿ ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಭಿನ್ನ ವಿಚಾರಗಳನ್ನು ಕುರಿತು ತಮ್ಮ ತಾತ್ವಿಕ ನೆಲೆಗಟ್ಟಿನಲ್ಲಿ ವಿಶ್ಲೇಷಣೆ ಮಾಡಿರುವ ಕೃತಿ.

ಈ ಕೃತಿಗೆ ಡಾ. ಸಿದ್ದನಗೌಡ ಪಾಟೀಲರು ಮುನ್ನುಡಿಯನ್ನು ಬರೆಯುತ್ತ ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುವರು. "ಉರಿಯ ಪೇಟೆ" ಕೃತಿಯ ಎಲ್ಲ ಲೇಖನಗಳಲ್ಲೂ ಜಾಗತೀಕರಣ ಮತ್ತು ಅದು ಸೃಷ್ಟಿಸಿದ ವ್ಯಾವಹಾರಿಕ ಸಮಾಜದ ಎಲ್ಲ ಮುಖಗಳ ವಿಶ್ಲೇಷಣೆ ಇದೆ ಮತ್ತು ಪರ್ಯಾಯ ಸೂಚನೆ ಇದೆ. ಕಮ್ಯುನಿಸ್ಟ, ದಲಿತ, ಒಟ್ಟಾರೆ ಪ್ರಗತಿಪರ ಚಳುವಳಿಗಳ ಕುರಿತ ವಿಮರ್ಶೆ ಹಾಗೂ ಆಶಯಗಳು, ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಭಾಷೆ ಇವುಗಳ ವಾಸ್ತವ ಸ್ಥಿತಿ-ಗತಿ, ಜಾತಿಧರ್ಮಗಳು ನಿರ್ಮಿಸಿದ ವಾತಾವರಣ ಇವು ಈ ಲೇಖನಗಳಲ್ಲಿನ ಪ್ರಧಾನ ವಸ್ತು, ಎಲ್ಲ ಲೇಖನಗಳು ಚಿಂತನೆಗೆ ಅರ್ಹವಾಗಿವೆ ಮತ್ತು ಪ್ರತಿಚಿಂತನೆಗೆ ಆಹ್ವಾನವನ್ನು ಕೊಡುತ್ತವೆ ಎಂದು ಹೇಳುತ್ತಲೇ ಕೃತಿಕಾರರು ಸಂಘಟನೆ ಮತ್ತು ಸಾಹಿತ್ಯ ರಚನೆ ಎರಡನ್ನು ಏಕಕಾಲಕ್ಕೆ ರೂಢಿಸಿಕೊಂಡವರು ಎಂದು ಗುರುತಿಸುತ್ತಾರೆ.

ಒಟ್ಟು ಹದಿನಾರು ಲೇಖನಗಳನ್ನು ಒಳಗೊಂಡ ಈ ಕೃತಿಯು ಸಾಹಿತ್ಯ ಮತ್ತು ಸಮಾಜಕ್ಕೆ ಸಂಬಂಧಿಸಿದ ವಿಚಾರಗಳನ್ನು ಅಭಿವ್ಯಕ್ತಪಡಿಸುತ್ತ ಸಂಸ್ಕೃತ ವಿಶ್ವವಿದ್ಯಾಲಯದ ಅವಶ್ಯಕತೆಯನ್ನು ಕುರಿತಂತೆ, "ಸಂಸ್ಕೃತದ ವಕ್ತಾರರ ಪಾಪದ ಹೊರೆ ಕಮ್ಮಿಯಾಗುಲಿ" ಲೇಖನದಲ್ಲಿ ಬಹಳ ಗಂಭೀರವಾದ ಪ್ರಶ್ನೆಗಳನ್ನು ಎತ್ತುವರು. ಪ್ರಸ್ತುತ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತದ ವಿಭಾಗಕ್ಕೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ಬೆರಳೆಣಿಕೆಯಷ್ಟಿದೆ. ಯು.ಜಿ.ಸಿ. ನಿಯಮಾವಳಿಗಳ ಪ್ರಕಾರ ಒಂದು ವಿಭಾಗಕ್ಕೆ ಅಧ್ಯಯನಕ್ಕೆ ಸೇರುವ ವಿದ್ಯಾರ್ಥಿಗಳ ಸಂಖ್ಯೆ ನಿರ್ದಿಷ್ಟವಾಗಿರಬೇಕು ಮತ್ತು ಒಂದು ವಿಶ್ವವಿದ್ಯಾಲಯದ ಅಸ್ತಿತ್ವಕ್ಕೆ ಕನಿಷ್ಟ ನೂರು ಕಾಲೇಜುಗಳಾದರು ಇರಬೇಕು. ರಾಜ್ಯದ ಜನತೆ ಮತ್ತು ವಿದ್ವಾಂಸರು ಇದರ ಸ್ಥಾಪನೆಯ ಅಗತ್ಯ ತೆಯನ್ನು ಎಲ್ಲಿಯೂ ಕೇಳಿಲ್ಲ.. ಹೀಗೆ ಕೃತಿಕಾರರು ಎತ್ತುವ ಅನೇಕ ಪ್ರಶ್ನೆಗಳು ವಾಸ್ತವದಲ್ಲಿ ಸೂಕ್ತವಾದಂತವುಗಳೇ ಆಗಿವೆ. ಅದ್ದರಿಂದ ಈ ವಿಷಯವನ್ನು ಕುರಿತು ಗಂಭೀರವಾದ ಚರ್ಚೆಗಳಾಗಬೇಕಿದೆ. ಅಂತಿಮವಾಗಿ ಇದರ ಅಗತ್ಯತೆಯನ್ನು ಕುರಿತು ನಾಡಿನ ವಿದ್ವಾಂಸರು ಮತ್ತು ಜನತೆಯೊಂದಿಗೆ ಚರ್ಚಿಸಿ ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ ಎನ್ನಬಹುದು.

"ಕನ್ನಡ ಪರಂಪರೆಯಲ್ಲಿ ಕೋಮುಸೌಹಾರ್ದತೆ" ಲೇಖನದಲ್ಲಿ ಬಹಳ ಹಿಂದಿನಿಂದಲೂ ಕೋಮುಸೌಹಾರ್ದತೆಗೆ ಸಂಬಂಧಿಸಿದ ವಿಚಾರಗಳು ಅನೇಕ ಕೃತಿಗಳ ಮೂಲಕ ಮೂಡಿಬಂದಿರುವುದನ್ನು ಕಾಣಬಹುದು. ಅವರಲ್ಲಿ ಪಂಪ, ರನ್ನ ಮುಂತಾದ ಮಾರ್ಗಕವಿಗಳೊಂದಿಗೆ ವಚನಕಾರರು, ಕೀರ್ತನಕಾರರು, ತತ್ವಪದಕಾರರು, ಆಧುನಿಕ ಸಂದರ್ಭದ ದಲಿತ-ಬಂಡಾಯ ಕವಿಗಳ ಕಾವ್ಯಗಳಲ್ಲಿಯೂ ಕೋಮು ಸೌರ್ಹದತೆ ಮತ್ತು ಸಮಾಜದ ಸಾಮರಸ್ಯಕ್ಕೆ ಸಂಬಂಧಿಸಿದ ಚಿಂತನೆಗಳು ಹೇಗೆ ಅಭಿವ್ಯಕ್ತಿಗೊಂಡಿವೆ ಎಂಬ ಅಂಶವನ್ನು ಗುರುತಿಸಲಾಗಿದೆ. ಹಾಗೆ ಸಾಹಿತ್ಯದ ಜೊತೆಗೆ ದರ್ಗಾ, ಗದ್ದುಗೆಗಳಂತ ಸ್ಥಳಗಳು ಕೂಡ ಈ ನಿಟ್ಟಿನಲ್ಲಿ ಕೋಮು ಸೌರ್ಹದತೆಗೆ ಸಹಕರಿಸಿವೆ.

"ಹೆಣ್ಣು: ಸೌಂದರ್ಯೋದ್ಯಮದ ಸರಕೇ?" ಲೇಖನದಲ್ಲಿ ಹೆಣ್ಣನ್ನು ಜಾಗತಿಕ ಮಾರುಕಟ್ಟೆಯಲ್ಲಿ ಬಂಡವಾಳ ಮಾಡಿಕೊಂಡು ಹಲವಾರು ರೀತಿಯ ವಸ್ತುಗಳ ಉತ್ಪಾದನೆ ಮತ್ತು ಆ ಮೂಲಕ ಬಂಡವಾಳಶಾಹಿ ವ್ಯವಸ್ಥೆ ಹಾಗೂ ಕೈಗಾರಿಕೋದ್ಯಮಿಗಳು ಆರ್ಥಿಕವಾಗಿ ಸುಭದ್ರವಾಗುತ್ತಿರುವುದು, ಇದಕ್ಕೆ ಚಲನಚಿತ್ರ, ದೂರದರ್ಶನದಂತಹ ಮಾಧ್ಯಮಗಳು ಸಹಕರಿಸುತ್ತಿರುವ ಅಂಶವನ್ನು ಗುರುತಿಸುವರು. ಇತ್ತೀಚಿಗೆ ವಿಶ್ವ ಸುಂದರಿಯಂತಹ ಜಾಗತಿಕ ಮಟ್ಟದ ಸ್ಪರ್ಧೆ ರಾಷ್ಟ್ರ, ರಾಜ್ಯ, ವಿಶ್ವವಿದ್ಯಾಲಯ, ಶಾಲಾಕಾಲೇಜು ಮುಂತಾದ ಕಡೆ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿರುವುದು, ಇದರ ಹಿಂದೆ ಇರುವ ಕೈಗಾರಿಕೋದ್ಯಮಿಗಳ ಸಹಕಾರ ಸಮಾಜಕ್ಕೆ ದುರಂತದ ಸಂಗತಿ ಎಂದು ಸಾಮಾಜಿಕ ಕಾಳಜಿಯನ್ನು ಇಲ್ಲಿ ವ್ಯಕ್ತಪಡಿಸಿರುವುದು ಮುಖ್ಯವಾದ್ದು..

"ಜಾಗತೀಕರಣ ಮತ್ತು ಪುಸ್ತಕ ಸಂಸ್ಕೃತಿ" ಲೇಖನದಲ್ಲಿ ಭಾರತದಲ್ಲಿ ಜಾಗತೀಕರಣದ ಪ್ರವೇಶದಿಂದಾಗಿ, ಪುಸ್ತಕ ಸಂಸ್ಕೃತಿಯಲ್ಲಿ ಉಂಟಾದ ತಳಮಳಗಳನ್ನು ಕುರಿತು ತಿಳಿಸುವ ಪ್ರಯತ್ನವಿದೆ. ದೂರದರ್ಶನ ಹಾಗೂ ಕಂಪ್ಯೂಟರ್‌ನಂತಹ ಆಧುನಿಕ ವ್ಯವಸ್ಥೆಗಳಿಂದ ಓದುವ ಸಂಸ್ಕೃತಿಯು ನಶಿಸುತ್ತಿರುವುದು. ಕೈಗಾರಿಕಾ ಕ್ರಾಂತಿಯ ಕಾರಣದಿಂದ ಕಾಗದ ಉದ್ದಿಮೆಯ ಪ್ರವೇಶ, ಹಾಳೆ ಸಂಸ್ಕೃತಿಯ ಜಾಗದಲ್ಲಿ ಪುಸ್ತಕ ಸಂಸ್ಕೃತಿ ಪ್ರವೇಶ, ಕಂಪ್ಯೂಟರ್ ಸಿಡಿ ರೋಮ್(ಇ.ಬುಕ್) ಹೀಗೆ ಕಾಲಕ್ರಮೇಣವಾಗಿ ಓದುವ ವಿಧಾನದಲ್ಲಿ ಉಂಟಾದ ಬದಲಾವಣೆಯ ಅಂಶಗಳನ್ನು ಗುರುತಿಸಲಾಗಿದೆ. ವ್ಯಾಪಾರ, ಬ್ಯಾಂಕಿಂಗ್, ಶಿಕ್ಷಣ, ಪತ್ರಿಕೆ ಮುಂತಾದ ಕ್ಷೇತ್ರಗಳಲ್ಲಿ ಪುಸ್ತಕ ಸಂಸ್ಕೃತಿಯು ಗೌಣವಾಗಿ ಕಂಪ್ಯೂಟರ್ ಸಂಸ್ಕೃತಿಯು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತಿರುವುದು ಮುಂತಾದ ವಿಚಾರಗಳನ್ನು ಕುರಿತು ವರ್ತಮಾನದ ನೆಲೆಯಲ್ಲಿ ವಿಶ್ಲೇಷಿಸುವರು.

ಹಾಗೆ ಪ್ರಸ್ತುತ ಸಂದರ್ಭಕ್ಕೆ ಪುಸ್ತಕ ಸಂಸ್ಕೃತಿ ಮತ್ತು ಕಂಪ್ಯೂಟರ್ ಸಂಸ್ಕೃತಿ ಎರಡರ ಅನಿವಾರ್ಯತೆಯನ್ನು ಕುರಿತು ಹೇಳುವರು. ಬದಲಾವಣೆ ಎಂಬುದು ಸಮಾಜದ ನಿಯಮವಾಗಿರುವುದರಿಂದ ಕಾಲಕ್ರಮೇಣವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಉಂಟಾದ ಕ್ರಾಂತಿಗಳಿಂದಾಗಿ ಈ ರೀತಿಯ ಬದಲಾವಣೆಯ ಪ್ರಕ್ರಿಯೆಗಳು ಸಹಜವಾಗಿವೆ. ಇಲ್ಲಿನ ವಿಷಯವನ್ನು ಕುರಿತು ದೂರವಾಣಿಯ ಕ್ಷೇತ್ರಕ್ಕೂ ಅನ್ವಯ ಮಾಡಿಕೊಳ್ಳಬಹುದು.

"ಕಮ್ಯುನಿಸ್ಟ ಚಳುವಳಿ ಮತ್ತು ದಲಿತ ಚಳುವಳಿ" ಲೇಖನದಲ್ಲಿ ಭಾರತೀಯ ಸಂದರ್ಭದಲ್ಲಿ ಕಮ್ಯುನಿಸ್ಟ್ ಚಳುವಳಿಯು ತಾತ್ವಿಕವಾಗಿ ಒಳಗೊಳ್ಳುವ ಸೈದ್ಧಾಂತಿಕತೆ ಮತ್ತು ಕರ್ನಾಟಕದ ಸಂದರ್ಭದಲ್ಲಿ ದಲಿತ ಚಳುವಲಿಯು ತಾತ್ವಿಕವಾಗಿ ಪಡೆದುಕೊಳ್ಳುವ ಪ್ರಾಮುಖ್ಯತೆಯನ್ನು ಕುರಿತು ವಿವರಿಸಲಾಗಿದೆ. ಕಮ್ಯುನಿಸ್ಟ ಚಳವಳಿಯು ಭಾರತೀಯ ವರ್ಗವ್ಯವಸ್ಥೆಯ ಶೋಷಣೆಯನ್ನು ಪ್ರತಿಭಟಿಸಿ ಸಮಾನತೆಗಾಗಿ ಹಾತೊರೆದರೆ, ದಲಿತ ಚಳುವಳಿಯು ಹಿಂದು ಧರ್ಮದಲ್ಲಿನ ಅನಿಷ್ಟ ಜಾತಿವ್ಯವಸ್ಥೆಯ ಮೌಢ್ಯತೆಯನ್ನು ಕುರಿತು ಪ್ರತಿಭಟಿಸುವುದಾಗಿದೆ. ಕಾರ್ಲ್‌ಮಾರ್ಕ್ಸ್ ಮತ್ತು ಏಂಜೆಲ್ಸ ಕಮ್ಯುನಿಸ್ಟ್ ಚಳುವಳಿಗೆ ಪ್ರೇರಕ ಶಕ್ತಿಗಳಾದರೆ, ದಲಿತ ಚಳವಳಿಗೆ ಅಂಬೇಡ್ಕರ್ ಪ್ರೇರಕ ಶಕ್ತಿಯಾಗುವರು. ಎರಡು ಚಳುವಳಿಗೆ ಮುಖ್ಯ ಆಶಯವೆಂದರೆ ಸಾಮಾಜಿಕ ಸಮಾನತೆ ಎನ್ನಬಹುದು.

"ಪೂನ ಒಪ್ಪಂದ: ಒಂದು ತಾತ್ವಿಕ ನೋಟ" ಲೇಖನ ದಲಿತರಿಗೆ ಪ್ರತ್ಯೇಕ ಮೀಸಲಾತಿ ಮತ್ತು ಪ್ರತ್ಯೇಕ ಮತಕ್ಷೇತ್ರಗಳನ್ನು ಕಲ್ಪಿಸಿಕೊಡಬೇಕು ಎಂಬ ವಿಚಾರಕ್ಕೆ ಸಂಬಂಧಿಸಿದಂತೆ, ಬ್ರಿಟಿಷ್ ಸರ್ಕಾರದ ಸಂದರ್ಭದಲ್ಲಿ ನಡೆದಂತಹ ಘಟನೆಗೆ ಸಂಬಂಧಿಸಿದ್ದಂತಹದ್ದು. ಇಲ್ಲಿ ಅಂಬೇಡ್ಕರ್ ಈ ಎರಡು ಸೌಲಭ್ಯಗಳು ಭಾರತದಲ್ಲಿನ ದಲಿ

ಪುಸ್ತಕ ಅವಲೋಕನ



ಪ್ರಕಾಶಕರು: ಡಾ.ಕಾ.ವೆಂ. ಶ್ರೀನಿವಾಸಮೂರ್ತಿ
ಬೆಲೆ : ರೂ ೬೦/-
ಪ್ರ : ಲಡಾಯಿ ಪ್ರಕಾಶನ ಗದಗ

ಡಾ. ಮುನಿಯಪ್ಪ

ತರಿಗೆ ದೊರೆತರೆ ಮಾತ್ರ ಅವರು ಸಾಮಾಜಿಕವಾಗಿ ಜಾತಿಯ ಶೋಷಣೆಯಿಂತ ಮುಕ್ತಿ ಪಡೆಯಲು ಸಾಧ್ಯ ಎಂಬ ಚಿಂತನೆಯನ್ನು ಪೂನಾ ಒಪ್ಪಂದದ ಸಂದರ್ಭದಲ್ಲಿ ಮಂಡಿಸುವರು. ಆದರೆ ಇದಕ್ಕೆ ವಿರೋಧಿಸಿದ ಗಾಂಧಿಜಿಯವರು ದಲಿತರಿಗೆ ಮೀಸಲಾತಿ ಸೌಲಭ್ಯವನ್ನು ಕೊಟ್ಟು ಪ್ರತ್ಯೇಕ ಮತಕ್ಷೇತ್ರಗಳನ್ನೂ ನೀಡಲು ಸಾಧ್ಯವಿಲ್ಲ ಎಂದು ಪೂನಾದ ಎರವಾಡ ಜೈಲಿನಲ್ಲಿ ಅಮರಣಾಂತರ ಉಪವಾಸ ಸತ್ಯಗ್ರಹ ಕೈಗೊಳ್ಳುವರು. ಈ ಸಂದರ್ಭದಲ್ಲಿ ಅಂಬೇಡ್ಕರ್ ಗಾಂಧೀಯವರ ಮಾತಿಗೆ ಒಪ್ಪಿಕೊಂಡು, ಅವರ ಪ್ರತಿನಿಧಿಯಾದ ಮದನಮೋಹನಮಾಳವೀಯವರ ಸಮ್ಮುಖದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕುವರು. ಪೂನಾ ಒಪ್ಪಂದದಲ್ಲಿ ಗಾಂಧೀಜಿಯವರು ದಲಿತರಿಗೆ ಪ್ರತ್ಯೇಕ ಮತಕ್ಷೇತ್ರಗಳನ್ನು ತಿರಸ್ಕರಿಸಲು ಮತ್ತು ಅಂಬೇಡ್ಕರ್‌ರವರು ದಲಿತರಿಗೆ ಅದರ ಅವಶ್ಯಕತೆ ಎಷ್ಟು ಎಂಬುದನ್ನು ಕುರಿತಂತೆ ಅನೇಕ ಅಂಶಗಳನ್ನು ಕುರಿತು ಈ ಚಾರಿತ್ರಿಕ ಘಟನೆಯು ಬೆಳಲು ಚೆಲ್ಲುತ್ತದೆ.

"ಬಂಡಾಯ ಇಪ್ಪತ್ತೈದು: ಆಶಯ" ಲೇಖನದಲ್ಲಿ ಈ ಚಳವಳಿಯ ಉಗಮ, ಪ್ರಸ್ತುತ ಸಂದರ್ಭದಲ್ಲಿ ಅದರ ಅನಿವಾರ್ಯತೆ ಮತ್ತು ಮಿತಿಗಳನ್ನು ಕುರಿತಂತೆ ಸಕ್ರಿಯವಾಗಿ ತಾವು ತೊಡಗಿಕೊಂಡ ವಿವರಗಳನ್ನು ಕಟ್ಟಿಕೊಡುವರು. ಈ ಚಳುವಳಿಯು ಸದ್ಯಕ್ಕೆ ಸ್ಥಗಿತವಗಿದೆ ಎಂಬ ಮಾತಿಗೆ ಸಂಬಂಧಿಸಿದಂತೆ ಅವರೇ ಹೀಗೆ ಹೇಳುವರು. "ಬಂಡಾಯ ಸಾಹಿತ್ಯ ಮತ್ತು ಚಳುವಳಿಗಳು ಎಂದಿಗೂ ಸಾಯುವುದಿಲ್ಲ. ಸಮಾಜದಲ್ಲಿ ಸವಾಲು ಮತ್ತು ಜಾಗೃತ ಮನಸ್ಸು ಎರಡೂ ಒಟ್ಟೊಟ್ಟಿಗೆ ಇರುವವರೆಗೂ ಅವು ಜೀವಂತವಾಗಿರುತ್ತದೆ. ಹಾಗೊಮ್ಮೆ ಬಂಡಾಯಕ್ಕೆ ಸಾವು ಬಂದಿದೆ ಎಂದರೆ ಅದು ವಿಜಯದ ಗಡಿಯನ್ನು ಮುಟ್ಟಿ ತನ್ನ ಸರ್ವಸಮಾನತೆಯ ಆಶಯವನ್ನು ಸಂಪೂರ್ಣವಾಗಿ ಪೂರೈಸಿಕೊಂಡಿದೆ ಎಂದೇ ಅರ್ಥ. ಸದೇ ಬಂಡಾಯದ ವಿಜಯ ಮತ್ತು ಸಾವು. ಇದು ಆದಷ್ಟು ಬೇಗ ಸಾಧ್ಯವಾಗಬೇಕು ಎನ್ನುವುದು ಸಂಘಟನೆಯ ಆಶಯ" ಎನ್ನುವ ಅವರ ಮಾತುಗಳಲ್ಲಿ ವರ್ತಮಾನ ಸಂದರ್ಭ ಬಂಡಾಯ ಚಳವಳಿ ಪ್ರಸ್ತುತತೆಯನ್ನು ಕುರಿತು ಗುರಿತಿ ಸಬಹುದು. ಪ್ರಗತಿಶೀಲ, ದಲಿತಚಳವಳಿ ಸ್ಥಿತಿ–ಗತಿಗಳು ಕೂಡ ಪ್ರಸ್ತುತ ಸಂದರ್ಭದಲ್ಲಿ ಭಿನ್ನವೇನಲ್ಲ. ಸಾಹಿತ್ಯವು ಸದಾ ಕಾಲ ಹೇಗೆ ಚಲನಶೀಲತೆಯನ್ನು ಪಡೆದುಕೊಳ್ಳುತ್ತಿರು ತ್ತದೋ ಹಾಗೆಯೇ ಚಳವಳಿಯು ಕೂಡ ಸದಾ ಕಾಲ ಚಲನಶೀಲತೆಯನ್ನು ಪಡೆದುಕೊಳ್ಳುತ್ತಿರುತ್ತದೆ.

"ಖಾಸಗಿ ವಲಯ ಮತ್ತು ಸಾಮಾಜಿಕ(ಅ)ನ್ಯಾಯ" ಲೇಖನದಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ನಿಧಾನವಾಗಿ ಖಾಸಗಿ ವಲಯಕ್ಕೆ ಸೇರಿಕೊಳ್ಳಲು ಸರ್ಕಾರದ ಪಾತ್ರವೇನು? ಹಾಗೂ ಖಾಸಗಿ ವಲಯದ ಕಂಪನಿಗಳಲ್ಲಿ ಪ್ರಾದೇಶಿಕತೆ, ಮೀಸಲಾತಿ, ಭಾಷೆ, ಸ್ಥಳೀಯತೆ... ಮುಂತಾದ ನೆಲೆಗಳಲ್ಲಿ ಸಿಗುತ್ತಿರುವ ಸಾಮಾಜಿಕ ನ್ಯಾಯವನ್ನು ಕುರಿತಂತ ವಿಚಾರಗಳನ್ನು ಚರ್ಚಿಸಲಾಗಿದೆ. ದೇಶದ ಹಲವಾರು ಪ್ರಖ್ಯಾತ ಸರ್ಕಾರಿ ಸಂಸ್ಥೆಗಳು ಮುಚ್ಚಲು ಅಥವಾ ಖಾಸಗಿವಲಯಕ್ಕೆ ಪ್ರವೇಶಿಸಲು ಮುಖ್ಯ ಕಾರಣವೆಂದರೆ ನಮ್ಮ ರಾಜಕೀಯ ವ್ಯವಸ್ಥೆಯ ದುರ್ಬಲತೆ ಎನ್ನಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆಯಿಂದ ಆಯ್ಕೆಗೊಂಡ ಸರ್ಕಾರಗಳು ತಮ್ಮ ಸ್ವಾರ್ಥಕ್ಕಾಗಿ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಖಾಸಗಿ ವಲಯಕ್ಕೆ ಮಾರಿಕೊಳ್ಳುತ್ತಿರುವುದು ಅಥವಾ ಆ ಸಂಸ್ಥೆಗಳ ಜೊತೆಗೆ ಐ.ಟಿ.ಐ, ಎನ್.ಜಿ.ಇ.ಎಫ್, ಎಂ.ಎಸ್. ಐ.ಎಲ್. ಮುಂತಾದವುಗಳನ್ನು ನಿದರ್ಶನವಾಗಿ ನೀಡಬಹುದು.

ಪ್ರಗತಿಶೀಲ, ದಲಿತ ಚಳವಳಿ ಸ್ಥಿತಿ–ಗತಿಗಳು ಕೂಡ ಪ್ರಸ್ತುತ ಸಂದರ್ಭದಲ್ಲಿ ಭಿನ್ನವೇನಲ್ಲ. ಸಾಹಿತ್ಯವು ಸದಾಕಾಲ ಹೇಗೆ ಚಲನಶೀಲತೆಯನ್ನು ಪಡೆದುಕೊಳ್ಳುತ್ತಿರುತ್ತದೋ ಹಾಗೆಯೇ ಚಳವಳಿಯು ಕೂಡ ಸದಾಕಾಲ ಚಲನಶೀಲತೆಯನ್ನು ಪಡೆದುಕೊಳ್ಳುತ್ತಿರುತ್ತದೆ.

"ಬದಲಾಗುತ್ತಿರುವ ಸನ್ನಿವೇಶದಲ್ಲಿ ಸಾಮಾನ್ಯ ಶಿಕ್ಷಣ" ಇಲ್ಲಿ ಮುಖ್ಯವಾಗಿ ಸಾಮಾನ್ಯ ಶಿಕ್ಷಣ ಅಥವಾ ಸಾಂಪ್ರದಾಯಿಕ ಶಿಕ್ಷಣ ಕಾಲಕ್ರಮೇಣವಾಗಿ ಕ್ಷೀಣಿಸುತ್ತಿರುವುದು, ಹಾಗೂ ಈ ಸ್ಥಾನವನ್ನು ವೃತ್ತಿ ಶಿಕ್ಷಣ ಆಕ್ರಮಿಸಿಕೊಳ್ಳುತ್ತಿರುವ ಅಂಶವನ್ನು ಗುರುತಿಸಲಾಗಿದೆ. ವರ್ತಮಾನದ ಸಂದರ್ಭದಲ್ಲಿ ಸಾಮಾನ್ಯ ಶಿಕ್ಷಣವನ್ನು ಉಳಿಸಿಕೊಳ್ಳಬೇಕಾದರೆ, ವೃತ್ತಿಯ ಶಿಕ್ಷಣಕ್ಕೆ ಪರ್ಯಾಯವಾದ ವ್ಯವಸ್ಥೆಯನ್ನು ಇಲ್ಲಿಯೂ ಕಲ್ಪಿಸಬೇಕಾಗುತ್ತದೆ. ಏಕೆಂದರೆ ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮನುಷ್ಯ ತನ್ನ ಬದುಕನನು ಆರ್ಥಿಕವಾಗಿ ರೂಪಿಸಿಕೊಳ್ಳಬೇಕಾದರೆ, ಇಂಗ್ಲೀಷ್ ಭಾಷೆ ಮತ್ತು ವೃತ್ತಿ ಶಿಕ್ಷಣದ ಅನಿವಾರ್ಯತೆಯನ್ನು ಯಾರು ಅಲ್ಲಗಳೆಯುವಂತಿಲ್ಲ. ಆದ್ದರಿಂದ ಸ್ಪರ್ಧಾತ್ಮಕ ನೆಲೆಯಲ್ಲಿ ಸಾಮಾನ್ಯ ಶಿಕ್ಷಣದ ರೂಪುರೇಷೆಗಳನ್ನು ಇಂದು ಶಿಕ್ಷಣ ತಜ್ಞರು ಮತ್ತು ವಿದ್ವಾಂಸರು ರೂಪಿಸಿಕೊಳ್ಳಬೇಕಾದ ಜರೂರು ಇಂದು ಬಹಳ ಅಗತ್ಯ ಎಂದು ಹೇಳಬಹುದು.

"ಭಾರತದಂತಹ ದೇಶಗಳಲ್ಲಿ ದೂರ ಶಿಕ್ಷಣದ ಮಹತ್ವ" ಇಲ್ಲಿ ದೂರಶಿಕ್ಷಣದ ಅನಿವಾರ್ಯತೆ, ಪ್ರಸ್ತುತತೆ ಮುಂತಾದ ವಿಚಾರಗಳನ್ನು ಕುರಿತಂತೆ ವರ್ತಮಾನ ಸಂದರ್ಭದ ದೂರ ಶಿಕ್ಷಣ ವ್ಯವಸ್ಥೆಯ ಇತಿ–ಮಿತಿಗಳನ್ನು ಕುರಿತು ಹೇಳುವರು. ದೂರ ಶಿಕ್ಷಣವನ್ನು ಸಮರ್ಥವಾಗಿ ನೀಡಬೇಕೆಂದರೆ ವಿದ್ಯಾರ್ಥಿಗಳಿಗೆ ನುರಿತ ಅಧ್ಯಾಪಕವರ್ಗ, ಗ್ರಂಥಾಲಯ, ಬೋಧನಾಸಲಕರಣೆ ಮುಂತಾದವುಗಳನ್ನು ನಿಗದಿತ ಸಮಯದಲ್ಲಿ ಸಿಗುವಂತೆ ಮಾಡಬೇಕು ಮತ್ತು ಇಲ್ಲಿನ ಅನೇಕ ವಿದ್ಯಾರ್ಥಿಗಳು ಉದ್ಯೋಗಗಳಲ್ಲಿರುವುದರಿಂದ ಅವರಿಗೆ ತರಗತಿಗಳಿಗೆ ಸಮಯಕ್ಕೆ ಸರಿಯಾಗಿ ಹಜರಾಗಲು ಸಾಧ್ಯವಾಗದಿರುವುದು, ಅದಕ್ಕೆ ಅನೇಕ ಕಾರಣಗಳಿರುವುದು .. ಹೀಗೆ ದೂರ ಶಿಕ್ಷಣದ ಮಹತ್ವ ಮತ್ತು ಅದರ ಮಿತಿಗಳನ್ನು ಹಾಗೂ ಪರಿಹಾರ ಗಳನ್ನು ಸೂಚಿಸುವ ನಿಟ್ಟಿನಲ್ಲಿ ಈ ಲೇಖನ ಮುಖ್ಯ ವಾಗುತ್ತದೆ.

"ಗಾಂಧಿಗೆ 'ಗಂಧಿ' ಸಮಯವೇನೋ!, ಬಿ.ವಿ. ಕಾರಂತರ ನೆನಪಿನಲ್ಲಿ, 'ಯುವಶಕ್ತಿಯ ಕವಲು ದಾರಿ', 'ಶಾಂತಿ; 'ರೂಪಕ ಮತ್ತು ಸವಾಲು', 'ಕನ್ನಡ ಚಳುವಳಿ: ಮುಂದಿನ ಹೆಜ್ಜೆಗಳು'... ಮುಂತಾದ ಲೇಖನಗಳನ್ನು ಒಳಗೊಂಡ "ಉರಿಯ ಪೇಟಿ" ಕೃತಿಯು ಸಮಾಜ, ಸಾಹಿತ್ಯ, ಶಿಕ್ಷಣ, ಸಂಸ್ಕೃತಿ, ಜಾಗತೀಕರಣ, ಚಳುವಳಿ ಇತ್ಯಾದಿಗಳ ನೆಲೆಯಲ್ಲಿ ವರ್ತಮಾನದ ಸಂದರ್ಭದಲ್ಲಿ ಬಹಳ ಪ್ರಸ್ತುತವಾಗುತ್ತದೆ. ಹಾಗೆ ವರ್ತಮಾನದ ಅನೇಕ ಜ್ವಲಂತ ಸಮಸ್ಯೆಗಳನ್ನು ಕುರಿತಂತೆ ಲೇಖಕರು ಇಲ್ಲಿನ ಲೇಖನಗಳ ಮೂಲಕ ಹಲವಾರು ಸೂಕ್ಷ್ಮ ಒಳನೋಟಗಳನ್ನು ಕಟ್ಟಿಕೊಡುವರು. □

ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ:

(23ನೇ ಪುಟದಿಂದ)

ನಾಯಕ್ ಅವರಂತಹ ವಿದ್ವಾಂಸರು, ಕನ್ನಡಕ್ಕೆ ಕನ್ನಡದ್ದೇ ಜ್ಞಾನ ಮೀಮಾಂಸೆಯನ್ನು ರೂಪಿಸುವ ಬದಲಾಗಿ, ವಸಾಹತು ಶಾಹಿ ಹಾಗೂ ವೈದಿಕ ಶಕ್ತಿಗಳು ಕನ್ನಡಕ್ಕೆ ನೆಲೆಗೊಳಿಸಿದ್ದ ಏಕರೂಪಿ ಚಿಂತನಾಕ್ರಮವನ್ನೇ ಇನ್ನೂ ಗಟ್ಟಿಗೊಳಿಸುವಲ್ಲಿ ಆಸಕ್ತಿ ವಹಿಸಿದ್ದಾರೆ.

ಇದರ ಪರಿಣಾಮದಿಂದ ಕರ್ನಾಟಕದ ಬಹುತೇಕ ವಿಶ್ವವಿದ್ಯಾಲಯಗಳು 'ಮತೀಯತೆ'ಯನ್ನು ಬೆಳೆಸುವಲ್ಲಿ ಹೇಗೆ ಕಾರಣವಾಗಿವೆ ಎಂಬುದನ್ನೂ ಇಲ್ಲಿಯ ಚರ್ಚೆಗಳು ಸೂಚಿಸುತ್ತವೆ [ಪು:60]. ಇಲ್ಲಿಯ ಚರ್ಚೆಗಳನ್ನು ಆರೋಪವೆಂದು ಭಾವಿಸುವುದಕ್ಕೂ ಸಾಕಷ್ಟು ಅವಕಾಶವಿದೆ. ಕಾರಣ ಈ ಹೇಳಿಕೆಗಳು ವಸ್ತುಸ್ಥಿತಿಯನ್ನು ವಿವರಿಸಿ ಹೇಳುವುದಕ್ಕಿಂತ ಹೆಚ್ಚಾಗಿ ಬೀಸು ಹೇಳಿಕೆಗಳಂತೆ ಭಾಸವಾಗುತ್ತವೆ. ಸ್ಪಷ್ಟತೆಯ ಕೊರತೆಯೇ ಇದಕ್ಕೆ ಕಾರಣವಿರಬಹುದು ಅಥವಾ ಚಲಪತಿಯವರು ಸರಿಯಾದ ಅಧ್ಯಯನ ವಿಧಾನ [ರೀಸರ್ಚ್ ಮೆಥಡಾಲಜಿ] ವನ್ನು ಬಳಸಿಕೊಳ್ಳದೇ ಇರುವುದು ಕೂಡ ಇದಕ್ಕೆ ಮತ್ತೊಂದು ಕಾರಣವಿರಬಹುದು. ಸ್ವಾತಂತ್ರ್ಯೋತ್ತರ ಸನ್ನಿವೇಶದಲ್ಲಿಯೂ 'ಪಠ್ಯಗಳು' ಶೈಕ್ಷಣಿಕ ಉದ್ದೇಶಕ್ಕಿಂತ, ಸಾಮಾಜಿಕ–ಧಾರ್ಮಿಕ ಉದ್ದೇಶಗಳನ್ನೇ ಈಡೇರಿಸಿಕೊಳ್ಳುವುದಕ್ಕೆ ಹೇಗೆ ಬಳಕೆಯಾಗಿವೆ ಎಂಬ ವಾದವನ್ನು ಮಾತ್ರ ತಳ್ಳಿಹಾಕುವಂತಿಲ್ಲ. ಅಷ್ಟರಮಟ್ಟಿಗೆ ಈ ಹೊತ್ತಗೆಯ ಚರ್ಚೆಗಳು ಪ್ರಾಮಾಣಿಕವಾಗಿವೆ.

೬

ಪಠ್ಯಪುಸ್ತಕಗಳ ಮೂಲ ಗುರಿಯೇನು? ಅವು ಸಾಮಾಜಿಕ–ಸಾಂಸ್ಕೃತಿಕವಾಗಿ ಉಂಟುಮಾಡುವ ಪರಿಣಾಮಗಳೇನು? ಇಂತಹ ಪರಿಣಾಮಗಳು 'ನಾವು' ಮತ್ತು 'ಬೇರೆ' ಎಂಬ ದ್ವೈಕಾಟಮಿಯನ್ನು ಹುಟ್ಟುಹಾಕುವಲ್ಲಿ ಯಾವ ಬಗೆಯ ಪಾತ್ರವನ್ನು ವಹಿಸುತ್ತವೆ? ಎಂಬೆಲ್ಲಾ ಕೇಳ್ವಿಗಳು ಬಹು ಮುಖ್ಯವಾಗುತ್ತವೆ. ಭಾಷಾ ಪಠ್ಯಗಳ ಮೂಲ ಗುರಿ ಭಾಷಿಕ ಚಳಕಗಳನ್ನು ಕರಗತ ಮಾಡುವುದಾದರೂ, ಪಠ್ಯಪುಸ್ತಕಗಳು ಸಾಂಸ್ಕೃತಿಕ ತಿಳುವಳಿಕೆಯನ್ನು ಗಟ್ಟಿಗೊಳಿಸುವ ಇರಾದೆಯನ್ನೂ ಹೊಂದಿರುತ್ತವೆ. ಇಲ್ಲಿರುವ ಬಿಕ್ಕಟ್ಟು ಏನೆಂದರೆ, ಯಾರ ಸಾಂಸ್ಕೃತಿಕ ತಿಳುವಳಿಕೆಯನ್ನು ಗಟ್ಟಿಗೊಳಿಸಬೇಕು ಎಂಬ ಕೇಳ್ವಿ ಎದುರಾಗುತ್ತದೆ. ಸಮುದಾಯ ಪ್ರಜ್ಞೆಯನ್ನು ರೂಪಿಸುವಲ್ಲಿ ತಾತ್ವಿಕ ಚೌಕಟ್ಟು ಹೇಗಿರಬೇಕು ಎಂಬುದೇ ಈ ಕೇಳ್ವಿಯ ಹಿಂದಿನ ಉದ್ದೇಶ ನಿಚ್ಚಳವಾಗಿದೆ. ಶೈಕ್ಷಣಿಕ ನೀತಿಗಳನ್ನು ರೂಪಿಸುವ ಹೊಣೆಗಾರಿಕೆಯನ್ನು ಹೊತ್ತವರು ನೆನಪಿಡಬೇಕಾದ ಸಂಗತಿಗಳು ನಿಚ್ಚಳವಾಗಿವೆ. ಅವುಗಳೆಂದರೆ, ಸಾಮಾಜಿಕ–ಸಾಂಸ್ಕೃತಿಕ ಹಾಗೂ ಭಾಷಿಕ ಬಹುಳತೆಯನ್ನು ಗಟ್ಟಿಗೊಳಿಸುವುದರ ಜೊತೆಗೆ ಅಸಲಿ ಚಹರೆಗಳನ್ನು ಕಾಪಾಡಬೇಕಾಗುತ್ತದೆ. ಶಿಕ್ಷಣವು ಸಮುದಾಯಗಳ ಏಳ್ಗೆಯನ್ನು ಕಾಪಾಡುವ ಸಂಸ್ಥೆಯಾಗಿದ್ದರಿಂದ, ಇಂತಹ ಉದ್ದೇಶಗಳು ಸಾಮುದಾಯಿಕ ನೆಲೆಯಿಂದ ರೂಪಗೊಳ್ಳಬೇಕು.

ಪುಸ್ತಕದ ವಿವರ :ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ
ಡಾ.ಆರ್ ಚಲಪತಿ
2010, ಪುಟಗಳು 232 , ಪ್ರಗತಿ ಗ್ರಾಫಿಕ್ಸ್ ಬೆಂಗಳೂರು □

ಹತ್ತನೇ ಶತಮಾನದ ಬಹುಪಂಥೀಯ

ಅನುಸಂಧಾನಗಳು ಮತ್ತು ಪರ್ಯಾಯ ಸಂಸ್ಕೃತಿ



> **ಭೂಮಿ ಆಧಿಪತ್ಯವೆಂಬುದು ಅತ್ಯಂತ ನಿರ್ಣಾಯಕವಾದ ಉತ್ಪಾದನಾ ಸಾಧನದ ಮೇಲಿನ ಹಿಡಿತವಾಗಿದ್ದು ಈ ಮೂಲಕ ಸಾಮಾಜಿಕ ನಿಯಂತ್ರಣ ಸಾಧಿಸಲು ಈ ಅಗ್ರಹಾರಗಳಿಗೆ ಮತ್ತು ದೇವಸ್ಥಾನ ಸಂಕೀರ್ಣಗಳಿಗೆ ಅವಕಾಶವಿತ್ತು. ಅದು ಎಲ್ಲಿಯವರೆಗೆ ಮುಂದುವರೆದಿತ್ತೆಂದರೆ ಒಕ್ಕಲು ಪದ್ಧತಿಗೆ ಒಳಪಟ್ಟ ರೈತಾಪಿ ಜನ ತಾವು ಒಕ್ಕಲಾಗಿದ್ದ ಮಠ, ಅಗ್ರಹಾರ, ದೇವಸ್ಥಾನ ಸಂಕೀರ್ಣವು ಪ್ರತಿಪಾದಿಸುವ ವರ್ಣಾಶ್ರಮ ಸಿದ್ಧಾಂತಕ್ಕೆ, ಜಾತಿಪದ್ಧತಿಯ ನೀತಿಗಳಿಗೆ ಬದ್ಧರಾಗಿರಬೇಕಾಗುತ್ತಿತ್ತು. ಶೂದ್ರ ಸಮುದಾಯಕ್ಕೆ ಸೇರಿದ ಬಹುಸಂಖ್ಯಾತ ರೈತಾಪಿ ಜನರಲ್ಲದೆ, ಕೈಕಸುಬುದಾರರು ಕೂಡ ಅಗ್ರಹಾರ, ದೇವಸ್ಥಾನ-ಮಠ ಸಂಕೀರ್ಣಗಳಿಗೆ ಬಿಟ್ಟಿ ಚಾಕರಿ ಮಾಡಬೇಕಾಗುತ್ತಿತ್ತು.**

10ನೇ ಶತಮಾನದ ಕರ್ನಾಟಕದ ಸಾಂಸ್ಕೃತಿಕ ರಂಗ ಹಲವು ಧಾರ್ಮಿಕ ಪೈಪೋಟಿಗಳ, ತತ್ವ ಸಂಘರ್ಷಗಳ ಕಾಲಘಟ್ಟ. ಅದರ ಮುಖ್ಯ ಪಾತ್ರಧಾರಿಗಳು ವೇದಾಂತವಾದಿ ಬ್ರಾಹ್ಮಣರು, ಕಾಳಾಮುಖ- ಶೈವರು ಹಾಗೂ ಜೈನಧರ್ಮೀಯರಾಗಿದ್ದರು ಎನ್ನಬಹುದಾಗಿದೆ. ವೇದಾಂತವಾದಿ ಬ್ರಾಹ್ಮಣ ಪುರೋಹಿತಶಾಹಿಗೆ 10ನೇ ಶತಮಾನದಲ್ಲಿ ಅತ್ಯಂತ ಹೆಚ್ಚು ಪ್ರಾಮುಖ್ಯತೆ, ಸಾಮಾಜಿಕ ಆಧಿಪತ್ಯ ಲಭಿಸಿತ್ತು. ಆ ಧರ್ಮಕ್ಕಿದ್ದ ಉನ್ನತ ರಾಜವಂಶಗಳ ಹಾಗೂ ಕುಲೀನ ಶ್ರೀಮಂತರ ಬೆಂಬಲವೇ ಇದಕ್ಕೆ ಕಾರಣ. ಅತ್ಯಂತ ಪ್ರಸಿದ್ಧವಾದ 13 ಅಗ್ರಹಾರಗಳು ಆ ಕಾಲಘಟ್ಟದಲ್ಲಿ ಕ್ರಿಯಾಶೀಲವಾಗಿದ್ದವು. ಅಗ್ರಹಾರಗಳೆಂದರೆ ಬ್ರಾಹ್ಮಣ ಪುರೋಹಿತರ ನೇತೃತ್ವದಲ್ಲಿ ಗ್ರಾಮೀಣ ಸಾಮಾಜಿಕ ಹಿಡಿತವನ್ನು ಸ್ಥಾಪಿಸಿಕೊಂಡಿದ್ದ ಅಧಿಕಾರ ಕೇಂದ್ರಗಳು. ದೇವಸ್ಥಾನಗಳು, ಅಗ್ರಹಾರಗಳು ಆ ಕಾಲಾವಧಿಯ ಸಾಮಾಜಿಕ ಸಂರಚನೆಯಲ್ಲಿ ಊಳಿಗಮಾನ್ಯ ಪ್ರಭುತ್ವದ ಪ್ರಭಾವಿ ಅಂಗಗಳಂತೆ ಕಾರ್ಯನಿರ್ವಹಿಸುತ್ತಿದ್ದವು.

ಅದ್ವೈತವಾದಿ ಭಕ್ತಿ ಸಿದ್ಧಾಂತವನ್ನು ತಮ್ಮ ಪ್ರಣಾಳಿಕೆಯನ್ನಾಗಿಸಿಕೊಂಡಿದ್ದ ಬ್ರಾಹ್ಮಣಶಾಹಿಯು ರಾಜಪ್ರಭುತ್ವಗಳಿಂದ ಅತ್ಯಂತ ಹೆಚ್ಚು ಪ್ರಮಾಣದ ಭೂಮಿ ದಾನಗಳನ್ನು, ಉಂಬಳಿ ಗ್ರಾಮಗಳನ್ನು ಪಡೆದುಕೊಂಡಿದ್ದವು. ಅಗ್ರಹಾರ ಮತ್ತು ದೇವಸ್ಥಾನ ನಿರ್ವಹಣೆಯ ನೆಪದಲ್ಲಿ ಬ್ರಾಹ್ಮಣ ಪುರೋಹಿತರ ನಿಯಂತ್ರಣದಲ್ಲಿದ್ದ ಉಂಬಳಿ ಭೂಮಿಗಳು ಎಷ್ಟೋ ಸಲ ಆ ಪ್ರಾಂತ್ಯದ ಸ್ಥಳೀಯ ಮಾಂಡಲಿಕರ ಭೂ ಹಿಡುವಳಿಯ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಇದ್ದವೆಂಬುದನ್ನು ಆರ್ ಎನ್. ನಂದಿ ಗುರ್ತಿಸುತ್ತಾರೆ. ಬ್ರಾಹ್ಮಣ ಅಗ್ರಹಾರಗಳಿಗೆ ಗ್ರಾಮಗಳನ್ನು ಉಂಬಳಿ ಕೊಡುವುದು, ತೆರಿಗೆಮುಕ್ತವಾಗಿ ಭೂಮಿಗಳನ್ನು ಬ್ರಹ್ಮದೇಯವನ್ನಾಗಿ ಕೊಡುವುದು ಐದನೆ ಶತಮಾನದಿಂದಲೂ ಗುರುತಿಸಬಹುದಾದರೂ ಹತ್ತನೇ ಶತಮಾನದಲ್ಲಿ ಅದು ತೀವ್ರವಾಗಿ ಹೆಚ್ಚಳಗೊಂಡಿತು ಎಂಬುದನ್ನು ಆರ್. ಎನ್. ನಂದಿ ಗುರ್ತಿಸುತ್ತಾರೆ. ಶಿವಮೊಗ್ಗ, ಧಾರವಾಡ, ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ಈ 13 ಅಗ್ರಹಾರಗಳು ಹೆಚ್ಚಿನ ಸಂಖ್ಯೆಯಲ್ಲಿ ಕೇಂದ್ರೀಕೃತವಾಗಿದ್ದವು.

ಹೊಸ ಭೂಮಿಯನ್ನು ಕೃಷಿಗೆ ಅಳವಡಿಸುವುದು, ಈಗಾಗಲೇ ಕೃಷಿಗೆ ಒಳಪಟ್ಟಿರುವ ಹಿಡುವಳಿಗಳ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು, ಕೃಷಿಗೆ ಪೂರಕವಾದ ಕೆರೆ, ಕಾಲುವೆಗಳನ್ನು ನಿರ್ಮಿಸುವುದು, ಕೃಷಿ ಕಾರ್ಯದಲ್ಲಿ ತೊಡಗುವಂತೆ ಶೂದ್ರ ಸಮೂಹವನ್ನು ಪ್ರೇರೇಪಿಸುವುದು ಹಾಗೂ ಕೃಷಿಯಲ್ಲಿ ಬಂದ ಉತ್ಪನ್ನಗಳನ್ನು ಸಂಗ್ರಹಿಸುವುದು, ಉಂಬಳಿ ಗ್ರಾಮಗಳಲ್ಲಿ ದೊರೆತ ಆದಾಯವನ್ನು ನಿರ್ವಹಿಸುವುದು ಮುಂತಾದ ಹಲವು ಚಟುವಟಿಕೆಗಳನ್ನು ಈ ದೇವಸ್ಥಾನ ಸಂಕೀರ್ಣಗಳು ಅಥವಾ ಅಗ್ರಹಾರ ವ್ಯವಸ್ಥೆಗಳು ನಿರ್ವಹಿಸುತ್ತಿದ್ದವು. ಈ ಮುಖಾಂತರ ಅವು ತಮ್ಮ ಉಂಬಳಿ ಪ್ರದೇಶದಲ್ಲಿ ಅಪರ ರಾಜಾಡಳಿತಗಳಂತೆಯೇ ವ್ಯವಹರಿಸುತ್ತಿದ್ದವು. ದಾನ ಭೂಮಿಗಳಲ್ಲಿ ಕೆಲಸ ಮಾಡುವುದಕ್ಕೆ ಶೂದ್ರ ರೈತಾಪಿ ಸಮುದಾಯವನ್ನು ತೊಡಗಿಸಲಾಗುತ್ತಿತ್ತು. ರೈತಾಪಿ ಸಮುದಾಯದ ಕೆಳ ಹಂತದ ಜನರನ್ನು ಜೀತಗಾರರನ್ನಾಗಿ ನೇಮಿಸಿಕೊಳ್ಳಲಾಗುತ್ತಿತ್ತು. ಅದೇ ಸಮಯದಲ್ಲಿ ಗೇಣಿ ಪದ್ಧತಿಯಂತಹ ವಿಧಾನದಲ್ಲಿ ರೈತಾಪಿಯನ್ನು ಆ ಭೂಮಿಕಾಣಿಗಳಲ್ಲಿ ಉತ್ಪಾದನೆ ಮಾಡುವುದಕ್ಕೂ ನೇಮಿಸಲಾಗುತ್ತಿತ್ತು. ಇಂತಹವರನ್ನು 'ಒಕ್ಕಲು' ಎಂದು ಕರೆಯಲಾಗುತ್ತಿತ್ತು.

ಭೂಮಿ ಆಧಿಪತ್ಯವೆಂಬುದು ಅತ್ಯಂತ ನಿರ್ಣಾಯಕವಾದ ಉತ್ಪಾದನಾ ಸಾಧನದ ಮೇಲಿನ ಹಿಡಿತವಾಗಿದ್ದು ಈ ಮೂಲಕ ಸಾಮಾಜಿಕ ನಿಯಂತ್ರಣ ಸಾಧಿಸಲು ಈ ಅಗ್ರಹಾರಗಳಿಗೆ ಮತ್ತು ದೇವಸ್ಥಾನ ಸಂಕೀರ್ಣಗಳಿಗೆ ಅವಕಾಶವಿತ್ತು. ಅದು ಎಲ್ಲಿಯವರೆಗೆ ಮುಂದುವರೆದಿತ್ತೆಂದರೆ ಒಕ್ಕಲು ಪದ್ಧತಿಗೆ ಒಳಪಟ್ಟ ರೈತಾಪಿ ಜನ ತಾವು ಒಕ್ಕಲಾಗಿದ್ದ ಮಠ, ಅಗ್ರಹಾರ, ದೇವಸ್ಥಾನ ಸಂಕೀರ್ಣವು ಪ್ರತಿಪಾದಿಸುವ ವರ್ಣಾಶ್ರಮ ಸಿದ್ಧಾಂತಕ್ಕೆ, ಜಾತಿಪದ್ಧತಿಯ ನೀತಿಗಳಿಗೆ ಬದ್ಧರಾಗಿರಬೇಕಾಗುತ್ತಿತ್ತು. ಶೂದ್ರ ಸಮುದಾಯಕ್ಕೆ ಸೇರಿದ ಬಹುಸಂಖ್ಯಾತ ರೈತಾಪಿ ಜನರಲ್ಲದೆ, ಕೈಕಸುಬುದಾರರು ಕೂಡ ಅಗ್ರಹಾರ, ದೇವ ಸ್ಥಾನ-ಮಠ ಸಂಕೀರ್ಣಗಳಿಗೆ ಬಿಟ್ಟಿ ಚಾಕರಿ ಮಾಡಬೇಕಾಗುತ್ತಿತ್ತು. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ವರ್ಷದಲ್ಲಿ ಇಂತಿಷ್ಟು ದಿನ ಅಥವಾ ಅವರ ಅಗತ್ಯಗಳನುಸಾರ ಕೂಲಿ ಇಲ್ಲದೆ ಕೆಲಸ ಕೆಲಸ ಮಾಡಿಕೊಡ ಬೇಕಾಗಿತ್ತು. ತಾವು ಉತ್ಪಾದಿಸಿದ್ದರಲ್ಲಿ ಸಿಂಹಪಾಲನ್ನು ಇಂತಹ ಅಗ್ರಹಾರಗಳಿಗೆ ಮತ್ತು ದೇವಸ್ಥಾನ ಸಂಕೀರ್ಣಗಳಿಗೆ ಕಸುಬುದಾರರು ಸರಬರಾಜು ಮಾಡಬೇಕಿತ್ತು. ಇದು ಜನ ಸಾಮಾನ್ಯರ ಬಡತನವನ್ನು ಅಸಹನೀಯ ಮಟ್ಟಕ್ಕೆ ಮುಟ್ಟಿಸಿತ್ತು.

ಅಗ್ರಹಾರಗಳು ಮತ್ತು ದಾನ ಭೂಮಿಗಳು ಆಗಿನ ಊಳಿಗಮಾನ್ಯ ಕೃಷಿ ವ್ಯವಸ್ಥೆಯಲ್ಲಿ ದೇವಮಾನವರೆನಿಸಿಕೊಳ್ಳುತ್ತಿದ್ದ ಬ್ರಾಹ್ಮಣರ ಸಾಮಾಜಿಕ, ಸಾಂಸ್ಕೃತಿಕ ಹಿಡಿತ ಸಾಧಿಸುವ ಸಾಧನಗಳಾಗಿದ್ದವು. ಸಮಾಜದಲ್ಲಿ ಬ್ರಾಹ್ಮಣ ವಾದದ ಮೇಲುಗೈ ಹಾಗೂ ಸಂಸ್ಕೃತ ಭಾಷೆಯ ಮೇಲುಗೈ 7, 8, 9ನೇ ಶತಮಾನಗಳಲ್ಲಿ ತೀವ್ರಗೊಳ್ಳುತ್ತಾ ನಡೆಯಿತು. ಪ್ರಾಕೃತವನ್ನು ಪಕ್ಕಕ್ಕೆ ತಳ್ಳಿದ ಸಂಸ್ಕೃತವು ಅಧಿಕೃತ ಶಾಸ್ತ್ರ ಗ್ರಂಥ ಭಾಷೆಯಾಗಿ ಮೆರೆಯತೊಡಗಿತ್ತು.

ಊಳಿಗಮಾನ್ಯ ಕೃಷಿ ವ್ಯವಸ್ಥೆಗೆ ವರ್ಣಾಶ್ರಮ ಧರ್ಮದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಜಾತಿ ವ್ಯವಸ್ಥೆಯು ಏರ್ಪಡಿಸುವ ಶ್ರಮ ವಿಭಜನೆ ಹಾಗೂ ಸಂಪತ್ತಿನ ಒಡೆತನದ ನಿಯಮಗಳು ಅತ್ಯಂತ ಉಪಯುಕ್ತಕರ ಸಾಧನಗಳಾಗಿದ್ದವು. ಕೃಷಿ ವ್ಯವಸ್ಥೆಯಿಂದ ಹುಟ್ಟುವ ಉತ್ಪನ್ನದ ಹಂಚಿಕೆಯಲ್ಲಿ ಸಿಂಹಪಾಲು ಸಮಾಜದ ಮೇಲ್ವರ್ಗಗಳಿಗೆ ಸೇರಬೇಕೆಂಬ ತತ್ವವನ್ನು ಇದು ಪ್ರತಿಪಾದಿಸುತ್ತಿತ್ತು. ಅನಿವಾರ್ಯವಾಗಿ ಈ ಬಗೆಯ ಬಿಟ್ಟಿ ಚಾಕರಿಯ ಪದ್ಧತಿಗೆ ಒಳಪಟ್ಟಿದ್ದ ಶೂದ್ರ ವರ್ಗವು ಇದರಿಂದ ಬಿಡುಗಡೆಗೊಳ್ಳಲು ನೆರವಾಗುವ ಧಾರ್ಮಿಕ, ತಾತ್ವಿಕತೆಗಳಿಗೆ ಎದುರು ನೋಡುತ್ತಿದ್ದರು. ಈ ಸಂದರ್ಭದ ಕರ್ನಾಟಕದಲ್ಲಿ ಬ್ರಾಹ್ಮಣವಾದಿ ಜಾತಿ ವ್ಯವಸ್ಥೆಯ ಆಧಿಪತ್ಯಕ್ಕೆ ಪರ್ಯಾಯ ಸೂಚಿಸುವ ಪ್ರಯತ್ನವನ್ನು ನಡೆಸಿದ್ದು ಕಾಳಾಮುಖ ಶೈವ, ಹಾಗೂ ಜೈನಧರ್ಮಗಳು. ಅದರಲ್ಲೂ 10ನೇ ಶತಮಾನದ ಮಟ್ಟಿಗೆ ಪರಿಣಾಮಕಾರಿ ಸಾಂಸ್ಕೃತಿಕ ಪರ್ಯಾಯವನ್ನು

ಸಾಮಾಜಿಕವಾಗಿ ಪ್ರತಿ ಪಾದಿಸಿದ್ದು ಜೈನ ಧರ್ಮ ಎಂದು ನಾವು ಪರಿಗಣಿಸುವುದು ಸಮಂಜಸವಾಗುತ್ತದೆ.

ಕಾಳಾಮುಖ ಶೈವವು ಪಾಶುಪತ ಶೈವ ಕ್ರಿಯಾಚರಣೆಯ ತಳಹದಿಯಿದ್ದ ಸನ್ಯಾಸಿ ಪಂಥವಾಗಿದ್ದು, ತನ್ನ ಆಚರಣೆಗಳಲ್ಲಿ ಅದು ವರ್ಣಾತೀತ ನಿಲುವುಗಳನ್ನು ಪ್ರತಿಪಾದಿಸುತ್ತಿತ್ತು. ನಾಯನಾರ್ ಶೈವ ಭಕ್ತಿ ಪಂಥದ ಅದ್ವೈತ ಸಿದ್ಧಂತದೊಂದಿಗೆ ಸಾಕಷ್ಟು ಸಂಘರ್ಷವನ್ನು ಇದು ಹೊಂದಿತ್ತು. ಬ್ರಾಹ್ಮಣರಿಗೆ ಜನ್ಮತಃ ಇರುವ ಶ್ರೇಷ್ಠತೆಯ ಸ್ಥಾನಮಾನಗಳನ್ನು ಇದು ಮಾನ್ಯಗೊಳಿಸುತ್ತಿರಲಿಲ್ಲ. ಬದಲಾಗಿ ದೀಕ್ಷೆ ಹಾಗೂ ಕ್ರಿಯಾಚರಣೆಗಳ ಮುಖಾಂತರ ಸಮಾಜದೊಳಗಿನ ಯಾವುದೇ ವ್ಯಕ್ತಿ ಬ್ರಾಹ್ಮಣತ್ವವನ್ನು ಪಡೆದುಕೊಳ್ಳಬಹುದು ಎಂದು ಇದು ಪ್ರತಿಪಾದಿಸುತ್ತಿತ್ತು. 10ನೇ ಶತಮಾನದಲ್ಲಿ ರೂಪುಗೊಂಡ ಸಮಾಜದ ಕೆಳಹಂತದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಇದು ಸಾಕಷ್ಟು ಪ್ರಭಾವಶಾಲಿಯೂ ಆಗಿತ್ತು. ಈ ಸನ್ನಿವೇಶದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ವಿಕೇಂದ್ರೀಕೃತ ರಾಜ ವ್ಯವಸ್ಥೆಯಡಿಯಲ್ಲಿ ರೂಪಗೊಳ್ಳತೊಡಗಿದ್ದ ಸಾಮಂತರು ಹಾಗೂ ಮಾಂಡಲೀಕ ಅಧಿಕಾರಿಗಳು ಕಾಳಾಮುಖ ಶೈವಕ್ಕೆ ಸಾಕಷ್ಟು ಆಶ್ರಯವನ್ನು, ಬೆಂಬಲವನ್ನು ನೀಡಿದರು.

ಕಾಳಾಮುಖ ಶೈವವು ಒಂದು ಪಂಥವಾಗಿ ಸ್ಥಾಪನೆಗೊಂಡಿದ್ದು, ಅವನತಮುಖಿಯಾಗಿದ್ದ ಬ್ರಾಹ್ಮಣ ಜಾತಿಗೆ ಸೇರಿದ ಸಾಧಕರಿಂದ ಎಂಬ ವಾದವನ್ನು ಸಾಮಾಜಿಕ ಧಾರ್ಮಿಕ ಇತಿಹಾಸಕಾರರು ಹೇಳಿದ್ದಾರೆ. ಅವರ ಪ್ರಕಾರ ಕರ್ನಾಟಕಕ್ಕೆ ಬ್ರಾಹ್ಮಣರ ವಲಸೆ ಉತ್ತರ ಭಾರತದ ಕಡೆಯಿಂದ ಹೆಚ್ಚೂ ಕಡಿಮೆ 5ರಿಂದ 7ನೇ ಶತಮಾನದವರೆಗೆ ನಡೆಯಿತು. ಇದರಲ್ಲಿ ಮೊದಲ ಪಂಗಡ ಗಂಗಾನದಿ ತಟದಲ್ಲಿರುವ ಅಹಿಚ್ಛತ್ರದಿಂದ ಬಂದುದಾದರೆ, ಎರಡನೆಯ ಪಂಗಡ ಅಯೋಧ್ಯೆಯಿಂದ ಬಂದಿತೆಂದು ಹೇಳಲಾಗುತ್ತದೆ. ಗುಪ್ತರ ಕಾಲದಲ್ಲಿ ಪ್ರವರ್ಧಮಾನದಲ್ಲಿದ್ದ ಉತ್ತರ ಭಾರತದ ನಗರಗಳು ಸಾಮಾಜಿಕ ವ್ಯವಸ್ಥೆಯ ಬದಲಾವಣೆಯಿಂದಾಗಿ ಅಧಃಪತನ ಕಂಡಾಗ ಗ್ರಾಮ ಸೀಮೆಗಳ ಕಡೆಗೆ ಅಲ್ಲಿದ್ದ ಬ್ರಾಹ್ಮಣರ ವಲಸೆ ಪ್ರಾರಂಭವಾಯಿತೆಂದು ಹೇಳಲಾಗುತ್ತದೆ.

ಉತ್ಪಾದನಾ ವಿಧಾನವು ಊಳಿಗಮಾನ್ಯ ವ್ಯವಸ್ಥೆಯನ್ನು ಪ್ರವೇಶಿಸಿದಾಗ ಈ ಮೊದಲಿನ ವಾಣಿಜ್ಯ ನಗರಿಗಳು ಹಾಗೂ ಪ್ರತಿಷ್ಠಿತ ನಗರಿಗಳು ತಮ್ಮ ವಹಿವಾಟಿನ ಆಧಿಕ್ಯವನ್ನು ಕಳೆದುಕೊಂಡವು. ದೇವತಾರ್ಚನೆ, ಯಜ್ಞಯಾಗಾದಿ ಕರ್ಮಕಾಂಡಗಳ ವಿಧಿಯಲ್ಲಿ ತೊಡಗಿಸಿಕೊಂಡಿದ್ದ ಬ್ರಾಹ್ಮಣ ಗುಂಪುಗಳು ಇದರಿಂದ ಬೇಡಿಕೆ ಕಳೆದುಕೊಂಡು ನಿರುದ್ಯೋಗಿಯಾದವು. ರಾಜಮಾನ್ಯರಿಂದ ಶ್ರೀಮಂತರಿಂದ ದೊರೆಯುತ್ತಿದ್ದ ದಾನ ದಕ್ಷಿಣೆಗಳು ಇಲ್ಲವಾದಾಗ, ಜೀವನೋಪಾಯವನ್ನು ಹುಡುಕಿಕೊಂಡು ಗ್ರಾಮಗಳಿಗೆ ತೆರಳಿ ತಮ್ಮ ನೆಲೆ ರೂಪಿಸಿಕೊಳ್ಳುವ ಪ್ರಯತ್ನದಲ್ಲೇ ಗಂಗಾ ನದಿ ಮೂಲದ ಹಲವು ಬ್ರಾಹ್ಮಣ ಪಂಗಡಗಳು ದಕ್ಷಿಣ ಭಾರತಕ್ಕೆ ಅದರಲ್ಲೂ ಕರ್ನಾಟಕದ ಪಶ್ಚಿಮ ಭಾಗಕ್ಕೆ ವಲಸೆ ಬಂದವೆಂದು ಹೇಳಲಾಗುತ್ತದೆ. ಹೀಗೆ ವಲಸೆ ಬಂದು ಇಲ್ಲಿ ತಕ್ಷಣ ರಾಜಾಶ್ರಯ ಪಡೆಯಲಾಗದ ಬ್ರಾಹ್ಮಣ ಗುಂಪುಗಳು ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಪುರೋಹಿತಿಕೆಗೆ ಹಾಗೂ ಯಜ್ಞಯಾಗಾದಿ ಕ್ರಿಯಾಕರ್ಮಾಚರಣೆಗೆ ಅವಕಾಶವಿಲ್ಲದಿದ್ದುದರಿಂದ ಜನಸಾಮಾನ್ಯರ ನಡುವೆ ಪ್ರಚಲಿತವಾಗಿದ್ದ ಮಾಟ-ಮಾಂತ್ರಿಕಾಚರಣೆಗಳಲ್ಲಿ, ತಾಂತ್ರಿಕಾಚರಣೆಗಳಲ್ಲಿ ತೊಡಗಿಸಿಕೊಂಡಿರಬೇಕು ಎನ್ನಲಾಗುತ್ತದೆ. ಶೂದ್ರ ಸಮುದಾಯಗಳನ್ನು ಹತ್ತಿರ ಕರೆದುಕೊಳ್ಳಲು ಇದರ ಹೊರತಾಗಿ ಅವರಿಗೆ ಹಾದಿಯಿರಲಿಲ್ಲ. ಹಾಗಾಗಿ ಕಾಳಾಮುಖ ಶೈವವು ತನ್ನ ವೇದಪ್ರಣೀತ ಯಜ್ಞ ಕರ್ಮಕಾಂಡವನ್ನು ಕೈ ಬಿಟ್ಟು, ಜನ ಸಾಮಾನ್ಯರ ನಡುವೆ ಪ್ರಚಲಿತವಾಗಿದ್ದ ತಾಂತ್ರಿಕಾಚರಣೆಗಳನ್ನು ಹಾಗೂ ಶಾಕ್ತ್ಯಾರಾಧನೆಗಳನ್ನು ಪರಿಷ್ಕರಣೆಗೊಳಪಡಿಸಿಕೊಂಡು ಒಂದು ತತ್ವಪಂಥವನ್ನು ರೂಢಿಸಿಕೊಂಡಿತು. ಅದರ ಒಂದು ಭಾಗವಾಗಿಯೇ ಅದು 'ವರ್ಣಾತೀತ' ತತ್ವವನ್ನೂ ಅಳವಡಿಸಿಕೊಂಡಿತು.

ಆರಂಭದಲ್ಲಿ ರಾಜಮಹಾರಾಜರು ಮತ್ತು ಶ್ರೀಮಂತರ ಆಶ್ರಯವಿಲ್ಲದೆ, ಜನವಸತಿ ದೂರ ಸ್ಥಳಗಳಲ್ಲಿ ನೆಲೆಸಿ, ವಾಮಾಚಾರದ ಛಾಯೆಯುಳ್ಳ ತಾಂತ್ರಿಕಾಚರಣೆಗಳಲ್ಲಿ ತೊಡಗಿಕೊಂಡ ಈ ಗುಂಪು ಪಾಶುಪಥ ಶೈವದ ಆಚರಣೆಗಳನ್ನೇ ತನ್ನ ಸಿದ್ಧಾಂತವನ್ನಾಗಿಟ್ಟುಕೊಂಡಿತ್ತಾದರೂ ಕ್ರಿಯಾವಿಧಿಗಳಲ್ಲಿ ಶೂದ್ರ ಸಮುದಾಯದ ಹಲವು ಆಚರಣೆಗಳನ್ನು ಅದು ಅಳವಡಿಸಿಕೊಂಡಿತೆಂಬುದನ್ನು ಈಗಾಗಲೇ ಪ್ರಸ್ತಾಪಿಸಲಾಗಿದೆ. ಕಾಳಾಮುಖ ಶೈವವು ಜಾತಿ ಪರಿಗಣನೆಯಿಲ್ಲದೆ ದೀಕ್ಷೆ ಹೊಂದಿದ ಪ್ರತಿಯೊಬ್ಬರನ್ನೂ ತನ್ನ ವಿಧಿಯಾಚರಣೆಯೊಳಕ್ಕೆ ಬಿಟ್ಟುಕೊಳ್ಳುವ ಪ್ರವೃತ್ತಿಯ ಮೂಲಕ ಸಾಕಷ್ಟು ಜನಾದರಣೆಯನ್ನು ಪಡೆಕೊಂಡಿತು. ಶೂದ್ರ ಸಮುದಾಯಗಳ ನಡುವೆ ಪ್ರಚಲಿತವಿದ್ದ ಆರಾಧನೆ ಮತ್ತು ಆಹಾರ ವಿಧಿಗಳನ್ನು ಅಳವಡಿಸಿಕೊಂಡಿದ್ದರಿಂದ ಅದಕ್ಕೆ ಸಾಕಷ್ಟು ಸಾಮಾಜಿಕ ಬೆಂಬಲವೂ ನಿರ್ಮಾಣವಾಯಿತು.

ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇದ್ದ ವೈದಿಕ ಬ್ರಾಹ್ಮಣ ಪುರೋಹಿತಶಾಹಿ ತನಗಿದ್ದ ಆರ್ಥಿಕ ಮತ್ತು ಸಾಮಾಜಿಕ ಬಲಾಢ್ಯತೆಯನ್ನು ಬಿಟ್ಟುಕೊಡಲು ಸಿದ್ಧವಿರಲಿಲ್ಲ. ಅದು ಕಾಳಾಮುಖ ಶೈವದಂತಹ ಪಂಥಗಳಲ್ಲಿ ತೊಡಗಿಸಿಕೊಂಡಿದ್ದ ಸನ್ಯಾಸಿಗಳನ್ನು, ಸಾಧಕರನ್ನು 'ಬ್ರಾಹ್ಮಣ ಚಂಡಾಲ'ರೆಂದು ನಿಂದಿಸಿತು. ಕಾಳಾಮುಖ ಶೈವದಲ್ಲಿ ದೀಕ್ಷೆ ತೆಗೆದುಕೊಂಡ ಯಾರೇ ಆಗಲಿ ಆಚಾರ್ಯ ಪದವಿಗೇರಬಹುದಿತ್ತು. ಜಾತಿ ಅಸಮಾನತೆಯ ಸಮಾಜದಲ್ಲಿ ಈ ರೀತಿಯ ಅವಕಾಶವನ್ನು ಕಲ್ಪಿಸಿದ್ದು ಎಷ್ಟೋ ಜನರಿಗೆ ತಮ್ಮ ವ್ಯಕ್ತಿಗತ ಕೀಳರಿಮೆಯನ್ನು ಮೀರುವುದಕ್ಕೆ ಒಂದು ಅವಕಾಶವಾಗಿ ಕಂಡಿದ್ದರಿಂದಲೂ, ತಾಂತ್ರಿಕಾಚರಣೆಗಳ ಕಾರಣದಿಂದ ಸಾಮಾನ್ಯ ಜನ ಸಮುದಾಯಗಳ ಆಹಾರ-ವಿಹಾರಗಳ ಬಗ್ಗೆ ಕಾಳಾಮುಖ ಶೈವದಲ್ಲಿ ಅವಹೇಳನ ಇಲ್ಲದಿದ್ದುದರಿಂದಲೂ ಜನ ಸಮುದಾಯಗಳು ಈ ಪಂಥದ ಜೊತೆ ಒಳ್ಳೆಯ ಒಡನಾಟವನ್ನು ರೂಢಿಸಿಕೊಂಡವು. ಕಾಳಾಮುಖ ಶೈವ ಆಚಾರ್ಯರು ಜನ ಸಮುದಾಯಗಳ ಮೇಲೆ ಪ್ರಭಾವ ಹೊಂದಿರುವುದನ್ನು ಗಮನಿಸಿದ ಕೆಳಹಂತದ ಮಾಂಡಲಿಕ ರಾಜಾಡಳಿತಗಳು ಕಾಳಾಮುಖ ಶೈವಕ್ಕೆ ಭೂಮಿ ಕಾಣಿ ದಾನಗಳನ್ನಿತ್ತು ಪ್ರೋತ್ಸಾಹಿಸಿದವು.

ವೈದಿಕ ಬ್ರಾಹ್ಮಣ ಪುರೋಹಿತವಾದಕ್ಕೆ ಭಿನ್ನವಾದ ತತ್ವ ಶಾಸ್ತ್ರ ಸಂಹಿತೆಗಳನ್ನು ಪ್ರತಿಪಾದಿಸಿದ ಪಾಶುಪತ, ಕಾಪಾಲಿಕ, ಪಂಚರಾತ್ರ ಎಂಬ ಶೈವ ಪಂಥಗಳೂ 10ನೆಯ ಶತಮಾನದ ಕರ್ನಾಟಕದಲ್ಲಿ ಇದ್ದವು. ಆದರೆ ಕರ್ನಾಟಕದ ಉತ್ತರ ಭಾಗದ ಸಾಮಾಜಿಕ ಜೀವನದಲ್ಲಿ ಕಾಳಾಮುಖ ಶೈವವು ಅತ್ಯಂತ ಪ್ರಭಾವಿ ಪಂಥವಾಗಿದ್ದು, ಬ್ರಾಹ್ಮಣ ಅಗ್ರಹಾರಗಳನ್ನು ಬಿಟ್ಟರೆ ಅತ್ಯಂತ ಹೆಚ್ಚಿನ ಭೂಮಿಕಾಣಿ ದಾನಗಳನ್ನು ಪಡೆದು ದೇವಸ್ಥಾನ ಸಂಕೀರ್ಣಗಳನ್ನು ನಿರ್ವಹಿಸಿದ ನಿದರ್ಶನಗಳಿವೆ. ಕಾಳಾಮುಖ ಶೈವ ಪಂಥದ ನಿಯಂತ್ರಣದಲ್ಲಿದ್ದ ಶಿವ ದೇವಸ್ಥಾನಗಳು ಆಧ್ಯಾತ್ಮಿಕ ತರಬೇತಿಯ ಕೇಂದ್ರಗಳಾಗಿ, ವಿದ್ಯಾದಾನ ಮಾಡುವ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುತ್ತಿದ್ದವು.

ಅಗ್ರಹಾರಗಳು ಮತ್ತು ಬ್ರಾಹ್ಮಣ ಪುರೋಹಿತರು ನಿರ್ವಹಿಸುತ್ತಿದ್ದ ಗುರುಕುಲಗಳಲ್ಲಿ ದ್ವಿಜೇತರ ಜಾತಿಗಳವರಿಗೆ ಪ್ರವೇಶಾವಕಾಶವಿರುತ್ತಿರಲಿಲ್ಲ. ಆದರೆ ಕಾಳಾಮುಖ ಶೈವರ ಘಟಿಕಾಸ್ಥಾನಗಳಲ್ಲಿ, ಗುರುಕುಲಗಳಲ್ಲಿ ಈ ಅವಕಾಶದ ಲಭ್ಯತೆ ಇತ್ತು. ಈ ಹಿನ್ನೆಲೆಯಲ್ಲೇ ಬಳ್ಳಿಗಾವಿಯಲ್ಲಿದ್ದ ಕಾಳಾಮುಖ ಶೈವ ಪಂಥದ ಕೋಡಿಯ ಮಠದಲ್ಲಿ ಶಿವ ಶರಣ ಮಾದಾರ ಚನ್ನಯ್ಯ ವಿದ್ಯಾಭ್ಯಾಸ ಮಾಡಿದ ಎಂದಿರುವ ಐತಿಹ್ಯವು ರೂಪುಗೊಂಡಿರುವುದನ್ನು ಗಮನಿಸಬಹುದಾಗಿದೆ. ಕಾಳಾಮುಖ ಶೈವಕ್ಕೆ ವೈದಿಕ ಬ್ರಾಹ್ಮಣವಾದದೊಂದಿಗೆ ಸಂಘರ್ಷವಿದ್ದ ಹಾಗೆಯೇ ಜೈನರ ಬಗ್ಗೆಯೂ ತೀವ್ರ ವಿರೋಧವಿತ್ತು. ಪಾಶುಪತ ಶಾಸ್ತ್ರ ಸಂಹಿತೆಗಳನ್ನು ಸಂಕಲನಗೊಳಿಸಿ ಸಿದ್ಧಾಂತ ರಚನೆ ಮಾಡಿದ ಕಾಳಾಮುಖ ಶೈವದ ಸ್ಥಾಪಕಾಚಾರ್ಯ ನೆನ್ನಲಾಗುವ ಲಾಕುಳೀಶನ ರಚನೆಗಳಲ್ಲಿ ಈ ತೀವ್ರ ವಿರೋಧವನ್ನು ಕಾಣಬಹುದಾಗಿದೆ.

ಕಾಳಾಮುಖ ಶೈವವನ್ನು ಬಿಟ್ಟರೆ 10ನೆಯ ಶತಮಾನದ ಕರ್ನಾಟಕದಲ್ಲಿ ವೈದಿಕ ಬ್ರಾಹ್ಮಣವಾದಕ್ಕೆ ಪರ್ಯಾಯವಾದ ಸಾಂಸ್ಕೃತಿಕ ಧೋರಣೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಮುನ್ನಡೆಸಿದ್ದು ಜೈನ ಧರ್ಮವೆಂದು ಹೇಳಬಹುದಾಗಿದೆ. 5ನೆಯ ಶತಮಾನದ ಹೊತ್ತಿಗೆ ವೇದಾಂತವಾದಿಗಳು ಹಾಗೂ ಸಂಸ್ಕೃತದ ಪ್ರಾಬಲ್ಯದಿಂದ ಮಂಕಾಗಿದ್ದ ಜೈನ ಧರ್ಮವು ತನ್ನನ್ನು ಇಲ್ಲಿನ ಸಾಮಾಜಿಕ ಸನ್ನಿವೇಶಕ್ಕೆ ಪ್ರಸ್ತುತಗೊಳಿಸಿಕೊಳ್ಳಲಿಕ್ಕಾಗಿ ಕೆಲವು ಬಗೆಯ ಮಾರ್ಪಾಡುಗಳಿಗೆ ಒಳಪಡಿಸಿ

ಕಾಳಾಮುಖ ಶೈವವು ಜಾತಿ ಪರಿಗಣನೆಯಿಲ್ಲದೆ ದೀಕ್ಷೆ ಹೊಂದಿದ ಪ್ರತಿಯೊಬ್ಬರನ್ನೂ ತನ್ನ ವಿಧಿಯಾಚರಣೆಯೊಳಕ್ಕೆ ಬಿಟ್ಟುಕೊಳ್ಳುವ ಪ್ರವೃತ್ತಿಯ ಮೂಲಕ ಸಾಕಷ್ಟು ಜನಾದರಣೆಯನ್ನು ಪಡೆಕೊಂಡಿತು. ಶೂದ್ರ ಸಮುದಾಯಗಳ ನಡುವೆ ಪ್ರಚಲಿತವಿದ್ದ ಆರಾಧನೆ ಮತ್ತು ಆಹಾರ ವಿಧಿಗಳನ್ನು ಅಳವಡಿಸಿಕೊಂಡಿದ್ದರಿಂದ ಅದಕ್ಕೆ ಸಾಕಷ್ಟು ಸಾಮಾಜಿಕ ಬೆಂಬಲವೂ ನಿರ್ಮಾಣವಾಯಿತು. ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇದ್ದ ವೈದಿಕ ಬ್ರಾಹ್ಮಣ ಪುರೋಹಿತಶಾಹಿ ತನಗಿದ್ದ ಆರ್ಥಿಕ ಮತ್ತು ಸಾಮಾಜಿಕ ಬಲಾಢ್ಯತೆಯನ್ನು ಬಿಟ್ಟುಕೊಡಲು ಸಿದ್ಧವಿರಲಿಲ್ಲ. ಅದು ಕಾಳಾಮುಖ ಶೈವದಂತಹ ಪಂಥಗಳಲ್ಲಿ ತೊಡಗಿಸಿಕೊಂಡಿದ್ದ ಸನ್ಯಾಸಿಗಳನ್ನು, ಸಾಧಕರನ್ನು 'ಬ್ರಾಹ್ಮಣ ಚಂಡಾಲ'ರೆಂದು ನಿಂದಿಸಿತು.

ಕೊಂಡಿತು ಎಂಬುದನ್ನಿಲ್ಲಿ ಗಮನಿಸಬೇಕಾಗಿದೆ. ಜೈನ ಧರ್ಮಕ್ಕೆ ತನ್ನನ್ನು ಸ್ಥಳೀಯ ಸಮುದಾಯಮುಖಿ ಮಾಡಿಕೊಳ್ಳಲು ಈ ಬಗೆಯ ಮಾರ್ಪಾಡುಗಳ ಅಗತ್ಯ ಒದಗಿರಬೇಕೆಂದು ಕಾಣುತ್ತದೆ. ಈ ಬದಲಾವಣೆಯ ಪ್ರವೃತ್ತಿ ಮೊದಲು ಕಂಡು ಬಂದಿದ್ದು 5ನೆಯ ಶತಮಾನದಲ್ಲಿ. ಕದಂಬರು ಆಳ್ವಿಕೆ ನಡೆಸಿದ್ದ ಪ್ರದೇಶಗಳಲ್ಲಿ ಕರ್ನಾಟಕದ ಜೈನರಲ್ಲಿ 'ಯಾಪನೀಯ' ಎಂಬ ಪಂಗಡ ಕಾಣಿಸಿಕೊಂಡಿತು.

ನಗರಗಳಲ್ಲಿದ್ದು ವಾಣಿಜ್ಯ ವಹಿವಾಟಿನಲ್ಲಿ ನಿರತವಾಗಿದ್ದ ಜೈನ ಸಮುದಾಯವು ಈ ಸನ್ನಿವೇಶದಲ್ಲಿ ಆರಂಭವಾದ ಊಳಿಗಮಾನ್ಯ ಕೃಷಿ ವ್ಯವಸ್ಥೆಯಲ್ಲಿ ತನ್ನ ನೆಲೆಗಳನ್ನು ಕಂಡುಕೊಳ್ಳುವುದಕ್ಕಾಗಿ ಗ್ರಾಮಗಳ ಉತ್ಪಾದನಾ ವ್ಯವಸ್ಥೆಯ ಭಾಗವಾಗಬೇಕಾಗಿ ಬಂದಿತು. ಗ್ರಾಮೀಣ ಭಾಗದ ಭೂಮಿಕಾಣಿ ನಿರ್ವಹಣೆ ಜೊತೆಗೆ ಈ ಪಂಗಡವು ಕ್ರಿ. ಶ. 7ರ ಹೊತ್ತಿಗೆ ಮೂರ್ತಿ ಪೂಜೆಯ ಅಭ್ಯಾಸವನ್ನು ಅಳವಡಿಸಿಕೊಂಡಿತು. ಮೂಲದ ಜೈನ ಧರ್ಮೀಯ ಸಿದ್ಧಾಂತಕ್ಕೆ ಮೂರ್ತಿ ಪೂಜೆಯ ಆರಾಧನೆ ಸಮ್ಮತವಾದ ವಿಷಯವಾಗಿರಲಿಲ್ಲ. ಆದರೆ ದೇವಸ್ಥಾನ ಕೇಂದ್ರಿತವಾದ ಭೂಮಿದಾನಗಳ ಮುಖಾಂತರ ಪ್ರಭುತ್ವದಲ್ಲಿ ಪ್ರಭಾವಿ ಪಾತ್ರ ನಿರ್ವಹಿಸತೊಡಗಿದ್ದ ಬ್ರಾಹ್ಮಣ ಅಗ್ರಹಾರಗಳು ಹಾಗೂ ಕಾಳಾಮುಖ ಶೈವರ ಮಠಗಳಿಗೆ ಸ್ಪರ್ಧೆಯನ್ನು ನೀಡಬೇಕಾಗಿ ಬಂದ ಒತ್ತಡದಲ್ಲಿ ಕರ್ನಾಟಕದ ಜೈನ ಧರ್ಮವು ಈ ಮೂರ್ತಿ ಪೂಜೆಯ ಕ್ರಮವನ್ನು ಅಳವಡಿಸಿಕೊಂಡಿರಬೇಕು ಎನ್ನಲಾಗುತ್ತದೆ. ಬಾಹುಬಲಿ ಗೊಮ್ಮಟನನ್ನು ತನ್ನ ಪಾಂಥಿಕ ಪ್ರತೀಕವನ್ನಾಗಿಸಿಕೊಂಡು ವಿಗ್ರಹಗಳ ಸ್ಥಾಪನೆಯನ್ನು, ಆರಾಧನೆಯನ್ನು ಹಾಗೂ ಬಸದಿಗಳ ನಿರ್ಮಾಣವನ್ನು ಇದು ಕೈಗೊಂಡಿತು.

ಹೀಗೆ ಪೂಜಾ ಕ್ರಮವನ್ನು ಅಳವಡಿಸಿಕೊಳ್ಳುವ ಮುಖಾಂತರ ಮೂಲ ಜೈನದ ನಿರೀಶ್ವರವಾದಿ ವೈಚಾರಿಕತೆಯಿಂದ ಇದು ಕವಲೊಡೆಯಿತು. 10ನೆಯ ಶತಮಾನದ ಹೊತ್ತಿಗೆ ಜೈನ ಧರ್ಮಕ್ಕೆ ಗಂಗ ಹಾಗೂ ರಾಷ್ಟ್ರಕೂಟ ರಾಜಮನೆತನಗಳು ಅತ್ಯಂತ ಹೆಚ್ಚಿನ ಬೆಂಬಲವನ್ನು, ಆಶ್ರಯವನ್ನು ನೀಡಿದವು. ಜೈನ ಯತಿಗಳು ಗ್ರಾಮೀಣ ಪ್ರಾಂತ್ಯಗಳಲ್ಲಿ ತಮ್ಮ ಪ್ರಸ್ತುತತೆಯನ್ನು ಉಳಿಸಿಕೊಳ್ಳುವ ಅಂಗವಾಗಿ ಜಿನ ಧರ್ಮದ ಸಿದ್ಧಾಂತ ಬೋಧನೆಯ ಜೊತೆಗೆ ವೈದ್ಯಕೀಯ ಹಾಗೂ ಜೋತಿಷ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳತೊಡಗಿದರು. 10ನೆಯ ಶತಮಾನದಲ್ಲಿ ಕರ್ನಾಟಕದ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಜಿನ ವಿಗ್ರಹ ಸ್ಥಾಪನೆ ಹಾಗೂ ಬಸದಿಗಳ ನಿರ್ಮಾಣ ತೀವ್ರ ಹೆಚ್ಚಳ ಕಂಡಿತು. ಬಸದಿಗಳ ನಿರ್ಮಾಣ ಹಾಗೂ ನಿರ್ವಹಣೆಗೆ ರಾಜ ಮಾನ್ಯರಿಂದ ಅಪಾರ ಪ್ರಮಾಣದ ಭೂಮಿ ದಾನ ಹಾಗೂ ಧನಕನಕ ಕಾಣಿಕೆ ಸಂದಾಯವಾಯಿತು. ಈ ಹಿನ್ನೆಲೆಯಲ್ಲಿ ಜೈನ ಆಚಾರ್ಯ ಪಂಗಡದಲ್ಲಿ ಸ್ಥಾಪನಾಚಾರ್ಯ, ಪ್ರತಿಷ್ಠಾಚಾರ್ಯ ಹಾಗೂ ಗೃಹಸ್ಥಾಚಾರ್ಯ ಎಂಬ ವಿಧಗಳು ಕಾಣಿಸಿಕೊಂಡವು.

ತಮ್ಮ ಪಂಥಕ್ಕೆ ಮತಾಂತರಗೊಂಡ ಗ್ರಾಮೀಣ ಸಮುದಾಯಗಳ ದೈನಿಕ ವಿಧಿಯಾಚರಣೆಗಳಲ್ಲಿ ಪುರೋಹಿತ ಸ್ಥಾನ ನೆರವೇರಿಸುವುದು ಗೃಹಸ್ಥಾಚಾರ್ಯನ ಕೆಲಸವಾಯಿತು. ಹೆಚ್ಚು ಜನರ ಬೇಡಿಕೆಯನ್ನು ಪೂರೈಸುತ್ತಿದ್ದ ಗೃಹಸ್ಥಾಚಾರ್ಯನಿಗೆ ಇತರೆ ಇಬ್ಬರು ಆಚಾರ್ಯರಿಗಿಂತ ಹೆಚ್ಚಿನ ಪ್ರಭಾವ ಲಭ್ಯವಾಯಿತು. ಈ ಮುಖಾಂತರವಾಗಿ ಬ್ರಾಹ್ಮಣ ಪುರೋಹಿತಶಾಹಿಯ ಮೇಲೆ ಜನಸಮುದಾಯಗಳಿಗಿದ್ದ ಅವಲಂಬನೆಯನ್ನು ಕಡಿತಗೊಳಿಸಲು ಸಾಧ್ಯವಾಯಿತು. ಇದನ್ನು ಧಾರ್ಮಿಕ ಪರ್ಯಾಯ ಸಂರಚನೆಯ ಸ್ಥಾಪನೆ ಎಂದು ಕರೆಯಬಹುದಾಗಿದೆ. ಇದೇ ಸಂದರ್ಭದಲ್ಲಿ ಜೈನ ಧರ್ಮವು ಗ್ರಾಮೀಣ ಶೂದ್ರ ಸಮುದಾಯಗಳಲ್ಲಿ ವ್ಯಾಪಕವಾಗಿದ್ದ ಮಾತೃದೇವತಾರಾಧನೆಯನ್ನು ತನ್ನೊಳಗೆ ಅಳವಡಿಸಿಕೊಳ್ಳುವ ಮಾರ್ಪಾಡಿಗೊಳಗಾಯಿತು. ಈ ಹಿಂದೆ ಜೈನ ಪರಂಪರೆಯಲ್ಲಿ ಯಕ್ಷಿಣಿಯರಾಗಿದ್ದ ಜ್ವಾಲಮಾಲಿನಿ, ಅಂಬಿಕ ಮತ್ತು ಪದ್ಮಾವತಿಗಳು ಮಾತೃ ದೇವತೆಗಳ ಪ್ರತಿರೂಪದಂತೆ ಪೂಜೆಗೊಳಪಡುವ ಪರಿಪಾಠ ಆರಂಭವಾಯಿತು.

ದೇವತೆಗಳ ಪೂಜಾಕಾರ್ಯದ ಅಂಗವಾಗಿ ತಾಂತ್ರಿಕಾಚರಣೆಗಳು ಕೂಡ ಪ್ರವೇಶಿಸಲ್ಪಟ್ಟು ಜೈನತಂತ್ರವಾದವು 10ನೇಯ ಶತಮಾನದಲ್ಲಿ ಪ್ರಭಾವಿ ಪಾತ್ರ ನಿರ್ವಹಿಸಿತು. 10ನೇ ಶತಮಾನದ ಮೊದಲರ್ಧದಲ್ಲಿ ಬರೆಯಲ್ಪಟ್ಟ 'ಜ್ವಾಲಿನೀಕಲ್ಪ' ಈ ತಾಂತ್ರಿಕಾಚರಣೆಯ ಬಗ್ಗೆ ಮಾಹಿತಿ ನೀಡುವ ಗ್ರಂಥವಾಗಿದ್ದು, ಪೂಜಾಚರಣೆಗಳ ಮೂಲಕ ಶೂದ್ರವರ್ಗದ ಜನತೆಯನ್ನು ತನ್ನ ಧಾರ್ಮಿಕ ಪ್ರಭಾವಕ್ಕೆ ತಂದುಕೊಳ್ಳುವಲ್ಲಿ ಜೈನಧರ್ಮವು ಯಶಸ್ವಿಯಾಯಿತು. ಕ್ರಿಯಾವಿಧಿಗಳು, ಕರ್ಮಕಾಂಡಗಳು ಜೈನ ಧರ್ಮದ ಸಿದ್ಧಾಂತಕ್ಕೆ ಹೊಂದಿದವುಗಳಲ್ಲ. ಹಾಗಿದ್ದರೂ ಈ ಸುಧಾರಣೆಯನ್ನು ಅದು ಅಳವಡಿಸಿಕೊಳ್ಳಬೇಕಾಯಿತು. ಅಂದಿನ ಕರ್ನಾಟಕದ ಸನ್ನಿವೇಶದಲ್ಲಿ ಶೂದ್ರ ಸಮುದಾಯದಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದ ಶಾಕ್ತ್ಯಪಂಥವನ್ನು ಅಳವಡಿಸಿಕೊಳ್ಳುವ ವಿಧಾನವಾಗಿ ಆಗಿದ್ದ ಧಾರ್ಮಿಕ ಪಂಥಗಳೆಲ್ಲವೂ ಹೆಚ್ಚೂ ಕಡಿಮೆ ಈ ತಂತ್ರವಾದವನ್ನು ತಮ್ಮ ಪಂಥದ ಕ್ರಿಯಾಚರಣೆಯ ಒಂದು ಲಕ್ಷಣವಾಗಿರಿಸಿಕೊಂಡದ್ದನ್ನು ನಾವು ಗಮನಿಸಬೇಕಾಗಿದೆ. ಕಾಳಾಮುಖ ಶೈವರು, ವೇದಾಂತ ಶೈವರು ಮುಂತಾದವರೆಲ್ಲ ಈ ಬಗೆಯ ಪ್ರಕ್ರಿಯೆಯಲ್ಲಿ ತಮ್ಮ ಪಂಥಗಳಲ್ಲಿ ತಾಂತ್ರಿಕಾಚರಣೆಗಳನ್ನು ಚಾಲ್ತಿಗೊಳಿಸಿಕೊಂಡವರಾಗಿದ್ದರು.

ಕರ್ನಾಟಕದಲ್ಲಿ ಶೂದ್ರ ಜನಸಮುದಾಯಗಳನ್ನು ತನ್ನೊಳಗೆ ಬೆಸೆದುಕೊಳ್ಳುವ ಉದ್ದೇಶದಿಂದ ಮಾತೃದೇವತೆಗಳನ್ನು ಆರಾಧನಾ ದೇವತೆಗಳನ್ನಾಗಿ ಒಳಗೊಳ್ಳುವಲ್ಲಿ ಜೈನ ಧರ್ಮವು ಬ್ರಾಹ್ಮಣ ಧರ್ಮಕ್ಕಿಂತಲೂ ಮೊದಲೆ ಮುಂದಾಯಿತು ಎಂಬುದನ್ನು ನಾವಿಲ್ಲಿ ಸಕಾರಾತ್ಮಕವಾಗಿ ಪರಿಗಣಿಸಬಹುದಾಗಿದೆ. ರವಿಷೇಣ ಕ್ರಿ.ಶ. 7ರಲ್ಲಿ ಬರೆದ 'ಪದ್ಮ ಪುರಾಣ'ವು ಜಿನ ವಿಗ್ರಹ ಸ್ಥಾಪನೆ ಹಾಗೂ ಫಲ ಪ್ರಾಪ್ತಿಗಾಗಿ ದೇವತಾರಾಧನೆ ಮುಂತಾದ ಅಂಶಗಳ ಪ್ರತಿಪಾದನೆಯನ್ನು ಒಳಗೊಂಡಿತ್ತು. ಆಗಿನ ಸಮಾಜವು ಜಾತಿ ವ್ಯವಸ್ಥೆಯಿಂದ ಸುತ್ತುವರಿಯಲ್ಪಟ್ಟಿದ್ದು ಉತ್ಪಾದನಾ ವ್ಯವಸ್ಥೆಯೂ ಊಳಿಗಮಾನ್ಯ ಕೃಷಿ ಪದ್ಧತಿಗೆ ಒಳಪಟ್ಟಿತ್ತು. ಜೈನ ಧರ್ಮವು ಈ ಸಾಮಾಜಿಕ ವ್ಯವಸ್ಥೆಯಲ್ಲಿ ತನ್ನನ್ನು ರಕ್ಷಿಸಿಕೊಂಡು ಬ್ರಾಹ್ಮಣ ಧರ್ಮಕ್ಕೆ ಸ್ಪರ್ಧೆ ನೀಡುತ್ತಾ ಶೂದ್ರ ಜನಸಮುದಾಯವನ್ನು ಪರ್ಯಾಯ ಸಾಂಸ್ಕೃತಿಕ ಮಾರ್ಗಕ್ಕೆ ಮುನ್ನಡೆಸಲು ಅತ್ಯಂತ ಕಠಿಣ ಶ್ರಮವನ್ನು ಪಡಬೇಕಾಯಿತು ಎಂಬುದನ್ನು ಆ ಧಾರ್ಮಿಕ ಪಂಥದ ಸ್ವರೂಪದೊಳಗೆ ಬಂದ ಈ ಮಾರ್ಪಾಡುಗಳು ಸೂಚಿಸುತ್ತಿವೆ.

ಕರ್ನಾಟಕದಲ್ಲಿ ಶೂದ್ರ ಜನಸಮುದಾಯಗಳನ್ನು ತನ್ನೊಳಗೆ ಬೆಸೆದುಕೊಳ್ಳುವ ಉದ್ದೇಶದಿಂದ ಮಾತೃದೇವತೆಗಳನ್ನು ಆರಾಧನಾ ದೇವತೆಗಳನ್ನಾಗಿ ಒಳಗೊಳ್ಳುವಲ್ಲಿ ಜೈನ ಧರ್ಮವು ಬ್ರಾಹ್ಮಣ ಧರ್ಮಕ್ಕಿಂತಲೂ ಮೊದಲೆ ಮುಂದಾಯಿತು ಎಂಬುದನ್ನು ನಾವಿಲ್ಲಿ ಸಕಾರಾತ್ಮಕವಾಗಿ ಪರಿಗಣಿಸಬಹುದಾಗಿದೆ. ರವಿಷೇಣ ಕ್ರಿ. ಶ. 7ರಲ್ಲಿ ಬರೆದ 'ಪದ್ಮ ಪುರಾಣ'ವು ಜಿನ ವಿಗ್ರಹ ಸ್ಥಾಪನೆ ಹಾಗೂ ಫಲ ಪ್ರಾಪ್ತಿಗಾಗಿ ದೇವತಾರಾಧನೆ ಮುಂತಾದ ಅಂಶಗಳ ಪ್ರತಿಪಾದನೆಯನ್ನು ಒಳಗೊಂಡಿತ್ತು. ಆಗಿನ ಸಮಾಜವು ಜಾತಿ ವ್ಯವಸ್ಥೆಯಿಂದ ಸುತ್ತುವರಿಯಲ್ಪಟ್ಟಿದ್ದು ಉತ್ಪಾದನಾ ವ್ಯವಸ್ಥೆಯೂ ಊಳಿಗಮಾನ್ಯ ಕೃಷಿ ಪದ್ಧತಿಗೆ ಒಳಪಟ್ಟಿತ್ತು. ಜೈನ ಧರ್ಮವು ಈ ಸಾಮಾಜಿಕ ವ್ಯವಸ್ಥೆಯಲ್ಲಿ ತನ್ನನ್ನು ರಕ್ಷಿಸಿಕೊಂಡು ಬ್ರಾಹ್ಮಣ ಧರ್ಮಕ್ಕೆ ಸ್ಪರ್ಧೆ ನೀಡುತ್ತಾ ಶೂದ್ರ ಜನಸಮುದಾಯವನ್ನು ಪರ್ಯಾಯ ಸಾಂಸ್ಕೃತಿಕ ಮಾರ್ಗಕ್ಕೆ ಮುನ್ನಡೆಸಲು ಅತ್ಯಂತ ಕಠಿಣ ಶ್ರಮವನ್ನು ಪಡಬೇಕಾಯಿತು ಎಂಬುದನ್ನು ಆ ಧಾರ್ಮಿಕ ಪಂಥದ ಸ್ವರೂಪದೊಳಗೆ ಬಂದ ಈ ಮಾರ್ಪಾಡುಗಳು ಸೂಚಿಸುತ್ತಿವೆ.

ಒಂದು ಸಿದ್ಧಾಂತವಾಗಿ ಜೈನ ಧರ್ಮವು ಸಮಾಜದಲ್ಲಿನ ಪ್ರತಿಯೊಬ್ಬರಿಗೂ ನಿರ್ವಾಣದ ಸಾಧ್ಯತೆಯನ್ನು ಪ್ರತಿಪಾದಿಸುತ್ತಿತ್ತು. ತನ್ನ ಹೊರ ಆಚರಣೆಗಳಲ್ಲಿ ಹಾಗೂ ಬಸದಿಯ ನಿರ್ವಹಣಾ ಸ್ವಭಾವದಲ್ಲಿ ಅದು ಮಾಡಿಕೊಂಡ ಬದಲಾವಣೆಗಳಿಂದ ಶುದ್ಧ ಜೈನವಾದಿಗಳಿಂದ 'ಜೈನಭ್ರಷ್ಟ'ರು ಎಂಬ ಆಪಾದನೆಯನ್ನು ಅದು ಹೊರಬೇಕಾಗಿ ಬಂದಿತಾದರೂ, ಇಲ್ಲಿನ ಸಾಂಸ್ಕೃತಿಕ ಸನ್ನಿವೇಶದಲ್ಲಿ ಜಾಗೃತಗೊಳ್ಳುತ್ತಿದ್ದ ಶೂದ್ರ ಪ್ರಜ್ಞೆಯನ್ನು ತನ್ನ ಧರ್ಮಾಚರಣೆಯ ವ್ಯಾಪ್ತಿಯೊಳಕ್ಕೆ ಒಳಗೊಳ್ಳಲು ಪ್ರಯತ್ನಿಸಿದ ಸಕಾರಾತ್ಮಕತೆಯು ಅದಕ್ಕಿದೆ. ಆದ್ದರಿಂದಲೇ ಹಯವದನ ರಾವ್‌ರಂತಹ ವಿದ್ವಾಂಸರು 'ಜೈನ ಧರ್ಮವು ತನ್ನ ವಿಧಿಯಾಚರಣೆಗಳಲ್ಲಿ ಅತ್ಯಂತ ನಮ್ಯವಾದುದು' ಎಂದು ಪ್ರಶಂಸಿಸಿದ್ದಾರೆ. ತಾತ್ವಿಕವಾಗಿ ಅದು ಬ್ರಾಹ್ಮಣ ಶ್ರೇಷ್ಠತೆಯನ್ನು ಒಪ್ಪಿಕೊಳ್ಳಲಿಲ್ಲ. ಆದರೆ ತಾನು ಕೂಡ ತನ್ನ ಹೊರ ರೂಪದಲ್ಲಿ ಮಾತು, ಉಡುಪು, ಚಿಂತನೆ, ಆಚರಣೆ ಹಾಗೂ ಕ್ರಿಯಾವಿಧಿಗಳಲ್ಲಿ ಬ್ರಾಹ್ಮಣರನ್ನು ಹೋಲಿಕೆಗಿಟ್ಟುಕೊಂಡಿತು.

ಜೈನರಲ್ಲಿ ಯಜ್ಞೋಪವೀತದ ಕ್ರಿಯಾಚರಣೆ ಕೂಡ ಚಾಲ್ತಿಗೆ ಬಂದಿತು. ಜನಿವಾರವನ್ನು 'ಪಾವುಮ ಚರಿಯ' ಮತ್ತು 'ಪದ್ಮ ಪುರಾಣ'ಗಳು 'ಸುತ್ತ ಕಂಠ' ಎಂದು ಕರೆಯುತ್ತವೆ. ವ್ಯತ್ಯಾಸವೇನೆಂದರೆ, ಬ್ರಾಹ್ಮಣ ಧರ್ಮದಲ್ಲಿ ವರ್ಣಾಶ್ರಮ ವ್ಯವಸ್ಥೆಗನುಸಾರವಾಗಿ ದ್ವಿಜ ಜಾತಿಗಳಿಗೆ ಮಾತ್ರ ಜನಿವಾರ ಧರಿಸುವ ಹಕ್ಕಿದೆ. ಜೈನ ಧರ್ಮದಲ್ಲಿ ಜೈನ ದೀಕ್ಷೆಯನ್ನು ಪಡೆದವರೆಲ್ಲ ಈ ಜನಿವಾರ ಧರಿಸುವ ಹಕ್ಕನ್ನು ಪಡೆಯುವ ಅವಕಾಶವಿದೆ. ಜೈನ ಧರ್ಮವು ತನ್ನ ಆಧ್ಯಾತ್ಮಿಕ ಚಿಂತನೆಯಲ್ಲಿ ಪ್ರತಿಪಾದನೆ ಮಾಡಿದ ಸಮಾನತೆಯ ಅಂಶಗಳು ಸ್ವಾಭಿಮಾನಕ್ಕೆ ಆಸೆ ಪಡುತ್ತಿದ್ದ ಸಮಾಜದ ಶೂದ್ರ ವರ್ಗಗಳಿಗೆ ಭರವಸೆಯಾಗಿ ಕಂಡವು. ಜೈನ ಧರ್ಮವು ಆರಂಭದಿಂದಲೂ ಆತ್ಮಶುದ್ಧೀಕರಣವೇ ನಿರ್ವಾಣಕ್ಕೆ ದಾರಿ ಎಂಬ ಪ್ರತಿಪಾದನೆ ಹೊಂದಿದ್ದುದು ಮಾತ್ರವಲ್ಲದೇ, ಪ್ರತಿ ಆತ್ಮದಲ್ಲೂ ದೇವರಿದ್ದು, ಲೌಕಿಕ ಬಂಧನದಿಂದ ಬಿಡುಗಡೆ ಹೊಂದಿದರೆ ದೈವತ್ವ ಸಿದ್ಧಿಸುತ್ತದೆ ಎಂದು ಪ್ರತಿಪಾದಿಸಿತು. ಪ್ರತಿ ವ್ಯಕ್ತಿಯೂ ಸ್ವಯಂ ಪ್ರೇರಣೆಯಿಂದ ಪ್ರಯತ್ನಿಸಿದರೆ ಮೋಕ್ಷ ಪಡೆಯಲು ಸಾಧ್ಯವೆಂದೂ, ಸ್ವರ್ಗದಲ್ಲಿರುವ ಯಾವ ದೇವ ದೇವತೆಗಳಾಗಲೀ, ಇನ್ನು ಯಾರೆ ಆಗಲಿ ನಮ್ಮನ್ನು ಉದ್ಧರಿಸಿ ಮೋಕ್ಷವನ್ನು ಒದಗಿಸಲು ಸಾಧ್ಯವಿಲ್ಲ ಎಂಬ ತಾತ್ವಿಕತೆಯನ್ನು ಪ್ರತಿಪಾದಿಸಿತು.

ಈ ಬಗೆಯ ಹಿನ್ನೆಲೆಯಲ್ಲಿ 10ನೇ ಶತಮಾನದ ಜೈನ ಧರ್ಮವು ಕರ್ನಾಟಕದಲ್ಲಿ ಹಲವು ಪರ್ಯಾಯ ಸಾಂಸ್ಕೃತಿಕ ನಡೆಗಳಿಗೆ ಇಂಬುಕೊಟ್ಟಿತು. ಅವುಗಳನ್ನು ಈ ಕೆಳಗಿನಂತೆ ನಾವು ಪಟ್ಟಿ ಮಾಡಬಹುದಾಗಿದೆ.

1. ಶೂದ್ರ ವರ್ಗದಿಂದ ಮೂಡಿ ಬಂದು ರಾಜ್ಯಾಧಿಕಾರವನ್ನು ನಿರ್ವಹಿಸತೊಡಗಿದ, ಮೂಲದಲ್ಲಿ ಕ್ಷತ್ರಿಯರಲ್ಲದ ಕೆಲವು ರಾಜವಂಶಗಳಿಗೆ ಅದು ಧಾರ್ಮಿಕ ನೈತಿಕ ಬೆಂಬಲ ನೀಡಿತು. ಆಗಿದ್ದ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಜಾತಿಯಾಧಾರಿತ ಪರಿಗಣನೆಯೆಂಬುದು ಬಹಳ ಪ್ರಮುಖಾಂಶವಾಗಿದ್ದಿತು. ರಾಜ್ಯಾಡಳಿತದ ಅವಕಾಶ ಹೊಂದಿದ್ದಾಗಲೂ ಬ್ರಾಹ್ಮಣ ಧರ್ಮದ ಶಾಸ್ತ್ರಗಳನುಸಾರ ಕ್ಷತ್ರಿಯರಲ್ಲದವರು ಪಟ್ಟಾಭಿಷಿಕ್ತರಾಗಲು ಅವಕಾಶವಿರಲಿಲ್ಲ. ಈ ಧೋರಣೆ ಮಹಾರಾಷ್ಟ್ರದ ಸಂದರ್ಭದಲ್ಲಿ ಛತ್ರಪತಿ ಶಿವಾಜಿಯ ಪಟ್ಟಾಭಿಷೇಕದ ಸಂದರ್ಭದಲ್ಲೂ ಪುನರಾವರ್ತನೆಗೊಂಡಿದ್ದು ಇತಿಹಾಸ ಪ್ರಸಿದ್ಧವಾಗಿದೆ. ಹಾಗಿರುವ ಸಂದರ್ಭದಲ್ಲಿ, ಹತ್ತನೇ ಶತಮಾನದಷ್ಟು ಹಿಂದೆಯೇ ಕರ್ನಾಟಕದ ಊಳಿಗಮಾನ್ಯ ವ್ಯವಸ್ಥೆಯ ಕೆಳಹಂತಗಳಿಂದ ಮೂಡಿ ಬಂದು ಆಳುವ ವರ್ಗವಾಗಲು ಮೇಲ್ಮುಖಿ ಚಲನೆ ಆರಂಭಿಸಿದ್ದ ಪಂಗಡಗಳಿಗೆ ಪ್ರೋತ್ಸಾಹ ಹಾಗೂ ಮಾನ್ಯತೆ ನೀಡಿದ್ದು ಮುಖ್ಯವಾದ ಪರ್ಯಾಯ ಸಾಂಸ್ಕೃತಿಕ ನಡೆಯಾಗಿದೆ.

2. ತನ್ನ ಧರ್ಮದ ಮೇಲ್ಮೈಗಾಗಿ ರಾಜಾಶ್ರಯದ ಬೆಂಬಲ ಅದಕ್ಕೆ ಬೇಕಿತ್ತಾದ್ದರಿಂದ ಇದೊಂದು ತಂತ್ರವಾಗಿ ಬಳಕೆಯಾಯಿತು ಎಂಬುದು ನಿಜವಿದ್ದರೂ, ಅದನ್ನು ವೈದಿಕ ಬ್ರಾಹ್ಮಣ ಪಂಗಡವೂ ಅನುಸರಿಸಬಹುದಿತ್ತಲ್ಲವೇ, ತನ್ನ ಕರ್ಮಠ ಜಾತಿ ಧೋರಣೆಯಿಂದಾಗಿ ಅದು ಮಾಡದಿದ್ದುದನ್ನು ಜೈನ ತಾತ್ವಿಕತೆಯು ಸಾಧ್ಯವಾಗಿಸಿತು ಎಂಬುದಿಲ್ಲಿ ಮುಖ್ಯ. ಸನಾತನ ಧರ್ಮ ವ್ಯವಸ್ಥೆಯಲ್ಲಿ ಮಾನ್ಯಗೊಂಡಿರದ ಜಾತಿಕುಲಗಳಿಗೆ ರಾಜ್ಯಾಡಳಿತದ ಹಕ್ಕನ್ನು ಮಾನ್ಯಮಾಡುವುದು ಪರ್ಯಾಯ ಸಂಸ್ಕೃತಿಯ ಆಶಯಗಳಿಗೆ ಪೂರಕವಾದ ನಡೆಯಾಗಿರುತ್ತದೆ. ಇದು ಆಳುವ ವರ್ಗಗಳೊಳಗೆ ಏರ್ಪಡುವ ವೈರುಧ್ಯವಾಗಿದ್ದಾಗಲೂ, ಸಾಂಸ್ಕೃತಿಕವಾಗಿ ಸಮಾಜದಲ್ಲಿ ಬ್ರಾಹ್ಮಣವಾದದ ಆಧಿಪತ್ಯವನ್ನು ಧಿಕ್ಕರಿಸುವ ಕ್ರಮವಾಗಿರುತ್ತದೆ. ಚಾಲುಕ್ಯ ರಾಜವಂಶದ ಕೆಲವು ಶಾಖೆಗಳು ತಲಕಾಡಿನ ಗಂಗರು, ರಾಷ್ಟ್ರಕೂಟರು, ಹೊಯ್ಸಳರು ಹೀಗೆ ಜೈನ ಧರ್ಮಾವಲಂಬಿಗಳಾಗಿ, ಅವರ ಮಾರ್ಗದರ್ಶನದಲ್ಲಿ ಮುಂದೆ ಬಂದ ಹಲವು ವಂಶಗಳನ್ನು ನಾವು ಇಲ್ಲಿ ಉದಾಹರಿಸಬಹುದಾಗಿದೆ.

3. ಜೈನ ಧರ್ಮದ ಪಾರಮ್ಯವನ್ನು ಜನಪ್ರಿಯಗೊಳಿಸುವುದಕ್ಕಾಗಿ ಕನ್ನಡದಲ್ಲಿ ಕಾವ್ಯ ಬರೆಯಲಾಯಿತು ಎಂಬ ಟೀಕೆಗಳಿವೆಯಾದರೂ ಅದು ಆಗ ನೆರವೇರಿಸಿದ ಚಾರಿತ್ರಿಕ ಕರ್ತವ್ಯ ಕೇವಲ ಧಾರ್ಮಿಕವಾದುದಾಗಿರಲಿಲ್ಲ ಎಂಬುದನ್ನು ಗಮನಿಸಬೇಕಾಗಿದೆ. 10ನೇ ಶತಮಾನದ ಪಂಪ, ರನ್ನ ಮೊದಲಾದ ಜೈನ ಕೃತಿಕಾರರು ಕುಲೀನ ಪಂಡಿತರ ಭಾಷೆಯಾಗಿದ್ದ ಸಂಸ್ಕೃತವನ್ನು ಕೈಬಿಟ್ಟು ಕನ್ನಡದಲ್ಲಿ ಕಾವ್ಯರಚನೆ ಕೈಗೊಂಡಿದ್ದ ಕನ್ನಡ ಭಾಷೆಯ ಮುನ್ನಡೆಯಲ್ಲಿ ಒಂದು ಮಹತ್ತರ ಹೆಜ್ಜೆಯಾಗಿದೆ. ವೈದಿಕ ಬ್ರಾಹ್ಮಣ ಪುರೋಹಿತಶಾಹಿಯೊಂದಿಗೆ ಕಾಳಾಮುಖ ಶೈವಕ್ಕೆ ತೀವ್ರ ವಿರೋಧವಿತ್ತಾದರೂ ಅದು ಕನ್ನಡವನ್ನು ತನ್ನ ಗ್ರಂಥರಚನೆಯ ಭಾಷೆಯಾಗಿ ಬಳಸಿಕೊಳ್ಳಲಿಲ್ಲ ಎಂಬುದೂ ಕೂಡ ಗಮನಾರ್ಹ.

ಜೈನ ಕವಿಗಳು ಕನ್ನಡದಲ್ಲಿ ಕಾವ್ಯ ರಚಿಸಿದ್ದು ವೈದಿಕ, ಜೈನ ದೃಷ್ಟಿಕೋನಗಳ ನಡುವಿನ ಸಂಘರ್ಷದ ಮುಂದುವರಿಕೆಯಾಗಿದೆ. ಸಂಸ್ಕೃತವನ್ನು ನಿರಾಕರಿಸುವುದರಲ್ಲಿ, ಕನ್ನಡವನ್ನು ಕಾವ್ಯ ಭಾಷೆಯಾಗಿ, ಪಂಡಿತ ಭಾಷೆಯಾಗಿ ನೆಲೆಗೊಳಿಸುವಲ್ಲಿ ಬ್ರಾಹ್ಮಣವಾದ ವಿರೋಧಿ ಧೋರಣೆಯ ಮುಂದುವರಿಕೆಯಾಗಿದೆ. ಆಗಿನ ಸನ್ನಿವೇಶದಲ್ಲಿ ಗ್ರಂಥರಚನೆಗೆ ಕನ್ನಡ ಭಾಷೆಯನ್ನು ಆಯ್ದುಕೊಳ್ಳುವುದೆಂಬುದೇ ಜನಮುಖೀ ಧೋರಣೆಯ ಬಹುದೊಡ್ಡ ಸಾಂಸ್ಕೃತಿಕ ಸವಾಲನ್ನು ಕೈಗೆತ್ತಿಕೊಂಡ ನಿಲುವಾಗಿದೆ. ಜೈನ ಕವಿಗಳು ಮತ್ತು ಗ್ರಂಥಕಾರರು ಆಗ ಬ್ರಾಹ್ಮಣಶಾಹಿಯ ಏಕಾಧಿಪತ್ಯಕ್ಕೊಳಪಟ್ಟಿದ್ದ ಸಂಸ್ಕೃತ ಭಾಷೆಯನ್ನು ಕೈಬಿಟ್ಟು ಕೃತಿ ರಚನೆ ಮಾಡಿದ್ದು ಜಾಗೃತಗೊಳ್ಳುತ್ತಿದ್ದ ಶೂದ್ರ ಪ್ರಜ್ಞೆಗೆ ಅವರು ಧಾರ್ಮಿಕವಾಗಿ ನೀಡಿದ ಒತ್ತಾಸೆಯ ಮುಂದುವರಿದ ಮುಖವಾಗಿದೆ.

ಶೂದ್ರ ರಾಜವಂಶಗಳಿಗೆ ಕೊಟ್ಟ ಪ್ರೇರಣೆ ಮಾತ್ರವಲ್ಲದೆ, ಆ ರಾಜಪಾಲನೆಗೆ ಒಳಪಟ್ಟ ಜನರ ಬಳಕೆಯ ಭಾಷೆಯನ್ನು ಗ್ರಂಥಸ್ಥಗೊಳಿಸುವುದು ದೇಸಿ ಸತ್ವ ರೂಪುಗೊಳ್ಳುವಿಕೆಗೆ, 'ಕನ್ನಡದೊಳ್ ಭಾವಿಸಿದ ಜನಪದ'ಕ್ಕೆ ಭಾಷಿಕ ಸಮುದಾಯವಾಗಿ ಅನನ್ಯತೆ ಪಡೆದುಕೊಳ್ಳುವಿಕೆಯೆಡೆಗೆ ಕೊಟ್ಟ ಕೊಡುಗೆಯೂ ಆಗಿದೆ. ವೈದಿಕ ಪುರೋಹಿತಶಾಹಿಯ ಜೊತೆಗೆ ಕರ್ನಾಟಕದ ಜೈನ ಧರ್ಮಕ್ಕಿದ್ದ ಸಂಘರ್ಷವು ಜನ ಭಾಷೆಯ ಕಸುವನ್ನು, ಕೀರ್ತಿಯನ್ನು ಹೆಚ್ಚಿಸುವುದಕ್ಕೆ ಹಾದಿಮಾಡಿತೆಂಬುದೇ ಕರ್ನಾಟಕದ ಮಟ್ಟಿಗೆ ಅತ್ಯಂತ ರಚನಾತ್ಮಕವಾದ ಸಾಂಸ್ಕೃತಿಕ ನಡೆಯಾಗಿದೆ.

4. ಇಂತಹ ಪರ್ಯಾಯ ಸಾಂಸ್ಕೃತಿಕ ಧೋರಣೆಗಳನ್ನು ಪರಿಶೀಲಿಸಲು ಪಂಪನನ್ನು ಪ್ರಾತಿನಿಧಿಕವಾಗಿ ನಾವು ಪರಿಶೀಲಿಸಬಹುದಾಗಿದೆ. ಕಾವ್ಯ ರಚನೆಗೆ ಕಥಾಆಕರವಾಗಿ ಸಾಂಸ್ಕೃತಿಕ ವ್ಯಾಸ ಭಾರತವನ್ನು ಆಧರಿಸಿದರೂ ಜೈನ ಲೋಕ ದೃಷ್ಟಿಗೆ ಅನುಗುಣವಾಗಿ ಪಂಪ ಭಾರತದಲ್ಲಿ ಅಳವಡಿಸಿಕೊಂಡ ಮಾರ್ಪಾಡುಗಳು ಇದೇ ಬಗೆಯಲ್ಲಿ ಗಮನಾರ್ಹವಾದವುಗಳು. ಶ್ರೀ ಕೃಷ್ಣ ಲೀಲಾ ವಿಲಾಸದಂತಿದ್ದ ಭಾರತ ಕಥೆಯನ್ನು ಕ್ಷಾತ್ರ ತೇಜದ ಅರ್ಜುನನ ಶೌರ್ಯ ಸಾಹಸದ ಕಥೆಯನ್ನಾಗಿ ಮಂಡಿಸುವುದರಲ್ಲಿ, ಖಳನಾಯಕರಂತೆ ಬಿಂಬಿತರಾಗಿದ್ದ ದುರ್ಯೋಧನ, ಕರ್ಣ ಮುಂತಾದವರನ್ನು ಮೌಲ್ಯಯುತ ವ್ಯಕ್ತಿತ್ವಗಳಾಗಿ ಚಿತ್ರಿಸುವುದರಲ್ಲಿ ಪಂಪ ತನ್ನ ಲೋಕದೃಷ್ಟಿಯನ್ನು ಮೆರೆದಿದ್ದಾನೆ. ಕೃಷ್ಣ ಕ್ಷತ್ರಿಯನಲ್ಲದಿರಬಹುದು, ಆದರೆ ಮಹಾಭಾರತದ ಕಥೆಯ ಮೂಲಕ ಭಗವದ್ಗೀತೆಯನ್ನು ಭೋಧಿಸುವ ಅವತಾರಿಯೂ, ಸಿದ್ಧಾಂತಿಯೂ ಆದ ಪಾತ್ರವಾಗಿರುವ ಕಾರಣಕ್ಕೆ, ಆ ಮೌಲ್ಯಗಳ ಬಗ್ಗೆ ಜೈನ ಲೋಕದೃಷ್ಟಿಗೆ ಇರುವ ವಿರೋಧದ ಕಾರಣಕ್ಕೆ ಆ ಪಾತ್ರದ ಪ್ರಾಮುಖ್ಯತೆಯನ್ನು ಮಾಮೂಲಿಗೊಳಿಸಲಾಗಿದೆ. ಮಹಾಭಾರತದ ಕಥೆಯಲ್ಲಿ ನಾರಾಯಣನಿಗೆ ಇದ್ದ ಪ್ರಾಮುಖ್ಯತೆಯನ್ನು ನರನಿಗೆ ವರ್ಗಾಯಿಸಿದ ಕಥಾಭೂಮಿಕೆಯೂ ಕೂಡ ಈ ಸಾಂಸ್ಕೃತಿಕ ಪ್ರತಿರೋಧದ ಧೋರಣೆಯನ್ನು ಬಿಂಬಿಸುತ್ತಿದೆ.

5. ಕನ್ನಡದಲ್ಲಿ ಕಾವ್ಯ ಬರೆಯುವುದು, ಮಹಾಭಾರತದ ಕಥೆಯನ್ನು ಸಮಕಾಲೀನ ಚರಿತ್ರೆಯ ಪಾತ್ರಕ್ಕೆ ಅಳವಡಿಕೆ ಮಾಡುವುದು ಮಾತ್ರವಲ್ಲದೆ ಅದು ವೈದಿಕ ಬ್ರಾಹ್ಮಣವಾದಕ್ಕೆ ವಿರುದ್ಧವಾದ ಮೌಲ್ಯ ಪ್ರಜ್ಞೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದೆ. ಆದಿಪುರಾಣದಲ್ಲಿ 'ಮನುಷ್ಯ ಜಾತಿ ತಾನೊಂದೇ ವಲಂ' ಎಂದು ಪ್ರತಿಪಾದಿಸಿದ ಪಂಪ, ಅಧಿಕಾರ ಮತ್ತು ಅಂತಸ್ತುಗಳಿಗಿಂತ ತ್ಯಾಗ ಮತ್ತು ನಿರಪೇಕ್ಷೆಯೇ ದೊಡ್ಡದೆಂದು, ಸ್ವಾರ್ಥ ಮತ್ತು ಈರ್ಶೆಗಿಂತ ಔದಾರ್ಯ ಮತ್ತು ನಿರ್ಮತ್ಸರವೇ ಉನ್ನತವಾದುದೆಂಬ ಮೌಲ್ಯವನ್ನು ಭರತ, ಬಾಹುಬಲಿಯರ ಪ್ರಸಂಗದಲ್ಲಿ ನಿರೂಪಿಸಿದ್ದಾನೆ. ಆಗಿದ್ದ ಅಧಿಕಾರ ದಾಹದ, ಧಾರ್ಮಿಕ ಪೈಪೋಟಿ ಮತ್ತು ಸಾಮಾಜಿಕ ವೈಷಮ್ಯಗಳ ಸನ್ನಿವೇಶದಲ್ಲಿ ಈ ಬಗೆಯ ಮೌಲ್ಯ ಪ್ರತಿಪಾದನೆ ಮುಖ್ಯ ಆಶಯಾತ್ಮಕ ನಿಲುವಾಗುತ್ತದೆ.

6. 'ವಿಕ್ರಮಾರ್ಜುನ ವಿಜಯ'ದಲ್ಲಿ ಕುಲ ಸಮಸ್ಯೆಯ ಪ್ರಶ್ನೆಯನ್ನು ಅತ್ಯಂತ ಗಮನಾರ್ಹವಾಗಿ ಪರಿಶೀಲಿಸಲಾಗಿದೆ. ಒಂದು ಹಂತದಲ್ಲಿ ಇದು ಕೆಳಹಂತದಿಂದ ಕ್ಷತ್ರಿಯ ಸ್ಥಾನಮಾನಗಳಿಗೆ ಏರಲು ಪ್ರಯತ್ನಿಸುತ್ತಿದ್ದ ರಾಜವಂಶಗಳ ಅಭೀಪ್ಸೆಯ ಪ್ರತಿಪಾದನೆಗೆ ಸಂವಾದಿಯಾಗಿದೆ ಎಂದರೂ ತಪ್ಪಿಲ್ಲ. ಕುಲದ ಪ್ರಶ್ನೆ ಬಂದಾಗ ತೀಕ್ಷ್ಣ ಪ್ರತಿಕ್ರಿಯೆ ನೀಡುವುದು ಕರ್ಣ ಮಾತ್ರವಲ್ಲ, ದುರ್ಯೋಧನ ಕೂಡ. ಇಲ್ಲಿ ದ್ರೋಣ ಮತ್ತು ಕೃಪಾಚಾರ್ಯರು ಬ್ರಾಹ್ಮಣವಾದದ ಪ್ರತಿನಿಧಿಗಳಾಗಿ ಪಂಪನಿಗೆ ಭಾಸವಾಗಿದ್ದರೆ, ದುರ್ಯೋಧನ ಶೂದ್ರ ಪ್ರಜ್ಞೆಯ ಸಮರ್ಥಕನಾಗಿ ಅಲ್ಲಿ ಕಂಡರಿಸಲ್ಪಟ್ಟಿದ್ದಾನೆ.

'ಕುಲವೆಂಬುದುಂಟೆ ಬೀರಮೆ
ಕುಲಮಲ್ಲದೆ ಕುಲಮನೆಂತು ಪಿಕ್ಕದಿರಿಂನೀ
ಮೊಲಿದಲ್ಲಿ ಪುಟ್ಟಿ ಬಳೆದಿರೋ
ಕುಲವಿರ್ದುದೇ ಕೊಡದಳಂ ಶರಸ್ತಂಭದೊಳಂ'

(ಪಂಪ ಭಾರತ 2–83)

ಕೆಳಜಾತಿಯಾದ ಕಾರಣಕ್ಕೆ ರಾಜಪಟ್ಟಕ್ಕೇರಲು ಅರ್ಹತೆ ಇಲ್ಲ ಎಂಬ ನಿಷೇಧಕ್ಕೊಳಗಾಗಿದ್ದ ಆ ಕಾಲಘಟ್ಟದ ಕನ್ನಡ ಶೂದ್ರ ರಾಜವಂಶಗಳ ಬ್ರಾಹ್ಮಣ ಪುರೋಹಿತವಾದದ ವಿರೋಧ ಈ ಮಾತುಗಳಲ್ಲಿ ದುರ್ಯೋಧನನ ಮೂಲಕ ಧ್ವನಿಸಿದೆ ಎಂದರೆ ಆಶ್ಚರ್ಯವಿಲ್ಲ. ಶೌರ್ಯವನ್ನಾಧರಿಸಿ, ತೋಳ್ಬಲವನ್ನಾಧರಿಸಿ ತಮ್ಮ ರಾಜಕೀಯ

ಪ್ರಾಬಲ್ಯವನ್ನು ನೆಲೆಗೊಳಿಸುತ್ತಿದ್ದ ಮಧ್ಯಕಾಲೀನ ಊಳಿಗ ಮಾನ್ಯ ಅವಧಿಯ ಮನೋಭಾವಕ್ಕೆ ಈ ಮಾತು ಮೈಗೊಟ್ಟಂತಿದೆ. ಕರ್ಣ ಕೂಡ ತನ್ನ ಮೇಲೆ ಕೀಳುಕುಲದ ಹೀಯಾಳಿಕೆ ಬಂದಾಗ ಮುಂದೆತ್ತಿ ಆಡುವುದು ಶೌರ್ಯದ ಮಾತನ್ನೇ.

'ಕುಲಮನೆ ಮುನ್ನ ಮುಗ್ಗಡಿಪಿರೇಂಗಳ ನಿಮ್ಮ
ಕುಲಂಗಳಾಂತು ಮಾ
ರ್ಮಲೆವನನಟ್ಟಿ ತಿಂಬುವೆ ಕುಲಂ ಕುಲಮಲ್ತು ಚಲಂ
ಕುಲಂ ಗುಣಂ
ಕುಲಮಭಿಮಾನವೊಂದೆ ಕುಲಮಣ್ಣು ಕುಲಂ
ಬಗೆವಾಗಳೀಗಲೀ
ಕಲಹದೊಳಣ್ಣ ನಿಮ್ಮ ಕುಲವಾ ಕುಲಮಂ ನಿಮಗುಂಟು
ಮಾಡುಗುಂ' (ಪಂಪ ಭಾರತ 10-21)

ಇದು ಕೇವಲ ಆ ಕಾಲಘಟ್ಟದ ಶೌರ್ಯ ಪ್ರಜ್ಞೆಯ ಮೌಲ್ಯ ಮಾತ್ರವೆಂದು ಪರಿಗಣಿಸುವುದು ಸಾಧ್ಯವಿಲ್ಲ. ಇದರೊಳಗೊಂದು ಕೆಳ ಜಾತಿ ಕುಲ ಸ್ವಾಭಿಮಾನದ ಧೋರಣೆಯೂ ಇದೆ. 10ನೇ ಶತಮಾನದಲ್ಲಿ ಜೈನ ಧರ್ಮವು, ಶೂದ್ರ ಜಾತಿಗಳ ಬೆಂಬಲವನ್ನು ಆಧರಿಸಿ ಕರ್ನಾಟಕದಲ್ಲಿದ್ದ ಸನ್ನಿವೇಶಕ್ಕೆ ಅನುಗುಣವಾಗಿ ಶೂದ್ರ ಪ್ರಜ್ಞೆಯನ್ನು ಬೆಂಬಲಿಸುವ ಆಶಯಕ್ಕೆ ಇಂತಹ ಮಾತುಗಳು ದನಿಕೊಟ್ಟಿವೆ. ಅದು ಕಡೆಗೆ 'ಕರ್ಣರಸಾಯನಮಲ್ತೆ ಭಾರತಂ' ಎಂಬ ಅಭಿಮಾನಕ್ಕೂ, 'ನೆನೆಯದಿರಣ್ಣ ಇನ್ನಾರುಮಂ ಕರ್ಣನಂ ನೆನೆಯ' ಎಂಬ ಉತ್ಕಟ ಭಾವಾಭಿವ್ಯಕ್ತಿಗೂ ಈ ದೃಷ್ಟಿಕೋನ ಇಂಬು ನೀಡಿದೆ.

7. ಕುಲದಭಿಮಾನದ ಪ್ರಶ್ನೆ ಮಾತ್ರವಲ್ಲದೆ, ಸ್ನೇಹ ಸೌಹಾರ್ದತೆಯ ಮೌಲ್ಯವನ್ನು ಕೀರ್ತಿಸಲು ದುರ್ಯೋಧನ, ಕರ್ಣರ ಪಾತ್ರದ ಮೂಲಕ ಪಂಪಭಾರತವು ಪ್ರಯತ್ನಿಸುತ್ತದೆ. ಕರ್ಣನನ್ನು ಕಳೆದುಕೊಂಡ ದುರ್ಯೋಧನ ವಿಲಪಿಸುವ ವಿಧಾನವಾಗಲೀ, ಭಾನುಮತಿಯೊಡನೆ ನೆತ್ತವನಾಡಿದ ಪ್ರಸಂಗದಲ್ಲಿ ಬರುವ ನಿರೂಪಣೆಯಾಗಲೀ ಇಂತಹ ಸರೀಕತನದ ಗೆಳೆತನದ ಭಾವಕ್ಕೆ ಪಂಪನು ನೀಡಿರುವ ಮಹತ್ವವಾಗಿದೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ವಿಧೇಯತೆ, ಶರಣಾಗತಿ ಎಂಬವುಗಳು ಪರಮ ಮೌಲ್ಯಗಳು. ಅಧೀನವಾಗಿರುವುದು ಆಶ್ರಯ ಪಡೆಯಲಿಕ್ಕೆ ಇರುವ ಮುಖ್ಯ ಸಾಧನ.

ಕೆಳ ಜಾತಿಗಳು ತಾವು ಒಕ್ಕಲಾಗಿದ್ದ ಅಗ್ರಹಾರ, ದೇವಸ್ಥಾನ, ಮಠಗಳಿಗೆ ಸರ್ವಾಧೀನವಾಗಿರುವ ಮುಖಾಂತರ ಮಾತ್ರ ತಮ್ಮ ಬದುಕಿಗೆ ಆಧಾರವಾದ ಭೂಮಿಯುಳುಮೆಯ ಅವಕಾಶ ಪಡೆಯಲು ಸಾಧ್ಯವಿತ್ತು ಎಂಬುದನ್ನು ಅಂದಿನ ಸನ್ನಿವೇಶದಲ್ಲಿ ನಾವು ಗ್ರಹಿಸಿದರೆ ರಾಜನಿಗೆ ಸರ್ವ ವಿಧೇಯತೆಯಿಂದ ಇರುವ ಮುಖಾಂತರ ಮಾತ್ರ ತುಂಡರಸರು, ಸಾಮಂತರು ತಮ್ಮ ಸ್ಥಾನ ಭದ್ರಗೊಳಿಸಿಕೊಳ್ಳಲು ಸಾಧ್ಯವಿತ್ತು ಎಂಬುದನ್ನು ನೆನೆದರೆ ಪಂಪನಿಗೆ ಆ ಮೌಲ್ಯದ ಬಗ್ಗೆ ಇದ್ದ ಅಸಹನೆ ಮತ್ತು ಅಸಮ್ಮತಿ ಇಂತಹ ನಿರೂಪಣೆಗಳಲ್ಲಿ ವ್ಯಕ್ತಗೊಂಡಿದೆ ಎನ್ನಬಹುದಾಗಿದೆ. ದುರ್ಯೋಧನನ ಬಾಯಿಂದ ಅಂತಹ ಸ್ನೇಹ ಯಾಚನೆಯನ್ನು ಮಾಡಿಸಿದ್ದಾನೆ. ಅಂಗರಾಜ್ಯಾಧಿಕಾರವನ್ನು ಕೊಟ್ಟು ಕುಲಹೀನತೆಯ ಪೇಚನ್ನು ಬಗೆಹರಿಸಿದ ಸಂದರ್ಭದಲ್ಲಿ ಕರ್ಣನಿಂದ ಅವನು ಕೇಳಿಕೊಳ್ಳುವುದು ಸ್ನೇಹವನ್ನು.

'ಪೊಡಮಡುವರ್ ಜೀಯೆಂಬರ್
ಕುಡುದಪುಗಯ್ಯೇಂ ಪ್ರಸಾದಮೆಂಬಿವು ಪೆರರೊಳ್
ನಡೆಗೆಮ್ಮ ನಿನ್ನಯೆಡೆಯೊಳ್
ನಡೆಯಲ್ವೇಡೆನಗೆ ಕೆಳನೆಯ್ಯ ರಾಧೇಯ'
(ಪಂಪ ಭಾರತ 2-85)

ಅಧೀನತೆಯೆಂಬುದು ಮನುಷ್ಯರ ನಡುವಿನ ಸಂಬಂಧಗಳನ್ನು ಮೇಲು ಕೀಳಿಗೆ ಗುರಿಪಡಿಸುತ್ತದೆ ಯಾದ್ದರಿಂದ ಸರೀಕರಂತೆ ನಡೆದುಕೊಳ್ಳುವ ಆಶಯಾತ್ಮಕ ಮಾತುಗಳನ್ನು ನುಡಿಸುವುದು ಪಂಪನಿಗಿದ್ದ ಕಾಲಪ್ರಜ್ಞೆಯ ಧೋರಣೆಯಾಗಿರುತ್ತದೆ.

8. ಪಂಪನ ಕಾವ್ಯದಲ್ಲಿ ಬರುವ ಪ್ರದೇಶಾಭಿಮಾನವೆಂಬುದೂ ಕೂಡ ಈ ಬಗೆಯದೊಂದು ಪರ್ಯಾಯ ಸಾಂಸ್ಕೃತಿಕ ಮೌಲ್ಯವನ್ನಾಗಿ ಗ್ರಹಿಸುವ ಅವಕಾಶವಿದೆ. ವೈದಿಕ ಬ್ರಾಹ್ಮಣವಾದಕ್ಕೆ ಜಂಬೂದ್ವೀಪೇ ಭರತವರ್ಷೇ ಎಂಬಂತಹ ಅಸೇತು ಹಿಮಾಚಲ ಭಾರತ ಪ್ರಜ್ಞೆ ಇದ್ದರೆ, ಕಾಶಿ, ರಾಮೇಶ್ವರ, ಮಥುರಾ, ಹಿಮಾಲಯ ಮುಂತಾದ ತೀರ್ಥಕ್ಷೇತ್ರಗಳ ಮೇಲೆ ಅಭಿಮಾನವಿದ್ದರೆ, ಆ ಸ್ಥಳಗಳು ಪವಿತ್ರವೆಂಬ ಕಾರಣಕ್ಕೆ ಅಲ್ಲಿ ಹುಟ್ಟುವುದು, ಅಲ್ಲಿ ಸಾಯುವುದು ಎರಡೂ ಪವಿತ್ರವೆಂಬ ಭಾವನೆಯಿದ್ದರೆ, ಅದಕ್ಕೆ ಪರ್ಯಾಯವಾಗಿ ಒಂದು ಭೂಪ್ರದೇಶವನ್ನು, ಬನವಾಸಿ ಸೀಮೆಯನ್ನು ಕೀರ್ತಿಸುವುದು-ಅಲ್ಲಿ ಮನುಷ್ಯನಾಗಿ ಸಾಧ್ಯವಾಗದಿದ್ದರೆ ಮರಿದುಂಬಿಯಾಗಿ ಹುಟ್ಟಿದರೂ ಸಾರ್ಥಕ ಎಂಬಂತೆ ಭಾವಿಸುವುದು ಹೊಸ ಬಗೆಯ ಪ್ರದೇಶಾಭಿಮಾನ ಭೂಮಿಕೆಯನ್ನು ಬಿಂಬಿಸುತ್ತಿದೆ. ಬನವಾಸಿ ಸೀಮೆಯಲ್ಲಿ ಹುಟ್ಟುವುದು ಅದು ಪವಿತ್ರ ಕ್ಷೇತ್ರ ಎಂಬ ಕಾರಣಕ್ಕಾಗಿ ಅಲ್ಲ. ಅಲ್ಲಿರುವ ಜನ, ಅಲ್ಲಿರುವ ಪ್ರಕೃತಿ ಇವುಗಳೇ ಅವನ ಪ್ರೀತಿಗೆ ಮುಖ್ಯ ಕಾರಣ. ಆದ್ದರಿಂದಲೇ 'ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್' ಎನ್ನುತ್ತಾನೆ. ಅದು ತೀರ್ಥಕ್ಷೇತ್ರವಲ್ಲ, ಬದಲಾಗಿ ಅವನ ಜೀವಭಾವ ನಲಿಯುವ ನಂದನವನ. ಇದನ್ನು ಕೆಳ ಹಂತದ ಊಳಿಗ ಮಾನ್ಯತೆ ಸಬಲೀಕರಣಗೊಳ್ಳುವ ಹಂತದಲ್ಲಿ ಮೂಡತೊಡಗಿದ್ದ ಪ್ರಾದೇಶಿಕ ಪ್ರಜ್ಞೆಯ ಕುರುಹು ಎಂದು ಪರಿಭಾವಿಸಬಹುದಾಗಿದೆ.

9. ಪಂಪನಿಗೆ ಕಾವ್ಯ ನಿರ್ಮಾಣದಲ್ಲಿ ಜೈನ ದಾರ್ಶನಿಕತೆಯು ಅನೇಕ ಹಂತದಲ್ಲಿ ಮಾರ್ಗದರ್ಶನ ಮಾಡಿದಂತಿದೆ. ಆದ್ದರಿಂದಲೇ ಅವನ ಪಾತ್ರ ಸೃಷ್ಟಿಯಲ್ಲಿ ಪೂರ್ತಿ ಧರ್ಮಾತ್ಮರು ಹಾಗೂ ಖಳರು ಎಂಬಂತಹ ಚಿತ್ರಣಗಳು ಕಡಿಮೆ ಇವೆ. ಪರಸ್ಪರ ಸಂಘರ್ಷದಲ್ಲಿರುವ ವ್ಯಕ್ತಿಗಳು ಸಂದರ್ಭಾನುಸಾರ ತಪ್ಪುಗಳನ್ನು ಮಾಡಬಹುದು. ಹಾಗೆಂದ ಮಾತ್ರಕ್ಕೆ ಅವರು ಸರ್ವಥಾ ದುಷ್ಟರೆಂದಲ್ಲ. ಆದ್ದರಿಂದಲೇ ದುರ್ಯೋಧನ, ಕರ್ಣ ಮುಂತಾದವರನ್ನು ಪಂಪ, ರನ್ನ ಹಾಗೂ ರಾವಣನನ್ನು ನಾಗಚಂದ್ರ ಮುಂತಾದವರು ವ್ಯಕ್ತಿ ಘನತೆಯುಳ್ಳ, ಸಂವೇದನೆಗಳುಳ್ಳ ಪಾತ್ರಗಳನ್ನಾಗಿ ಸೃಷ್ಟಿಸಿದ್ದಾರೆ. ತಪ್ಪು ಮಾಡದಿರುವವರು ಯಾರೂ ಇಲ್ಲ. ಆದ್ದರಿಂದಲೇ ಭೀಷ್ಮನಂತಹ ಉದಾತ್ತ ಕೂಡ ತಪ್ಪೆಸಗಿದಂತೆ ಕಾಣುವ ಪ್ರಸಂಗವನ್ನು ಪಂಪ ನಿರೂಪಿಸಬಲ್ಲ. ಜೈನ ಅನೇಕಾಂತವಾದದ ದೃಷ್ಟಿಕೋನ ಹೀಗೆ ವ್ಯಕ್ತಿ ಪಾತ್ರಗಳನ್ನು ಗ್ರಹಿಸುವಲ್ಲಿ ಪಂಪನಲ್ಲಿ ಕ್ರಿಯಾಶೀಲವಾಗಿದೆ. ಅವರ ವ್ಯಕ್ತಿ ಶುದ್ಧೀಕರಣದ ನಂತರ ನಿರ್ವಾಣ ಸಾಧ್ಯವಿದೆ ಎಂಬ ಧೋರಣೆ ಕೂಡ ಬ್ರಾಹ್ಮಣವಾದವು ಪ್ರತಿಪಾದಿಸುವ ಹುಟ್ಟಿನ ಕರ್ಮದಿಂದ ಶ್ರೇಷ್ಠ-ಅಧಮ, ಗುಣಶಾಲಿ ಮತ್ತು ಗುಣಹೀನ ಎಂದು ಪರಿಗಣಿಸುವ ಮೌಲ್ಯ ದೃಷ್ಟಿಗೆ ಸವಾಲೆಸೆಯುತ್ತಿದೆ. □

ಸಂವಾದ




ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗ್ಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಕಾವ್ಯ

ಗಜಲ್

ಬಟ್ಟಲು ಅರಕೆಯಾಗುವುದೆಂಬ ಭಯಕೆ ಕುಡಿಯಲು ಮನಸ್ಸಾಗುತ್ತಿಲ್ಲ ಸಾಕಿ
ಮತ್ತೆ ತುಂಬುವೆನೆಂದು ನೀನೆಂದರೂ ಯಾವುದೋ ಹಿಂಜರಿಕೆ ಕ್ಷಮಿಸು ಸಾಕಿ

ನೀನೆಲ್ಲಿ ದೂರಾಗುವೆಯೋ ಎಂಬ ಭಯಕೆ ಸಾಮೀಪ್ಯವ ಸವಿಯಲಾಗುತ್ತಿಲ್ಲ ಸಖಿ
ಗಿಡಬಳ್ಳಿಗಳ ಮರ್ಮರದಲ್ಲಿ ಇರುವೆ ನಲ್ಲ ಎಂದರೂ ಎಂಥದೋ ತುಮುಲ ಕ್ಷಮಿಸು ಸಖಿ

ಅಂಗೈಯಲ್ಲಿ ನೀನಿದ್ದರೂ ಕತ್ತಲ ಭಯಕೆ ಬೆಳಕಿಗೆ ಕಣ್ಣ ಬಿಡಲಾಗುತ್ತಿಲ್ಲ ಜ್ಯೋತಿ
ಅಂತರಂಗದಲ್ಲಿ ಹುಟ್ಟಿದ ಬೆಳಕಿದು ಎಂದರೂ ಎಂಥದೋ ಭಯ ಕ್ಷಮಿಸು ಜ್ಯೋತಿ

ಆಲಿಸುವ ನಿನಗೆ ನನ್ನೊಡಲು ತೆರೆಯದೇನೋ ಎಂಬಾತಂಕಕೆ ನುಡಿಯಲಾಗುತ್ತಿಲ್ಲ ಗೆಳತಿ
ನುಡಿಯಷ್ಟೆ ನಿನ್ನದು ಅದರ ಅರ್ಥ ನನ್ನದೆಂದರೂ ಎಂಥದೋ ಆತಂಕ ಕ್ಷಮಿಸು ಗೆಳತಿ

ಭಯ ತುಮುಲ ಆತಂಕಗಳ ಕಳೆವ ಗೆಳೆತನವೊಂದೆ ಆಸರೆ ನನಗೀಗ ಗೆಳತಿ
ಎಲ್ಲವನೂ ಮೀರುವೆನೆಲ್ಲವನೂ ದಾಟುವೆನು ತುಸುದೂರ ಕೈಹಿಡಿದು ನಡೆಸು ಗೆಳತಿ

○ ಎಸ್. ನಟರಾಜ ಬೂದಾಳು

ಬಂಡವಾಳಶಾಹಿಯತ್ತ...

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ದಲಿತರು ಕೆಲಸ ಹುಡುಕುವವರಿಗಿಂತ ಕೆಲಸ ನೀಡುವವರಾಗಬೇಕು

ದಲಿತ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಡಿ.ಐ.ಸಿ.ಸಿ.ಐ)ನ ಸಂಸ್ಥಾಪಕ ಅಧ್ಯಕ್ಷರಾದ ಮಿಲಿಂದ್ ಕಾಂಬ್ಳೆಯವರು ಕಳೆದವಾರ ಅದರ ಮುಂಬಯಿ ಶಾಖೆಯ ಉದ್ಘಾಟನಾ ಸಂಧರ್ಭದಲ್ಲಿ ಕಳೆದ "ತಾವೇಕೆ ಮುಂಬಯಿಯ ತಾಜ್ ಹೋಟೆಲ್‌ನಲ್ಲಿ ಸಭೆ ಸೇರಬಾರದು?" ಎಂದು ಪ್ರಶ್ನಿಸಿದರು "ನಾವೂ ಸಹ ಇಂಡಿಯ ಇನ್‌ಕಾರ್ಪೊರೇಟೆಡ್ ಬಹಳ ಇಷ್ಟಪಡುವಂತಹ ಸ್ಥಳಗಳಲ್ಲಿ ಸಭೆಗಳನ್ನು ನಡೆಸಲು ಇಚ್ಛಿಸುತ್ತೇವೆ" ಎಂದರು.

"ಮೇಲ್ಮಾಳಿಗೆಯ ಸಭಾಂಗಣ/ಭೋಜನ ಶಾಲೆಯೆ ಏಕೆ?" ನಾನು ತಿಳಿದುಕೊಳ್ಳಬಯಸಿದೆ. "ಭಾರತದ ಸಾಮಾಜಿಕ ಗೋಪುರದ ತಳದಲ್ಲಿ ಹುಟ್ಟಿದವರ ಒಂದು ದಿನದ ಮೇಲ್ಮಾಳಿಗೆಯ ಸಮಾಗಮ ಕೂಡ ಮನುವಿನ ಸಾಮಾಜಿಕ ಮಾದರಿಯನ್ನು ನಾಶಮಾಡುತ್ತೆ", ಎಂದರು ಮಿಲಿಂದ್ ಜಂಭದಿಂದ. ಇದು ದಲಿತರ ಹೊಸ ಕಥಾನಕ. ಚೆಘವಾರನ (ಅರ್ಜೆಂಟೈನಾದ ಒಬ್ಬ ಮಾರ್ಕ್ಸ್‌ವಾದಿ ಕ್ರಾಂತಿಕಾರ, ಬರಹಗಾರ, ಬುದ್ಧಿಜೀವಿ, ಮತ್ತು ಮಿಲಿಟರಿ ತಂತ್ರಗಾರ) 'ಸಂಪತ್ತಿರುವವರು ಏನೆಲ್ಲವನ್ನೂ ಇಷ್ಟಪಡುತ್ತಾರೊ ಅವೆಲ್ಲದಕ್ಕೂ ನಮ್ಮ ತಿರಸ್ಕಾರವನ್ನು ಸೂಚಿಸಬೇಕು' ಎಂಬ ನೀತಿಗಿಂತ ಮಿಲಿಂದ್ ಪ್ರತ್ಯೇಕತೆಯಿಂದ ದೂರ ಉಳಿಯುವುದನ್ನು ಪ್ರತಿಪಾದಿಸುತ್ತಾರೆ.

ನಾನು ಕಾಂಬ್ಳೆಯವರನ್ನು ಪ್ರಥಮ ಬಾರಿಗೆ ಭೇಟಿಯಾದಾಗ ಡಿ.ಐ.ಸಿ.ಸಿ.ಐ ಸ್ಥಾಪಿಸಲು ಮೂರು ಕಾರಣಗಳನ್ನು ನೀಡುವಂತೆ ಕೇಳಿದ್ದೆ. ಅವರ ಉತ್ತರ ನನ್ನನ್ನು ಗೊಂದಲಕ್ಕೀಡುಮಾಡಿತು.

"ನಾನು ದಲಿತ ಉದ್ದಿಮೆದಾರರನ್ನು ಒಂದು ವೇದಿಕೆ ಮೇಲೆ ತಂದು ಅವರು ಡಿ.ಐ.ಸಿ.ಸಿ.ಐ ಮೂಲಕ ಎಫ್.ಐ.ಸಿ.ಸಿ.ಐ ಮಾದರಿಯಲ್ಲಿ ಒಂದು ನ್ಯಾಯಯುತವಾದ ಪ್ರಭಾವಿ ಗುಂಪಾಗಿ ಮಾರ್ಪಾಡಾಗುವುದನ್ನು ನಾನು ಬಯಸುತ್ತೇನೆ" ಎಂದರು ಮಿಲಿಂದ್. "ಸುಧಾರಣಾ ನಂತರದ ಭಾರತ ಬನಿಯಗಳು (ಐತಿಹಾಸಿಕವಾಗಿ ವಾಣಿಜ್ಯ ಮತ್ತು ವ್ಯಾಪಾರದ ಮೇಲೆ ಸಂಪೂರ್ಣ ಏಕಸ್ವಾಮ್ಯವನ್ನೊಂದಿರುವ ಜಾತಿ ಗುಂಪುಗಳು) ನೀಡಲು ಶಕ್ತರಿರುವುದಕ್ಕಿಂತ ಹೆಚ್ಚು ಕೈಗಾರಿಕಾ ಮತ್ತು ವ್ಯಾಪಾರಿ ಸಂಸ್ಥೆಗಳನ್ನು ಬಯಸುತ್ತದೆ" ಮಿಲಿಂದ್ ವಿವರಿಸಿದರು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಹೊಸ ಸಾಮಾಜಿಕ ಪಂಗಡಗಳು ಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರೋದ್ಯಮಗಳನ್ನು ಪ್ರವೇಶಿಸಲು ಈಗ ಒಳ್ಳೆಯ ಸಮಯವಾಗಿದೆ. ದಲಿತರು ಅದರ ಉಪಯೋಗವನ್ನು ಪಡೆದುಕೊಳ್ಳಬೇಕು.

"ಇಂಡಿಯ ಇನ್‌ಕಾರ್ಪೊರೇಟೆಡ್‌ನ್ನು ದೈತ್ಯಾಕಾರವಾಗಿ ಬೆಳೆಸಲು ನಮ್ಮ ಶಕ್ತಿ ಮತ್ತು ಸೌಲತ್ತುಗಳನ್ನು ವ್ಯಯಮಾಡುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಅದರ ಬದಲಾಗಿ ನಾವು ಅವರ ಗುಂಪನ್ನೇ ಸೇರಿಕೊಂಡು ಕೆಲಸ ನೀಡುವವರಾಗಬೇಕು", ಮಿಲಿಂದ್ ತಮ್ಮ ಮಾತನ್ನು ಮುಗಿಸಿದರು.

ದಲಿತರ ಕ್ಷೇಮದ ಆಕಾಂಕ್ಷಿಗಳಾದ ಅನೇಕ ಸಿದ್ಧಾಂತಿಗಳು ಮಿಲಿಂದ್ ಅವರು ಹೇಳಬಯ ಸುತ್ತಿರುವ ವಿಚಾರವನ್ನು ಗ್ರಹಿಸುವಲ್ಲಿ ಸೋಲುತ್ತಾರೆ. ಸಾಮಾನ್ಯ ಜನರ ಮನದಾಳದಲ್ಲಿ ದಲಿತರ ಹಕ್ಕುಗಳು ಎಂದರೆ ಸ್ಕಾಲರ್‌ಶಿಪ್‌ಗಳು, ಬಿ.ಪಿ.ಎಲ್ ಕಾರ್ಡ್‌ಗಳು ಮತ್ತು ಗ್ರಾಮೀಣ ಉದ್ಯೋಗ ಭರವ ಸೆಯ ಕಾರ್ಡುಗಳು ಇಂತಹ ರೂಢಿಬದ್ಧ ದಲಿತರ ಬಗೆಗಿನ ಚಿಂತನೆ ಯಲ್ಲಿ ಶತಮಾನಗಳ ಕಾಲ ಕೀಳೆಂದು ಪರಿಗಣಿಸಲ್ಪಟ್ಟ ಮತ್ತು ಪ್ರತ್ಯೇಕ ವಾಗಿರಿಸಲ್ಪಟ್ಟ ಒಂದು ಸಮಾಜ ಸರ್ಕಾರದ ಅಭಯ ಹಸ್ತದ ಹೊರತು ಮುನ್ನಡೆಯಲಾರದು ಎನ್ನುವ ನಿಲುವು ಎದ್ದು ಕಾಣುತ್ತದೆ.

ನಿಜ. ಸಮಾಜದಲ್ಲಿನ ಅವರ ಸ್ಥಾನಮಾನವನ್ನು ಪರಿಗಣಿಸಿದಲ್ಲಿ ಬಹುತೇಕ ದಲಿತರಿಗೆ ಸರ್ಕಾರದ ಅಲ್ಪ ಸಹಾಯವಾದರೂ ಬೇಕು. ಆದರೆ ಇದು ಅನೇಕ ದಶಕಗಳಿಂದ ನಡೆಯುತ್ತಿದ್ದು ಹೆಚ್ಚು ದಲಿತರು ಸರ್ಕಾರವನ್ನು ತಮ್ಮ ವಿಮೋಚನೆಗಾರನೆಂದು ತಿಳಿದಿದ್ದಾರೆ. ಅರ್ಧ ಶತಮಾನ ಮುಗಿದಿದೆ. ಆದರೆ ದಲಿತರು ಮಾತ್ರ ವಿಮೋಚನೆ ಗೊಂಡಿಲ್ಲ. ವಿಮೋಚನೆಗೆ ಇನ್ನರ್ಧ ಶತಮಾನ ಕಾಯಲು ಡಿ.ಐ.ಸಿ.ಸಿ.ಐ ತಯಾರಿಲ್ಲ.

ಸರ್ಕಾರದ ದಲಿತ ಪರ ಚಟುವಟಿಕೆಯ ಅವಶ್ಯಕತೆ ಇಲ್ಲವೆಂದೇನೂ ಅಲ್ಲ. ಅಮೆರಿಕದ ಕೆಳವರ್ಗಗಳು ತಮ್ಮ ಸಂಕಷ್ಟ ಕಾಲದಲ್ಲಿ ಸರ್ಕಾರದ ಸಹಾಯ ಹಸ್ತವನ್ನು ಬಯಸಿದರೆ ದಲಿತರಿಗೂ ಸರ್ಕಾರದ ನೆರವು ಅವಶ್ಯಕ. ಆದರೆ ಸಮಸ್ಯೆ ಎಂದರೆ ಸರ್ಕಾರದ ನೆರವು ತನ್ನ ಕಾಲ ಮೇಲೆ ತಾನು ನಿಲ್ಲುವ ಮನುಷ್ಯನ ಸ್ವಂತ ಶಕ್ತಿಯನ್ನು ಊನಗೊಳಿಸುತ್ತದೆ. ದಲಿತರು ಒಂದು ದಿನ ಉತ್ತರ ಕೊರಿಯನ್ನರಾಗಿ ಮಾರ್ಪಾಡಾಗಬಹುದು ಎಂಬುದು ಡಿ.ಐ.ಸಿ.ಸಿ.ಐನ ಭಯ.

ಡಿ.ಐ.ಸಿ.ಸಿ.ಐನ ಜನಪ್ರಿಯ ಘೋಷಣೆ "ಕೆಲಸ ನೀಡುವವರಾಗಿ, ಕೆಲಸ ಹುಡುಕುವವರಾಗಬೇಡಿ" ಇದರ ಅರ್ಥವನ್ನು ವಿವರಿಸುವಂತೆ ಕೇಳಿದಾಗ ಮಿಲಿಂದ್, "ನಾವು ರಾಷ್ಟ್ರದ ಜಿ.ಡಿ.ಪಿಗೆ ಕೊಡುಗೆಯನ್ನು ನೀಡುತ್ತಿದ್ದೇವೆ. ತೆರಿಗೆಗಳನ್ನು ಕಟ್ಟುತ್ತಿದ್ದೇವೆ ಮತ್ತು ಉದ್ಯೋಗಗಳನ್ನು ಸೃಷ್ಟಿಸುತ್ತಿದ್ದೇವೆ", ಎಂದರು. ಸರ್ಕಾರದ ಕಲ್ಯಾಣದ ಪರ ನಿಲುವು ಮತ್ತು ಭಾರತದ ಯೋಜನಾ ಆಯೋಗದ ಸುತ್ತ ಇರುವ ದಲಿತ ಪರ ದುಃಖ ಪಡುವವರ ಹೊರತುಪಡಿಸಿಯೂ ನೂರಾರು ದಲಿತರು ಈಗಾಗಲೆ ಕೆಲಸ ನೀಡುವವರಾಗಿ ಪರಿವರ್ತನೆಗೊಂಡಿದ್ದು ಹಿಂದೂಗಳಿಗೂ ಕೂಡ ಕೆಲಸ ನೀಡಿದ್ದಾರೆ.

ಡಿ.ಐ.ಸಿ.ಸಿ.ಐನ ಮುಂಬಯಿ ಶಾಖೆಯ ಪ್ರಾರಂಭೋತ್ಸವದ ಸಂದರ್ಭದಲ್ಲಿ ದೇಶದ ವಿವಿಧ ಭಾಗಗಳಿಂದ ಬಂದ ದಲಿತ ಉದ್ದಿಮೆದಾರರು ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನ (ಬಿ.ಎಸ್.ಇ) ಅರ್ಥಶಾಸ್ತ್ರಜ್ಞರ ಸಮಸಮ ವಿಜೃಂಭಿಸಿದರು. ಬಿ.ಎಸ್.ಇ ಸಣ್ಣ ಸಣ್ಣ ಉದ್ದಿಮೆಗಳನ್ನು ತನ್ನ ಚೌಕಟ್ಟಿನೊಳಗಡೆ ಹೇಗೆ ಒಟ್ಟು ಮಾಡಬಹುದು ಎಂಬ ಬಗ್ಗೆ ಬಿ.ಎಸ್.ಇ ಒಂದು ಪ್ರದರ್ಶಿಕೆ ನೀಡಿತು. ಇದು ಒಂದು ಐತಿಹಾಸಿಕ ಸಂದರ್ಭ.

ಪ್ರತಿಷ್ಠಿತ ಕೈಗಾರಿಕೋದ್ಯಮಿ ಡಾ॥ ಜೆ.ಜೆ.ಇರಾನಿ ಅವರಿಂದ ಉದ್ಘಾಟಿಸಲ್ಪಟ್ಟ, ಟಾಟಾ ಸಮೂಹ ಮತ್ತು ರಾಜೇಶ್ ಸರಯ್ಯ ಅವರು ಭಾಗವಹಿಸಿದ್ದ ಈ ಸಮಾರಂಭ ಶುಭ ಸೂಚಕವಾಗಿತ್ತು. ಸುಮಾರು 1.5 ಬಿಲಿಯನ್ ವಾರ್ಷಿಕ ಉತ್ಪಾದನೆಯುಳ್ಳ ಗುಂಪಿನ ಮುಖ್ಯಸ್ಥ ಸರಯ್ಯ ದಲಿತರಿಗೆ ಅನುಕರಿಸಬಹುದಾದ ಒಂದು ಮಾದರಿ. ದಾಸ್ ಆಫ್ ಶೋರ್ ಪ್ರೈವೇಟ್ ಲಿಮಿ ಟೆಡ್‌ನ ಅಶೋಕ್ ಖಡೆ ತಮ್ಮ ಯಶೊ ಗಾಥೆಯೊಂದಿಗೆ ಎಲ್ಲರನ್ನು ಸಂವಹನಗೊಳಿಸಿದರು. ಬಡ ಕುಟುಂಬದಿಂದ ಬಂದ ಇವರು ಇಂದು

ಸಮಾಜದಲ್ಲಿನ ಸ್ಥಾನ ಮಾನವನ್ನು ಪರಿಗಣಿಸಿದಲ್ಲಿ ಬಹುತೇಕ ದಲಿತರಿಗೆ ಸರ್ಕಾರದ ಅಲ್ಪ ಸಹಾಯವಾದರೂ ಬೇಕು. ಆದರೆ ಇದು ಅನೇಕ ದಶಕಗಳಿಂದ ನಡೆಯುತ್ತಿದ್ದು ಹೆಚ್ಚು ದಲಿತರು ಸರ್ಕಾರವನ್ನು ತಮ್ಮ ವಿಮೋಚನೆಗಾರನೆಂದು ತಿಳಿದಿದ್ದಾರೆ. ಅರ್ಧ ಶತಮಾನ ಮುಗಿದಿದೆ. ಆದರೆ ದಲಿತರು ಮಾತ್ರ ವಿಮೋಚನೆ ಗೊಂಡಿಲ್ಲ. ವಿಮೋಚನೆಗೆ ಇನ್ನರ್ಧ ಶತಮಾನ ಕಾಯಲು ಡಿ.ಐ.ಸಿ. ಸಿ.ಐ ತಯಾರಿಲ್ಲ. ಸರ್ಕಾರದ ದಲಿತ ಪರ ಚಟುವಟಿಕೆಯ ಅವಶ್ಯಕತೆ ಇಲ್ಲವೆಂದೇನೂ ಅಲ್ಲ. ಅಮೆರಿಕದ ಕೆಳವರ್ಗಗಳು ತಮ್ಮ ಸಂಕಷ್ಟ ಕಾಲದಲ್ಲಿ ಸರ್ಕಾರದ ಸಹಾಯ ಹಸ್ತವನ್ನು ಬಯಸಿದರೆ ದಲಿತರಿಗೂ ಸರ್ಕಾರದ ನೆರವು ಅವಶ್ಯಕ.

ಜಾತಿಪದ್ಧತಿ ಮುಳುಗುತ್ತಿದೆಯೆ?

ಪ್ರಪಂಚದಾದ್ಯಂತ 4,500 ಕೆಲಸಗಾರರಿಗೆ ಉದ್ಯೋಗ ಒದಗಿಸಿದ್ದಾರೆ. ಅವರಲ್ಲಿ 152 ಜನ ಬಿ.ಟೆಕ್‌ನ ಇಂಜಿನಿಯರ್‌ಗಳು.

ಕಮಾನಿ ಟ್ಯೂಬ್ಸ್‌ನ ಮಾಲೀಕ ಕಲ್ಪನಾ ಸರೋಜ್‌ರ ಹಿಂದೆ ಸಹ ಅವರದೇ ಆದ ಯಶಸ್ಸಿನ ಗಾಥೆಯಿದೆ. ಮೂರು ದಶಕಗಳ ಹಿಂದೆ ಕಲ್ಪನಾ ಬಹಳ ಚಿಕ್ಕ ಸಂಬಳಕ್ಕೆ ಉಡುಪು ನೇಯುವ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ದೊಡ್ಡ ಕೈಗಾರಿಕೋದ್ಯಮಿ ಎನ್ನುವುದಕ್ಕಿಂತ ರ‍್ಯಾಂಪ್ ಹತ್ತಲು ತಯಾರಾಗಿರುವ ರೂಪದರ್ಶಿಯಂತೆ ಕಾಣುವ ಲೂದಿಯಾನಾದ ಮಿಲ್ಕಿಯೆಟ್‌ಸಿಂಗ್ ಅವರದ್ದೇ ಒಂದು ಭಿನ್ನ ಕಥೆ.

ಅನೇಕ ಭೇಧವಾದವಾದಿಗಳಿಗೆ ಕೇಡೆಂದು ಕಾಣಬಹುದಾದ ದಲಿತ ಬಂಡವಾಳಶಾಹಿಯಲ್ಲಿ ಡಿ.ಐ.ಸಿ.ಸಿ.ಐ ಹೆಮ್ಮೆಪಡುತ್ತದೆ. ಬಂಡವಾಳಶಾಹಿಯಲ್ಲಿ ಇಷ್ಟು ಮೋಹಗೊಂಡ ದಲಿತರು ಅದನ್ನು ಹೇಗೆ ಒಂದು ರಾಕ್ಷಸೀ ಸಾಮಾಜಿಕ ನೀತಿ ಎಂದುಕೊಂಡಾರು? ಕಾರ್ಲ್ ಮಾರ್ಕ್ಸ್ ಕೂಡ ಊಳಿಗಮಾನ್ಯ ಪದ್ಧತಿಗಿಂತ ಬಂಡವಾಳಶಾಹಿಯೇ ಮೇಲು ಎಂದು ಒಪ್ಪಿಕೊಂಡಿದ್ದ.

ಆದರೆ ದಲಿತರ ಬಂಡವಾಳಶಾಹಿಯ ಕಡೆಗಿನ ನಡಿಗೆ ಇನ್ನೂ ಭೂಮಿಯಿಂದ ಮೇಲೇಳಬೇಕಾಗಿದೆ. ಎಷ್ಟಾದರೂ ಅವರು ಈಗ ತಾನೆ ಒಂದು ಕಡೆ ಸೇರಲು ಪ್ರಾರಂಭಿಸಿದ್ದಾರೆ. ಮೇಲೆದ್ದಿತೆಂದರೆ ಯು.ಎಸ್‌ನಲ್ಲಿ ಕರಿಯ ಬಂಡವಾಳಶಾಹಿ ಯಾವ ಪಾತ್ರವನ್ನು ವಹಿಸಿತೊ ಆ ಪಾತ್ರವನ್ನು ಭಾರತದಲ್ಲಿ ಅದು ವಹಿಸಬಲ್ಲುದು. ಬಿಳಿಯ ಕೆಳವರ್ಗಗಳ ಜೊತೆ ಒಟ್ಟಾಗಲು ಪ್ರಾರಂಭಿಸಿದುದು ಕರಿಯ ಕೆಳವರ್ಗವಲ್ಲ, ಕರಿಯ ಬಂಡವಾಳಶಾಹಿ. ಕರಿಯ ಮಧ್ಯಮವರ್ಗಗಳನ್ನು ಬಿಳಿಯರ ಜೊತೆ ಒಟ್ಟುಗೂಡುವಂತೆ ಮಾಡಿತು. ಇದರ ಪರಿಣಾಮವಾಗಿ ರಾಬರ್ಟ್.ಎಲ್.ಜಾನ್ಸನ್ ಮೊದಲ ಕರಿಯ ಬಿಲಿಯನ್‌ದಾರನಾದ. ಓಪ್ರ ವಿನ್‌ಫ್ರೈ ಅವನನ್ನು ಹಿಂಬಾಲಿಸಿದರು. ಆದುದರಿಂದ ಬರಕ್ ಓಬಾಮ ಅಧ್ಯಕ್ಷ ನಾಗುವುದು ಮೊದಲೆ ನಿಶ್ಚಯವಾಗಿತ್ತು. ಜನಾಂಗಗಳ ಒಗ್ಗೂಡುವಿಕೆಗೆ ಈಗ ಹೊಸದೊಂದು ವಿಳಾಸವಿದೆ.

ಮನು ಧರ್ಮವನ್ನು ಹಿಂಸಿಸಲು ಕಾಂಬ್ಳೆ ಮೇಲ್ಮಾಳಿಗೆ ಬೋಜನ ಶಾಲೆಯನ್ನು ಡಿ.ಐ.ಸಿ.ಸಿ.ಐನ ಪ್ರಾರಂಭೋತ್ಸವ ಮತ್ತು ಕಾರ್ಯಾಗಾರಕ್ಕೆ ಮೀಸಲಿರಿಸಿದ್ದು ಮಾತ್ರವಲ್ಲ, ಸಿಂಗಲ್ ಮಾಲ್ಟ್, ವಿಸ್ಕಿ, ರೋಸ್ಟೆಡ್ ಕ್ರ್ಯಾಬ್ಸ್, ಟೈಗರ್ ಪ್ರಾನ್ಸ್ ಮತ್ತು ಬ್ಲ್ಯಾಕ್ ಮಶ್ರೂಮ್‌ಗಳಿಗೂ ತಮ್ಮ ಆರ್ಡರ್ ನೀಡಿದರು.

ಇಷ್ಟು ದುಬಾರಿ ಊಟವನ್ನು ಆರ್ಡರ್ ಮಾಡಲು ಕಾರಣವೇನೆಂದು ಕೇಳಿದಾಗ, "ಕೆಲಸ ನೀಡುವವರಾಗಿ ಮತ್ತು ಸಂಪತ್ತಿನ ಜನಕರಾಗಿ ತಮ್ಮ ಸಭೆಗಳಲ್ಲಿ ಇಂಡಿಯಾ ಇನ್‌ಕಾರ್ಪೋರೇಟೆಡ್ ಏನನ್ನು ತಿನ್ನುತ್ತಾರೊ ಅದನ್ನೆ ನಾವೂ ತಿನ್ನುತ್ತೇವೆ" ಎಂದರು ಮಿಲಿಂದ್.

* * * * * * * *

ನೀರಿನ ಸಾಮ್ರಾಜ್ಯದಲ್ಲಿ ಬ್ರಾಹ್ಮಣರು ತಮ್ಮ ಪರಮಾಧಿಕಾರದ ಆಯುಧವನ್ನು ಬಿಟ್ಟುಕೊಟ್ಟರು.

> **ದಲಿತರ ಬಂಡವಾಳಶಾಹಿಯ ಕಡೆಗಿನ ನಡಿಗೆ ಇನ್ನೂ ಭೂಮಿಯಿಂದ ಮೇಲೇಳಬೇಕಾಗಿದೆ. ಎಷ್ಟಾದರೂ ಅವರು ಈಗ ತಾನೆ ಒಂದು ಕಡೆ ಸೇರಲು ಪ್ರಾರಂಭಿಸಿದ್ದಾರೆ. ಮೇಲೆದ್ದಿತೆಂದರೆ ಯು.ಎಸ್‌ನಲ್ಲಿ ಕರಿಯ ಬಂಡವಾಳಶಾಹಿ ಯಾವ ಪಾತ್ರವನ್ನು ವಹಿಸಿತೊ ಆ ಪಾತ್ರವನ್ನು ಭಾರತದಲ್ಲಿ ಅದು ವಹಿಸಬಲ್ಲುದು. ಬಿಳಿಯ ಕೆಳವರ್ಗಗಳ ಜೊತೆ ಒಟ್ಟಾಗಲು ಪ್ರಾರಂಭಿಸಿದುದು ಕರಿಯ ಕೆಳವರ್ಗವಲ್ಲ, ಕರಿಯ ಬಂಡವಾಳಶಾಹಿ ಕರಿಯ ಮಧ್ಯಮವರ್ಗಗಳನ್ನು ಬಿಳಿಯರ ಜೊತೆ ಒಟ್ಟುಗೂಡುವಂತೆ ಮಾಡಿತು.**

ಕಳೆದ ವಾರ ನಾನು ನನ್ನ ಕುಟುಂಬದ ಜೊತೆ ಪುಣೆಯಲ್ಲಿ ವಿರಾಮದಲ್ಲಿದ್ದೆ. ನಾನು ಪುಣೆಯನ್ನು ಜೂನ್ 7ರಂದು ತಲುಪಿದೆ. ಒಂದು ಸಂಜೆಯನ್ನು ಅವಿನಾಶ್ ಜಗ್‌ತಪ್‌ರ ಕುಟುಂಬದ ಜೊತೆ ಕಳೆದೆ. ನನ್ನ ಸೋದರನ ಮಗಳು ಪುಣೆಯಲ್ಲಿದ್ದಾಳೆ. ಅವಳ ಗಂಡ ಒಂದು ಪ್ರಮುಖ ಸಾಫ್ಟ್‌ವೇರ್ ಕಂಪನಿಯಲ್ಲಿ ದೊಡ್ಡ ಉದ್ಯೋಗದಲ್ಲಿದ್ದಾನೆ. ಜೂನ್ 8ರಂದು ತಮ್ಮ ಜೊತೆಯಲ್ಲಿ ನಾನು ರಾತ್ರಿ ಊಟ ಮಾಡಬೇಕೆಂದು ಅವರು ಒತ್ತಾಯಿಸಿದಾಗ ಒಪ್ಪಿಕೊಂಡೆ.

ಹಗಲು ಹೊತ್ತು ನಾವು ಡಿ.ಐ.ಸಿ.ಸಿ.ಐನ ಅಧ್ಯಕ್ಷ ಮಿಲಿಂದ್ ಕಾಂಬ್ಳೆಯವರ ಭಾವಮೈದುನ ಸುಶೀಲ್ ಅವರ ಮದುವೆಗೆ ಹೋಗಬೇಕಾಗಿತ್ತು. ಬೌದ್ಧ ಧರ್ಮದ ಪ್ರಕಾರ ನಡೆದ ಈ ಸಮಾರಂಭ ಅದ್ಭುತವಾಗಿತ್ತು. ನನ್ನ ಹೆಂಡತಿ ಮೀರಾ ಸರೋಜ್ ಮತ್ತು ಮಕ್ಕಳು ಖುಷಿ ಮತ್ತು ದೃಷ್ಠಿ ನನ್ನ ಸಹೋದರನ ಮಗಳ ಒಂದು ವರ್ಷದ ಮಗುವಿನ ಜೊತೆ ಆಟವಾಡುತ್ತಾ ಸಂಜೆ ಕಳೆದರು.

ನಾನು ಜೂನ್ 9ರಂದು ಮುಂದಿನ ವಾರದ ದಲಿತ್ ಡೈರಿ ಬರೆಯಲು ಡಿ.ಐ.ಸಿ.ಸಿ.ಐ ಆಫೀಸ್‌ನಲ್ಲಿ ಕುಳಿತಾಗ ಮಿಲಿಂದ್ ಕಾಂಬ್ಳೆಯವರ ಹೆಂಡತಿ ಸೀಮಾ ಕಾಂಬ್ಳೆ ಮತ್ತು ಮಗಳು ಮೈತ್ರೇಯಿ ನನ್ನ ಕುಟುಂಬವನ್ನು ನಗರ ಪ್ರದಕ್ಷಿಣೆಗೆ ಕರೆದೊಯ್ದರು. ಮಧ್ಯಾಹ್ನ ನಾವು ಮಿಲಿಂದ್ ಅವರ ಮನೆಯಲ್ಲಿ ಟೈಗರ್ ಪ್ರಾನ್ ತಿನ್ನುವ ಸ್ಪರ್ಧೆ ನಡೆಸಿದೆವು.

ಮಿಲಿಂದ್ ಪುಣೆಯಿಂದ ಸುಮಾರು 2 ಗಂಟೆಗಳ ಪ್ರಯಾಣದಲ್ಲಿ ಸಿಗುವ ಲಾವಾಸ ಎಂಬ ಬೆಳೆಯುತ್ತಿರುವ ನಗರದ ಬಗ್ಗೆ ಹೇಳಿದಾಗ ನಾನು "ನಿಶ್ಚಯವಾಗಿಯೂ" ಎಂದೆ. "ನೀವು ಲಾವಾಸದಲ್ಲಿ ಒಂದು ದಿನ ಮತ್ತು ರಾತ್ರಿ ಉಳಿಯದಿದ್ದಲ್ಲಿ ಹೊಸ ಮಹಾರಾಷ್ಟ್ರ ಹೇಗಿರಬಹುದು ಎಂಬುದನ್ನು ನೋಡಲಿಕ್ಕೆ ಸಾಧ್ಯವಿಲ್ಲ" ಎಂದು ದೃಢವಾಗಿ ಅವರು ನನಗೆ ಹೇಳಿದರು. ಸಂಜೆಯ ವೇಳೆಗೆ ನಾವು ಆ ನಗರದಲ್ಲಿದ್ದೆವು.

ಎಂತ ಪಟ್ಟಣ ಅದು! ಈ ಉಪಖಂಡದಲ್ಲಿನ ಒಂದು ಸ್ವರ್ಗ. ಕೆಲವೇ ಮಾತುಗಳಲ್ಲಿ ಹೇಳುವುದಾದರೆ ಇದು ಎರಡನೇ ನೈನಿತಾಲ್. ಯಾರು ನೈನಿತಾಲ್ ಮತ್ತು ಲಾವಾಸಗಳಿಗೆ ಭೇಟಿ ನೀಡಿಲ್ಲವೊ ಅಂತಹವರು ಎಂದೆಂದಿಗೂ ಈ ಎರಡೂ ಸ್ಥಳಗಳ ಸೌಂದರ್ಯದಿಂದ ವಂಚಿತರಾಗುತ್ತಾರೆ.

ಲಾವಾಸ ಒಂದು ಖಾಸಗಿ ನಗರ. ಬಹುಶಃ ನಮ್ಮ ದೇಶದಲ್ಲಿ ಅದೇ ಮೊತ್ತ ಮೊದಲನೆಯದು. ಅದು ಭಾರತದ ಶಕ್ತಿ ಸಾಮರ್ಥ್ಯ ತೋರಿಸುತ್ತದೆ ಮತ್ತು ನಮ್ಮ ದೇಶ ಕೂಡ ಯಾವುದೇ ಯೂರೋಪಿಯನ್ ರಾಷ್ಟ್ರಗಳ ಜೊತೆ ಹೋಲಿಸಬಹುದಾದುದಾಗಿ ಮಾರ್ಪಾಡಾಗಬಹುದು ಎಂಬ ಮುನ್ಸೂಚನೆ ನೀಡುತ್ತದೆ. ಕೇವಲ ಒಂದು ದಶಕದಲ್ಲಿ ವಿಶಾಲವಾದ ಬಂಜರು ಭೂಮಿಯನ್ನು ಸ್ವರ್ಗವಾಗಿ ಮಾರ್ಪಡಿಸಲಾಗಿದೆ. ಹಿಂದೂಸ್ಥಾನ್ ಕನ್‌ಸ್ಟ್ರಕ್ಷನ್ ಕಂಪನಿ (ಹೆಚ್.ಸಿ.ಸಿ) ಈ ನಗರವನ್ನು ನಿರ್ಮಿಸುತ್ತಿದೆ ಎಂದು ನನಗೆ ಹೇಳಿದರು. ನನ್ನ ಮಟ್ಟಿಗೆ ಹೇಳುವುದಾದರೆ ಟಾಟಾರ ನಂತರ ಹೆಚ್.ಸಿ.ಸಿ ಕಂಪನಿ ಒಂದೇ ರಾಷ್ಟ್ರ ಕಟ್ಟುವ ಕಂಪನಿ ಎಂಬ ನಾಮಾಂಕಿತಕ್ಕೆ ಕೈ ಚಾಚಬಲ್ಲುದಾಗಿದೆ.

ಆದರೆ ಈ ನಗರ ಅನೇಕ ಅಡೆತಡೆಗಳನ್ನು ಎದುರಿಸುತ್ತಿದೆ. ಬೆಟ್ಟ ಗುಡ್ಡಗಳನ್ನು ಮುಟ್ಟಬಾರದು, ಮರಗಳನ್ನು ಕಡಿಯಬಾರದು, ಅರೇಬಿಯನ್ ಸಮುದ್ರಕ್ಕೆ ಹೋಗುವ ಮಳೆ ನೀರನ್ನು ತಡೆಯಬಾರದು ಇಂತಹ ಅನೇಕ ಷರತ್ತುಗಳನ್ನು ಹಾಕಲಾಗಿದೆ. ಅನೇಕ ಬಂಗಲೆಗಳು ಮತ್ತು ಫ್ಲಾಟ್‌ಗಳು ಪೂರ್ಣಗೊಳ್ಳದೆ ಉಳಿದಿರುವುದನ್ನು ನೋಡಿದರೆ ಮನಸ್ಸಿಗೆ ನೋವಾಗುತ್ತದೆ. ಹಿಂದೆ ಹೊಲ ಗದ್ದೆಗಳಲ್ಲಿ ಕೂಲಿಕಾರರಾಗಿ ಕೆಲಸ ಮಾಡುತ್ತಿದ್ದ ಸಾವಿರಾರು ಕೆಲಸಗಾರರು ತಮ್ಮ ಕೆಲಸ ಕಳೆದುಕೊಂಡಿದ್ದಾರೆ. ಸ್ಥಳೀಯರ ವ್ಯಾಪಾರ ನಷ್ಟದಲ್ಲಿದೆ.

ಪುಣೆಯಿಂದ ನಾವು ಮುಂಬೈಗೆ ಹೋದೆವು. ಅಲ್ಲಿ ಮರ್ಚೆಂಟ್ ನೇವಿಯಲ್ಲಿ ಕೆಲಸ ಮಾಡುವ ನನ್ನ ಸಹೋದರನ ಮಗ ಕ್ಯಾಪ್ಟನ್ ಪ್ರದೀಪ್ ಜೊತೆಯಲ್ಲಿ ತಂಗಿದ್ದೆವು. ಕ್ಯಾಪ್ಟನ್ ಪ್ರದೀಪ್ ನಮಗಾಗಿ "ವಾಟರ್ ಕಿಂಗ್‌ಡಂ" ನೋಡಲು ವ್ಯವಸ್ಥೆ ಮಾಡಿದ್ದರು.

ಸುಮಾರು 64 ಎಕರೆ ವಿಸ್ತಾರವಿರುವ ಈ ಮೋಜಿನ ಉದ್ಯಾನವನ ಎಸ್ಸೆಲ್ ವರ್ಲ್ಡ್‌ನ ಒಂದು ಭಾಗ. ವಾಟರ್ ಕಿಂಗ್‌ಡಂ ಅನೇಕ ನೀರಿನ ಕೊಳಗಳನ್ನು ಹೊಂದಿದ್ದು ಪ್ರತಿದಿನ ಸಾವಿರಾರು ಪ್ರವಾಸಿಗರನ್ನು ತನ್ನತ್ತ ಸೆಳೆಯುತ್ತದೆ. ಒಂದು ಸಾರಿ ನೀವು ಒಳಗೆ ಹೋದಿರೆಂದರೆ ಯಾವುದೇ ಹೊರದೇಶದ ನಗರಗಳಿಗೆ ಅದನ್ನು ಹೋಲಿಸಬಹುದು ಎಂದೆನಿಸದಿರದು. ತಮ್ಮ ಯುವ ಗಂಡು, ಹೆಣ್ಣು ಮಕ್ಕಳ ಜೊತೆ ಬರುವ ತಂದೆ-ತಾಯಿಗಳು ಪರಿಚಯವಿಲ್ಲದ ಸಾವಿರಾರು ಇತರೆ ಪ್ರವಾಸಿಗರ ಜೊತೆ ಇಲ್ಲಿ ಆನಂದ ಪಡುತ್ತಾರೆ. ಅರೆ-ಬರೆ ಉಡುಪು ತೊಟ್ಟ ಯುವಕರು ಮತ್ತು ವಯಸ್ಸಿನವರು ಒಬ್ಬರಿಗೊ

ಬ್ಬರು ಸಮೀಪ ಸಂಪರ್ಕ ಹೊಂದುತ್ತಾ, ಆನಂದಪಡುವ ವಾಟರ್ ಕಿಂಗ್‌ಡಂನ ಪರಿಸರ ಯೂರೋಪಿನ ಸಮುದ್ರ ದಂಡೆಯಂತೆ ಕಾಣುತ್ತದೆ. ತಂದೆ ತಾಯಂದಿರು ಎಲ್ಲರ ಸಮ್ಮುಖದಲ್ಲಿ ನೀರಿನಲ್ಲಿ ಆಟ ಆಡಬಹುದು ಎಂಬುದನ್ನು ಎಂದಾದರೂ ನಾವು ನೆನೆಸಿದ್ದೆವೆ? ಯುವಕ ಯುವತಿಯರು ಅತಿ ಕಡಿಮೆ ಉಡುಪು ಧರಿಸುವ ಸ್ಪರ್ದೆಗಿಳಿದಂತೆ ಕಾಣುವ ಇದು ಪಶ್ಚಿಮದ ದೃಷ್ಟಿಕೋನದ್ದು.

ನನ್ನ ಮಡದಿ, ಮಕ್ಕಳು ಮತ್ತು ನನ್ನ ಸೋದರಳಿಯನ ಕುಟುಂಬ ಈಜುತ್ತಾ ಆನಂದ ಪಟ್ಟರೆ, ನಾನು ಅವರ ಬಟ್ಟೆಗಳನ್ನು ಮತ್ತು ವಸ್ತುಗಳನ್ನು ಕಾವಲು ಕಾಯುತ್ತಿದ್ದೆ. ಇದ್ದಕ್ಕಿದ್ದಂತೆ ಒಬ್ಬ ಕಪ್ಪು ಚರ್ಮದ ಮನುಷ್ಯ ಕೊಳದ ಅಂಚಿನಲ್ಲಿ ನಡೆದುಹೋಗುತ್ತಿರುವುದನ್ನು ಕಂಡೆ. ಅವನು ಮೂರು ಎಳೆಗಳ ಪವಿತ್ರ ಜನಿವಾರವನ್ನು ಹಾಕಿಕೊಂಡಿದ್ದ. ಇದು ಬ್ರಾಹ್ಮಣರ ಹೆಗ್ಗಳಿಕೆಯ ಹೆಗ್ಗುರುತು.

ನನ್ನಲ್ಲಿದ್ದ ಸಂಶೋಧಕ ಎಚ್ಚರಗೊಂಡ. ನಾನು ನನ್ನ ಸಂಬಂಧಿಯೊಬ್ಬರಿಗೆ ಆ ವಸ್ತುಗಳನ್ನು ಕಾಯಲು ಹೇಳಿ ಅಂತಹುದೆ ಹಾರ ಧರಿಸಿದ ಇತರ ಜನರನ್ನು ಹುಡುಕುತ್ತಾ ಹೋದೆ. ನಾನು ಒಂದು ಗಂಟೆಯಲ್ಲಿ ಹೆಚ್ಚುಗಾರಿಕೆ ಮತ್ತು ಪರಿಶುದ್ಧತೆಯ ಗುರುತಾದ ಅದನ್ನು ಧರಿಸಿರುವ ಏಳು ಜನರನ್ನು ನೋಡಿದೆ. ಸಾವಿರ ಜನರಿದ್ದ ಆ ಗುಂಪಿನಲ್ಲಿ ನಾನು ಅಷ್ಟೂ ಜನರನ್ನು ಪರೀಕ್ಷಿಸಲು ಸಾಧ್ಯವಿಲ್ಲದಿದ್ದುದರಿಂದ ಆ ಏಳಕ್ಕೆ ಮತ್ತೊಂದು ಏಳನ್ನು ಸೇರಿಸಿದೆ.

ವಾಟರ್ ಕಿಂಗ್‌ಡಂನಲ್ಲಿ ಈಜಾಡುತ್ತಿದ್ದ ಬಹಳಷ್ಟು ಜನರಲ್ಲಿ ದ್ವಿಜ ಎನಿಸಿಕೊಂಡವರು ಕೇವಲ 14 ಜನರಿದ್ದರೆ? ಇದು ಮುಖ್ಯ ಪ್ರಶ್ನೆ.

ನನ್ನ ಕುಟುಂಬ ಕುಳಿತಿದ್ದ ಸ್ಥಳಕ್ಕೆ ಹಿಂತಿರುಗಿದ ನಾನು ನನ್ನ ಬ್ರಾಹ್ಮಣ ಸ್ನೇಹಿತನೊಬ್ಬನ ಜೊತೆ ಸಂಪರ್ಕಿಸಿದೆ. "ನಿನ್ನ ಮಕ್ಕಳಲ್ಲಿ ಯಾರಾದರೂ ಜನಿವಾರವನ್ನು ಧರಿಸುವರೆ?" ನಾನು ಕೇಳಿದೆ. ನನ್ನ ಸ್ನೇಹಿತ ಸ್ವಲ್ಪ ಗರಂ ಆದ ಅವನು ನನ್ನಿಂದ ಈ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ. "ಯಾಕೆ ನೀನು ಈ ಪ್ರಶ್ನೆಯನ್ನು ಕೇಳುತ್ತಿದ್ದೀಯೆ?" ಅವನು ನನ್ನನ್ನು ಕೇಳಿದ. "ಈ ಜನಿವಾರ ಹಾಸ್ಯ ಮಾಡುವಂತ ಒಂದು ವಸ್ತುವಾಯಿತೆ?" ನಾನು ಅವನ ತಾಳ್ಮೆಯನ್ನು ಪರೀಕ್ಷಿಸುತ್ತಾ ಕೇಳಿದೆ. "ಇಲ್ಲ" ಅವನು ಹೇಳಿದ.

ನನ್ನ ಅಭಿಪ್ರಾಯದಲ್ಲಿ ವಾಟರ್ ಕಿಂಗ್‌ಡಂನಲ್ಲಿ ಮಧ್ಯಮ ವರ್ಗದ ಬಹಳಷ್ಟು ದ್ವಿಜರಿದ್ದರು. ಅವರು ಆ ವಿಶಾಲ ಕೊಳದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಜಿಗಿಯುತ್ತಾ ಬ್ರಾಹ್ಮಣರ ಹೆಚ್ಚುಗಾರಿಕೆಯ ಆ ಚಿಹ್ನೆಯಿಲ್ಲದೆ ಆನಂದ ಪಡುತ್ತಿದ್ದುದರಲ್ಲಿ ನಾನು ಮನುವಿನ ಜಾತಿ ಸಾಮ್ರಾಜ್ಯ ಮುಳುಗುತ್ತಿರುವ ಸೂಚನೆಯನ್ನು ಕಂಡೆ.

* * * * * * *

ಸದಾಶಿವ್ ಸದಾಮಾತೆಯವರ ಉದ್ಯಮದಲ್ಲಿನ ಯಶಸ್ಸು ಎಲ್ಲರಲ್ಲಿಯೂ ಕಣ್ಣು ತೆರೆಸುವಂತದ್ದು.

ಉದ್ಯಮಿಯಾಗಲು ಯಾವುದಾದರೂ ವಯಸ್ಸುಂಟೆ? ಉತ್ತರ ಹೌದು ಮತ್ತು ಇಲ್ಲ. ತಾವು ನಿವೃತ್ತಿ ಹೊಂದಿದ ಮೇಲೆ ಉದ್ಯಮ ಪ್ರಾರಂಭಿಸಿದ್ದ ಅನೇಕರ ಪರಿಚಯ ನನಗಿದೆ. ಹೆಚ್ಚು ವೇಳೆ ಅಂತಹವು ಚಿಕ್ಕ ವ್ಯಾಪಾರಗಳು, ಒಂದು ಚಿಲ್ಲರೆ ಅಂಗಡಿ ಅಥವಾ ಸಣ್ಣ ಹೋಟೆಲ್ ಇತ್ಯಾದಿ. ಜನರು ಅಂತಹ ಪ್ರಯತ್ನಗಳಲ್ಲಿ ತೊಡಗಿಸಿಕೊಳ್ಳುವುದು ಹಣ ಮಾಡುವುದಕ್ಕಿಂತಲೂ ಹೆಚ್ಚಾಗಿ ತಮ್ಮನ್ನು ತಾವು ಚಟುವಟಿಕೆಯಲ್ಲಿಟ್ಟುಕೊಳ್ಳುವುದಕ್ಕಾಗಿ. ಸದಾಶಿವ್ ಗುಣವಂತ್ ರಾವ್ ಸದಾಮಾತೆಯವರ ಪ್ರವೇಶ ಈ ಎಲ್ಲಾ ಅಭಿಪ್ರಾಯಗಳನ್ನೂ ತಲೆಕೆಳಗು ಮಾಡುತ್ತದೆ. ಇದೊಂದು ಅಪವಾದವಾದರೂ, ಅವರಂತ ಜನ ಹೆಚ್ಚು ಹೆಚ್ಚಾಗಿ ಉದ್ಯಮ ಪ್ರಪಂಚದಲ್ಲಿ ಕಾಣಬರಲಿ ಎಂಬುದು ನನ್ನ ಆಶಯ.

ಸದಾಮಾತೆಯವರ ಕಥೆಯನ್ನು ಇಲ್ಲಿ ಹೇಳುವುದು ಸೂಕ್ತ. ಒಂದೆರಡು ತಿಂಗಳ ಹಿಂದಷ್ಟೆ ನಾನು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಅವರ ಕಾರ್ಖಾನೆಗೆ ಭೇಟಿ ನೀಡಿದ್ದೆ. ಕಾರ್ಖಾನೆಯನ್ನು ನೋಡಿ ನಾನು ಸಂಪೂರ್ಣ ಸುಸ್ತಾದೆ. ರಾಷ್ಟ್ರದುದ್ದಕ್ಕೂ ದಲಿತ ಉದ್ಯಮಿಗಳ ಹುಡುಕಾಟದಲ್ಲಿದ್ದ ನಾನು ದೊಡ್ಡ ದೊಡ್ಡ ಪರಿಷ್ಕೃತ ಉಕ್ಕಿನ ಹಾಳೆಗಳನ್ನು ಕತ್ತರಿಸಿ ಅವುಗಳಿಂದ ಯಂತ್ರಗಳ ಬಿಡಿ ಭಾಗಗಳನ್ನು ತಯಾರಿಸುವ ದಲಿತರೊಬ್ಬರ ಮಾಲೀಕತ್ವದ ಕಾರ್ಖಾನೆಯನ್ನು ಈವರೆಗೆ ನೋಡಿರಲೇ ಇಲ್ಲ. ಅಷ್ಟು ದೊಡ್ಡ ಯಂತ್ರಗಳನ್ನು ಹೊಂದಿದ್ದ ಅಥವಾ ಅಷ್ಟು ಹೆಚ್ಚು ಕಚ್ಚಾವಸ್ತು ಬರುವಂತ ಕಾರ್ಖಾನೆಗೆ ಮಾಲೀಕರಾದ ದಲಿತರನ್ನು ಭೇಟಿಯಾಗಿರಲಿಲ್ಲ. ಮತ್ತು 20 ಜನ ಮಾರಾ ಟಗಾರರನ್ನು ಹೊಂದಿರುವ ಯಾವುದೇ ದಲಿತ ಉದ್ಯಮಿ ಯನ್ನು ನಾನು ಕಂಡಿರಲೇ ಇಲ್ಲ.

20 ಕೋಟಿ ವಾರ್ಷಿಕ ಉತ್ಪಾದನೆಯ ಸದಾಮಾತೆ ಕೈಗಾರಿಕೆ ಕಿರ್ಲೋಸ್ಕರ್ ಮತ್ತು ಬಜಾಜ್ ಆಟೋಗಳಿಗೆ ಪೂರಕ ಘಟಕ. ನೂರಕ್ಕಿಂತ ಹೆಚ್ಚು ಕೆಲಸಗಾರರನ್ನು ಹೊಂದಿರುವ ಅವರ ಕಥೆಯೆ ವಿಚಿತ್ರವಾಗಿದೆ.

ಬಡ ರೈತ ಕುಟುಂಬದಿಂದ ಬಂದ ಸದಾಮಾತೆ ಬಹಳ ಬುದ್ಧಿವಂತರಿದ್ದರೂ 10ನೇ ತರಗತಿಯ ಮೇಲೆ ಓದಲಾಗಲಿಲ್ಲ. ಕುಟುಂಬದ ವರಮಾನವನ್ನು ಹೆಚ್ಚಿಸಲು ಸದಾಮಾತೆ ಎಲ್ಲ ತರದ ಕಸುಬುಗಳನ್ನೂ ಮಾಡಿದರು. ಹೆಚ್ಚು ಕಾಲ ಅವರು ದೊಡ್ಡ ಜಮೀನುದಾರರ ಹತ್ತಿರ ಕೃಷಿ ಕಾರ್ಮಿಕನಾಗಿ ಕೆಲಸ ಮಾಡಿದರು. ನಂತರ ಅವರು ಅತಿ ಕೆಳಮಟ್ಟದ ಹುದ್ದೆಯಲ್ಲಿ ಕಿರ್ಲೋಸ್ಕರ್ ಕಂಪನಿಯನ್ನು ಸೇರಿದರು. ಕೆಲವೇ ವರ್ಷಗಳಲ್ಲಿ ಅವರು ಟೆಕ್ನಿಷಿಯನ್ ಮಟ್ಟಕ್ಕೆ ಏರಿದರು. 1989ರಲ್ಲಿ ಕಿರ್ಲೋಸ್ಕರ್‌ನ ಸಾಂಗ್ಲಿ ಕಾರ್ಖಾನೆ ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಿತು. ಅದರಂತೆ ನಿವೃತ್ತಿ ಹೊಂದುವ ಕೆಲಸಗಾರರು ತಮಗೆ ದೊರೆಯುವ ನಿವೃತ್ತಿ ಭತ್ಯೆಗಳನ್ನು ಹಣದ ರೂಪದಲ್ಲಿ ಅಥವಾ ಯಂತ್ರಗಳ ರೂಪದಲ್ಲಿ ಪಡೆಯಬಹುದಿತ್ತು. ಯಾರಾದರೂ ಸ್ವಯಂ ನಿವೃತ್ತಿ ಯೋಜನೆಯಡಿ ದೊರೆಯುವ ಹಣಕ್ಕೆ ಬದಲಾಗಿ ಯಂತ್ರಗಳನ್ನು ಆರಿಸಿಕೊಂಡಲ್ಲಿ ಆ ಕಂಪನಿಯು ಅವರಿಂದ ಬಿಡಿ ಭಾಗಗಳನ್ನು ಕೊಳ್ಳುವುದಾಗಿ ಭರವಸೆ ನೀಡಿತ್ತು. ಹೀಗಾಗಿ ಬೆಲೆ ಸ್ಪರ್ಧಾತ್ಮಕವಾಗಿದ್ದು ಮತ್ತು ಗುಣಮಟ್ಟ ಖಾತ್ರಿಯದ್ದಲ್ಲಿ ವ್ಯಾಪಾರ ದೊರೆಯುವುದು ಖಂಡಿತವಾಗಿತ್ತು.

54 ವರ್ಷದ ಸದಾಮಾತೆ ಯಂತ್ರಗಳನ್ನು ಆರಿಸಿಕೊಂಡರು. "ಅದು ಒಂದು ಕಷ್ಟಕರವಾದ ತೀರ್ಮಾನ. ನನ್ನ ಸಹೋದ್ಯೋಗಿಗಳು ನನ್ನನ್ನು ನೋಡಿ ನಕ್ಕರು", ಸದಾಮಾತೆ ನನಗೆ ವಿವರಿಸಿದರು. ಅವರಿಗೆ ನಾನು ಈ ವಯಸ್ಸಿನಲ್ಲಿ ಉದ್ಯಮಿಯಾಗಿ ಜಯಶಾಲಿಯಾಗಬಲ್ಲೆನೆ? ಎಂಬ ಅನುಮಾನ ಕಾಡುತ್ತಿತ್ತು. "ಏನೇ ಆದರೂ ಉತ್ಪನ್ನದ ಗುಣಮಟ್ಟ ಉತ್ತಮವಾಗಿರಬೇಕಾಗುತ್ತದೆ", ಅವರ ಸಹೋದ್ಯೋಗಿಗಳು ಮತ್ತು ಸ್ನೇಹಿತರು ಪದೇ ಪದೇ ಒತ್ತಿ ಹೇಳಿದರು.

ಸದಾಮಾತೆ ಅಪನಂಬಿಕೆಯುಳ್ಳವರಿಗೆ ಅವರ ಅಭಿಪ್ರಾಯ ತಪ್ಪು ಎಂಬುದನ್ನು ಸಿದ್ಧಪಡಿಸಿ ತೋರಿಸಲು ನಿಶ್ಚಯಿಸಿದ್ದರು. ಅವರ ತೀರ್ಮಾನ ಸರಿಯಾಗಿಯೆ ಇತ್ತು. ಎಷ್ಟೇ ಆದರೂ ಅವರು ತಮ್ಮ ಜೀವಮಾನದ ಗಳಿಕೆಯನ್ನು ಆ ಯಂತ್ರಗಳ ಮೇಲೆ ಹಾಕಿದ್ದರು. ಅವರ ತೀರ್ಮಾನದಿಂದ ಖುಷಿಗೊಂಡ ಕಿರ್ಲೋಸ್ಕರ್‌ನ ಮ್ಯಾನೇಜರ್‌ಗಳು ಅವರಿಗೆ ಬೆಂಬಲವಾಗಿ ನಿಂತರು. ಅವಶ್ಯವಿದ್ದಲ್ಲಿ ಅವರಿಗೆ ಬೇಕಾದ ತಾಂತ್ರಿಕ ಸಹಾಯ ನೀಡಲು ತಯಾರಾದರು.

ಅವರ ಬೆಳವಣಿಗೆ ಅದ್ಭುತ. ಒಂದೆರಡು ವರ್ಷಗಳಲ್ಲಿಯೆ ಸದಾಮಾತೆ ತಾವು ಯಂತ್ರವನ್ನು ಸ್ಥಾಪಿಸಿದ್ದ ತಮ್ಮ ಮನೆಯನ್ನು ಬಿಟ್ಟರು. ಕೈಗಾರಿಕಾ ಜಮೀನನ್ನು ಹಂಚುವ ಸಾಂಗ್ಲಿಯ ಮಹಾರಾಷ್ಟ್ರ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ (ಎಮ್.ಐ.ಡಿ.ಸಿ) ಒಂದು ಕಾರ್ಖಾನೆಯನ್ನು ಕೊಂಡರು. ಉದ್ಯಮ ಪ್ರಾರಂಭಿಸಿದ ಐದನೇ ವರ್ಷದಲ್ಲಿ ಮತ್ತೊಂದು ಜಾಗವನ್ನು ಕೊಂಡರು. ನಂತರ ಮೂರನೇ ಘಟಕವನ್ನು ತೆರೆದರು.

"ಒಂದು ಕೋಟಿ ಮುಟ್ಟುವುದು ನನಗೆ ಸಾಧ್ಯವಿತ್ತು". ಅವರ ಮೂರನೇ ಘಟಕವನ್ನು ಪ್ರಾರಂಭಿಸಿದಾಗ ಅವರಿಗೆ ಹೇಗೆನ್ನಿಸಿತು ಎಂದು ನಾನು ಕೇಳಿದಾಗ ಸದಾಮಾತೆ ಹೇಳಿದರು. "ನನ್ನ ಇಪ್ಪತ್ತು ಮಾರಾಟಗಾರರಲ್ಲಿ ಹದಿನೈದು ಜನರು ದಲಿತರು", ನಾನು ಸಮಾಜಕ್ಕೆ ಅವರ ಸೇವೆಯ ಬಗ್ಗೆ ಕೇಳಿದಾಗ ಅವರು ಹೇಳಿದರು. ಅವರು ಹಲವಾರು ದಲಿತರನ್ನು ತಮ್ಮಲ್ಲಿ ಕೆಲಸಕ್ಕೆ ನೇಮಿಸಿಕೊಂಡಿದ್ದು ಕೆಲವರಿಗೆ ತಮ್ಮದೇ ಘಟಕಗಳನ್ನು ತೆರೆಯುವಂತೆ ಪ್ರೋತ್ಸಾಹಿಸಿರುವುದು ನಂತರ ತಿಳಿಯಿತು. ಕಿರ್ಲೋಸ್ಕರ್‌ನವರು ಇವರನ್ನು ಕೈ ಹಿಡಿದು ನಡೆಸಿ ಉದ್ಯಮಿಯನ್ನಾಗಿ ಮಾಡಿರುವಂತೆ ಇವರೂ ಸಹ ತಮ್ಮದೇ ಉದಾಹರಣೆ ಕೊಡುತ್ತಾ ಅನೇಕರನ್ನು ತಮ್ಮಂತೆ ಉದ್ಯಮಿಯಾಗಲು ಸಹಾಯ ಹಸ್ತ ನೀಡಿರುತ್ತಾರೆ.

"ನಾನು ನೀಡಲು ಇಷ್ಟಪಡುವ ಸಣ್ಣ ಬೆಲೆಯಿದು. ಎಷ್ಟೇ ಆದರೂ ನಾನು ತಯಾರಿಸಿದ ಪಂಪ್‌ಗಳು ಮತ್ತು ವಾಲ್ವ್‌ಗಳು ಪ್ರಪಂಚ ಮಟ್ಟದ ಗುಣಮಟ್ಟ ಹೊಂದಿವೆ" ತತ್ವಜ್ಞಾನಿಯಂತೆ ಹೇಳಿದರು ಸದಾಮಾತೆ.

ಇವರು ನೂರು ಕೋಟಿ ದಾಟಲು ಎಷ್ಟು ಸಮಯ ತೆಗೆದುಕೊಳ್ಳಬಹುದು ಎಂದು ನಾನು ಮನಸ್ಸಿನಲ್ಲಿಯೇ ಲೆಕ್ಕ ಹಾಕುತ್ತಿದ್ದೆ. "ನಾವು ಹೊರದೇಶದ ಕಂಪನಿಯೊಂದರ ಜೊತೆಯಲ್ಲಿನ ಮಾತು ಕಥೆಯ ಕೊನೆಯ ಹಂತದಲ್ಲಿದ್ದೇವೆ. ಇದರಿಂದ 50 ಕೋಟಿ ರೂಪಾಯಿಯ

ಒಬ್ಬ ಉದ್ಯಮಿಯ ಉದಯ...

ಹಣದಿಂದ ವ್ಯವಸ್ಥೆಯ ತಿರುಗು ಮುರುಗು

ರಘ್ತು ಆದೇಶ ಬರುವ ಭರವಸಯಿದ", ನನ್ನಲ್ಲಿ ಅವರು ಗುಟ್ಟು ರಟ್ಟು ಮಾಡಿದರು. ಕನಿಷ್ಠ ವೇತನ 7,000 ರೂಪಾಯಿಗಳಿರುವುದಾಗಿಯೂ, ತಮ್ಮ ಕೆಲವು ಮ್ಯಾನೇಜರ್‌ಗಳು ಸುಮಾರು 25,000 ರೂಪಾಯಿಗಳ ವೇತನ ಪಡೆಯುತ್ತಿರುವುದಾಗಿಯೂ ಅವರು ಹೇಳಿದರು.

ಸದಾಮಾತೆಯವರ ಈ ಕಥಾನಕದಲ್ಲಿ ದೇಶಕ್ಕೆ ಅಂದರೆ ಮೊದಲನೆಯದಾಗಿ ದಲಿತರಿಗೆ ಮತ್ತು ಎರಡನೆಯದಾಗಿ ಭಾರತದ ಕಾರ್ಪೊರೇಟ್‌ಗಳಿಗೆ ಎರಡು ಪಾಠಗಳಿವೆ. ಸದಾಮಾತೆ ತಮ್ಮ 54ನೇ ವಯಸ್ಸಿನಲ್ಲಿ ಯಶಸ್ವಿ ಉದ್ಯಮಿಯಾಗಲು ಸಾಧ್ಯವಿದ್ದರೆ 24 ವಯಸ್ಸಿನ ದಲಿತ ಯುವಕ ಅದೇ ದಾರಿಯಲ್ಲಿ ನಡೆದು ಉದ್ಯಮಿಯಾಗಲು ಏಕೆ ಸಾಧ್ಯವಿಲ್ಲ? ಭಾರತದ ಕಾರ್ಪೊರೇಟರ್‌ಗಳಲ್ಲಿ ಒಬ್ಬರಾದ ಕಿರ್ಲೋಸ್ಕರ್ ಅವರು ಈ ರೀತಿ ಸಹಾಯ ಹಸ್ತ ನೀಡಿ ಸದಾಮಾತೆಯ ಯಶಸ್ಸಿಗೆ ಕಾರಣವಾದರೆ ಇತರ ಕಾರ್ಪೊರೇಟ್‌ಗಳೇಕೆ ಹಾಗೆ ಮಾಡಬಾರದು?

ಸದಾಮಾತೆಯವರ ಚಾರಿತ್ರ್ಯ ಬಲ, ಸಹನೆ ಮತ್ತು ಕಿರ್ಲೋಸ್ಕರ್‌ರಂತಹವರ ಮೃದು ದಬ್ಬುವಿಕೆ ಭಾರತದ ಆರ್ಥಿಕ ವ್ಯವಸ್ಥೆ ಯಶಸ್ಸಿನ ಹಾದಿಯಲ್ಲಿ ನಡೆಯುವಂತೆ ಮಾಡಬಲ್ಲದು.

* * * * * * *

ಹಿಂದೂ ಸಮಾಜದ ಹೃದಯ ಭಾಗದಲ್ಲಿಯೆ ದಲಿತರ ವಿನ್ಯಾಸಗಳನ್ನು ಕಟ್ಟುವುದು.

ಕ್ರಾಂತಿ ಎನ್ನುವುದು ಬದಲಾವಣೆ ಬಗ್ಗೆಯಾದರೆ ಭಾರತದ ದಲಿತರ ಜೀವನದಲ್ಲಿ ಅಂತಹ ಕ್ರಾಂತಿ ನಡೆಯುತ್ತಿರುವ ಸೂಚನೆಗಳು ಕಾಣುತ್ತಿವೆ.

ಪ್ರತಿಷ್ಠಿತ ದಲಿತ ಉದ್ಯಮಿ ಅಶೋಕ್ ಖಡೆ ಅವರು ನೂರು ಎಕರೆ ವ್ಯವಸಾಯದ ಭೂಮಿಯನ್ನು ಕೊಂಡದ್ದು ಅನಾವರಣಗೊಳ್ಳುತ್ತಿರುವ ಕ್ರಾಂತಿಯ ಗಾಥೆಯೆ ಸರಿ. ನಾನು ಅಶೋಕ್ ಅವರನ್ನು ನೀವು ಏಕೆ ಇಷ್ಟು ದೊಡ್ಡ ಜಮೀನನ್ನು ಕೊಂಡು ಕೃಷಿಕರಾಗಬೇಕು ಎಂದು ಕೇಳಿದಾಗ ಅವರ ಉತ್ತರ ಹೀಗಿತ್ತು "ಹಳ್ಳಿಯಲ್ಲಿ ನನ್ನ ತಾಯಿ ಕೂಲಿಕಾರಳಾಗಿ ಯಾವ ಜಮೀನಿನಲ್ಲಿ ಕೆಲಸ ಮಾಡಿದ್ದಳೊ ಆ ಎಲ್ಲ ಜಮೀನನ್ನು ನಾನು ಕೊಳ್ಳುತ್ತೇನೆ".

ಅಶೋಕರ ದಾಸ್ ಆಫ್‌ಶೋರ್ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿ 152 ಬಿ.ಟೆಕ್ ಪದವೀದರರನ್ನೊಳಗೊಂಡಂತೆ 4500 ಕೆಲಸಗಾರರನ್ನು ಹೊಂದಿರುವ ರೂ.300 ಕೋಟಿ ಕಂಪನಿ. ವೇಗವಾಗಿ ಬೆಳೆಯುತ್ತಿರುವ ಅದು ಆಫ್‌ಶೋರ್ ಉಪಕರಣಗಳ ತಯಾರಿ ಮತ್ತು ನಿರ್ವಹಣೆಯಲ್ಲಿ ತೊಡಗಿಸಿಕೊಂಡಿದೆ. ಹೊಸ ಸ್ಥಳಗಳಲ್ಲಿ ಸಹ ಯೋಜನೆಗಳನ್ನು ಅದು ಕೈಗೆತ್ತಿಕೊಳ್ಳುತ್ತಿದೆ. ಮುಂಬೈ ಸ್ಕೈವಾಕ್ ಪ್ಲಾಟ್‌ಫಾರಂ ಅನ್ನು ಅಶೋಕ್ ದಾಖಲೆ ಸಮಯದಲ್ಲಿ ಕಟ್ಟಿದರು.

ಕಳೆದ ಮೇನಲ್ಲಿ ಡಿ.ಐ.ಸಿ.ಸಿ.ಐನ ಮುಂಬೈ ಶಾಖೆಯ ಪ್ರಾರಂಭೋತ್ಸವವನ್ನು ವ್ಯವಸ್ಥೆ ಮಾಡುವುದಕ್ಕೋಸ್ಕರ ನಾನು ಮುಂಬೈನಲ್ಲಿದ್ದೆ. ಅವರ ಆಫೀಸಿನಲ್ಲಿ ನಾವು ಸಾಮಾಜಿಕ ಸಮಸ್ಯೆಗಳ ಬಗ್ಗೆಯೂ ಚರ್ಚಿಸಿದೆವು. ಆ ಸಮಯದಲ್ಲೆ ಅವರು ನನಗೆ ತಮ್ಮ ಸ್ವಂತ ಊರಿನಲ್ಲಿ ನೂರು ಎಕರೆ ಜಮೀನನ್ನು ಕೊಂಡದ್ದನ್ನು ಹೇಳಿದ್ದು.

ಒಂದು ವರ್ಷದ ಹಿಂದೆ ಮೊದಲ ಬಾರಿಗೆ ನಾನು ಅಶೋಕ್ ಅವರನ್ನು ಭೇಟಿ ಮಾಡಿದಾಗ ಅವರ ಯಶಸ್ಸಿನ ಗಾಥೆಯ ಬಗ್ಗೆ ಆಶ್ಚರ್ಯ ಚಕಿತನಾಗಿದ್ದೆ. "ನಾನು ಎಲ್ಲಾ ತರದ ಬಡತನವನ್ನೂ ನೋಡಿದ್ದೇನೆ. ಹತ್ತನೆ ತರಗತಿಯ ಗಣಿತದ ಬೋರ್ಡ್ ಪರೀಕ್ಷೆಯನ್ನು ನಾನು ಖಾಲಿ ಹೊಟ್ಟೆಯಲ್ಲಿ ಬರೆದೆ. ನನಗೆ ಆ ಪೇಪರ್‌ನಲ್ಲಿ ನೂರಕ್ಕೆ ನೂರರಷ್ಟು ಅಂಕ ಬಂದಿತ್ತು" ಹೆಮ್ಮೆಯಿಂದ ಅವರು ಸೇರಿಸಿದರು.

ಚರ್ಮ ಕೆಲಸಗಾರನಾದ ತಂದೆ ಮತ್ತು ಕೃಷಿ ಕೂಲಿಕಾರಳಾದ ತಾಯಿಯ ಮಗನಾದ ಅಶೋಕ್ ತನ್ನ ಬಾಲ್ಯದಲ್ಲಿ ಬಡತನ ಮತ್ತು ಹಸಿವನ್ನು ಎದುರಿಸಿದರು. ಇಂಜಿನಿಯರಿಂಗ್ ಪದವಿ ಪಡೆದರು. ಸರ್ಕಾರಿ ಕೆಲಸಕ್ಕೆ ಸೇರಿ ಜರ್ಮನಿಯಲ್ಲಿ ಕೆಲಸಮಾಡಿದರು. ಭಾರತಕ್ಕೆ ಮರಳಿದ ನಂತರ ಸರ್ಕಾರಿ ಹುದ್ದೆ ತೊರೆದು ತಮ್ಮದೆ ಕಂಪನಿ ಪ್ರಾರಂಭಿಸಿದರು. ಈಗ ಅವರು ಒಂದು ಜಾಗತಿಕ ಮಟ್ಟದ ಖಾಸಗಿ ಬಂದರನ್ನು ಅಭಿವೃದ್ಧಿ ಪಡಿಸುತ್ತಿದ್ದಾರೆ.

ಅವರೆಷ್ಟೇ ಹಣ ಮಾಡಿದರೂ ಅವರ ಬಾಲ್ಯದ ನೆನಪು ಮರುಕಳಿಸುತ್ತಿತ್ತು. ತನ್ನ ವಯಸ್ಸಾಗುತ್ತಿರುವ ತಾಯಿಗೆ ತಾನು ಏನು ಕೊಡುಗೆ ನೀಡಬಲ್ಲೆ? ಅವರಿಗೆ ಸಣ್ಣ ಕಾರು ಮತ್ತು ಬಿ.ಎಂ.ಡಬ್ಲ್ಯು ಕಾರಿನ ಮಧ್ಯೆ ವ್ಯತ್ಯಾಸವೆ ಕಾಣುವುದಿಲ್ಲ. ಸಂಪೂರ್ಣ ಗ್ರಾಮೀಣ ಸಮಾಜದಲ್ಲಿ ಬೆಳೆದ ಅವರು ಶ್ರೀಮಂತ ಜೀವನಕ್ಕೆ ಹೊಂದಿಕೊಂಡು ನಗರದವರಾಗಲಾರರು.

ಹಳ್ಳಿಯಲ್ಲಿ ನೆಮ್ಮದಿಯ ಜೀವನ ನಡೆಸುತ್ತಾ ಅವರು ಸಂತೋಷವಾಗಿದ್ದಾರೆ. ಅಶೋಕ್ ತಮ್ಮ ತಾಯಿಗೆ ನೀಡಬಹುದಾದ ಅತ್ಯಂತ ದೊಡ್ಡ ಕೊಡುಗೆ ಅವರ ತಾಯಿ ಕೂಲಿಕಾರಳಾಗಿ ದುಡಿಯುತ್ತಿದ್ದ ಕೃಷಿ ಜಮೀನನ್ನು ಅವರಿಗೆ ನೀಡುವುದು. ಅದನ್ನು ತಮ್ಮನ್ನು ದುಡಿಸಿಕೊಳ್ಳುತ್ತಿದ್ದ ಹಳ್ಳಿಯ ಜಮೀನುದಾರರಿಗೆ ನೀಡಿ ಅವರನ್ನು ತಮ್ಮ ಗುತ್ತಿಗೆದಾರರಾಗಿ ಮಾಡಿಕೊಳ್ಳುವುದು. ಇದು ವ್ಯವಸ್ಥೆಯನ್ನು ತಿರುಗು ಮುರುಗು ಮಾಡುತ್ತದೆ. ಹೊಸ ಕ್ರಾಂತಿಗೆ ನಾಂದಿಯಾಗುತ್ತದೆ. "ನನ್ನ ಹಣದಿಂದ ನಾನು ಮತ್ತೇನನ್ನು ಮಾಡಲು ಸಾದ್ಯವಿತ್ತು"? ಅಶೋಕ್ ಕೇಳುತ್ತಾರೆ. ಅಶೋಕ್ ಏನು ಹುಚ್ಚರೇ?

ಇಂತಹುದೇ ಕ್ರಾಂತಿ ಎಬ್ಬಿಸುತ್ತಿರುವ ಅನೇಕ ಅಶೋಕರಿದ್ದಾರೆ. 2007ರಲ್ಲಿ ನನ್ನ ಜೊತೆಗಾರ ಡಿ. ಶ್ಯಾಮ್ ಬಾಬು ನನ್ನ ಹಳ್ಳಿಗೆ ಉತ್ತರ ಪ್ರದೇಶದ ದಲಿತರ ಮನೆಗಳ ಸರ್ವೆ ಸಂಬಂಧ ಭೇಟಿ ನೀಡಿದಾಗ ನಾನು ಅವರಿಗೆ ಹೊಸದಾಗಿ ಕಟ್ಟಿಸಿದ ಇಟ್ಟಿಗೆಯ ಒಂದೇ ಮಹಡಿಯ ಒಂದು ಮನೆಯನ್ನು ತೋರಿಸಿದ್ದೆ. ಅಲ್ಲಿ ಯಾರೂ ವಾಸವಿದ್ದಿರಲಿಲ್ಲ. ಅದಕ್ಕೆ ಬೀಗ ಹಾಕಿತ್ತು. ಕೆಲ ತಿಂಗಳ ಹಿಂದೆ ನಾನು ಬಿಹಾರಕ್ಕೆ ರಸ್ತೆ ಮಾರ್ಗವಾಗಿ ಹೊರಟಾಗ ಶ್ಯಾಮ್ ನನ್ನ ಜೊತೆ ಇದ್ದರು. ನನ್ನ ಹಳ್ಳಿಯಲ್ಲಿ ಒಂದು ರಾತ್ರಿ ಕಳೆಯಲು ನಾವು ನಿರ್ಧರಿಸಿದೆವು. ಈಗ ಆ ಒಂದು ಮಹಡಿ ಕಟ್ಟಡ ಎರಡು ಮಹಡಿಯದಾಗಿತ್ತು. ಈಗಲೂ ಅದರಲ್ಲಿ ಯಾರೂ ವಾಸವಿರಲಿಲ್ಲ. ಈ ಬಾರಿ ನಾನು ಆ ಮನೆಯ ಕಥೆಯನ್ನು ಹೇಳಿದೆ.

ನನ್ನ ಬಾಲ್ಯದ ಸ್ನೇಹಿತ ಲಾಲ್‌ಚಾಂದ್ ಒಂದು ಅತ್ಯಂತ ಬಡ ಕುಟುಂಬದಲ್ಲಿ ಹುಟ್ಟಿದ. ಆ ಕುಟುಂಬ ತಮ್ಮ ಜೀವನಾಂಶಕ್ಕೆ ತಾವು ಸಾಕುತ್ತಿದ್ದ ಸತ್ತನ್ನೆರಡು ಹಂದಿಗಳನ್ನವಲಂಬಿಸಿತ್ತು. ಲಾಲ್‌ಚಾಂದ್ ಪ್ರತಿದಿನ ಆ ಹಂದಿಗಳನ್ನು ಮೇಯಿಸಲು ಕೊಂಡೊಯ್ಯಬೇಕಿತ್ತು. ಇದರಿಂದಾಗಿ ಅವನು ಶಾಲೆಯನ್ನು ತೊರೆದ. ಹಂದಿ ಸಾಕುವುದು, ಜಮೀನುದಾರರಲ್ಲಿ ದುಡಿಯುವುದು. ಇದರಿಂದ ಬೇಸತ್ತು ಒಂದು ಸಂಜೆ ಅವನು ಹಳ್ಳಿಯಿಂದ ಮಾಯವಾದ. ಪಂಜಾಬ್‌ಗೆ ಹೋಗಿದ್ದಾನೆ ಎಂದು ಮನೆಯವರು ಹೇಳುತ್ತಿದ್ದರು. ಅಲ್ಲಿ ಅದೂ ಇದು ಕೆಲಸ ಮಾಡುತ್ತಾ ಕೊನೆಗೆ ಕ್ರೇನ್ ಡ್ರೈವರ್ ಆದ. ತನ್ನ ಮಗನಿಗೆ ವಿದ್ಯಾಬ್ಯಾಸ ನೀಡಿದ. ಈಗ ಅವನು ಶಾಲೆಯ ಉಪಾದ್ಯಾಯನಾಗಿದ್ದಾನೆ. ಲಾಲ್‌ಚಾಂದ್ ಪಂಜಾಬ್‌ನಲ್ಲಿಯೆ ನೆಲೆಸಿದ್ದಾನೆ.

ಇಲ್ಲಿ ಅವನ ತಂದೆ ತಾಯಿ ಯಾರೂ ಇಲ್ಲ. ಕುಟುಂಬದಲ್ಲಿ ಮದುವೆ, ಸಾವು ಏನೇ ಆದರೂ ಅವನು ತನ್ನ ಸಂಬಂಧಿಕರನ್ನು ನೋಡಲು ಹಳ್ಳಿಗೆ ಬರುತ್ತಾನೆ. ಲಾಲ್‌ಚಾಂದ್ ಒಂದು ಮಣ್ಣಿನ ಗುಡಿಸಲಿನಲ್ಲಿದ್ದ. ಹೊಸ ಸಂಪಾದನೆಯಿಂದ ಅವನು ತನ್ನ ಹಿಂದಿನ ಜೀವನವನ್ನವಲೋಕಿಸಿ ಅದರಲ್ಲಿ ಬದಲಾವಣೆಯನ್ನು ತರಲು ಇಚ್ಚಿಸಿದ. ಆದುದರಿಂದ ಅವನು ಒಂದು ಲಕ್ಷ ಖರ್ಚು ಮಾಡಿ ಈ ಮನೆ ಕಟ್ಟಿಸಿದ್ದಾನೆ.

ಬೀಗ ಹಾಕಿರುವ ಈ ಮನೆ ಲಾಲ್‌ಚಾಂದ್ ತನ್ನ ಜೀವಿತ ಕಾಲದಲ್ಲಿ ಹುಟ್ಟುಹಾಕಿದ ಕ್ರಾಂತಿಯ ಸೂಚನೆ. ಬಿಹಾರದಿಂದ ಹಿಂತಿರುಗುವಾಗ ನನ್ನ ಮಾವಂದಿರ ಮನೆಗೆ ಭೇಟಿ ನೀಡಬಹುದೇ ಎಂದು ನಾನು ಶ್ಯಾಮ್ ಬಾಬುವನ್ನು ಕೇಳಿದೆ. ಅವರು ಒಪ್ಪಿದರು. ಮರುದಿನ ಬೆಳಗ್ಗೆ ನಾನು ಅವರಿಗೆ ಒಂದು ಹೊಸ ಬಂಗಲೆಯನ್ನು ತೋರಿಸಿದೆ. ಅದರಲ್ಲೂ ಸಹ ಯಾರೂ ವಾಸವಿರಲಿಲ್ಲ. ಸುಮಾರು ಮೂರು ದಶಕಗಳ ಹಿಂದೆ ನನ್ನ ಹೆಂಡತಿಯ ಹಳ್ಳಿಯಿಂದ ದಲಿತನೊಬ್ಬ ದೆಹಲಿಗೆ ಓಡಿಹೋದ. ಅವನು ಅಜಾದ್‌ಪುರ್ ಮಂಡಿಯಲ್ಲಿ ಅದೂ ಇದೂ ಮಾಡಿಕೊಂಡಿದ್ದ. ಈಗ ಅವನು ಸೇಬಿನ ವ್ಯಾಪಾರಿ, ಎರಡು ಹದಿನೆಂಟು ಗಾಲಿಗಳ ಟ್ರಕ್‌ಗಳ ಮಾಲೀಕ. ಈಗ ಅವನು ದೆಹಲಿಯಲ್ಲೆ ನೆಲೆಸಿದ್ದಾನೆ. ಅವನೂ ಸಹ ಒಂದು ಸಣ್ಣ ಮನೆಯಲ್ಲಿ ವಾಸವಿರುತ್ತಾ ಬಡತನದ ನೋವನ್ನನುಭವಿಸಿದ್ದ.

ಇಂತಹ ಕ್ರಾಂತಿಯ ಎಳೆಗಳು ನಮ್ಮನ್ನು ಅಂಬೇಡ್ಕರ್ ಅವರ ಕಡೆಗೆ ಎಳೆದೊಯ್ಯುತ್ತವೆ. ಅಂಬೇಡ್ಕರ್ ಅವರು ಮುಂಬೈನ ಹಿಂದೂ ಕಾಲೊನಿಯಲ್ಲಿ ಮನೆಯೊಂದನ್ನು ಕೊಂಡು ಅದಕ್ಕೆ ರಾಜಗೃಹ (ರಾಜರ ಮನೆ) ಎಂದು ಹೆಸರಿಟ್ಟರು. ಇದಕ್ಕೆ ಕಾರಣವೇನು?

ಹಿಂದೂ ಸಮಾಜ ದಲಿತರು ಹಳ್ಳಿಯ ಹೊರಗೆ ವಾಸಿಸುವಂತೆ ಮಾಡಿತ್ತು. ನಿಮ್ಮಲ್ಲಿ ಹಣವಿದ್ದರೆ ಹಿಂದೂ ಕಾಲೊನಿ ಮಧ್ಯೆ ಮನೆಯೊಂದನ್ನು ಕೊಂಡು, ಅಲ್ಲಿ ವಾಸಿಸುತ್ತಾ ಶತಮಾನಗಳ ಕಾಲ ಕೋಟಿ ಕೋಟಿ ದಲಿತರನ್ನು ಅತಿ ಕ್ರೂರವಾಗಿ ನಡೆಸಿಕೊಂಡಿದ್ದ ಆ ಧರ್ಮವನ್ನು ಧ್ವಂಸಮಾಡಿ! □

ಬುದ್ಧಾಯಣ

೨೧

ವಜ್ರದ ಹೊಳಪನ್ನೇಕೆ ಕುಂದಿಸಲಾಗುವುದಿಲ್ಲ?

ಸಿ. ಹೆಚ್. ರಾಜಶೇಖರ್

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಶ್ರಾವಸ್ತಿಯ ಜೇತ ವನದಲ್ಲಿ ತನ್ನ ಅಪಾರ ಭಿಕ್ಷು ಸಹೋದರರೊಂದಿಗೆ ತಂಗಿದ್ದರು. ಅದಕ್ಕೂ ಪೂರ್ವದಲ್ಲಿ ವಾರಣಾಸಿ ರಾಜ್ಯವನ್ನು ಬ್ರಹ್ಮದತ್ತ ರಾಜನು ಆಳುತ್ತಿದ್ದನು. ಅಂತಹ ಸಂದರ್ಭದಲ್ಲಿ ಬೋಧಿಸತ್ವರು ಕಾಶಿಯ ಒಂದು ಗ್ರಾಮದಲ್ಲಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ದೊಡ್ಡವರಾದ ಮೇಲೆ ವಿದ್ಯೆ ಕಲಿತು ಪಂಡಿತರಾದರು. ಎಲ್ಲರೂ ದುಃಖದಲ್ಲಿ ಮುಳುಗಿರುವಾಗ ನಾನು ಸಂಸಾರಿಕ ಜೀವನದಲ್ಲಿ ಸುಖ ಪಡಲು ಹೇಗೆ ಸಾಧ್ಯ ಎಂಬ ಜಿಜ್ಞಾಸೆಯು ಅವರಲ್ಲಿ ಮೊಳೆಯಿತು. ಅದರ ಪ್ರತಿಫಲವಾಗಿ ಅವರು ಗೃಹತ್ಯಾಗ ಮಾಡಿ ಭಿಕ್ಷುವಾದರು. ಹಿಮಾಲಯ ಪರ್ವತದ ತಪ್ಪಲಲ್ಲಿ ಒಂದು ಪರ್ಣಕುಟೀರವನ್ನು ನಿರ್ಮಿಸಿಕೊಂಡು ತಮ್ಮ ಸಾಧನೆ ಮಾಡುತ್ತಿದ್ದರು.

ಹೀಗಿರಲು ಅದೇ ಪರ್ವತ ಶ್ರೇಣಿಯ ಒಂದು ದುರ್ಗಮ ಕಂದಕದಲ್ಲಿ ಒಂದು ಗುಹೆ ಇತ್ತು. ಆ ಗುಹೆಯಲ್ಲಿ ಒಂದು ಅಪೂರ್ವವಾದ ಮಣಿರತ್ನವಿತ್ತು. ಅದು ತನ್ನದೇ ಆದ ಕಾಂತಿಯಿಂದ ಕಂಗೊಳಿಸುತ್ತಿತ್ತು. ಅಂತಹ ಗುಹೆಯಲ್ಲಿ ಮೂವತ್ತು ಹಂದಿಗಳು ವಾಸಿಸುತ್ತಿದ್ದವು. ಆ ಹಂದಿಗಳಿಗೆ ಮಣಿರತ್ನದ ಬೆಲೆಯೇನು ಗೊತ್ತಿರಲು ಸಾಧ್ಯ? ಅವು ಅದೊಂದು ಸಾಧಾರಣ ಕಲ್ಲಿನ ಗುಂಡೆಂದು ಬಗೆದಿದ್ದವು. ಅವುಗಳ ಗುಹೆಯ ಸಮೀಪವೇ ಒಂದು ಸಿಂಹವು ವಾಸಿಸುತ್ತಿತ್ತು. ಹಾಗಾಗಿ ಆ ಸಿಂಹವು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಹಂದಿಗಳು ವಾಸಿಸುತ್ತಿದ್ದ ಗುಹೆಯ ಮುಂದೆಯೇ ಹೋಗಿ ಬರಬೇಕಾಗಿತ್ತು. ಆದರೆ ಸಿಂಹವು ಧರ್ಮವಂತ ಮನೋಭಾವದಿಂದ ಕೂಡಿತ್ತು. ಅದು ಮನಸ್ಸು ಮಾಡಿದ್ದರೆ ಆ ಎಲ್ಲಾ ಹಂದಿಗಳನ್ನು ಹಿಡಿದು ತಿಂದು ಇಷ್ಟರಲ್ಲಿ ಮುಗಿಸ ಬಹುದಾಗಿತ್ತು. ಆದರೆ ನೆರೆಹೊರೆಯವರೊಂದಿಗೆ ಸ್ನೇಹ ಮತ್ತು ಮೈತ್ರಿ ಭಾವದಿಂದ ಇರಬೇಕೆಂದು ಅರಿತು ಅವುಗಳನ್ನು ಕಂಡರೂ ಕಾಣದಂತೆ ತನ್ನ ಪಾಡಿಗೆ ತಾನು ನಿತ್ಯ ಬೇಟೆಗೆ ಹೋಗಿ ಬರುತ್ತಿತ್ತು.

ಆದರೆ ಸಹಜವಾಗಿ ಆ ಹಂದಿಗಳಿಗೆ ಭಯವು ಇದ್ದೇ ಇತ್ತು. ಸಿಂಹವು ಬೆಳಿಗ್ಗೆ ಬೇಟೆಗೆ ಹೊರಡುವುದಕ್ಕೆ ಮೊದಲೇ ಹಂದಿಗಳು ಗುಹೆಯಿಂದ ಹೊರಗೆ ಹೋಗುತ್ತಿದ್ದವು. ಸಂಜೆ ಸಿಂಹವು ತನ್ನ ವಾಸಸ್ಥಾನವನ್ನು ಸೇರಿದ ಬಳಿಕ ಗುಹೆಯನ್ನು ಪ್ರವೇಶಿಸುತ್ತಿದ್ದವು. ಈ ಎಲ್ಲಕ್ಕಿಂತಲೂ ಹಂದಿಗಳನ್ನು ಕಾಡುತ್ತಿದ್ದ ಬಹುದೊಡ್ಡ ಸಮಸ್ಯೆ ಎಂದರೆ ಗುಹೆಯ ಒಳಗೆ ಇದ್ದ ವಜ್ರದ ಮಣಿಯಿಂದ ಹೊರ ಸೂಸುತ್ತಿದ್ದ ಪ್ರಖರ ಕಿರಣವಾಗಿತ್ತು. ಏಕೆಂದರೆ, ಅದರ ಬೆಳಕಿನ ಮುಂದೆ ಸಿಂಹವು ಹಾದು ಹೋಗುವಾಗ ಅದರ ನೆರಳು ಕಾಡಿನ ಬಯಲಿನಲ್ಲಿ ಮೇಯುತ್ತಿದ್ದ ಹಂದಿಗಳ ಮುಂದೆ ಪ್ರತಿಫಲಿಸುತ್ತಿತ್ತು. ಅದನ್ನು ಕಾಣುತ್ತಿದ್ದಂತೆಯೇ ಸಿಂಹವೇ ನಮ್ಮ ಮೈಮೇಲೆ ಹಾರಿ ಬಂದಿತೆಂದು ಔಹಾರುತ್ತಿದ್ದವು. ಚಳಿಜ್ವರ ಬಂದು ಮಲಗುತ್ತಿದ್ದವು. ಇದರಿಂದ ಅವುಗಳ ರಕ್ತ ಮಾಂಸವು ಸೀದು ಬಡಕಲು ಬೆಂಡಾಗಿ ಹೋಗಿದ್ದವು.

ಒಂದು ದಿನ ಆ ಮೂವತ್ತು ಹಂದಿಗಳೆಲ್ಲ ಒಂದೆಡೆ ಕಲೆತವು. ಅವುಗಳಿಗೆ ನಾಯಕನಂತಿದ್ದ ಹಂದಿಯು;

“ಮಿತ್ರರೇ, ಇದಕ್ಕೆಲ್ಲ ಮುಖ್ಯ ಕಾರಣವೆಂದರೆ ಗುಹೆಯಲ್ಲಿ ಇರುವ ಕಾಂತಿಯುತ ವಜ್ರದ ಮಣಿಯೇ ಆಗಿದೆ. ನಾವುಗಳೆಲ್ಲ ಸೇರಿ ಅದರ ಹೊಳಪನ್ನು ಮಸುಕುಗೊಳಿಸದೇ ಹೋದರೆ ನಮಗೆ ಉಳಿಗಾಲವಿಲ್ಲ” ಎಂಬ ತೀರ್ಮಾನಕ್ಕೆ ಬಂದವು. ಬಳಿಕ ಹೊಳಪನ್ನು ಯಾವ ರೀತಿ ಮಸುಕುಗೊಳಿಸುವುದು ಎಂಬ ಚರ್ಚೆಯು ಮುಂದುವರಿದಾಗ; ಕೆಸರಿನಿಂದ, ಮಣ್ಣಿನಿಂದ, ಮರಳಿನಿಂದ ಮತ್ತು ಗಿಡ ಗೆಟ್ಟೆಗಳ ನಾರು ಬೇರಿನಿಂದ ಎಂದು ನಿರ್ಧರಿಸಿದವು. ಅವುಗಳೆಲ್ಲ ಅಂದೇ ಸಾಮೂಹಿಕವಾಗಿ ಸಮೀಪದ ಕೆಸರಿನ ಗುಂಡಿಯಲ್ಲಿ ಚನ್ನಾಗಿ ಹೊರಳಾಡಿ ಗುಹೆಗೆ ಬಂದವು. ಆ ಗುಂಡುಕಲ್ಲಿನಂತಿದ್ದ ವಜ್ರದ ಮಣಿಯ ಮೇಲೆ ಬಿದ್ದು ತಮ್ಮ ಮೈಯನ್ನು ಅದಕ್ಕೆ ಬಲವಾಗಿ ತಿಕ್ಕಿದವು. ಅವುಗಳ ಉದ್ದವಾದ ಮತ್ತು ಒರಟಾದ ಕೂದಲಿನ ತಿಕ್ಕಾಟಕ್ಕೆ ತುತ್ತಾದ ಆ ವಜ್ರದ ಮಣಿಯು ಮಸುಕಾಗುವ ಬದಲಿಗೆ ಮತ್ತೂ ಚನ್ನಾಗಿ ಹೊಳೆಯ ತೊಡಗಿತು.

ಇದರಿಂದ ಹಂದಿಗಳು ಒಂದರ ಮುಖವನ್ನು ಮತ್ತೊಂದು ಪ್ರಶ್ನಾರ್ಥಕವಾಗಿ ನೋಡಿಕೊಂಡವು. ಏನೂ ಹೊಳೆಯಲಿಲ್ಲ. ಹೊರಗೆ ಹೋಗಿ ಮೈ ತುಂಬ ಮಣ್ಣನ್ನು ಮೆತ್ತಿ ತಂದವು. ಮತ್ತೆ ತಿಕ್ಕಿದವು. ಹಿಂದಿಗಿಂತ ಮತ್ತೂ ಹೊಳಪಾಯಿತು. ಮುಂದೆ ಮರಳು, ನಾರು, ಬೇರು ಹೀಗೆ ಅವುಗಳಿಗೆ ತಿಳಿದಂತೆ ಎಲ್ಲವನ್ನು ತಂದು ಪ್ರಯೋಗ ಮಾಡಿದವು. ಆದರೆ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಅದಕ್ಕೆ ಬದಲಾಗಿ ವಜ್ರವು ಮೊದಲಿಗಿಂತ ಹೆಚ್ಚೆಚ್ಚು ಪ್ರಖರವಾಗಿ ಬೆಳಕನ್ನು ಸೂಸತೊಡಗಿತು.

ಇದರಿಂದ ಮತ್ತೂ ಚಿಂತೆಗೀಡಾದ ಆ ಮೂವತ್ತು ಹಂದಿಗಳು ಬೋಧಿಸತ್ವರ ಬಳಿ ಬಂದು ಅವರಿಗೆ ವಂದಿಸಿದವು. ಒಂದು ಕಡೆ ಕುಳಿತುಕೊಂಡ ಬಳಿಕ ಅವುಗಳ ನಾಯಕನು ಎದ್ದು ನಿಂತು;

“ಭಂತೆ, ನಾವು ಮೂವತ್ತು ಮಂದಿ ಹಂದಿಗಳು ಈಗ ಏಳು ವರ್ಷಗಳಿಂದ ಒಂದು ಗುಹೆಯಲ್ಲಿ ವಾಸಿಸುತ್ತಿದ್ದೇವೆ. ನಮ್ಮ ಗುಹೆಯಲ್ಲಿ ಒಂದು ವಜ್ರದ ಮಣಿ ಇದೆ. ಅದರ ಪ್ರಖರ ಬೆಳಕು ನಮಗೆ ಪ್ರಾಣಭಯ ತಂದಿದೆ. ಅದರ ಹೊಳಪನ್ನು ಕಡಿಮೆ ಮಾಡುವ ಸಲುವಾಗಿ



ಹಂದಿಗಳನ್ನು ಕಾಡುತ್ತಿದ್ದ ಬಹುದೊಡ್ಡ ಸಮಸ್ಯೆ ಎಂದರೆ ಗುಹೆಯ ಒಳಗೆ ಇದ್ದ ವಜ್ರದ ಮಣಿಯಿಂದ ಹೊರ ಸೂಸುತ್ತಿದ್ದ ಪ್ರಖರ ಕಿರಣವಾಗಿತ್ತು. ಏಕೆಂದರೆ, ಅದರ ಬೆಳಕಿನ ಮುಂದೆ ಸಿಂಹವು ಹಾದು ಹೋಗುವಾಗ ಅದರ ನೆರಳು ಕಾಡಿನ ಬಯಲಿನಲ್ಲಿ ಮೇಯುತ್ತಿದ್ದ ಹಂದಿಗಳ ಮುಂದೆ ಪ್ರತಿಫಲಿಸುತ್ತಿತ್ತು. ಅದನ್ನು ಕಾಣುತ್ತಿದ್ದಂತೆಯೇ ಸಿಂಹವೇ ನಮ್ಮ ಮೈಮೇಲೆ ಹಾರಿ ಬಂದಿತೆಂದು ಔಹಾರುತ್ತಿದ್ದವು. ಚಳಿಜ್ವರ ಬಂದು ಮಲಗುತ್ತಿದ್ದವು. ಇದರಿಂದ ಅವುಗಳ ರಕ್ತ ಮಾಂಸವು ಸೀದು ಬಡಕಲು ಬೆಂಡಾಗಿ ಹೋಗಿದ್ದವು.

ನಾವು ಮಾಡದ ಹೋರಾಟವಿಲ್ಲ. ಆದರೆ ಅದರ ಹೊಳಪು ಜಾಸ್ತಿಯಾಗುತ್ತಲೇ ಹೋಗುತ್ತಿ ದೆಯೇ ಹೊರೆತು ಕಡಿಮೆ ಯಾಗುತ್ತಿಲ್ಲ. ಈಗ ನಾವು ಏನು ಮಾಡಬೇಕು?" ಎಂದು ತಮ್ಮ ಸಂಕಷ್ಟವನ್ನು ತೋಡಿಕೊಂಡಿತು. ನಸುನಕ್ಕ ಬೋಧಿಸತ್ವರು;

"ಅಯ್ಯಾ ಮಿತ್ರರೇ, ಅದು ವಜ್ರವಾಗಿದೆ. ಅದು ಹೊಳೆಯುವ ಸ್ವಭಾವವನ್ನು ಹೊಂದಿದೆ. ಸ್ಫಟಿಕವಾಗಿದೆ, ನುಣುಪಾಗಿದೆ, ನಿರ್ಮಲವಾಗಿದೆ ಮತ್ತು ಪವಿತ್ರವಾಗಿದೆ. ಅದಕ್ಕೆ ಅದೇ ಸಾಟಿ. ಅದಕ್ಕೆ ಮತ್ಯಾವುದೂ ಸರಿಸಾಟಿಯಲ್ಲ. ನಿಮ್ಮ ಹೋರಾಟವೆಲ್ಲ ವ್ಯರ್ಥ ಮತ್ತು ಅವಿವೇಕವಾಗಿದೆ. ನೀವುಗಳು ಮೊದಲು ವಿವೇಕಿಗಳಾಗಿ, ಪ್ರಜ್ಞಾವಂತರಾಗಿ, ನಿಮ್ಮಗಳ ಮನದ ಕ್ಲೇಶಗಳನ್ನು ನೀಗಿಕೊಂಡು ಚಿತ್ತಮುಕ್ತರಾಗಿ. ಆಗ ನಿಮ್ಮ ಹೋರಾಟವು ನೇರವು, ಸರಳವು – ಸ್ಪಷ್ಟವು ಆಗುತ್ತದೆ. ನಂತರ ನೀವೂ ಕೂಡ ವಜ್ರದಂತೆ ಸ್ವಯಂ ಹೊಳಪುಳ್ಳವರಾಗುತ್ತೀರಿ" ಎಂದರು.

ಆಗ ಆ ಹಂದಿಗಳಿಗೆ ತಮ್ಮ ತಪ್ಪಿನ ಅರಿವು ಮೂಡಲು:

"ಹೌದು ಗುರುದೇವಾ, ನಿಮ್ಮ ಮಾತಿನಲ್ಲಿ ಸತ್ಯವಿದೆ. ನಾವುಗಳು ಚಿತ್ತಮುಕ್ತರಾಗುವ ತನಕ ಎಂದಿಗೂ ವಜ್ರವಾಗಲಾರೆವು. ಸ್ವಯಂ ನಮಗೆ ನಾವೇ ಹೊಳೆಯಲಾರೆವು. ಇನ್ನೂ ನಮ್ಮ ಮುಂದಿನ ಹೋರಾಟವೆಂದರೆ ವಜ್ರದಂತಾಗುವುದೇ ಆಗಿದೆ!!" ಎನ್ನುತ್ತಾ ಬೋಧಿಸತ್ವರಿಗೆ ವಂದಿಸುತ್ತಾ ಮುನ್ನೆಡೆದವು. □

ಜನರೇಕೆ ಬರಲಿಲ್ಲ ನನ್ನ ವೈಭವ ನೋಡಲಿಂದು...

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಭದ್ದಿಯ ನಗರದಲ್ಲಿ ತನ್ನ ಭಿಕ್ಷುಗಳೊಂದಿಗೆ ತಂಗಿದ್ದರು. ಆ ನಗರದಲ್ಲಿ ಒಬ್ಬ "ಭದ್ದಲಿ ಕುಮಾರ"ನೆಂಬ ಮಹಾ ಧನವಂತನಿದ್ದ. ಎಂಬತ್ತು ಕೋಟಿ ಸಂಪತ್ತಿನ ಒಡೆಯನಾದ ಶ್ರೇಷ್ಠಿಯೊಬ್ಬನ ಏಕಮಾತ್ರ ಪುತ್ರ ಅವನಾಗಿದ್ದ. ಮಗನ ಮೇಲಿನ ಅಪಾರ ಪ್ರೀತಿಯಿಂದಾಗಿ ಮೂರು ಋತುಗಳಿಗೆ ಮೂರು ಅರಮನೆಯನ್ನು ಅವರ ತಂದೆ ಕಟ್ಟಿಸಿದ್ದ. ಅದಕ್ಕೆ ಸ್ವರ್ಣಮಯ ಲೇಪನವನ್ನು ಬಳಿಸಿದ್ದ. ಕಣ್ಣಿನ ತುಂಬುವಂತಹ ದೃಶ್ಯ ವೈಭವದಿಂದ ಕೂಡಿತ್ತು ಆ ಅರಮನೆ. ಒಮ್ಮೆ ನೋಡಿದರೆ ಮತ್ತೆ ಮತ್ತೆ ನೋಡಬೇಕೆಂಬ ಹಂಬಲ ಮೂಡಿಸುವಂತ್ತಿತ್ತು. ಪ್ರತಿ ದಿನವೂ ಅಲ್ಲಿ ನೃತ್ಯ, ಸಂಗೀತ ಮತ್ತು ನಾಟಕಾದಿಗಳು ಬಹು ವಿಜೃಂಭಣೆಯಿಂದ ಜರುಗುತ್ತಿದ್ದವು. ನನ್ನ ವೈಭವವನ್ನು ಜನರು ನೋಡಿ ಸಂತೋಷ ಪಟ್ಟರೆ ನನ್ನ ಕೀರ್ತಿಯು ನಗರದಲ್ಲಿ ಹಬ್ಬುತ್ತದೆಂಬುದು ಭದ್ದಲಿ ಕುಮಾರನ ಅಭಿಲಾಷೆಯಾಗಿತ್ತು. ಹಾಗಾಗಿ ತನ್ನ ಮೂರೂ ಅರಮನೆಯ ಹೆಬ್ಬಾಗಿಲನ್ನು ಜನರಿಗಾಗಿ ಮುಕ್ತ ಗೊಳಿಸಲಾಗಿತ್ತು. ಆದ್ದುದರಿಂದ ಅರಮನೆಯನ್ನು ನೋಡಲು ನಗರದ ಜನರು ತಂಡೋಪ ತಂಡವಾಗಿ ಬರುತ್ತಿದ್ದರು, ಅವರುಗಳು ಕೂರಲು ಅರಮನೆಯ ಮಧ್ಯ ವೃತ್ತಾಕಾರವಾಗಿ ಆಸನಗಳನ್ನು ನಿರ್ಮಿಸಲಾಗಿತ್ತು.

ಭದ್ದಲಿ ಕುಮಾರನ ದೃಶ್ಯ ವೈಭವ ಮತ್ತು ಮನೋರಂಜನೆಯ ಸವಿಯನ್ನು ಉಂಡ ಜನರು ತಲೆದೂಗುತ್ತಾ ಮನೆಗೆ ಹಿಂದಿರುಗುತ್ತಿದ್ದರು. ಈ ಪದ್ಧತಿಯು ಹೀಗೆಯೆ ತಡೆ ಇಲ್ಲದೆ ಜರುಗುತ್ತಿತ್ತು. ಹೀಗಿರಲು ಒಮ್ಮೆ ಬುದ್ಧರು ಶ್ರಾವಸ್ತಿಯಲ್ಲಿ ಮಳೆಗಾಲವನ್ನು ಕಳೆದು ಭದ್ದಿಯ ನಗರಕ್ಕೆ ತಮ್ಮ ಭಿಕ್ಷು ಸಹೋದರರೊಂದಿಗೆ ಬಂದು ಜಾತಿಯವನದಲ್ಲಿ ತಂಗಿದ್ದರು. ಈ ವಿಷಯವು ನಗರದ ಜನರಿಗೆ ತಿಳಿಯಲು ಅವರ ಭಕ್ತಿ ಭಾವವು ನೂರ್ಮಡಿ ಪುಟಿದೆದ್ದಿತ್ತು. ಮರುದಿನ ಬುದ್ಧರ ಉಪದೇಶದ ಸಮಯವು ಜನರ ಬಾಯಿಂದ ಬಾಯಿಗೆ ನಗರದಲ್ಲಿ ಹಬ್ಬಿತು. ಆ ಸಮಯಕ್ಕೆ ಸರಿಯಾಗಿ ಜನರು ಜಾತೀಯವನದಲ್ಲಿ ಅಪಾರ ಸಂಖ್ಯೆಯಲ್ಲಿ ನೆರೆದರು.

ಹೀಗಾಗಿ ಅಂದು ಭದ್ದಲಿ ಕುಮಾರನ ಅರಮನೆಯು ಜನರಿಲ್ಲದೆ ಖಾಲಿಯಾಗಿತ್ತು. ಮೊದಲ ಭಾರಿಗೆ ಆತ ವ್ಯಸನಕ್ಕೆ ಒಳಗಾದ. ಪ್ರತಿ ದಿನವು ಕಿಕ್ಕಿರಿದು ತುಂಬುತ್ತಿದ್ದ ಅರಮನೆಯು ಇಂದೇಕೆ ತುಂಬಲಿಲ್ಲ ಎಂಬ ಬಗ್ಗೆ ತನ್ನ ಹಿರಿಯ ಪುರೋಹಿತನನ್ನು ಕೇಳಿದಾಗ ಅವನು;

"ಒಡೆಯಾ, ಇಂದು ನಗರದ ಹೊರವಲಯದಲ್ಲಿ ಇರುವ ಜಾತೀಯವನದಲ್ಲಿ ಬುದ್ಧರ ಉಪನ್ಯಾಸವಿದೆ. ಹಾಗಾಗಿ ಜನರು ಅಲ್ಲಿಗೆ ತೆರಳಿದ್ದಾರೆ "

"ಏನು ಬುದ್ಧರೆ? ಅವರು ನನಗಿಂತ ಶ್ರೇಷ್ಠರೆ? ಅಲ್ಲಿ ಇಲ್ಲಿಗಿಂತ ದೃಶ್ಯ ವೈಭವ ಮತ್ತು ಮನೋರಂಜನೆ ದೊರೆಯುವುದೇ?"

"ಹೌದು ಒಡೆಯಾ, ಅವರು ತಮಗಿಂತ ಶ್ರೇಷ್ಠರೇ ಸರಿ"

"ಅದು ಹೇಗೆ?"

"ತಾವೇ ಸ್ಥಳಕ್ಕೆ ಹೋಗಿ ಪರಿಶೀಲಿಸಿದರೆ ತಿಳಿಯುತ್ತದೆ" ಎನ್ನಲು ಅವನು ಇದನ್ನು ಪರಿಶೀಲಿಸಿಯೆ ನೋಡಬೇಕೆಂದು ತನ್ನ ರಥವನ್ನು ಏರಿ ಜಾತೀಯವನಕ್ಕೆ ಬಂದನು. ಅಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ನೆರೆದಿದ್ದರು. ತನ್ನ ರಥವನ್ನು ದೂರದಲ್ಲಿಯೆ ನಿಲ್ಲಿಸಿ ಜನರಿಗೆ ತನ್ನ ಆಗಮನವು ತಿಳಿಯದಂತೆ ಮಾರುವೇಷದಲ್ಲಿ ಒಂದು ಅಜ್ಞಾತ ಸ್ಥಳದಲ್ಲಿ ಕುಳಿತರು. ಸರಿಯಾದ ಸಮಯಕ್ಕೆ ಬುದ್ಧರು ತಮ್ಮ ಶಿಷ್ಯರೊಂದಿಗೆ ಮಂಟಪಕ್ಕೆ ಬಂದರು. ಅಲ್ಲಿ ನಿರ್ಮಿಸಿದ್ದ ಎತ್ತರವಾದ ಪೀಠದಲ್ಲಿ ಕುಳಿತರು. ಭದ್ದಲಿ ಕುಮಾರನು ಅವರತ್ತ ದೃಷ್ಟಿ ಹರಿಸಿದನು. ಬುದ್ಧರು ಮುಂಜಾನೆಯ ವರ್ಣಾನಾತೀತ ಸೂರ್ಯನಂತೆ ತೇಜೋಮಯವಾಗಿದ್ದರು. ಅವರ ಮುಖದಲ್ಲಿ ಅಚಲವಾದ ಶಾಂತಿಯು ನೆಲೆಸಿತ್ತು. ಅವರ ಕಣ್ಣುಗಳು ನಿರ್ಮಲಚಿತ್ತವಾಗಿದ್ದವು. ಅವರು ತಮ್ಮ ಮಧುರವಾದ ಕಂಠದಿಂದ ಉಪದೇಶವನ್ನು ಪ್ರಾರಂಬಿಸಿದರು. ಅದನ್ನು ಕೇಳಲು ಪ್ರಾರಂಬಿಸಿದ ಭದ್ದಲಿ ಕುಮಾರನು ತನ್ನನ್ನು ತಾನೇ ಮರೆತು ಬುದ್ಧನಲ್ಲಿ ಒಂದಾಗಿ ಬಿಟ್ಟ. ಬುದ್ಧನ ತತ್ವ ಸಿದ್ಧಾಂತದ ಮುಂದೆ ತಾನು ಇದುವರೆಗೆ ಯಾವುದು ಸರಿ ಎಂದು ಬಗೆದು ಜಂಬಕೊಚ್ಚಿಕೊಳ್ಳುತ್ತಿದ್ದನೋ ಅದೆಲ್ಲವೂ ಅಲ್ಪವೆಂದು ಮತ್ತು ಅರ್ಥಹೀನವೆಂದು ಅರಿತನು. ಅದೇ ಸಮಯಕ್ಕೆ ಸರಿಯಾಗಿ ತನ್ನ ಅಜ್ಞಾನವು ತೊಲಗಿ ಜ್ಞಾನಜ್ಯೋತಿಯು ಅಂತರಂಗದಲ್ಲಿ ಉದಯಿಸಿತು. ನಿಂತಲ್ಲಿಯೆ ಬುದ್ಧನಿಗೆ ಕೈಜೋಡಿಸಿ ವಂದಿಸಿದ.

ಉಪನ್ಯಾಸವು ಮುಗಿಯಿತು. ಜನರು ಬುದ್ಧರಿಗೆ ವಂದಿಸಿದರು. ತಾವು ತಂದ ದಾನವನ್ನು ಸಂಘಕ್ಕೆ ಅರ್ಪಿಸಿ ಚದುರಿದರು . ಸರತಿಯ ಸಾಲಿನ ಕೊನೆಯಲ್ಲಿದ್ದ ಭದ್ದಲಿ ಕುಮಾರನು ತನ್ನನ್ನು ತಾನು ಪರಿಚಯಿಸಿಕೊಂಡು ತಾನು ಇಲ್ಲಿಗೆ ಬಂದ ಉದ್ದೇಶವನ್ನು ತಿಳಿಸುತ್ತಾ;

"ಗುರುದೇವಾ, ಇಲ್ಲಿಯ ತನಕ ಕಾಮಭೋಗವೇ ಮಿಗಿಲೆಂದು ಬಗೆದಿದ್ದೆ. ವಸ್ತು ವೈಭವ, ದೃಶ್ಯ ವೈಭವ ಮತ್ತು ಮನೋರಂಜನೆಯೇ ಬದುಕಿನ ಮಹತ್ವದ ಗುರಿ ಎಂದು ಅರಿತು ನಂಬಿದ್ದೆ. ಇಂದು ತಮ್ಮಿಂದ ನನ್ನ ಬದುಕಿನಲ್ಲಿ ಬೆಳಕು ಮೂಡಿತು" ಎಂದ ಅವನು ಬುದ್ಧನನ್ನು ಹಿಂಬಾಲಿಸಿದ. □

'SAMVADA' Kannada Monthly, **Augast** 2011 RNI-KAR KAN/2002/9246 CPMG/KA/BGW-706/2009-11
Office of Posting: Mail Business Center, Bangalore GPO, Date of Posting: 1st & 7th of Every Month

ಕರ್ನಾಟಕ ಉತ್ಕೃಷ್ಟ ಕಲೆ, ಸಾಹಿತ್ಯ, ಸಂಸ್ಕೃತಿ..........ಗಳ ಬೀಡು

ಸಾವಿರಾರು ವರ್ಷಗಳ ಶ್ರೇಷ್ಠ ಸಂಸ್ಕೃತಿ, ಶ್ರೀಮಂತ ಕಲೆ, ಅನುಪಮ ಸಾಹಿತ್ಯ ಭಂಡಾರ ಹೊಂದಿರುವ ಕರ್ನಾಟಕದ ವೈಭವವನ್ನು ದೇಶದ ಉದ್ದಗಲಕ್ಕೂ ಮೆರೆಸಿದ ಹಿರಿಮೆ ಕನ್ನಡಿಗರದು. ಸಾಮಾಜಿಕ ಸಮಾನತೆ, ಹೃದಯ ವೈಶಾಲ್ಯತೆಯ ಮೂಲ ಸೆಲೆಯಲ್ಲಿ ಮೂಡಿಬಂದ ಈ ನಾಡಿನ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳು ಸದಾ ಪ್ರಸ್ತುತ. ಅವು ಮನುಕುಲಕ್ಕೆ ನೀಡಿದ ಅಭೂತಪೂರ್ವ ಕೊಡುಗೆಗಳು.

ದೇಶದ ಕಲೆ, ಸಾಹಿತ್ಯ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನಗಳಂತಹ ಮಹತ್ತರ ರಂಗಗಳಲ್ಲಿ ಮಹೋನ್ನತ ಕಾಣಿಕೆ ನೀಡಿದ ಕರ್ನಾಟಕವನ್ನು ಮತ್ತಷ್ಟು ಸಮೃದ್ಧಗೊಳಿಸಬೇಕೆಂಬುದೇ ಸರ್ಕಾರದ ಧೃಢ ಸಂಕಲ್ಪ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಒತ್ತು ನೀಡಿರುವ ಸರ್ಕಾರ ಉತ್ತರ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಿ ಕಾರ್ಯಪ್ರವೃತ್ತವಾಗಿದೆ.

ಕರ್ನಾಟಕ ವಾರ್ತೆ
Karnataka Information